# ಅಪರಂಜಿ

ತಿಳಿನಗೆಯ ಕಾರಂಜಿ

ಎಪ್ರಿಲ್ - 2017

## ಯುಗಾದಿ ವಿಶೇಷಾಂಕ



ಇಲ್ಲಿರುವುದು ಸುಮ್ಮನೆ, ಅಲ್ಲಿರಬಹುದೇ ನಮ್ಮ ಮನೆ!

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 34**
**ಸಂಚಿಕೆ - 7**
**ಏಪ್ರಿಲ್ - 2017**

## *ಈ ಸಂಚಿಕೆಯಲ್ಲಿ .....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 3 |
| ಮೊದಲ ಮಾತು | ಶಿವಕುಮಾರ್ | 4 |
| ಯಾತ್ರೆ ಹೊರಟ ಚೌಡಿ ಪ್ರಸಂಗ | ವತ್ಸನ | 5 |
| ಚಿರಿಪಿರಿ ಚಿಮ್ಮುವವರು | ಭುವನೇಶ್ವರಿ ಹೆಗಡೆ | 11 |
| ನಿಮ್ಮಯ ಬಾಣ ಗರ್ಭಿಣಿಯ | ಎಸ್.ಆರ್. ವಿಜಯಶಂಕರ | 15 |
| ಒಂದು ಡೈರಿ ರಾದ್ಧಾಂತ | ಗಣೇಶ ಹೆಗ್ಗಡೆ | 19 |
| ಕೆಲಸದವಳೇ ಕಣ್ಣಿಗೆ ...... | ಛಾಯಾ ಭಟ್ | 22 |
| ವ್ಯಂಗ್ಯ ಮೆಲುಕು | ಪ್ರಕಾಶ್ ಶೆಟ್ಟಿ | 25 |
| ಸೈಕಲ್ ಕಳವು | ಬೇಲೂರು ರಾಮಮೂರ್ತಿ | 26 |
| ತುಂತುರು | ದಂನಆ | 31 |
| ಚಿತಂಪರ ರಗಸಿಯಮ್ | ವಾಣೀ ಸುರೇಶ್ | 33 |
| ಪಂಚ್ ಪದ್ಯಗಳು | ಎಚ್. ಡುಂಡಿರಾಜ್ | 38 |
| ಕರಭಾರ | ಎಂ.ಎಸ್. ನರಸಿಂಹಮೂರ್ತಿ | 39 |
| ಕಾಂಗ್ರೆಸ್‌ನ ಜನ್ಮ ಜಾತಕ | ಎಂ.ಕೆ. ಭಾಸ್ಕರ ರಾವ್ | 42 |


*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಜ..ಜ..ಜಾಹೀರಾತು.. | ಅನಿತಾ ನರೇಶ್ ಮಂಚಿ | 47 |
| ಒಂದೇ ಒರೆ ಎರಡು ಖಡ್ಗ | ಚಿತ್ರಾ ರಾಮಚಂದ್ರನ್ | 51 |
| ಒಂದು ಕತೆಯ 99 ಅವತಾರಗಳು | ಎಸ್. ದಿವಾಕರ್ | 54 |
| ಬೇಕಾಗಿದೆ ಬಾಡಿಗೆ ಮನೆ | ಸಿ.ಆರ್. ಸತ್ಯ | 59 |
| ಉಪಮಾ, ಮುರುಕು, ಮೆದುವಡಾ... | ಜೈಕುಮಾರ್ ಮರಿಯಪ್ಪ | 61 |
| ಮೊಬೈಲ್ ಫಜೀತಿ | ಆರತಿ ಘಟಿಕರ್ | 65 |
| ನಾನು ಅವರಲ್ಲಾಽಽಽಽ | ಗಾಯತ್ರಿ ಮೂರ್ತಿ | 69 |
| ಶ್ವಾನ ಪ್ರಲಾಪ | ನಂನಾಗ್ರಾಜ್ | 73 |
| ಸುರಾಸುರ ನಿವಾಸ | ವೈ.ವಿ. ಗುಂಡೂರಾವ್ | 76 |
| ಪಟದ್ದೇ ಯೋಚನೆ | ಸಹನಾ ಪ್ರಸಾದ್ | 78 |
| ಶ್ವಾನ ಚರಿತೆಯೂ .... | ಎನ್. ರಾಮನಾಥ್ | 80 |
| ಆಹಾ! ಬರಲಿದೆ ಇ-ಕಾರ್ | ಇ.ಆರ್. ರಾಮಚಂದ್ರನ್ | 83 |
| ಚಾಲಕರ ಬವಣೆ | ಅರುಂಧತಿ ಜೋಶಿ | 86 |
| ಹೈಕಮಾಂಡ್‌ಗಳು | ವೈ.ಎಂ. ರಘುನಂದನ್ | 89 |
| ಬಿಂದಾಸ್ ನಿದ್ದೆ | ಜಿ.ವಿ. ನಿರ್ಮಲ | 92 |
| ನಾಡಿಗೇರ .... | ಎಸ್.ಎನ್. ಸುಬ್ಬರಾವ್ | 96 |
| ಬರೆದೆ ನೀನು ನಿನ್ನ ಹೆಸರ .... | ಕೃಷ್ಣ ಸುಬ್ಬರಾವ್ | 98 |
| ಲಕ್ಷುಂಬಾಯಿಯವರ .... | ವೈ.ಎನ್. ಗುಂಡೂರಾವ್ | 101 |
| ಮೇಡ್ ಫಾರ್ ಈಚ್ ಅದರ್ | ಸುಧಾ ಸರನೋಬತ್ | 104 |
| ತರ್ಲೆಕ್ಯಾತನಹಳ್ಳಿ .... | ತುರುವೇಕೆರೆ ಪ್ರಸಾದ್ | 107 |
| ಮೂವತ್ತಾರರ ಆರ್ಭಟ | ಹ.ಶಿ. ಭೈರನಟ್ಟಿ | 111 |
| ಕೊಡೆ ಒಂದು ಕೈ ಎರಡು | ಈಶ್ವರ ಚಂದ್ರ | 114 |
| ದಿ ಬೆಸ್ಟ್ ಪಾರ್ಟ್ ಆಫ್ .... | ಎಚ್. ಗೋಪಾಲಕೃಷ್ಣ | 117 |



# ಅಪರಂಜಿ ಕಿಡಿ

– ಪ್ರಕಾಶ್



ಕ್ಯಾಮೆರಾ ಕಾವಲಿನಲ್ಲಿ ಪಿ.ಯು. ಪರೀಕ್ಷೆ ಆರಂಭ

'ಪಿ.ಯು. ಪರೀಕ್ಷೆ ಸುಗಮ'

*• ದಿನಪತ್ರಿಕೆಯಲ್ಲಿ ಅಕ್ಕ ಪಕ್ಕದ ಶೀರ್ಷಿಕೆಗಳು !!*

★★★

'ಉತ್ತರ ಪತ್ರಿಕೆಯೊಂದಿಗೆ ಪರಾರಿ' – ಪತ್ರಿಕೆ

*• ಮುಂದಿನ ವರ್ಷಕ್ಕೆ ತಯಾರಿ !!*

★★★

ಎಲ್.ಬಿ.ಡಬ್ಲ್ಯೂ. ವಿವಾದ, ಆಗ್ರಹ – ಕ್ರೀಡಾ ಸುದ್ದಿ

*• ಕೊಹ್ಲಿ ಒಂದು ಹೆಜ್ಜೆ ಮುಂದಿಟ್ಟರಂತೆ !!*

★★★

ಇಂಗ್ಲೀಷ್ ಹೇರಿಕೆ ಮಗುವಿಗೆ ಮಾರಕ – ಹೇಳಿಕೆ

*• ವಿ ಎಂಟೈರ್‌ಲೀ ಅಗ್ರೀ !!*

★★★

ಪ್ರಧಾನಿ ಜೊತೆ ನಾದೆಲ್ಲ ಮಾತುಕತೆ – ಸುದ್ದಿ

*• ಹುಷ್, ಟ್ರಂಪ್‌ಗೆ ಕೇಳಿಸೀತು !!*

★★★

ನಕಲಿ ಪಿ.ಹೆಚ್.ಡಿ. ಅಭ್ಯರ್ಥಿಗಳ ವಿರುದ್ಧ ಮೊಕದ್ದಮೆ – ಪತ್ರಿಕೆ

*• ಇದರ ಬಗ್ಗೆಯೇ ಪಿ.ಹೆಚ್.ಡಿ. ?!*

★★★

ಅರಣ್ಯಕ್ಕೆ ಕುತ್ತು ತಂದ ಲಾಡ್ ಕಂಪೆನಿ – ಸುದ್ದಿ

*• ನಾಟ್ ಲಾಡಬಲ್ ಅಂತ ಅಪರಂಜಿ ನಕ್ಕಳಂತೆ !!*

★★★

ನಕಲಿ ವೈದ್ಯರ ಪತ್ತೆಗೆ ಅಧಿಕಾರಿಗಳ ತಂಡ ರಚನೆ – ಪತ್ರಿಕೆ

*• ಅವರ ಕಾರ್ಯವಿಧಾನದ ಬಗ್ಗೆ ಕುತೂಹಲ !!*

★★★

# ಮೊದಲ ಮಾತು

**- ಶಿವಕುಮಾರ್**

**ಹೇ**ವಿಳಂಬಿ ಸಂವತ್ಸರದ ಶುಭಾರಂಭದ ಈ ಸಂದರ್ಭದಲ್ಲಿ ಅಪರಂಜಿಯ ಯುಗಾದಿ ವಿಶೇಷಾಂಕ ನಿಮ್ಮ ಕೈ ಸೇರುತ್ತಿದೆ. ಅಪರಂಜಿಯ ಲೇಖಕ ಲೇಖಕಿಯರು ಈ ಸಂಚಿಕೆಗೆಂದೇ ಬಹು ಉತ್ಸಾಹದಿಂದ ವಿಶೇಷ ಬರಹಗಳನ್ನು ರಚಿಸಿದ್ದಾರೆ. ನಿಧಾನವಾಗಿ ಓದಿ, ಚೆನ್ನ ಅನ್ನಿಸಿದ ಲೇಖನಗಳ ಬಗ್ಗೆ ನಮಗೆ ಈಮೇಲ್ ಮೂಲಕ ಖಂಡಿತ ಬರೆದು ತಿಳಿಸಿ. ಉದಯೋನ್ಮುಖ ಲೇಖಕ, ಲೇಖಕಿಯರಿಗೆ ನಿಮ್ಮ ಫೀಡ್‌ಬ್ಯಾಕ್ ಬಹು ಅಮೂಲ್ಯ. ತನ್ನ ಮೂವತ್ತನಾಲ್ಕನೆಯ ವರ್ಷಕ್ಕೆ ಕಾಲಿಡುತ್ತಿರುವ ಅಪರಂಜಿಯ ಆರೋಗ್ಯಪೂರ್ಣ ಬೆಳವಣಿಗೆಗೆ ನಿಮ್ಮೆಲ್ಲರ ಪ್ರೋತ್ಸಾಹವೇ ಕಾರಣ.

ಅಪರಂಜಿ ವಿಶೇಷಾಂಕಕ್ಕಾಗಿ ಜಾಹೀರಾತು ಒದಗಿಸಿರುವ ಎಲ್ಲ ಬಂಧುಗಳಿಗೂ ನಮ್ಮ ಒಲವಿನ ನಮನಗಳು. ವಿಶೇಷಾಂಕದ ತಯಾರಿಯಲ್ಲಿ ಮುತುವರ್ಜಿ ವಹಿಸಿರುವ ಒಮೇಗಾ ಲೇಸರ್‌ಟೆಕ್‌ನ ಸರ್ವಶ್ರೀ ರವೀಂದ್ರ, ಆಚಾರ್, ಕುಮಾರಿ ಶ್ವೇತ ಮತ್ತು ಶ್ರೀಮತಿ ವೀಣಾ ಅವರುಗಳಿಗೂ, ಮುದ್ರಣ ಮತ್ತು ಅಂಚೆ ಬಟವಾಡೆ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ರವಿ ಗ್ರಾಫಿಕ್ಸ್‌ನ ಸರ್ವಶ್ರೀ ವಿ.ಆರ್. ನಾಥ್, ಸಂತೋಷ್, ನಾಗರಾಜ್ ಮತ್ತಿತರ ಸಹೋದ್ಯೋಗಿಗಳಿಗೂ ಅಪರಂಜಿ ತಂಡದ ಪರವಾಗಿ ವಿಶೇಷ ವಂದನೆಗಳು.

ಹೇವಿಳಂಬಿ ನಾಮ ಸಂವತ್ಸರವು ನಿಮ್ಮೆಲ್ಲರಿಗೂ ಸಕಲ ಸನ್ಮಂಗಳಗಳನ್ನು ತರುವಂತಾಗಲಿ ಎಂಬುದೇ ಅಪರಂಜಿಯ ಹಾರೈಕೆ.



# ಯಾತ್ರೆ ಹೊರಟ ಚೌಡಿ ಪ್ರಸಂಗ

- ವತ್ಸನ

**ಅಂ**ದು ಬೆಳಗ್ಗೆ ಉಪಹಾರ ಮುಗಿಸಿದ ತಕ್ಷಣ ಶರಲೇಖ ತನ್ನ ಕೊಠಡಿಗೆ ಕೊಳಲುವಾದನ ಅಭ್ಯಸಿಸಲು ಹೊರಟುಬಿಟ್ಟ. ಒಂದು ಕೇಸು ಮುಗಿದು ಇನ್ನೊಂದು ಪ್ರಾರಂಭವಾಗಿಲ್ಲದಿದ್ದಾಗ ಇದೇ ಶರಲೇಖನ ಹವ್ಯಾಸ. ನಾನು ಟಿ.ವಿ. ಮುಂದೆ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶದ ವರದಿ ನೋಡಲು ಕುಳಿತೆ. ಹಿಂದಿನ ರಾತ್ರಿ ನನ್ನ ಮಿತ್ರ ಚೆಂಗಪ್ಪ ನನಗೆ ಮೊಬೈಲ್ ಕರೆ ಮಾಡಿ, ಬೆಂಗಳೂರಿಗೆ ಕೆಲಸದ ಮೇಲೆ ಬಂದಿದೀನಿ, ನಾಳೆ ಬೆಳಗ್ಗೆ ಮನೆಗೆ ಬಂದರೆ ಸಿಗ್ತೀಯಾ? ಅಂತ ಕೇಳಿದ್ದ. ನಾನು ಖಂಡಿತ ಬಾ ಅಂತ ಆಹ್ವಾನಿಸಿದ್ದೆ. (ಚೆಂಗಪ್ಪ ನಿಮಗೆ ನೆನಪಿರಬಹುದು. ಅವನು ನಡೆಸುತ್ತಿರುವ ಚೊಟ್ಟೆಯಂಡ ಹೋಮ್‌ಸ್ಟೇಗೆ ಕಳೆದ ವರ್ಷ ಶರಲೇಖ ಮತ್ತು ನಾನು ನಮ್ಮ ಅತಿಥಿಗಳಾದ ಜಿಮ್ ಮತ್ತು ಜೆಸ್ಸಿಕಾ ಇಬ್ಬರನೂ ಕರೆದುಕೊಂಡು ಹೋಗಿ ಚೆಂಗಪ್ಪ ದಂಪತಿಗಳ ಆದರದ ಆತಿಥ್ಯವನು ಸ್ವೀಕರಿಸಿದ್ದೆವು.) ಬಿ.ಜೆ.ಪಿ ಗೆಲ್ಲೋದು ಖಾತರಿ ಅಂತ ಅಂದುಕೊಳ್ಳುತ್ತಿದ್ದಾಗಲೇ ಬಾಗಿಲ ಕರೆಗಂಟೆ ಬಾರಿಸಿತು. ಎದ್ದು ಹೋಗಿ ಬಾಗಿಲು ತೆಗೆದು ಚೆಂಗಪ್ಪನನ್ನು ಒಳಕ್ಕೆ ಕರೆದೆ. ಬಾಗಿಲ ಶಬ್ದ ಕೇಳಿ ಶರಲೇಖನೂ ಕೊಠಡಿಯಿಂದ ಹೊರಬಂದ.

ಇದೇನು, ಅಪರೂಪ ದರ್ಶನ. ಅಂತ ಶರಲೇಖ ಉದ್ಗರಿಸಿದ್ದಕ್ಕೆ, ಚೆಂಗಪ್ಪ ನಿನಗಂತೂ ಸಂತೋಷವಾಗಿರಲೇ ಬೇಕು. ಪತ್ತೇದಾರರಿಗೆ ಚೋರ ದರ್ಶನ ಸಂತಸ ತರುವಂತಹದೇ ಅಲ್ಲವೇ ಅಂತ ಚಟಾಕಿ ಹಾರಿಸಿದ.

ಸರೋಜಮ್ಮ ಕಾಫಿ ತಂದಿಟ್ಟನಂತರ ನಮ್ಮ ಮಾತುಕತೆ ಶುರುವಾಯಿತು.

ಶರಲೇಖನೇ ಮೊದಲು ಪ್ರಾರಂಭಿಸಿದ.

ಡಾಕ್ಟರುಗಳ, ಲಾಯರುಗಳ ಮತ್ತು ಪತ್ತೇದಾರರ ಮನೆಗಳಿಗೆ ಅಭ್ಯಾಗತರು ಬಂದರೆ ಯಾವುದೋ ಒಂದು ಪ್ರೊಫೆಷನಲ್ ಕಾರ್ಯಕ್ಕಾಗಿಯೇ ಬಂದಿರುತ್ತಾರೆ ಎನ್ನುವುದು ನನಗೆ ಅನುಭವದಿಂದ ಬಂದ ಜ್ಞಾನ. ಹಾಗಾಗಿ ನೀನು ನಮ್ಮನ್ನು ನೋಡಲು ಬಂದಿರುವುದು ಸ್ನೇಹಕ್ಕೇ ಆದರೂ ಅವನು ನಿನ್ನ ಒಳಮನಸ್ಸಿನಲ್ಲಿ ಯಾವುದೋ ಒಂದು ತುಡಿತ ನಮ್ಮ ಸಲಹೆ ಕೇಳುವಂತೆ ಪ್ರೇರೇಪಿಸುತ್ತಿರುವಂತೆ ನನಗೆ ತೋರುತ್ತದೆ ಅಂದ ಶರಲೇಖ

ಚೆಂಗಪ್ಪ ಜೋರಾಗಿ ನಕ್ಕು ಶರಲೇಖ ಒಬ್ಬ ಕೆಲಸವಿಲ್ಲದ ಕುಂಬಾರ. ಯಾರು ಬಂದರೂ ಅವರಿಂದ ಯಾವುದಾದರೊಂದು ಕೇಸನೇ ನಿರೀಕ್ಷಿಸುತ್ತಿರುತ್ತಾನೆ. ಶರಲೇಖ, ಯಾಕೆ ನಿನಗೆ ಕೇಸುಗಳ ಬಗ್ಗೆ ಅಂತಹ ಹಪಹಪ? ಸುಮ್ಮನೆ ಕೊಳಲು ಬಾರಿಸುವುದರಲ್ಲೇ ಪ್ರಾವೀಣ್ಯತೆಯನ್ನು ಗಳಿಸುವ ಪ್ರಯತ್ನ ಮಾಡಬಾರದೇ? ಅಂತ ಅವನನ್ನು ಚುಡಾಯಿಸಿದ ಚೆಂಗಪ್ಪ.



ಆಮೇಲೆ ಚೆಂಗಪ್ಪ ಮುಂದುವರಿದು, ಆದರೂ ಶರಲೇಖ ಹೇಳಿದ್ದರಲ್ಲಿ ಸ್ವಲ್ಪ ಸತ್ಯದ ಅಂಶ ಇದೆ ಅಂತ ಒಪ್ಪುತ್ತೇನೆ ಅಂತ ಹೇಳಿ ಒಂದು ಗುಟುಕು ಕಾಫಿ ಹೀರಿದ.

ಶರಲೇಖನ ಮುಖ ಸಂತೋಷದಿಂದ ಅಗಲವಾಯಿತು. ತದೇಕ ಚಿತ್ತನಾಗಿ ಚೆಂಗಪ್ಪನ ಮಾತುಗಳನ್ನು ಆಲಿಸಲು ಪ್ರಾರಂಭಿಸಿದ.

ಚೆಂಗಪ್ಪ ತನ್ನ ಮಾತನ್ನು ಪ್ರಾರಂಭಿಸಿದ.

ಬೆಂಗಳೂರಿನಿಂದ ಕೊಡಗಿಗೆ ಹಿಂತಿರುಗುವ ಮುಂಚೆ ಸಕಲೇಶಪುರದ ಬಳಿ ಇರುವ ಚಿರತೆಬೆಟ್ಟ ಕಾಫಿ ಎಸ್ಟೇಟಿಗೆ ಹೋಗಿ ಅಲ್ಲಿ ನನ್ನ ಆಪ್ತ ಗೆಳೆಯ ಮಂಜು ಗೌಡನನ್ನು ಭೇಟಿ ಮಾಡುವ ಉದ್ದೇಶ ನನ್ನದು. ಮಂಜು ಮತ್ತು ನಾನು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಒಟ್ಟಿಗೆ ಬಿ.ಎ ಓದಿದ್ದು. ಆಗಿನಿಂದ ಈಗಿನವರೆಗೂ ವಾರಕ್ಕೊಮ್ಮೆಯಾದರೂ ನಾವು ಮೊಬೈಲಿನಲ್ಲಿ ಮಾತನಾಡುವುದು ಸರ್ವೇ ಸಾಮಾನ್ಯ. ಆದರೆ ಈಚೆಗೆ ಹಲವು ವಾರಗಳಿಂದ ಅವನಿಂದ ಸುದ್ದಿಯೇ ಇಲ್ಲ. ಹಾಗಾಗಿ ನಾನು ಕೊಡಗಿಗೆ ಹಿಂತಿರುಗುವ ಹಾದಿಯನ್ನು ಸ್ವಲ್ಪ ಬದಲಿಸಿ ಅವನ ಎಸ್ಟೇಟಿಗೆ ಹೋಗಿ ಅವನನ್ನು ಮುಖತಃ ಮಾತನಾಡಿಸುವವರೆಗೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ಹಾಗೆ ನಿರ್ಧರಿಸಿದ ಬಳಿಕ ಅಲ್ಲಿಗೆ ನಿಮ್ಮಿಬ್ಬರನ್ನೂ ಕರೆದುಕೊಂಡು ಹೋದರೆ, ಅನುಭವಸ್ಥರಾದ ನಿಮ್ಮಿಂದ ಅವನಿಗೆ ಸಹಾಯವಾದರೂ ಆಗಬಹುದು ಎಂಬ ಆಶೆಯಿಂದ ನಿನ್ನೆ ರಾತ್ರಿ ವತ್ಸನನಿಗೆ ಫೋನ್ ಮಾಡಿದೆ. ಈಗ ನನ್ನ ಜೊತೆ ನಿಮ್ಮಿಬ್ಬರನೂ ಚಿರತೆಬೆಟ್ಟ ಎಸ್ಟೇಟಿಗೆ ಕರೆದುಕೊಂಡುಹೋಗುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇನೆ. ನಿಮ್ಮಿಬ್ಬರನ್ನು ಪುನಃ ಬೆಂಗಳೂರಿಗೆ ಮುಟ್ಟಿಸುವುದು ನನ್ನ ಭಾರ. ಏನಂತೀರಾ? ಅಂತ ಚೆಂಗಪ್ಪ ಕೇಳಿದ.

ಯಾವುದಾದರೊಂದು ಕೇಸಿಗೆ ಬಕಪಕ್ಷಿಯಂತೆ ಕಾಯುತ್ತಿದ್ದ ಶರಲೇಖ ಇಂತಹ ಅವಕಾಶವನು ಬಿಟ್ಟಾನೆಯೇ?

ಇನು ಅರ್ಧ ಗಂಟೆಯಲ್ಲಿ ನಾನು ರೆಡಿ. ವತ್ಸನ ರೆಡಿಯಾದ ತಕ್ಷಣ ನಾವು ಹೊರಡಬಹುದು ಅಂತ ಶರಲೇಖ ಹೇಳಿದ್ದು ಕೇಳಿ ಅವನ ಅವಸರವನ್ನು ಕಂಡು ನನಗೆ ನಿಜಕ್ಕೂ ನಗು ಬಂತು.

ಬೆಂಗಳೂರಿನಿಂದ ಕುಣಿಗಲ್, ಹಾಸನ ಮಾರ್ಗವಾಗಿ ಸಕಲೇಶಪುರ ಸೇರಿ ಅಲ್ಲಿಂದ ಸುಮಾರು ಇಪ್ಪತ್ತು ಕಿಲೋಮೀಟರ್ ಪ್ರಯಾಣಮಾಡಿ ಮಂಜುಗೌಡನ ಚಿರತೆಬೆಟ್ಟ ಎಸ್ಟೇಟ್ ಸೇರಿದಾಗ ಸಂಜೆ ಆರುಗಂಟೆ ಆಗಿತ್ತು. ಎಸ್ಟೇಟಿನ ಒಳಗಡೆ ಹಾವಿನಂತೆ ಬಳುಕಿ ಸಾಗುತ್ತಿದ್ದ ಮಣ್ಣಿನ ಹಾದಿಯಲ್ಲಿ ನಮ್ಮ ಇನೋವಾ ಕುಲುಕುತ್ತಾ ಆಮೆ ಗತಿಯಲ್ಲಿ ಮುಂದೆ ಸಾಗಿತ್ತು. ಒಮ್ಮೆಲೇ ಒಂದು ವಿಶಾಲವಾದ ಹರಹಿನ ನಡುವೆ ಭವ್ಯವಾದ ಒಂದು ಭವನ ಕಣ್ಣಿಗೆ ಬಿತ್ತು. ಅದರ ಬಾಗಿಲಲ್ಲೇ ಮಂಜು ಮತ್ತು ಅವನ ಭಾರ್ಯೆ ರುಕ್ಮಿಣಿ ನಿಂತು ನಮ್ಮನ್ನು ಸ್ವಾಗತಿಸಿದರು. ಎಸ್ಟೇಟಿನ ಮ್ಯಾನೇಜರ್ ಜ್ವಾಲಣ್ಣ ನಮ್ಮ ಬ್ಯಾಗುಗಳನ್ನು ಪಕ್ಕದಲ್ಲಿದ್ದ ಗೆಸ್ಟ್ ಹೌಸಿಗೆ ಸಾಗಿಸಿದ.

ಸಂಜೆ ಊಟಕ್ಕೆ ಕುಳಿತಾಗ ಮಂಜು ತನ್ನ ಮನೆಯವರನೆಲ್ಲಾ ನಮಗೆ ಪರಿಚಯಿಸಿದ. ಪತಿ ರುಕ್ಮಿಣಿ ಮನೆಯ ಹಾಗೂ ತೋಟದ ವ್ಯವಸ್ಥೆಯನ್ನೆಲ್ಲಾ ಬಹು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದರು. ಮಗಳು ಕ್ಷಮಾ ಇಪ್ಪತ್ತರ ಹರೆಯದ ಯುವತಿ. ಅಮೆರಿಕಾದಲ್ಲಿ ಪರಿಸರ ವಿಜ್ಞಾನವನ್ನು ಅಭ್ಯಸಿಸಿ, ಈಗ ಸ್ವದೇಶಕ್ಕೆ ಮರಳಿದ್ದಾಳೆ. ಮಗ ಸುನೀಲ್ ಅಮೆರಿಕೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ಈಗ ರಜೆಯ ಮೇಲೆ ಮನೆಗೆ ಬಂದಿದ್ದಾನೆ. ಇಬ್ಬರು ಮಕ್ಕಳೂ ಬಹು ಚುರುಕಾಗಿ ಕಾಣುತ್ತಿದ್ದರು.



ಕ್ಷಮಾ ನಮ್ಮನ್ನು ಕುರಿತು ನೀವು ಸರಿಯಾದ ಸೀಜನ್ನಿನಲ್ಲೇ ಬಂದಿದ್ದೀರ. ಇಲ್ಲೇ ಹತ್ತಿರದಲ್ಲಿರುವ ಹೇಮಾವತಿ ಹಿನ್ನೀರಿನ ದಂಡೆಯಲ್ಲೇ ತಟ್ಟೆಕೆರೆ ಎಂಬ ಹಳ್ಳಿ ಇದೆ. ಅಲ್ಲಿನಾನು ನೋಡಿರುವ ಹಾಗೆ ಇನ್ನೂರಕ್ಕೂ ಹೆಚ್ಚು ಪಕ್ಷಿಜಾತಿಗಳನ್ನು ಕಾಣಬಹುದು. ನಾಳೆ ಬೇಕಾದರೆ ನಾನು ನಿಮ್ಮನ್ನೆಲ್ಲಾ ಅಲ್ಲಿಗೆ ಕರೆದೊಯ್ಯಬಲ್ಲೆ ಅಲ್ಲಿಗೆ ಕೇವಲ ಇಪ್ಪತ್ತು ಕಿಲೋಮೀಟರೂ ಇಲ್ಲ. ಅರ್ಧಗಂಟೆಯ ಪಯಣ ಅಷ್ಟೇ ಅಂತ ಹೇಳಿದಳು. ಸುನೀಲ್ ಅಷ್ಟೇನೂ ಮಾತನಾಡದಿದ್ದರೂ ಎಲ್ಲವನೂ ಬಹು ಸೂಕ್ಷ್ಮವಾಗಿ ಗಮನಿಸುತ್ತಿದ್ದುದು ನನಗೆ ತಿಳಿಯಿತು. ಮಂಜು ಬಹು ಮಟ್ಟಿಗೆ ಮೌನಿಯಾಗಿಯೇ ಇದ್ದ. ರುಕ್ಮಿಣಿಯಮ್ಮ ಅತಿಥಿ ಸತ್ಕಾರದಲ್ಲಿ ತೊಡಗಿದ್ದರಿಂದ ಆಕೆಗೆ ಮಾತಿನ ಅವಕಾಶವೇ ಇರಲಿಲ್ಲವೆನ್ನಿ. ಊಟದ ನಂತರ ಮಕ್ಕಳಿಬ್ಬರೂ ನಮಗೆ ವಿದಾಯ ಹೇಳಿ ಶಾಶ್ವತ ಶಾಂತಿ ಸಮಾಧಾನಗಳನ್ನು ತಮ್ಮ ತಮ್ಮ ಐಪ್ಯಾಡುಗಳ ಸಾನಿಧ್ಯದಲ್ಲಿ ಪಡೆಯಲು ಉದ್ಯುಕ್ತರಾದರು. ಮಂಜು ದಂಪತಿಗಳು ನಮ್ಮೊಡನೆ ಮನೆಯ ಮುಂದಿನ ಅಂಗಳದಲ್ಲಿ ಹರಟಲು ಕುಳಿತರು. ಚೆಂಗಪ್ಪ ನೇರವಾಗಿ ತಾನು ಬಂದ ಉದ್ದೇಶವನ್ನು ಅವರಿಗೆ ತಿಳಿಸಿದ. ಮಂಜುವಿನ ಸಂಪರ್ಕ ವಾರ ಗಟ್ಟಲೆ ನಿಂತದ್ದು ನೋಡಿ ನನಗೆ ನಿಜಕ್ಕೂ ಗಾಬರಿಯಾಯಿತು ರುಕ್ಮಿಣಿಯಮ್ಮ. ಅದಕ್ಕೇ ಎದ್ದೆನೋ ಬಿದ್ದೆನೋ ಅಂತ ಇಲ್ಲಿಗೆ ಓಡಿ ಬಂದೆ. ಇವರಿಬ್ಬರೂ ನನ್ನ ಆಪ್ತ ಗೆಳೆಯರು. ಶರಲೇಖನಿಗೆ ಇರುವ ಜೀವನಾನುಭವ ಅಪಾರ. ಮನಸ್ಸನು ಯಾವುದೇ ಸಮಸ್ಯೆ ಕಾಡುತ್ತಿದ್ದರೂ ನಮ್ಮೊಂದಿಗೆ ಬಿಚ್ಚು ಮನಸ್ಸಿನಿಂದ ಹಂಚಿಕೊಳ್ಳಿ. ಅದರಿಂದ ಏನಿಲ್ಲದಿದ್ದರೂ ಮನಸ್ಸು ಹಗುರಾಗುತ್ತದೆ. ಎಂದ ಚೆಂಗಪ್ಪ.

ಮಂಜು ಒಂದೆರಡು ನಿಮಿಷ ಸುಮ್ಮನಿದ್ದು, ಅನಂತರ ತನ್ನ ಪತಿಯ ಕಡೆ ತಿರುಗಿ ಕಣ್ಣಿನಲ್ಲೇ ಆಕೆಯ ಅನುಮತಿ ಪಡೆದು ಮಾತನಾಡಲು ಶುರು ಮಾಡಿದ ಚೆಂಗಪ್ಪ ನೀನು ಬರ್ತೀಯಾ ಅಂತ ನನಗೆ ಖಂಡಿತ ಗೊತ್ತಿತ್ತು. ನಿಜ, ಕಳೆದ ಒಂದೆರಡು ವಾರಗಳಿಂದ ನನಗೆ ದುಗುಡ, ಕಳವಳ. ಅದಕ್ಕೆ ಕಾರಣ ಅಂದರೆ ನಮ್ಮ ಎಸ್ಟೇಟಿನಲ್ಲಿ ಆಗಿರೋ ಕಳ್ಳತನ. ನಿನಗೇ ತಿಳಿದಿರೋಹಾಗೆ ಈ ಎಸ್ಟೇಟನ್ನ ನಮ್ಮ ಪೂರ್ವಜರು ಬ್ರಿಟಿಷ್ ಅಧಿಕಾರಿಯೊಬ್ಬನಿಂದ ಪಡೆದದ್ದು. ಆಗಿನಿಂದ ಈ ಎಸ್ಟೇಟಿಗೆ ಕಾವಲು ನಿಂತು ಕಾಪಾಡಿಕೊಂಡು ಬಂದಿರೋದು ತೋಟದ ಉತ್ತರಕ್ಕೆ ಅರಳೀ ಮರದ ಕೆಳಗೆ ಪ್ರತಿಷ್ಠಾಪಿಸಿರೋ ಚೌಡಿ. ಈ ಚೌಡೇಶ್ವರಿ ಅನೂಚಾನವಾಗಿ ನಮ್ಮ ಪೂರ್ವಜರನೆಲ್ಲಾ ಕಾಪಾಡಿಕೊಂಡು ಬಂದು ತೋಟವನ್ನು ಕಳ್ಳಕಾಕರ ಹಾನಿಯಿಂದ ರಕ್ಷಿಸಿಕೊಂಡು ಬಂದಿದ್ದಾಳೆ. ಎರಡು ವಾರದ ಹಿಂದೆ ಈ ಚೌಡಿಕಲ್ಲು ನಾಪತ್ತೆಯಾಗಿರೋದನು ನಮ್ಮ ಜ್ವಾಲಣ್ಣ ಗಮನಿಸಿ ನನಗೆ ಹೇಳಿದ. ನನಗೆ ಮತ್ತು ರುಕ್ಮಿಣಿಗೆ ಇದೊಂದು ದೊಡ್ಡ ಆಘಾತ. ನಮ್ಮ ವಂಶಕ್ಕೇ ಏನಾದರೂ ಕೇಡು ಆಗಬಹುದು ಅಂತ ಕಳವಳ ಆಗ್ತಾ ಇದೆ.

ಶರಲೇಖ ಮಧ್ಯೆ ಬಾಯಿಹಾಕಿ, ಪೋಲಿಸರಿಗೇನಾದರೂ ತಿಳಿಸಿರುವಿರೇನು? ಅಂತ ಕೇಳಿದ

ಇಲ್ಲ ಖಂಡಿತ ಇಲ್ಲ. ಅವರಿಗೆ ತಿಳಿಸಿದರೆ ಅವರು ಸಹಜವಾಗಿಯೇ ಮನೆಯಲ್ಲಿ ಇರೋರನ್ನೆಲ್ಲಾ ವಿಚಾರಣೆ ಮಾಡ್ತಾರೆ. ಕಳುವಾದ ಮಾರನೆಯ ದಿನ ಜ್ವಾಲಣ್ಣ ನನ್ನ ಬಳಿಬಂದು ಕಳುವಾದ ದಿನಕ್ಕೆ ಎರಡು ದಿನ ಮುಂಚೆ ಸುನೀಲಣ್ಣ ಆ ಚೌಡಿ ಕಲ್ಲಿನ ಬಳಿಯೇ ಸುಳಿದಾಡುತ್ತಿದ್ದರು ಅಂತ ಮಾಹಿತಿ ಕೊಟ್ಟ. ಇನ್ನು ಇದೆಲ್ಲಾ ಜಗಜ್ಜಾಹೀರವಾದರೆ ನನ್ನ ಮಾನ ಮೂರು ಕಾಸಾಗುತ್ತೆ. ಅಲ್ಲದೇ ಪೋಲೀಸರು ಕೇವಲ ಒಂದು ಕಲ್ಲಿನ ಕಳುವನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತಾರೆ ಎಂಬುದರಲ್ಲೇ ಸಂದೇಹ ನನಗೆ ಎಂದ ಮಂಜು ಗೌಡ.



ಶರಲೇಖ ಒಂದೆರಡು ನಿಮಿಷ ಆಳವಾಗಿ ಚಿಂತಿಸಿ, ಅನಂತರ ನೋಡಿ ಮಂಜಣ್ಣ ನಿಮ್ಮ ಮನಸ್ಸಿನ ದುಗುಡ ಅರ್ಥವಾಗುತ್ತೆ ನನಗೆ. ಧೈರ್ಯ ತಾಳಿ. ನಾಳೆಯಿಂದಲೇ ನಾನು ನನ್ನ ಕೆಲಸ ಪ್ರಾರಂಭಿಸಿ ಆ ದೇವಿಯನ್ನು ಪತ್ತೆ ಹಚ್ಚುವೆ. ಎಂಬ ಆಶ್ವಾಸನೆ ಕೊಟ್ಟನಂತರ ನಾವು ನಮ್ಮ ಕೊಠಡಿಗೆ ತೆರಳಿದೆವು.

ಮಾರನೆಯ ದಿನ ಶರಲೇಖ ನಮ್ಮ ಜೊತೆಯನ್ನು ಬಿಟ್ಟು ಒಬ್ಬೊಂಟಿಗನಾಗಿ ತನ್ನ ಪತ್ತೇದಾರಿಕೆಯನ್ನು ಪ್ರಾರಂಭಿಸಿಯೇ ಬಿಟ್ಟ. ಚೆಂಗಪ್ಪ ಮತ್ತು ನಾನು ಕ್ಷಮಾಳ ಆಹ್ವಾನವನ್ನು ಸ್ವೀಕರಿಸಿ ಅವಳೊಂದಿಗೆ ಹೇಮಾವತಿ ಹಿನ್ನೀರಿನ ಪಕ್ಷಿಸಂಕುಲವನ್ನು ವೀಕ್ಷಿಸಲು ತಟ್ಟೆಕೆರೆಗೆ ಹೋದೆವು. ಗೊರೂರಿನ ಬಳಿ ಅಣೆಕಟ್ಟನ್ನು ಕಟ್ಟಿದ ಮೇಲೆ ಅಣೆಕಟ್ಟಿನ ಹಿಂಭಾಗ ಒಂದು ಅತಿ ವಿಶಾಲವಾದ ಸರೋವರವಾಗಿ ಬದಲಾಗಿದೆ. ಈ ಸರೋವರದ ಪಶ್ಚಿಮದ ಅಂಚಿನಲ್ಲೇ ಈ ತಟ್ಟೆಕೆರೆ ಹಳ್ಳಿ ಇರುವುದು. ನೀರಿನ ಅಂಚಿನಲ್ಲಿ ಬೆಳೆದು ನಿಂತಿದ್ದ ಜೊಂಡುಗಳ ಮಧ್ಯೆ ಹಾರಾಡುತ್ತಿದ್ದ ಬಣ್ಣಬಣ್ಣದ ಕಿಂಗ್ ಫಿಷರ್ ಹಕ್ಕಿಗಳು ಬಹು ಮನಮೋಹಕವಾಗಿ ಕಂಡವು. ಕೊರ್ಮೊರಾಂಟ್ ಮೊದಲುಗೊಂಡು ಅನೇಕ ವೈವಿಧ್ಯಮಯ ಪಕ್ಷಿಗಳಿಗೆ ಆ ನೀರಿನ ಹರಹು ಆಶ್ರಯ ನೀಡಿತ್ತು. ಪಕ್ಷಿಗಳನ್ನು ನೋಡಿದ ಬಳಿಕ, ಈ ಸರೋವರದ ಅಂಚಿನಲ್ಲೇ ಹಾದು ನಾವು ಶೆಟ್ಟಿಹಳ್ಳಿ ಎಂಬ ಜಾಗಕ್ಕೆ ಬಂದೆವು. ಇಲ್ಲಿ ನೀರಿನಲ್ಲಿ ಅರ್ಧ ಮುಳುಗಡೆಯಾಗಿರುವ ಅತಿ ಪುರಾತನ ಚರ್ಚ್ ಒಂದರ ಅವಶೇಷಗಳಿದ್ದವು. 1860 ರಲ್ಲಿ ಫ್ರೆಂಚ್ ಮಿಷನರಿಗಳು ಕಟ್ಟಿದ್ದ ಈ ಚರ್ಚನ್ನು ರೋಸರಿ ಚರ್ಚ್ ಎಂದು ಕರೆಯುತ್ತಿದ್ದರಂತೆ. ಬ್ರಿಟಿಷ್ ಪ್ಲಾಂಟರುಗಳು ಬಳಸುತ್ತಿದ್ದ ಈ ದೇವಾಲಯ 1960 ರಲ್ಲಿ ಹೇಮಾವತಿ ಅಣೆಕಟ್ಟನ್ನು ಕಟ್ಟಿದಾಗ ಉಂಟಾದ ಹಿನ್ನೀರಿನಲ್ಲಿ ಮುಳುಗಡೆಯಾಯಿತು. ನೀರು ಕಡಿಮೆಯಾದಾಗ ಈ ಚರ್ಚಿನ ಅವಶೇಷಗಳನ್ನು ಹತ್ತಿರದಿಂದ ನೋಡಬಹುದು. ಕ್ಷಮಾ ಈ ಎಲ್ಲವನ್ನೂ ನಮಗೆ ವಿವರಿಸುತ್ತಿದ್ದುದನ್ನು ನೋಡಿದರೆ ಅವಳಿಗೆ ಈ ಪರಿಸರ ಪ್ರಜ್ಞೆ ಒಂದು ಮಿಷನ್ ಆಗಿರಬೇಕು ಅನಿಸಿತು.

ಮುಂದಿನ ದಿನ ಬೆಳಗಿನ ಉಪಹಾರದ ಸಮಯದಲ್ಲಿ ಶರಲೇಖ ಬಹು ಹರ್ಷಚಿತ್ತನಾಗಿದ್ದಂತೆ ಕಂಡಿತು. ಬೆಳಗ್ಗೆ ಕೊಠಡಿಯಲ್ಲಿ ಇದ್ದಾಗ ಅವನು ಸ್ನಾನದ ಮನೆಯಲ್ಲಿ ಮನ್ನಾಡೇ ಹಾಡೊಂದನ್ನು ಸಿಳ್ಳೆ ಹಾಕುತ್ತಿರುವಾಗಲೇ ಓಹೋ ಕೇಸಿನಲ್ಲಿ ಕ್ಲೂ ಸಿಕ್ಕಿರುವಂತಿದೆ ಎಂದುಕೊಂಡಿದ್ದೆ. ಉಪಹಾರದ ವೇಳೆಯಲ್ಲಿ ಶರಲೇಖ ಕ್ಷಮಾಳನ್ನು ಕುರಿತು ಇಂದು ಬೆಳಗ್ಗೆ ಒಂದು ಅರ್ಧ ಗಂಟೆ ಬಿಡುವು ಮಾಡಿಕೊಂಡು ನನ್ನನ್ನೂ ತಟ್ಟೆ ಹಳ್ಳಿ ಬಳಿ ಕರೆದುಕೊಂಡು ಹೋಗುವುದಕ್ಕಾಗುತ್ತದೆಯೇ? ಚೆಂಗಪ್ಪ ಅಲ್ಲಿನ ಸೌಂದರ್ಯಾನ ಎಷ್ಟು ವರ್ಣಿಸಿದರೂ ಸಾಲದು ಅಂತ ಹೇಳ್ತಾನೆ ಅಂತ ಕೇಳಿದ. ಆಕೆ ಒಪ್ಪಿದ ನಂತರ ನಾವೆಲ್ಲಾ ಅವಳ ಜೀಪಿನಲ್ಲಿ ಕುಳಿತು ತಟ್ಟೆ ಹಳ್ಳಿ ಕಡೆಗೆ ಹೊರಟೆವು. ಹಳ್ಳಿಯ ಹತ್ತಿರ ಬರುತ್ತಿದ್ದ ಹಾಗೆ ಶರಲೇಖ ಇಲ್ಲೇ ಈ ಗ್ರಾಮ ಪಂಚಾಯಿತಿ ಆಫೀಸಿನ ಬಳಿ ಸ್ವಲ್ಪ ನಿಲ್ಲಿಸ್ತೀರಾ? ಅಂತ ಕ್ಷಮಾಳನ್ನು ಕೇಳಿದಾಗ ಆಕೆಯ ಮುಖದಲ್ಲಿ ಗಾಬರಿಯ ಛಾಯೆ ಹರಿದುಹೋಯಿತು. ಜೀಪು ನಿಂತಿತು. ಶರಲೇಖ ಇಳಿಯಲಿಲ್ಲ. ಬದಲಿಗೆ ಕ್ಷಮಾಳನ್ನು ಉದ್ದೇಶಿಸಿ ಮಾತನಾಡಲು ಪ್ರಾರಂಭಿಸಿದ.



ನೋಡಿ ಕ್ಷಮಾ, ನಿಮ್ಮ ತೋಟದ ಚೌಡಿ ಕಲ್ಲು ಕಾಣೆಯಾದಾಗಿನಿಂದ ನಿಮ್ಮ ತಂದೆ ತಾಯಿ ಕಂಗೆಟ್ಟಿದ್ದಾರೆ. ಅದನ್ನ ಹುಡುಕಲು ನನ್ನ ಸಹಾಯ ಕೇಳಿದ್ರು. ನಿನ್ನೆಯೆಲ್ಲಾ ನಾನು ನನ್ನ ಎಂದಿನ ಪತ್ತೆದಾರಿಕೆಯಲ್ಲಿ ತೊಡಗಿದೆ. ಚೌಡಿ ಕಲ್ಲು ಇದ್ದ ಅರಳಿ ಮರದ ಹತ್ತಿರ ಅನೇಕ ಚರಹೆಗಳು ಕಂಡವು. ಹತ್ತಿರದ ಬೇಲಿಯ ಆಚೆ ಒಂದು ಜೀಪಿನ ಚಕ್ರದ ಗುರುತೂ ಇತ್ತು. ಚಕ್ರಕ್ಕೆ ಅಳವಡಿಸಿದ ಟೈರ್ ಟ್ರೆಡ್ ನೋಡಿದಾಗ ಅದು ನಿಮ್ಮ ಈ ಜೀಪಿನ ಟೈರ್‌ನಂತೆಯೇ ಇದ್ದದ್ದನು ನಿನ್ನೆಯೇ ಗಮನಿಸಿದೆ. ಟೈರ್ ಗುರುತನ್ನೇ ಅನುಸರಿಸಿ ಹೊರಟೆ. ಅದು ನನ್ನನ್ನು ಈ ತಟ್ಟೆ ಕೆರೆಯ ಪಂಚಾಯಿತಿ ಅಧ್ಯಕ್ಷ ಮೋಹನ್ ಅವರ ಮನೆಗೆ ಕರೆತಂದಿತು. ನಿನ್ನೆ ಸಂಜೆ ಮೋಹನ್‌ನ ಭೇಟಿ ಮಾಡಿ ಎಲ್ಲ ವಿಷಯವನ್ನು ಅವನ ಮುಂದಿಟ್ಟೆ. ಆತ ಬಹು ಸರಳ ಸ್ವಭಾವದ ಯುವಕ. ಚೆನ್ನಾಗಿ ಓದಿಕೊಂಡಿರುವ ಪದವೀಧರ. ನನ್ನ ಮಾತು ಕೇಳಿ ಆತ  ನಿಮ್ಮ ಊಹೆ ಸತ್ಯ. ಕ್ಷಮಾ ಅವರು ಆ ಕಲ್ಲನ್ನು ತಂದು ನಮ್ಮ ಗ್ರಾಮದಲ್ಲಿ ಪ್ರತಿಷ್ಠಾಪಿಸುವ ಉದ್ದೇಶದಿಂದ ಕಾಣಿಕೆಯಾಗಿ ನೀಡಿದ್ದಾರೆ. ಅದನ್ನು ಸೂಕ್ತ ಜಾಗದಲ್ಲಿ ಪ್ರತಿಷ್ಠಾಪಿಸಿಯೂ ಆಯಿತು. ನಾಳೆ ವಿಧ್ಯುಕ್ತ ಪೂಜೆ ಸಹಾ ಇದೆ. ಮಿಕ್ಕ ವಿವರಗಳಿಗೆ ಕ್ಷಮಾ ಅವರನ್ನೇ ಕೇಳಬಹುದು ಅಂತ ಬಹು ಸೌಜನ್ಯದಿಂದ ಹೇಳಿದ. ಈಗ ನಿಮ್ಮಿಂದ ಮಿಕ್ಕ ವಿವರಗಳು ಸಿಗಬಹುದೇ? ಅಂತ ಶರಲೇಖ ಕೇಳಿದ. ಅವನ ದನಿಯಲ್ಲಿ ಗಾಂಭೀರ್ಯವಿತ್ತು.

ಕ್ಷಮಾ  ವಿಚಲಿತಳಾಗಲಿಲ್ಲ.

ಹೌದು ಶರಲೇಖ ಅವರೇ, ಮೋಹನ್ ಹೇಳಿದ್ದು ಸತ್ಯ. ಇದಕ್ಕೆಲ್ಲಾ ಒಂದು ಸ್ಪಷ್ಟ ವಿವರಣೆ ಇದೆ. ಅದನ್ನ ನಿಮ್ಮ ಮುಂದಿಡುತ್ತೇನೆ. ಆಮೇಲೆ ನಿಮ್ಮ ಸಲಹೆಯಂತೆ ಮುಂದುವರಿಯಬಹುದು. ಈ ತಟ್ಟೆ ಕೆರೆ ಪ್ರದೇಶದ ಪಕ್ಷಿ ಸಂಕುಲದ ವೈವಿಧ್ಯ ಆ ಆಸುಪಾಸಿನಲ್ಲಿ ಬೇರೆಲ್ಲೂ ಇಲ್ಲ. ಈಗ ಒಂದು ಅಂತರರಾಷ್ಟ್ರೀಯ ರೆಸಾರ್ಟ್ ಕಂಪನಿಯವರು ಇಲ್ಲಿ ಒಂದು ರೆಸಾರ್ಟ್ ನಿರ್ಮಿಸುವ ಉದ್ದೇಶದಿಂದ ಈ ಎಲ್ಲ ಜಾಗವನ್ನು ಖರೀದಿಸಲು ಮುಂದೆ ಬಂದಿದ್ದಾರೆ. ರೆಸಾರ್ಟ್ ನಿರ್ಮಿಸುವ ಮುಂಚೆ ಅದಕ್ಕೆ ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಅನುಮತಿ ಬೇಕು. ಪಂಚಾಯಿತಿ ಸದಸ್ಯರೆಲ್ಲಾ ಆ ಕಂಪನಿ ತೋರಿಸಿರುವ ಹಣದ ಪ್ರಭಾವದಿಂದ ಅನುಮತಿ ನೀಡಲು ತುದಿಗಾಲಿನಲ್ಲಿ ನಿಂತಿದ್ದಾರೆ. ಈ ಬಗ್ಗೆ ನಾನು ಮೋಹನ್ ಹತ್ತಿರ ಮಾತನಾಡಿದೆ. ರೆಸಾರ್ಟಿನಿಂದ ಪಕ್ಷಿಸಂಕುಲಕ್ಕೆ ಆಗುವ ಹಾನಿಯನ್ನು ವಿವರಿಸಿದೆ. ಆತ ನನಗೆ ಒಂದು ಉಪಾಯ ತಿಳಿಸಿದ. ನಿಮ್ಮ ತೋಟದ ಚೌಡಿಕಲ್ಲು ಈ ಆಸುಪಾಸಿನಲ್ಲೆಲ್ಲಾ ಬಹು ಪ್ರಸಿದ್ಧಿ. ಆ ಚೌಡಿಯೇ ಯಾತ್ರೆ ಹೊರಟು ಬಂದು ಇಲ್ಲಿ ತಟ್ಟೆ ಕೆರೆಯಲ್ಲಿ ನೆಲಸಿದರೆ ಆ ಜಾಗ ಪವಿತ್ರವಾಗುತ್ತದೆ. ಅಂತಹ ಪವಿತ್ರ ಜಾಗವನ್ನು ರೆಸಾರ್ಟಿಗೆ ಕೊಡುವಪ್ರಶ್ನೆಯೇ ಉದ್ಭವಿಸದು. ಹಾಗಾಗಿ ಆ ದೇವತೆಯನ್ನು ನಮ್ಮ ಹಳ್ಳಿಗೆ ದಾನವಾಗಿ ಕೊಟ್ಟುಬಿಡಿ. ಹೇಗಿದ್ದರೂ ನೀವೇ ವಾರಸುದಾರರಾಗಿರುವುದರಿಂದ ಹಾಗೆ ದಾನ ಮಾಡಲು ನಿಮಗೆ ಸಂಪೂರ್ಣ ಸ್ವಾತಂತ್ರವಿದೆ. ಹಾಗೆ ವಲಸೆ ಬಂದ ಚೌಡೇಶ್ವರಿ ತನ್ನ ಪಕ್ಷಿಸಂಕುಲವನ್ನು ಕಾಪಾಡುತ್ತಾಳೆ ಎಂದು ಮೋಹನ್ ಸಲಹೆ ನೀಡಿದ.



ಈ ನನ್ನ ಹಂಚಿಕೆ ಸುನೀಲನಿಗೆ ಹೇಗೋ ತಿಳಿದುಹೋಯಿತು. ಆತ ಚೌಡಿಕಲ್ಲಿನ ಹತ್ತಿರವೇ ಸುಳಿದಾಡುತ್ತಾ ಈ ವಲಸೆಯನ್ನು ತಪ್ಪಿಸಲು ನೋಡಿದ. ಆದರೆ ಅವನ ಕಣ್ಣು ತಪ್ಪಿಸಿ ನಿಶಿ ರಾತ್ರಿಯಲ್ಲಿ ನಾನು ಮೋಹನ್‌ನ ಸಹಾಯದಿಂದ ಅದನ್ನು ತಟ್ಟೆಕೆರೆಗೆ ವರ್ಗಾಯಿಸಿದೆ. ಈಗ ಚೌಡೇಶ್ವರಿಯ ಪ್ರತಿಷ್ಠಾಪನೆ ಆಗಿದೆ. ನಾಳೆ ಪೂಜೆ ನಡೆಯುವುದಿದೆ. ಗ್ರಾಮ ಪಂಚಾಯಿತಿ ಸದಸ್ಯರೆಲ್ಲಾ ರೆಸಾರ್ಟಿನ ಯೋಜನೆ ಕೈಬಿಟ್ಟಿದ್ದಾರೆ. ಈಗ ನಾನೇನು ಮಾಡಬೇಕು ನೀವೇ ತಿಳಿಸಿ. ನಮ್ಮ ತಂದೆ ತಾಯಿಯರ ಮನ ನೋಯುವುದು ನನಗೂ ಇಷ್ಟವಿಲ್ಲ. ಆದರೆ ಒಂದು ಪರಿಸರ ವಿನಾಶ ಆಗುವುದನ್ನು ತಪ್ಪಿಸಲು ನಾನು ಏನನ್ನಾದರೂ ಮಾಡಲು ಸಿದ್ಧ ಎಂದು ಕ್ಷಮಾ ದಿಟ್ಟತನದಿಂದ ಹೇಳಿದಳು.

★★★★★

ಮಾರನೆಯ ದಿನ ತಟ್ಟೆಕೆರೆಯ ಚೌಡೇಶ್ವರಿ ಗುಡಿಯಲ್ಲಿ ಪೂಜೆ ಅದ್ದೂರಿಯಿಂದ ನಡೆಯಿತು. ಮಂಜು ಗೌಡರ ಅಮೃತಹಸ್ತದಿಂದಲೇ ಮೊದಲ ಪೂಜೆ ನೆರವೇರಿತು. ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮೋಹನ್ ತಮ್ಮ ಭಾಷಣದಲ್ಲಿ ಚೌಡಿ ತಮ್ಮ ಕನಸಿನಲ್ಲಿ ಕಾಣಿಸಿಕೊಂಡು ಎಸ್ಟೇಟಿನಿಂದ ತಟ್ಟೆಕೆರೆಯವರೆಗಿನ ತನ್ನ ಯಾತ್ರೆಯನ್ನು ನಿರ್ವಿಘ್ನವಾಗಿ ನಡೆಸಿಕೊಡಬೇಕೆಂದು ಆಜ್ಞಾಪಿಸಿದುದನ್ನು ಬಹು ಭಕ್ತಿಯಿಂದ ಬಣ್ಣಿಸಿದರು. ದೂರದ ಹಿನ್ನೀರಿನ ಅಂಚಿನಲ್ಲಿ ಕಿಂಗ್ ಫಿಷರ್ ಹಕ್ಕಿಗಳ ಹಾರಾಟ ನೋಡಲು ಬಹು ಚೇತೋಹಾರಿಯಾಗಿತ್ತು.

---

## ನಾಮಿನಿ

ಇವಳು ಭಾಮಿನಿ
ಬಂಗಾರದ ಖನಿ
ಗಂಡನಿಗಿರಬೇಕು
ದೊಡ್ಡ ಕಂಪನಿ!
ಕೊಡಬೇಕು
ಕೈ ತುಂಬಾ ಮನಿ!
ಮನೆಯಲ್ಲಿರಬಾರದು
ಅಪ್ಪ, ಅಮ್ಮ, ನಾದಿನಿ!
ಗಂಡನ ಠೇವಣಿಗೆಲ್ಲಾ
ತಾನಾಗಬೇಕು ನಾಮಿನಿ

~ *ತುರುವೇಕೆರೆ ಪ್ರಸಾದ್*



# ಚಿರಿಪಿರಿ ಚಿಮ್ಮುವವರು

- ಭುವನೇಶ್ವರಿ ಹೆಗಡೆ

ಹೆಚ್ಚಾಗಿ ನಮ್ಮ ಸ್ವಾಸ್ಥ್ಯ ವಲಯದಲ್ಲಿ ಚರ್ಚೆಗೆ ಒಳಗಾಗುವವರು ‘ಆಲಸ್ಯ ಪೀಡಿತರು’ ಬೆಳಿಗ್ಗೆ ಬೇಗ ಏಳದ (ಸೂರ್ಯವಂಶಿ ಎಂಬ ಬಿರುದು ಬೇರೆ) ರಾತ್ರಿ ಬೇಗ ಮಲಗದ (ನಿಶಾಚರಿ) ಕಣ್ಣಿಗೆ ಬಿದ್ದಿದ್ದನ್ನೆಲ್ಲ ತಿನ್ನುವ (ತಿಂಡಿ ಪೋತ) ಪರಿಣಾಮವಾಗಿ ದೊಡ್ಡದೇಹ (ಡುಮ್ಮಣ್ಣ) ನಿರ್ಲಕ್ಷ್ಯ ನಿರಾಶಾವಾದಗಳಲ್ಲಿ ನಿಸ್ಸೀಮರಾದ ಆಲಸಿಗಳಿಗೆ ಮೊದಲಿನಿಂದಲೂ ಮನ್ನಣೆ ಇಲ್ಲ. ಯಂತ್ರಗಳು ಬಂದು ನಮ್ಮನ್ನ ಆಲಸಿಯಾಗಿಸಿವೆ ಎನ್ನುತ್ತೇವೆ. ಯಂತ್ರಯುಗ ಪ್ರಾರಂಭವಾಗುವ ಮೊದಲೇ (ಮಂತ್ರಯುಗದಲ್ಲೂ) ಆಲಸಿಗಳಿದ್ದರು ಎಂಬುದಕ್ಕೆ ಪುರಾವೆಗಳಿವೆ. ಸುಭಾಷಿತವೊಂದು ಹೀಗೆ ಹೇಳುತ್ತದೆ.

**ಉತ್ಸಾಹಿ ಪೀಡಿತರು ಎಂಬ ಸದಾ ಚಟುವಟಿಕೆಯ ಚಿಲುಮೆಗಳ ಒಂದು ಪರಿಚಯ**

ಅಲಸಸ್ಯ ಕುತೋ ವಿದ್ಯಾ
ಅವಿದ್ಯಸ್ಯ ಕುತೋ ಧನಂ
ಅಧನಸ್ಯ ಕುತೋ ಮಿತ್ರಂ
ಅಮಿತ್ರಸ್ಯ ಕುತಃ ಸುಖಂ

ಆಲಸಿಯಾದವನಿಗೆ ವಿದ್ಯೆ ಎಲ್ಲಿಂದ? ವಿದ್ಯೆ ಇಲ್ಲದವನಿಗೆ ಧನವೆಲ್ಲಿಂದ ಬರಬೇಕು? ಧನವಿಹೀನನಿಗೆ ಮಿತ್ರರಿರಲಾರರು. ಮಿತ್ರರಿಲ್ಲದವರಿಗೆ ಸುಖವೆಲ್ಲಿಂದ?

ಹೀಗೆ ಸುಖವಾಗಿ ‘ಆಲಸ್ಯ ಸುಖ’ವನ್ನು ಅನುಭವಿಸುತ್ತ ಸೋಮಾರಿಯಾದವನಿಗೆ ಸುಖವೆಂಬುದು ಸಿಗಲಾರದು ಎಂಬುದನ್ನು ಮೆಟ್ಟಿಲು ಮೆಟ್ಟಿಲಾಗಿ ನಿರೂಪಿಸುತ್ತ ನಮ್ಮ ಸುಖಕ್ಕೆ ಅಗತ್ಯವಾಗಿ ಬೇಕಾದ ಮಿತ್ರರು ಹಣವಿಲ್ಲದಿದ್ದರೆ ಹತ್ತಿರ ಸುಳಿಯಲಾರರು ಎಂಬ ಸ್ನೇಹಾಘಾತಕರ ಸಂಗತಿಯೊಂದನ್ನು ಈ ಸುಭಾಷಿತ ಹೊರಹಾಕಿದೆ. ಸ್ನೇಹಿತರ ಜತೆ ಮೋಜು ಮಸ್ತಿ ಮಾಡುವ ದಿಲ್‌ದಾರರಿಗೆ ಇದು ಕಹಿಗುಳಿಗೆಯಂತೆ ಭಾಸವಾದೀತು.

ನಿಮ್ಮ ಹಿಂದೆ ಸದಾ ಸ್ನೇಹಿತರ ದಂಡು ಸುಳಿದಾಡುತ್ತ ಗೌಜು ಗದ್ದಲ ಮಾಡುತ್ತಿದೆಯೆಂದಾದರೆ ಅದರ ಹಿಂದೆ ನಿಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿದೆಯೆಂದೂ ಸ್ನೇಹಿತರಿಗಾಗಿ ಹಣ ವ್ಯಯಿಸಿದರೆ ನಿಮ್ಮನ್ನ ಆಕ್ಷೇಪಿಸುವವರು ಯಾರೂ ಇಲ್ಲವೆಂದು ಅರ್ಥ. ದೊಡ್ಡ ಅಧಿಕಾರದಲ್ಲಿ ಇರುವವರ ಹಿಂದೂ ಸಹ ದೊಡ್ಡ ಹಿಂಡು ಗಿಜಿಗುಡುತ್ತಿರುತ್ತದೆ. ಅವರ ಕೃಪಾ ಕಟಾಕ್ಷ್ಯದಿಂದ ತಮ್ಮ ಬೇಳೆ ಬೇಯಿಸಿಕೊಳ್ಳುವ ಬೇರೆಯವರ ಮುಂದೆ ತಾನು ದೊಡ್ಡ ಜನ ಎಂದು ತೋರಿಸಿಕೊಳ್ಳುವ ಚಾಪಲ್ಯ... ಹೀಗೆ ಬೇರೆ ಬೇರೆ ಮನಸ್ಥಿತಿ ಕೆಲಸ ಮಾಡುತ್ತದೆ.



ಆದರೆ ಆಲಸಿಯಾದವನಿಗೆ ಇದ್ಯಾವುದರ ಗೊಡವೆಯೂ ಇಲ್ಲ. ತಾನಾಯಿತು ತನ್ನ ಆ ಸೋಮಾರಿ ಸೌಧವಾಯಿತು. ಯಾರ ತಂಟೆಗೂ ಇಲ್ಲ, ಯಾವ ತಂಟೆಯೂ ಬೇಡ ಹೊತ್ತು ಹೊತ್ತಿಗೆ ಉಣ್ಣಲು ಉಡಲು ಒದಗಿಸುವ ಯಾರಾದರೂ ಇದ್ದರಾಯಿತು. ಅದು ಅಪ್ಪ

ಅಮ್ಮ, ಗಂಡ ಹೆಂಡತಿ, ಮಗ ಮಗಳು ಯಾರೂ ಆದೀತು. ಇವು ತಕರಾರಿಲ್ಲದ ಪರಪುಟ್ಟ ಜೀವಿಗಳು ತಿಂದುಂಡು ಹಾಯಾಗಿ ಎಲೆ ಅಡಿಕೆ ಮೆದ್ದುಕೊಂಡು ಮನೆಯೊಳಗೆ ಅನಿವಾರ್ಯದ ನಾಲ್ಕು ಹೆಜ್ಜೆ ನಡೆದಾಡಿಕೊಂಡು ಇರುವವರು.

ಇವರು ಉದ್ಯೋಗಿಗಳಾಗಿದ್ದರು ಅನ್ನಿ. ಆಫೀಸಿನಲ್ಲಿ ಸಹ ತಮ್ಮ ಜೀವನ ಧರ್ಮವನ್ನು ತೊರೆಯಲಾರರು. ಇಂಥವರನ್ನ ಪೊರೆಯಲು 'ನಾಳೆ ಬನ್ನಿ' ಎಂಬ ಅಭಯವಾಕ್ಯವೇ ಇದೆ. ಆದರೆ ಆಲಸಿಯಾದವರು ತುಂಬಾ ಬುದ್ಧಿವಂತರೂ ಆಗಿರುತ್ತಾರೆ. ಎಂಬ ಪ್ರತೀತಿಯೂ ಇದೆ. ನಿಮ್ಮ ಕಂಪನಿಯ ತುಂಬಾ ಕಷ್ಟವಾದ ಯೋಜನೆಗಳನ್ನು ನಿಮ್ಮ ಉದ್ಯೋಗಿಗಳಲ್ಲಿ ಅತಿ ಆಲಸಿಯಾದವರಿಗೆ ಕೊಡಿ, ಅವರದಕ್ಕೆ ಶಾರ್ಟ್‌ಕಟ್ ಮೆಥಡ್ ಕಂಡು ಹಿಡಿದು ಕೆಲಸ ಬೇಗ ಮುಗಿಸಿಕೊಡುತ್ತಾರೆ. ಖರ್ಚು ಉಳಿಯುತ್ತದೆ ಎಂಬ ಹಿತವಚನವೂ ಔದ್ಯೋಗಿಕ ಪ್ರಪಂಚದಲ್ಲಿ ಚಾಲ್ತಿಯಲ್ಲಿದೆ.

ಎಲ್ಲ ಆಲಸಿಗಳೂ ಸಮಯ ಕಂಟಕರು ಎಂದು ದೂರ ಇಡಬೇಕಾದ್ದಿಲ್ಲ. ನಿತ್ಯ ಯಾಂತ್ರಿಕ ಜಗತ್ತಿನಲ್ಲಿ ದುಡಿಯಲು ಓಡುವ ಜೀವಿಯು ಭಾನುವಾರ ಬಂತೆಂದರೆ ಸಹಜವಾಗಿ ತಡವಾಗಿ ಎದ್ದು, ಪೇಪರನ್ನು ವಿವರವಾಗಿ ಓದಿ (ದಿನವೂ ಹೆಡ್‌ಲೈನ್ ಮಾತ್ರ ಕಣ್ಣಾಡಿಸಲು ಸಾಧ್ಯ) ನಿಧಾನವಾಗಿ ತಿಂಡಿತಿಂದು ಸ್ನಾನ ಸುಖದಲ್ಲಿ ಮಿಂದು... ಬೇಕೆಂದಾಗ ಚೂರು ಹಗಲು ನಿದ್ದೆಗೆ ಜಾರಿ... ಇದಾದರೆ ಸರಿ ಆಫೀಶಿಯಲ್ ಅಗತ್ಯದ ಆಲಸ್ಯ. ಮರುದಿನದಿಂದ ಹೇಗೂ ಉಂಟು ಓಟ ನಾಗಾಲೋಟ. ಆದರೆ ಆಲಸ್ಯವನ್ನೇ ಜೀವನ ಧರ್ಮವನ್ನಾಗಿ ಸ್ವೀಕರಿಸಿದವರಿಗೆ ಮನ್ನಣೆ ಇಲ್ಲ.

ಇರಲಿ, ನಾನೀಗ ಪರಿಚಯಿಸ ಹೊರಟಿದ್ದು ಈ ಆಲಸಿ ಸಂಕುಲದ ತದ್ವಿರುದ್ಧ ಮನಸ್ಥಿತಿಯ, (ನಮಗೆ ಮನರಂಜನೆ ನೀಡುವ) ''ಉತ್ಸಾಹ ಪೀಡಿತರು'' ಎಂಬ ಸದಾ ಚಟುವಟಿಕೆಯ ಚಿಲುಮೆಗಳನ್ನು. ಚಿಲುಮೆಗಳು ತಮ್ಮಷ್ಟಕ್ಕೆ ತಾವು ಚಿಮ್ಮಿಕೊಂಡಿದ್ದರೆ ದೂರದಲ್ಲಿ ನಿಂತು ನೋಡಲು ಚಂದ, ಹೌದು. ಆದರೆ ಹೊತ್ತಲ್ಲದ ಹೊತ್ತಿನಲ್ಲಿ ಉಕ್ಕಿ ಬರುವ ಉತ್ಸಾಹದಿಂದ ನಮ್ಮ ಮೇಲೆ ನೀರು ಚಿಮ್ಮಿಸಿ ಮೈಯೆಲ್ಲಾ ಒದ್ದೆಯಾಗಿಸಿ ನಮ್ಮನ್ನ ಕಿಂಕರ್ತವ್ಯ ಮೂಢರನ್ನಾಗಿಸುವ ಚಲ್ಲಾಪಿಲ್ಲಿ ಚಿಲುಮೆಯಾದರೆ? ದೂರ ಜಿಗಿದು ಬಿಡುತ್ತೇವೆ ಅಲ್ಲವೆ?

ನಮ್ಮ ಹತ್ತಿರದ ಬಂಧು ವೆಂಕಣ್ಣನೆಂಬುವರು ಈ ಜಾತಿಗೆ ಸೇರಿದವರು. ತೋಟಗದ್ದೆ ದನ ಕರು ಹಲಸು ಮಾವು ಕಬ್ಬು, ಕೇದಗೆ.... ಒಂದೆರಡಲ್ಲ, ಇವರನ್ನು ಕೆಣಕಲು ಕಪಿಗಳೂ ಬಂದು ಬೀಡು ಬಿಡುತ್ತವೆ. ಅವುಗಳನ್ನು ಮೀರಿಸುವ ಉತ್ಸಾಹದಲ್ಲಿ ವೆಂಕಣ್ಣ ತೋಟದಲ್ಲಿ ನಿಂತು ಕಿರುಚುತ್ತಾರೆ. ನಡುವೆ ಜಂಬೆ ಮರ ಏರಿ ಬಿಡುತ್ತಾರೆ. ನಾಲ್ಕು ಹಣ್ಣು ಕಿತ್ತು ತಂದು ಆಗಷ್ಟೆ ತಿಂಡಿ ತಿಂದು ಅಮ್ಮನ ಗದರಿಕೆಗೆ ಹೆದರಿ ಹಾಲು ಕುಡಿದ ಮಕ್ಕಳಿಗೆ ನೀಡಿ... ತಿನ್ನಿ ಎಂದು ಒತ್ತಾಯಿಸುತ್ತಾರೆ. ಮಕ್ಕಳು ಸಕಾರಣವಾಗಿ ಬೇಡ ಅನ್ನುತ್ತವೆ ಪಾಪ. ಈಗಿನ ಮಕ್ಕಳಿಗೆ ಕಾಡು ಹಣ್ಣು ಹೂಗಳ ಪರಿಚಯವೇ ಇಲ್ಲ, ಹಾಳು ಮೂಳು ತಿಂದೇ ಬಿಡುತ್ತಾರೆ ಎಂದು ತಾವೇ ಆ ಹಣ್ಣನ್ನ ಕಚ ಕಚ ತಿಂದು ತೋರಿಸುತ್ತಾರೆ. ಮಕ್ಕಳು 'ಕಿಸಕ್' ಎಂದರೆ ಅರ್ಧ ಗಂಟೆ ಬೈಯುತ್ತಾರೆ (ಈಗಿನವಕ್ಕೆ ಹಿರಿಯರ ಮೇಲೆ ಗೌರವವಿಲ್ಲ... ಇತ್ಯಾದಿ).



ಇವರ ಮನೆಯಲ್ಲಿ ಕಬ್ಬಿನಾಲೆ ಪ್ರಾರಂಭವಾಯ್ತೆಂದರೆ ನಾವು ಗಡ ಗಡ ನಡುಗುತ್ತೇವೆ. ನಮ್ಮ ಕುಟುಂಬದ ಅತಿ ಹತ್ತಿರದ ಬಂಧುವಾದ್ದರಿಂದ ಅವರಲ್ಲಿಗೆ ಆಮಂತ್ರಣವಿಲ್ಲದೇ ಹೋಗುವಷ್ಟು ಸಲಿಗೆ. ಅಂತಾದ್ದರಲ್ಲಿ ಆಲೆ ಮನೆಗೆ ಬರಲೇಬೇಕು ಅಂತ ಸ್ವತಃ ವೆಂಕಣ್ಣನೇ ಆಮಂತ್ರಿಸಿ ಹೋದರೆಂದರೆ ಒಂದೆರಡು ದಿನಕ್ಕಾದರೂ ಅವರಲ್ಲಿ ಹೋಗಿ ಉಳಿದು ಕಬ್ಬಿನ ಹಾಲು, ಹೊಸ ನೊರೆ ಬೆಲ್ಲ, ಮಣ್ಣಿ, ತೊಡದೇವು... ತಿಂದು ಕುಣಿದು ಕುಪ್ಪಳಿಸಿ ಬರಬೇಕು ಇದು ಬಾಲ್ಯದಿಂದ ಬೆಳೆದು ಬಂದಪದ್ಧತಿ.

ಕಬ್ಬಿನಾಲೆ ಸೀಸನ್ ಪ್ರಾರಂಭವಾಗುವುದೇ ಚಳಿಗಾಲದ ದಿನಗಳಲ್ಲಿ ಬೆಳಿಗ್ಗೆ ಇಬ್ಬನಿ, ರಾತ್ರಿ ಚಳಿರಾಯನ ನಡುಕ! ಮಕ್ಕಳು ಹಾಸಿಗೆ ಬಿಟ್ಟೇಳುವುದೇ ಕಷ್ಟ. ಸಂಜೆ ಆಲೆಮನೆಗೆ ಹೋಗಿ ಕೋಣನ ಜತೆ ನಾಲ್ಕು ಸುತ್ತು ತಿರುಗಿ ಕಬ್ಬು ಜಗಿದು ಕೇಕೆ ಹಾಕಿ ಬರುವುದೆಂದರೇನೋ ಮಕ್ಕಳಿಗೆ ಪ್ರೀತಿಯೇ. ಆದರೆ ಆಲೆ ಕೋಣ ತಿರುಗುವದು ಸಂಜೆ ಮಾತ್ರವಲ್ಲ, ಬೆಳಗಿನ ಜಾವ ನಾಲ್ಕು ಗಂಟೆಗೆಲ್ಲ ಪ್ರಾರಂಭ ಕೋಣನ ತಿರುಗಿಸುವವನ ಹಾಡು... ಓಯ್ ಕೋಣ ಹೋತಿಲ್ಯೋ ಬಾನಿ ಬತ್ತಿಲ್ಯೋ... ಕೋಣ ಜೋರಾಗಿ ತಿರುಗಿದರೆ ಮಾತ್ರ ಕಬ್ಬು ನುಣ್ಣಗಾಗಿ ಅರೆಯಲ್ಪಟ್ಟು ಕಬ್ಬಿನ ರಸ ತುಂಬಲು ಇಡುವ ದೊಡ್ಡ ಪಾತ್ರೆ (ಬಾನಿ) ತುಂಬುವದು. ಸರಿ ವೆಂಕಣ್ಣ ಆಲೆ ಮನೆ ಸೀಸನ್‌ನಲ್ಲಿ ಮಲಗುವುದೇ ಅಪರೂಪ. ಮೂರು ಗಂಟೆಗೆಲ್ಲಾ ಎದ್ದು ತಾವೇ ಸ್ವತಃ ಚಾ ಮಾಡಿ ಕುಡಿದು ಆಲೆ ಮನೆಯಲ್ಲಿರುವವರಿಗೂ ಚಾ ಮಾಡಿ ಉಗ್ಗ ತುಂಬಿಸಿಕೊಂಡು ಅಂಗಳವಿಳಿದು ಹಣತೆ ಸದ್ದು ಮಾಡಿ ತೆಗೆದು ಆಚೆ ಬದಿಯ ಗದ್ದೆಗೆ ದಾಟುತ್ತಾರೆ. ''ಇವರದ್ದೊಂದು ಅತಿಯಾಯ್ತು ರಾತ್ರಿ ಸಪ್ಪಳ ಮಾಡಿ ಕುಣಿಯೋದು ಎಲ್ಲರೂ ತಮ್ಮ ಹಾಗೆಯಾ? ಎಂದು ಹೆಂಡತಿ ಗೊಣಗುತ್ತ ಮತ್ತೆ ಮಲಗಿದರೂ ನಿದ್ದೆ ಬಾರದೇ ಏಳುತ್ತಾರೆ. ಸರಿಯಾಗಿ ನಾಲ್ಕು ಗಂಟೆಗೆ ವೆಂಕಣ್ಣ ಒಂದು ಕ್ಯಾನ್ ಫ್ರೆಶ್ ಕಬ್ಬಿನ ಹಾಲಿನ ಸಮೇತ ಮನೆಗೆ ಹಾಜರಾಗುತ್ತಾರೆ.'' ಬೆಳಗಿನ ಫ್ರೆಶ್ ಕಬ್ಬಿನ ಹಾಲು ನೊರೆ ನೊರೆ ರಾತ್ರಿ ನಾನೇ ಒಳ್ಳೇ ಕಬ್ಬಿನ ತುಂಡು ಆರಿಸಿ ತೆಗೆದಿಟ್ಟಿದ್ದು ಏಳಿ ಏಳಿ ಎಲ್ಲಾ... ಕುಡೀರಿ ಕುಡೀರಿ ತಾಜಾ ನೊರೆ ನೊರೆ ಕಬ್ಬಿನ ಹಾಲು ಎಂದು ಗಲಾಟೆ ಗದ್ದಲ ಶುರು ಮಾಡುತ್ತಾರೆ.

ಚಳಿಗಾಲದ ಬೆಳಗಿನ ಜಾವದ ನಿದ್ದೆಯಿಂದ ಹೊರಬರಲಾರದ ಮಕ್ಕಳು ಆಮೇಲೆ ಕುಡಿತೇವೆ ದೊಡ್ಡಪ್ಪ ಎಂದು ಮುಸುಕೆಳೆದರೆ... ಥೋ ಥೋ ಆಮೇಲೆ ಅದರ ಸತ್ವ ಹೋಗಿ ಬಿಡ್ತದೆ ಮಂಗಗಳಾ. ಈಗ ಕುಡಿದು ಮತ್ತೆ ನಿದ್ದೆ ಮಾಡಿ ಬೆಳಗಿನ ಜಾವ ಕುಡಿದ ಕಬ್ಬಿನ್ಹಾಲು ಪೂರ್ತಿ ರಕ್ತ ಆಗುತ್ತವೆ ಎಂದು ಶಾಸ್ತ್ರವೇ ಹೇಳಿದೆ. (ಹಾಗೊಂದು ಶಾಸ್ತ್ರ ಇದೆಯೆ? ಇದ್ದರೂ ಆ ಚಳಿಯಲ್ಲಿ ಅದು ಬೇಡವೇ ಬೇಡ) ಎಂದು ಬೊಬ್ಬೆ ಮಾಡತೊಡಗುತ್ತಾರೆ. ಎಲ್ಲಾ ಆಲಸಿಗಳು ಆ ಕೋಣಗಳನ್ನು ನೋಡಿ ಪಾಪ ಎಷ್ಟು ಖುಷಿಯಿಂದ ತಿರುಗುತ್ತಿವೆ. (ಪಾಪ ಮಾಡಿದ್ದಕ್ಕೆ ತಾನೇ ಅವು ಕೋಣಗಳಾಗಿ ಜನ್ಮತಾಳಿದ್ದು?) ಮಕ್ಕಳು ಎದ್ದು ಕಣ್ಮುಚ್ಚಿಕೊಂಡೇ ಕಬ್ಬಿನ ಹಾಲು ಕುಡಿದು ಅದು ರಕ್ತವಾಗುವವರೆಗೆ ಎಚ್ಚರಿರಬೇಕೆಂಬ ದೊಡ್ಡಪ್ಪನ ಆಜ್ಞೆಯನ್ನು ಮೀರಿಯೂ ನಿದ್ದಿಸಿ ಬಿಡುತ್ತವೆ.



ಆಲಸಿಗಳೆಂಬ ಬಿರುದನ್ನೇ ಹೊದ್ದು ನಿದ್ದಿಸಿ ಬಿಡುತ್ತವೆ ಪಾಪ. ಕೋಣಗಳು ವೆಂಕಣ್ಣನನ್ನು ನೋಡಿ ಅದೇನು ಮಾತಾಡಿಕೊಳ್ಳುತ್ತವೆಯೋ ಇವರನ್ನು ಕಂಡಾಕ್ಷಣ ಬೇಗ ಬೇಗ ಹೆಜ್ಜೆ ಹಾಕುತ್ತವೆಯೆಂದು ಕೋಣಗಳ ಒಡೆಯ ದುಗ್ಗಣ್ಣ ಹೇಳುತ್ತಿರುತ್ತಾನೆ.

ತುಳುನಾಡಿನಲ್ಲಿ ಇಂಥಹ ಉತ್ಸಾಹ ಪೀಡಿತರನ್ನು ‘ದುರ್‍ಸು’ ಎನ್ನುತ್ತಾರೆ. ಪಟಾಕಿಗಳಲ್ಲಿಯ ಒಂದು ಪ್ರಕಾರವಾದ ದುರ್‍ಸು ಒಮ್ಮೆಲೇ ಸದ್ದು ಮಾಡಿ ಬೆಳಕು ಕಾರಿ... ಕಣ್ಣು ಕೋರೈಸಿ ಅಷ್ಟೇ ರಭಸವಾಗಿ ಠುಸ್ಸೆಂದು ಕೆಳಗಿಳಿದು ಬಿಡುತ್ತವೆ. ಒಂದರೆಕ್ಷಣದ ಉತ್ಸಾಹ ಅಷ್ಟೆ ಮಂದ ಬೆಳಕಿನ ಹಣತೆಯಾದರೆ ಪಾಪ ಗಂಟೆಗಟ್ಟಲೆ ಆವೇಶವಿಲ್ಲದೇ ತಣ್ಣಗೆ ಬೆಳಕು ನೀಡುತ್ತದೆ. ದುರ್‍ಸು ಹಾಗಲ್ಲ, ತಾನು ಭಾರೀ, ಭರ್ಜರಿ ಎಂದೆಲ್ಲ ತೋರಿಸಿ ಠುಸ್ಸೆನ್ನುತ್ತವೆ.

ಅದು ಮಾಡಿ ಬಿಡಬೇಕು... ಇದು ಕಟ್ಟೆ ಕಡಿದು ಗುಡ್ಡೆ ಹಾಕಬೇಕು... ಬಾಯ್ಬಿಟ್ಟರೆ ಪಟಾಕಿಯೇ ಇವರ ಬಳಿ. ತಾವೂ ಸುಮ್ಮನೇ ಕೂಡಲಾರರು ಸುತ್ತ ಇದ್ದವರನ್ನು ಸುಮ್ಮನಿರಲು ಬಿಡಲಾರರು. ಮದುವೆ ಮುಂಜಿಗಳಲ್ಲಿ ಇಂಥ ಗಡಿಬಿಡಿ ಗೊಗ್ಗಯ್ಯಗಳು ಆಯಕಟ್ಟಿನ ಜಾಗ ಸೇರಿಕೊಂಡರಂತೂ ಮುಗೀತು. ಆ ಕಡೆ ಪುರೋಹಿತರು ತಾಳಿ ಕಟ್ಟಿಸಲಿ. ವಧುವರರ ಅಪ್ಪ ಅಮ್ಮ ಮಾತ್ರ ಮಂಟಪದಲ್ಲಿದ್ದರೆ ಸಾಕು ಶಾಸ್ತ್ರ ನಡೆಯುತ್ತಿರುತ್ತದೆ. ನಾವು ಈ ಕಡೆ ಊಟ ಶುರು ಮಾಡುವಾ... ಎಂದಪ್ಪಣೆ ಕೊಡಿಸಿ ಎಲೆ ಹಾಕಿಸಿ ಬಿಡುತ್ತಾರೆ.

ಮದುವೆ ಮಂಟಪದಲ್ಲಿ ವಧುವರರು ಪುರೋಹಿತರು ಬಾಕಿ ಎಲ್ಲಾ ಡೈನಿಂಗ್ ಹಾಲಿಗೆ ಲಗ್ಗೆ. ಖಾಲಿ ಖುರ್ಚಿಗಳೆದುರು ವರ ತಾಳಿ ಬಿಗಿದು ಮುಖ ಸಪ್ಪಗೆ ಮಾಡಿಕೊಂಡಿರುತ್ತಾನೆ. ವಧುವಿನ ಜತೆ ಸೆಲ್ಫಿ ತೆಗೆದುಕೊಳ್ಳಲೂ ಒಬ್ಬರಿರದೇ ಮಾಯವಾಗಿ ಬಿಡುತ್ತಾರೆ.

## ವಿಬ್ಗಯಾರ್!

ಅವಳು ರಂಗು ರಂಗಿನ ಬಣ್ಣ
ಇವನು ಬದಲಾಗದ ಗೋಡೆ ಸುಣ್ಣ
ಅವಳು ಕಣ್ಸೆಳೆಯುವ VIBGOYR
ಇವನು ಬಾಯ್ಬಿಟ್ಟು ನೋಡುವ
ಹಳ್ಳಿ ಗಮಾರ್!

~ ತುರುವೇಕೆರೆ ಪ್ರಸಾದ್



# ನಿಮ್ಮಯ ಬಾಣ ಗರ್ಭಿಣಿಯ

**- ಎಸ್.ಆರ್. ವಿಜಯಶಂಕರ**

**ನ**ಮ್ಮ ಅದ್ರಾಮ ಮತ್ತು ಪೊಮ್ಮೆಚ್ಚರು ಸೇರಿದಲ್ಲಿ ಮಾತಿಗೆ ಮಾತು ಬೆಳೆದರೆ ಸಾಹಿತ್ಯದ ಜಗಳ ಗ್ಯಾರಂಟಿ. ಒಂದು ಕಾಲದಲ್ಲಿ ತಾನೂ ಸಾಹಿತ್ಯ ಓದಿದ್ದೇನೆ. ತನಗೂ ಸಾಹಿತ್ಯಾಸಕ್ತಿ ಇದೆ. ಈಗ ಸ್ವಲ್ಪ ಲಕ್ಷ್ಮೀ ಚಿಂತನೆ ಹೆಚ್ಚಾದರೂ ನಿಜದಲ್ಲಿ ತಾನೂ ಸರಸ್ವತಿ ಪುತ್ರ ಎಂಬುದು ಪೊಮ್ಮನ ನಂಬುಗೆ. ಅಷ್ಟಿದ್ದರೆ ಸಾಕು. ಎಷ್ಟು ಮಾಡಬಹುದು. ಪ್ರಜಾವಾಣಿಯಲ್ಲಿ ತಾನೂ ಪುಸ್ತಕ ವಿಮರ್ಶೆ ಬರೆಯಬಲ್ಲೆ ಎಂದು ಅವನು ಅದ್ರಾಮನನ್ನು ರೇಗಿಸುತ್ತಾನೆ. ಕಾರಣ ಇಷ್ಟೆ ಅದ್ರಾಮ ಪುಸ್ತಕ ವಿಮರ್ಶೆ ತಪ್ಪದೆ ಓದಿ ಅಪ್‌ಡೇಟ್ ಆಗಿರ್ತಾನೆ. ಅಂತಹ ವಿಮರ್ಶೆಗಳೆಲ್ಲಾ ಕೇವಲ ಡೇಟ್ ಅಪ್. ಅವರುಗಳು ಕೂಡಾ ಓದಿದ್ದೆಲ್ಲಾ ಹೈಸ್ಕೂಲಿನಲ್ಲಿ ಇರುವಾಗ ಮಾತ್ರ. ಈಗ ಮುನ್ನುಡಿ ಓದಿ ಹೊಗಳುವುದು, ಹಿನ್ನುಡಿ ನೋಡಿ ತೆಗಳುವುದು ಎಂದು ಪೊಮ್ಮೆಚ್ಚ ರೇಗಿಸುತ್ತಾನೆ. ಹೆಚ್ಚು ರೇಗಿದರೆ 'ನಿನ್ನತ್ರ ಮಾತಾಡಬೇಕಾದರೆ ಮಸಾಲೆ ದೋಸೆ ಕೊಡಿಸು. ಜಗಳ ಮಾಡಿದ್ದು ಯಾಕೆ' ಎಂದು ಪೊಮ್ಮ ನಾಚಿಕೆ ಕೆಟ್ಟು ಕೇಳುತ್ತಾನೆಂದು ಒಮ್ಮೊಮ್ಮೆ ಅದ್ರಾಮ ಅಸಹಾಯಕನಂತೆ ಸಿಟ್ಟು ನುಂಗಿಕೊಳ್ಳುವುದೂ ಇದೆ.

**ಮಾತಿನ ಹಾಗೆ ಕ್ರಿಯೆಗೆ ವ್ಯಂಗ್ಯ ಎಂಬುದಿಲ್ಲ. ಕ್ರಿಯೆಗೆ ಬೇಕಾದುದು ಕಾರಣ ಮಾತ್ರ**

ಆದರೆ ಅದ್ರಾಮನ ಪುರಾಣ ಜ್ಞಾನ ಯಾವಾಗಲೂ ಒಂದು ಲವ ಹೆಚ್ಚು. ಕಾರಣ ಇಷ್ಟೆ ಅವನು ಜಬ್ಬಾರ್ ಸಮೊನ ಭಕ್ತ. ಸಂಪಾಜೆ ಮೊಹಮ್ಮದ್ ಕುಂಞ ಮಗ ಜಬ್ಬಾರ್ ಹುಟ್ಟಿನಿಂದ ಬ್ಯಾರಿ ಮುಸ್ಲಿಂ ಆದರೂ ಅವರ ಪುರಾಣ ಜ್ಞಾನ ಯಾವ ಶ್ರೇಷ್ಠ ಸಂಸ್ಕೃತ ವಿದ್ವಾಂಸನಿಗೂ ಕಡಿಮೆ ಇಲ್ಲ. ಇಂದು ದಕ್ಷಿಣ ಕನ್ನಡ ಜಿಲ್ಲೆಯ ಅತಿ ಪ್ರಸಿದ್ಧ ಯಕ್ಷಗಾನ ಅರ್ಥದಾರಿಗಳಲ್ಲಿ ಒಬ್ಬರಾದ ಜಬ್ಬಾರ್ ಸಮೊ, ವಿಭೀಷಣ, ರಾವಣ, ರಾಮ, ಕೃಷ್ಣ ಯಾವುದೇ ಪಾತ್ರದಲ್ಲಿ ಅರ್ಥ ಹೇಳಿದರೂ ಜನ ಮೆಚ್ಚಿ ತಲೆದೂಗಬೇಕು. ಅಂತಹ ಜಬ್ಬಾರ್ ಬೆಂಗಳೂರಿಗೆ ಬಂದು ಎಲ್ಲಿ ಅರ್ಥ ಹೇಳಿದರೂ ಅದ್ರಾಮ ತಪ್ಪಿಸಿಕೊಳ್ಳುವುದಿಲ್ಲ. ವಿದ್ವಾಂಸ ಛಿಮಾಕಾಂತ ಭಟ್ಟರ ಪಟ್ಟಾಭಿಷೇಕದ ದಶರಥನ ಅರ್ಥದ ವಿವರ ಹೇಳುವಾಗಲೇ ಅದ್ರಾಮನ ಕಣ್ಣು ಮಂಜಾಗುತ್ತದೆ. ಊರಿಗೆ ಹೋದಾಗ ತಾಳ ಮದ್ದಲೆಯಲ್ಲಿ ಜಬ್ಬಾರ್ ಅರ್ಥ ಇರುವಲ್ಲಿಗೆ ಹುಡುಕಿ ಹೋಗುವವ ಅದ್ರಾಮ. ಅಂತಹ ಅದ್ರಾಮನಿಗೆ ನಮ್ಮ ಪುರಾಣ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಅವನನ್ನು ಕೆಣಕುವುದೆಂದರೆ ಪೊಮ್ಮೆಚ್ಚನಿಗೆ ಏನೋ ಖುಷಿ. ಇವರ ನಡುವೆ ಒಮ್ಮೊಮ್ಮೆ ನಾನೂ ಸಿಕ್ಕಿ ಬಿದ್ದು ಏನಾದರೂ ತೀರ್ಪು ಹೇಳಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗುತ್ತದೆ.



ನಾನು ಈಗ ಹೇಳಲು ಹೊರಟಿರುವುದು ಇಂತಹ ಒಂದು ತಾಪತ್ರಯದ ಸಂದರ್ಭವನ್ನು. ನಾವು ಭೇಟಿಯಾಗದೆ ಒಂದೆರಡು ವಾರಗಳು ಕಳೆದರೆ ಆಪೀಸಿನಿಂದ ಹಿಂತಿರುಗುವಾಗ ಇಂದ್ರಪ್ರಸ್ಥದಲ್ಲಿ ನಾವು ಸಂಜೆ ಭೇಟಿಯಾಗುವುದುಂಟು. ವಾಚಕ

ಮಹಾಶಯರು ಗಲಿಬಿಲಿಗೊಳ್ಳಬಾರದು. ಇಂದ್ರಪ್ರಸ್ಥ ಎಂದರೆ ಬೆಂಗಳೂರಿನ ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್ ಬಳಿ ಇರುವ ಒಂದು ಹೋಟೆಲ್. ಅಲ್ಲೊಂದು ದೋಸೆ ಕಾಫಿ ಮುಗಿಸಿ ಪಕ್ಕದ ಶಾಪ್‌ನಲ್ಲಿ ಪಾನ್ ಬೀಡಾ ಹಾಕಿ ರಸ್ತೆ ಬದಿಯಲ್ಲಿ ಮತ್ತೆ ಅರ್ಧ ಗಂಟೆ ಪಟ್ಟಾಂಗ ಹೊಡೆದು ಮನೆಗ ಹೋದರೆ ಮೂವರಿಗೂ ಏನೋ ಮೂರುಲೋಕ ಗೆದ್ದ ಹುಮ್ಮಸ್ಸು. ಇವತ್ತು ಯಾರದ್ದು ಲೆಕ್ಚರ್? ಪೊಮ್ಮಂದೂ ಅಥವಾ ಅದ್ರಾಮಂದೋ ಎಂದು ಮನೆಯಲ್ಲಿ ಕೇಳುವಷ್ಟು ಆ ಹುಮ್ಮಸ್ಸು ಫೇಮಸ್.

ಈಗ ಹೇಳ ಹೊರಟಿರುವ ಘಟನೆಯಲ್ಲಿ ನಾನು ಸಿಕ್ಕು ಬಿದ್ದದ್ದು ಹೀಗೆ. ದೋಸೆಗೆ ಆರ್ಡರ್ ಕೊಟ್ಟು ಕಾಯುತ್ತಿರುವಾಗ ಪೊಮ್ಮೆಚ್ಚ ಅದ್ರಾಮನನ್ನು ಕೆಣಕಿದ. ನಿಮ್ಮ ಗುರುಗಳ ಅರ್ಜುನ ಎಂತಹ ಪಡಪೋಶಿ. ಅಜ್ಜ ಭೀಷ್ಮನನ್ನೇ ಹಿಯಾಳಿಸುವುದು. ಯುದ್ಧ ಭೂಮಿ ಆದರೇನು. ಒಂದು ಮರ್ಯಾದಿ ಅಂತ ಇಲ್ವಾ? ಎಂದ. ಅದ್ರಾಮ ಸ್ವಿಚ್ ಆನ್ ಮಾಡಿ ಗ್ಯಾಸ್ ಸ್ಟವ್ ಹೊತ್ತಿಸಿದ ಹಾಗೆ. ಸುರುವಿಗೆ ಒಮ್ಮೆ ಬಗ್ಗನೆ ಮೇಲೆ ಹಾರಿ ಮತ್ತೆ ಸಮಾಧಾನದ ಜ್ವಾಲೆ. ಅದು ನಿಮ್ಮ ಕುಮಾರ ವ್ಯಾಸನೇ ಹೇಳಿದ್ದಾಯ್ತು? ಸುಮ್ಮನೆ ನಿಮ್ಮ ಚಪ್ಪೆಬೇಡ ಎಂದ. ಎಂತಾದ್ದು ಚಪ್ಪೆ ಮಾರಾಯ, ಅಜ್ಜನ ಹತ್ರ ಬಸಿರಿ ಅದು ಇದು ಅಂತ ಮಾತಾಡುದಾ? ಮಾತಿಗೊಂದು ಮರ್ಯಾದಿ ಬೇಡ್ವಾ ಎಂದು ಇನ್ನಷ್ಟು ಕೆಣಕಿದ ಪೊಮ್ಮೆಚ್ಚ

ಅದ್ರಾಮ ಬಿಟ್ಟಾನೋ 'ಹೆರಿಸಿರೇ ನಾರಿಯನು ನಿಮ್ಮ ಬಾಣಗರ್ಭಿಣಿಯ' ಅಂತ ಬರೆದದ್ದು ಯಾರು? ಕುಮಾರವ್ಯಾಸ ಅಲ್ವಾ? ನಮ್ಮ ಅರ್ಥಧಾರಿಗಳಾ? ಎಂದು ಪೂರ್ಣಪಾಠ ಹೇಳಿದ:

ಬರಿಯ ಮಾತೋ ಚಾಪ ವಿದ್ಯದೊ
ಳರಿತವುಂಟೋ ಹೊತ್ತುಗಳೆಯದೆ
ಹೆರಿಸಿರೇ ನಾರಿಯನು ನಿಮ್ಮಯ ಬಾಣಗರ್ಭಿಣಿಯ
ಅರಿಯಬಹುದೆನಲಹುದಹುದು ಕೈ
ಮರೆಯದಿರು ಕೈಕೊಳ್ಳೆನುತ ಬೊ
ಬ್ಬಿರಿದು ಪಾರ್ಥನನದ್ದಿದನು ಬಾಣಾಂಬುರಾಶಿಯಲಿ।

ಬೇಕಾದರೆ ಹೋಗಿ ಭೀಷ್ಮ ಪರ್ವದ ಒಂಭತ್ತನೇ ಸಂಧಿ ನೋಡು. 'ನಾರಿ' ಅಂತ ದೀರ್ಘ ಇದ್ದರೆ ಅದು ಸಂಸ್ಕೃತ ಶಬ್ದ. ಸ್ತ್ರೀ ಎಂದು ಅರ್ಥ. 'ನಾರಿ ಕನ್ನಡ ಪದ. ಅಲ್ಲಿ ದೀರ್ಘ ಇಲ್ಲ. ಅದಕ್ಕೆ ಬಿಲ್ಲಿನ ಹೆದೆ ಎಂದು ಅರ್ಥ. ನಾರು ಎಂದು ತೊಗಟೆಯಿಂದ ತೆಗೆದ ನೂಲಿನಂತಹ ವಸ್ತು ಎಂಬ ಅರ್ಥವೂ ಇದೆ. ಬಿಲ್ಲಿನ ಹೆದೆ ಎಂದರೆ ಬಿಲ್ಲಿನ ಹಗ್ಗ. ಅದಕ್ಕೆ ಬಾಣ ಹೂಡಿ ಎಳೆದು ಹಿಡಿದಾಗ ತುಂಬಿದ ಬಸಿರಿಯ ಹೊಟ್ಟೆಯ ಹಾಗೆ ಬಿರುಟು ಆಗುದಿಲ್ವಾ? ಬಿಲ್ಲಿಗೆ ಬಾಣ ಹೂಡಿ ವೃತ್ತಾಕಾರದಲ್ಲಿ ಹಿಡಿದುಕೊಂಡು ಎಷ್ಟು ಮಾತು. ಅದನ್ನು ಹೆರಿಸು. ಅಂದರೆ ಹೊಡೆ ಬಾಣ ಮತ್ತೆ ನೋಡು ಎಂದು ಅಜ್ಜನಿಗೆ ಮೊಮ್ಮಗ ಹೇಳ್ತಾನಪ್ಪ. ಮುದುಕ ಅಲ್ವಾ, ಮರೆಯದಿರು ಅಂತ ನೆನಪಿಸುತ್ತಾ ಇದ್ದಾನಪ್ಪ. ಅಷ್ಟಕ್ಕೂ ಕುಮಾರ ವ್ಯಾಸ ರೂಪಕ ಚಕ್ರವರ್ತಿ ಅಲ್ವೆ. ಅಜ್ಜನಿಗೆ ಸಿಟ್ಟು ಬಂತು. ನಾಲ್ಕು ಬಾಣ ಬಿಟ್ಟ. ಭೀಷ್ಮನೂ ಇವನನ್ನು ಜವ್ವನಿಗ ಅದು ಇದು ಎಂದು ಹೇಳಿ ಕೆಣಕಲಿಲ್ಲವೆ ಎಂದು ಜಬ್ಬಾರ್ ಅರ್ಥದ ಪರ ವಕಾಲತ್ತು ವಹಿಸಿದ.



ಪೊಮ್ಮನಿಗೂ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರು ಈ ಭಾಗವನ್ನು ವಿವರಿಸಿದ್ದು ನೆನಪಿತ್ತು. ''ವೃಥಾಹುಲುದಳದೊಳಗೆ ನಿಮ್ಮಗ್ಗಳಿಕೆ'' ಎಂದವ ಅರ್ಜುನ. ಅಜ್ಜನಿಗೆ ಸಿಟ್ಟು ಬರಿಸಿದವ ಅರ್ಜುನ ಎಂದ ಪೊಮ್ಮ. ಆಗ ಅದ್ರಾಮ ಹೇಳಿದ ಮತ್ತೆ ಭೀಷ್ಮಂದೇನು ಕೊಂಕು ಕಮ್ಮಿಯಾ? ಆ ಮೊದಲು ಕೆಣಕಿದ್ದು ಯಾರು? 'ನೀವಲ್ಲೈ ಜವ್ವನದ ಭಂಟರು ರಣದ ದುರಭರಕೆ' ಅಂತ ಮೊದಲು ಹೇಳಿದ್ದು ಅಜ್ಜ ಅಲ್ವಾ, ''ನಾವು ವೃದ್ಧರು ಬಿರುದು ಗಿರುದಿನ / ಲಾವಣಿಗೆ ನಮಗೇಕೆ ಹೇಳೈ'' ಎಂದು ಮೊದಲು ತೆಗೆದದ್ದು ಭೀಷ್ಮ ಹೌದೋ? ಅಲ್ಲವೊ? ಎಂದ ಅದರ ಮೇಲೆ ಅಜ್ಜಂದು ಪುಳ್ಳಿಗೆ ಬಹು ವಚನದ ಕೊಂಕು ಮರ್ಯಾದೆ, ''ನೀವಿರಲು ನಿರ್ನಾಯಕವೆ ಸೇ/ ನಾವಳಿ ಮಹಾದೇವ ಮೂದಲೆ/ ಗಾವು ಲಕ್ಷ್ಯವೆ ಹೇಳು ಫಲುಗುಣ'' ಎಂದವನು ಭೀಷ್ಮ ಹೌದೋ ಅಲ್ಲವೊ ಎಂದ. ಈಗ ಇಲ್ಲಿ ಇಂದ್ರಪ್ರಸ್ಥದ ದೋಸೆ ತಿನ್ನುವ ಟೇಬಲ್‌ನಲ್ಲಿ ಭೀಷ್ಮಾರ್ಜುನರ ಯುದ್ಧದ ತಾಳ ಮದ್ದಳೆ ಚರ್ಚೆ ಶುರುವಾಗುವುದು ಖಾತ್ರಿಯಾಯಿತು.

ಅವರ ಬಿಲ್ಲಿನ ಕತೆ ಬಿಡಿ. ಈ ದೋಸೆ ಬಿಲ್‌ನ ಕತೆ ಏನು ನೋಡುವ ಅಂತ ತುಸು ಬೇರೆ ಕಡೆ ಗಮನ ಸೆಳೆಯಲು ನೋಡಿದೆ. ಅದ್ರಾಮ ಮತ್ತು ಪೊಮ್ಮ ಇಬ್ಬರೂ ಮಹಾಭಾರತದ ಭೀಷ್ಮ ಪರ್ವ ಹೊಕ್ಕು ಆಗಿತ್ತು. ಅವರನ್ನು ಅಲ್ಲಿಂದ ಎಳೆದು ತರುವುದು ಸುಲಭ ಇರಲಿಲ್ಲ.

ನೀನು ವ್ಯಂಗ್ಯ ಅಂತ ಹೇಳುವುದು ಏನನ್ನು? ಮಾತಿನ ಹಾಗೆ ಕ್ರಿಯೆಗೆ ವ್ಯಂಗ್ಯ ಇಲ್ಲ. ಕ್ರಿಯೆಗೆ ಬೇಕಾದ್ದು ಕಾರಣ ಮಾತ್ರ. ಕ್ರಿಯೆಯನ್ನು ವಿವರಿಸುವಾಗ ವ್ಯಂಗ್ಯ ಹುಟ್ಟುವುದು. ಅಜ್ಜನ ಕ್ರಿಯೆ ಯಾವುದು? ಬಾಣವನ್ನು ಬಿಲ್ಲಿಗೆ ಹೂಡಿ ಎಳೆದು ಹಿಡಿದದ್ದು. ಅದನ್ನು ವಿವರಿಸುವಾಗ ಮಾತಿನಲ್ಲಿ ವ್ಯಂಗ್ಯ ಹುಟ್ಟುತ್ತದಪ್ಪ. ಈ ಅಜ್ಜ ಮದುವೆಯಾದ್ದೆ ಬಿಲ್ಲಿನ ನಾರಿ (ಹೆದೆ)ಯನ್ನು. ಆ ಶಬ್ದಕ್ಕೆ ಶ್ಲೇಷೆಯ ಸಾಮರ್ಥ್ಯವಿದೆ. ಶ್ಲೇಷೆ ಅಂದರೆ ಅರ್ಥಗಳು ಒಂದನ್ನೊಂದು ಅಪ್ಪಿಕೊಂಡು ಇರುವುದು. ಅರ್ಜುನ ರೆಸ್ಪೆಕ್ಟ್‌ಕೊಟ್ಟಾಗ ಅಜ್ಜ ಅದನ್ನು ತೆಗೆದುಕೊಳ್ಳದೆ ಇನ್ನಷ್ಟು ಮಾತಿಗೆ ಇಳಿದದ್ದು ತಪ್ಪು ಎಂದು ಅದ್ರಾಮ ತನ್ನ ವಾದ ಮಂಡಿಸಿದ.


ಏನಪ್ಪಾ ಭೀಷ್ಮ ಸೇನೆಯನ್ನು ಕಂಗೆಡೆಸಿ ಮುಂದೆ ಬರುವಾಗ ಅವನನ್ನು ತಡೆಯಲು ಎದುರು ಹೋಗಿ ನಿಂತ ಅರ್ಜುನನಿಗೆ ಮೊದಲು ''ನಮ್ಮೊಡನೆ ಮೆಚ್ಚಿಸಿ / ಬಳಿಕ ಹಡೆಯಿರಿ ಬಿರುದ'' ಎಂದ. 'ಹಡೆಯಿರಿ' ಬದಲು 'ಪಡೆಯಿರಿ' ಎಂದು ಹೇಳಿದರೆ ಗಂಟೇನು ಹೋಗ್ತಿತ್ತು. ಅದಕ್ಕೆ ಅಜ್ಜ ನೀನು 'ಜವ್ವನಿಗ' ಎಂದದ್ದು. ಆಮೇಲೆ ಅಲ್ಲವಾ ಅರ್ಜುನ ಹೇಳುವುದು ''ಕಟಕಿಯೇಕಿದು ಪರಶುರಾಮನ ಪಟುತನಕೆ ಮದ್ದರೆವೆ'' ಅಂತ ತೆಗೆದದ್ದು ಎಂದು ಅದ್ರಾಮ ತನ್ನ ವಾದ ಮುಂದುವರಿಸಿದ.

ಅಂದರೆ ಅರ್ಜುನನ ಯೌವ್ವನದ ಸೊಕ್ಕನ್ನು ಮುದುಕ ಭೀಷ್ಮ ಕೆಣಕುತ್ತಿದ್ದಾನೆ. ಭೀಷ್ಮನ ಕ್ರಿಯೆಗಳನ್ನೇ ಅರ್ಜುನ ವಿವರಿಸುತ್ತಾ ವ್ಯಂಗ್ಯ ಹುಟ್ಟಿಸುತ್ತಾನೆ. ಯುದ್ಧದ ವೀರ ರಸ ಮಾತಿನಲ್ಲೇ ಹುಟ್ಟಬೇಕಲ್ಲಪ್ಪ. ಮಾತಿಲ್ಲದೆ ಯುದ್ಧವನ್ನು ಎಷ್ಟು ವರ್ಣಿಸಲು ಸಾಧ್ಯ. ಆಗ ಅದು ಅವನು ಇಷ್ಟು ಬಾಣ ಇಂತಹ ಬಾಣ ಬಿಟ್ಟ, ಇವನು ಅಷ್ಟು ಬಾಣ ಅಂತಹ ಬಾಣಗಳಿಂದ ಅವುಗಳನ್ನು ತುಂಡರಿಸಿದ ಎಂಬ ಸಂಖ್ಯಾ ವಿವರಗಳ ಅಂದರೆ ಡೇಟಾ ಡ್ರಿವನ್ ವರದಿ ಆದೀತೆ ಹೊರತು ರಸ ಸೃಷ್ಟಿಗೆ ಹೇಗೆ ಪೂರಕ ಆದೀತು? ಎಂದು ಏನೇನೋ ಬಡಬಡಿಸುತ್ತಾ ನಡುವೆ ಯುದ್ಧ ವಿರಾಮಕ್ಕೆ ಪ್ರಯತ್ನಿಸಿದೆ.



ಏನಾದ್ರೂ ಅಜ್ಜನ ಹತ್ರ 'ಹೆರಿಸಿರಿ' ಅದು ಇದು ಅನ್ನೋದು ಚಂದ ಇಲ್ಲಪ್ಪ. ಬಾಣ ಆದರೇನು? ಮಗುವಾದರೇನು? ಹೆರುವ ಅರ್ಥ ಅದುವೇ ಅಲ್ವಾ? ಬೇಕಾದ್ರೆ ಯುದ್ಧ ಮಾಡ್ಲಿ. ಆದರೆ ಚಂದಕ್ಕೆ ಹೇಳ್ಲಿ ಅಂತ ಗೊಣಗುತ್ತಾ ಪೊಮ್ಮೆಚ್ಚ ಹಿಂದೆ ಸರಿದ. ಅಂದ್ರೆ ಇವ ಎಂತದು ಹೇಳುದು? ಮುದುಕರನ್ನು ಬೇಕಾದರೆ ವೃದ್ಧಾಶ್ರಮಕ್ಕೆ ಸೇರಿಸುವ. ಆದರೆ ಸೇರಿಸುವ ಮೊದಲು ಚಂದಕ್ಕೆ ಮಾತಾಡಿ ಅವರಿಗೆ ಗೊತ್ತಾಗದ ಹಾಗೆ ಸೇರಿಸಬೇಕು ಅಂತಲ್ಲವಾ ಇವ ಹೇಳುದು ಎಂದು ಮತ್ತೊಂದು ಚರ್ಚೆಗೆ ಅದ್ರಾಮ ಪೀಠಿಕೆ ಹಾಕಿದ.

ಅಷ್ಟರಲ್ಲಿ ಆರ್ಡರ್ ಕೊಟ್ಟ ಮಸಾಲೆ ದೋಸೆ ಬಂತು. ಮೊದಲು ಇದನ್ನು ಬಿಸಿಬಿಸಿ ತಿನ್ನುವ. ಆಮೇಲೆ ಕಾಫಿ ಬರುವಾಗ ಅದನ್ನು ಯೋಚನೆ ಮಾಡುವ ಎಂದು ನನ್ನ ತೀರ್ಪು ಹೇಳಿದೊಡನೆ ಮೂವರೂ ಕಾರ್ಯೋನ್ಮುಖರಾದೆವು.






# ಒಂದು ಡೈರಿ ರಾದ್ಧಾಂತ

- ಗಣೇಶ ಹೆಗ್ಗಡೆ

"ರೀ... ಇಷ್ಟು ಹೊತ್ತು ಎಲ್ಲಿ ಹಾಳಾಗಿ ಹೋಗಿದ್ರೀ? ಬೇಗ್ಬನ್ರಿ..."

"ಇಷ್ಟು ಹೊತ್ತು ನಾನು ಮುನಿಸಿಪಲ್ ಪ್ರೆಸಿಡೆಂಟ್ ತೋಲಾಂಡರಾಯರ ಕಛೇರಿಯಲ್ಲಿ ಕುಳಿತಿದ್ದೆ. ಹೀಗ್ಯಾಕೆ ಎಗರಾಡ್ತಿದಿ?

"ಸನ್ಯಾಸಿ ಸಹವಾಸದಿಂದ ಸಂಸಾರಿಯೂ ಕೆಟ್ಟ ಅಂದ್ಹಾಗೆ ಈಚೀಚೆಗೆ ಯಾಕೊ ನೀವು ನಾನೆಂದುಕೊಂಡ ಹಾಗೆ ಇಲ್ಲ, ತುಂಬಾ ಬದ್ಲಾಯಿಸಿ ಹೋಗಿದ್ದೀರಿ."

> ಲಲಿತಾ 1000,
> ರಂ 5000 ಎಂದೆಲ್ಲಾ
> ಬರೆದರೆ ಹೆಂಡತಿಗೆ
> ಅನುಮಾನ ಬಾರದೆ?

"ಅಯ್ಯೋ ರಾಮ, ನಮ್ಮ ತೋಲಾಂಡರಾಯರು ದೇವರಂಥಹ ಮನುಷ್ಯ ಕಣೆ. ತುಂಬಾ ಪ್ರಾಮಾಣಿಕರು. ಮೊನ್ನೆ ಯಾವನೊ ಕಂಟ್ರಾಕ್ಟರ್ ಉಡುಗೊರೆಯಾಗಿ ಕೊಟ್ಟ ಡೈರಿಯನ್ನು ಕೈಯಲ್ಲೂ ಸಹಾ ಮುಟ್ಟದೆ, 'ನೀನು ಇಟ್ಕೊಳಯ್ಯ ಇದನ್ನ, ಇವತ್ನಿಂದ ಡೈರಿ ಬರೆಯುವ ಅಭ್ಯಾಸ ಮಾಡ್ಕೊ' ಅಂತಂದ್ರು ಪಾಪ"

"ಈ ಡೈರಿ ವಿಷಯಕ್ಕೆ ಈಗ ನಿಮ್ಮನ್ನು ತರಾಟೆಗೆ ತೆಗೆದುಕೊಂಡಿರುವುದು. ಭಗವದ್ಗೀತೆ ಮುಟ್ಟಿ ಪ್ರಮಾಣ ಮಾಡಿ ಹೇಳಿ. ನೀವು ಸತ್ಯವನ್ನಲ್ಲದೇ ಬೇರೆ ಏನನ್ನೂ ಹೇಳಕೂಡದು."

"ವ್ಹಾಟ್?"

"ಈ ಡೈರಿಯಲ್ಲಿರುವ ತಲೆಬರಹಗಳೆಲ್ಲಾ ನಿಮ್ಮ ಅಕ್ಷರದ್ದು ತಾನೆ?"

"ನಿಮ್ಮಪ್ಪನಾಣೆಗೂ ನನ್ನದೇ ಕಣೆ"

"ಪುಟ ಒಂದರಲ್ಲಿ ಲಲಿತಾ... ರೂ. ಒಂದು ಸಾವಿರ ದಿನಾಂಕ 22-2-2017 ಅಂತಿದೆ. ಯಾರ್ರೀ ಈ ಲಲಿತಾ? ನನ್ಗೊತ್ತಿಲ್ಲದ ಹಾಗೆ ಇನ್ನೊಂದು ಸಂಸಾರವೇನಾದ್ರೂ ಕಟ್ಕೊಂಡಿದಿರೇನ್ರಿ? 'ಕಿನ್ನರಿ' ಸೀರಿಯಲ್... ಲಕ್ಷ್ಮೀಬಾರಮ್ಮಾ... ಸೀರಿಯಲ್‌ಗಳನ್ನ ಟೀವಿಲಿ ನೀವು ನೋಡೋದಕ್ಕೆ ಅವಾಯ್ಡ್ ಮಾಡ್ತಿರುವಾಗ್ಲೆ ನಾನು ಎಚ್ಚೆತ್ತುಕೊಳ್ಳಬೇಕಿತ್ತು. ಒಂದಿನ ನೀವು 'ಮಣಿ' ಥರಹದ ಹುಡುಗೀನ ನಮ್ಮುಂದೆ ನಿಲ್ಲಿಸಿಬಿಟ್ರೆ ನನ್ಗತಿ ಏನ್ರಿ?"

"ಲೇ...ಲೇ... ಬಿಡ್ತು ಅನ್ನೆ.. ಶಂಕರ ಛಾನಲ್ಲು ಬಿಟ್ಟು ಬೇರೆ ಯಾವ ಛಾನಲ್ಲೂ ಹಾಕ್ಕೋಬ್ಯಾಡ ಅಂತ ಎಷ್ಟು ಹೇಳಿದ್ರೂ ನೀನು ತಿದ್ದುಗೋತಾ ಇಲ್ಲ, ಲಲಿತಾ... ರೂ. ಒಂದು ಸಾವಿರ ಅಂದರೆ ಮುಂದಿನ ಶಿವರಾತ್ರಿಯಂದು ಹಿಂದೂ ಮಹಾ ಸಂಘಟನೆಯವರು ಗಾಂಧಿ ಮೈದಾನದಲ್ಲಿ ಸಾಮೂಹಿಕ ಲಲಿತಾ ಸಹಸ್ರನಾಮ ವಾಚನವನ್ನು ಇಟ್ಕೊಂಡಿದ್ದಾರೆ. ಅದರ ಬಾಬ್ತು ನಾನು ಮತ್ತು ತೋಲಾಂಡರಾಯರು ತಲಾ ಒಂದು ಸಾವಿರ ರೂ. ಕೊಟ್ಟಿದ್ದೀವಿ. ಅದರ ವಿವರಣೆ ಕಣೆ 'ಡೈರಿ'ಯಲ್ಲಿರುವುದು.



"ಹಾಗೇ... ಈ ಕೆಳಗಿನ ಟಿಪ್ಪಣಿ ನೋಡ್ರಿ... ರಂ... ಐದು ಸಾವಿರ ಅಂತಿದೆ. ಯಾವಾಗ್ನಿಂದ ಕುಡಿಯೋದಕ್ಕೆ ನೀವು ಶುರು ಹಚ್ಚಿಕೊಂಡ್ರಿ? ಇತ್ತೀಚೆಗೆ ನೀವು

ಘಂಟೆಗೊಂದು ಸಲ ಪಾನ್ ಬೀಡಾ ಜಗಿಯುವ ಅಭ್ಯಾಸ ಮಾಡಿಕೊಂಡಾಗಲೇ ನಾನು ಎಚ್ಚೆತ್ಕೋಬೇಕಿತ್ತು. ಈಚೀಚೆಗೆ ನೀವು ವಿಪರೀತ ಉಪ್ಪಿನಕಾಯಿ ಬ್ಯಾರೆ ತಿನ್ತಾ ಇದ್ದೀರಿ!''

''ನಿನ್ನ ದಮ್ಮಯ್ಯ ಕಣೆ. ಬಿಡ್ತು ಅನ್ನೆ. ಕಾಫಿ...ಟೀ...ಬಿಟ್ರೆ ಬೇರೆ ಏನು ಕುಡಿಯೋ ಅಭ್ಯಾಸ ಇದ್ಯೇನೆ ನನ್ಗೆ? ನಮ್ಮ ಕುಲಪುತ್ರನ ಹೆಸರೇನೇ?

''ರಂಗನಾಥ್ ಉರುಫ್ ರಂಗಣ್ಣಿ''

''ಮೊನ್ನೆ ನಮ್ಮ 'ರಂಗಣ್ಣಿ' ಕೊಯಮತ್ತೂರಿನಿಂದ ಮೆಸೇಜು ಮಾಡಿತ್ತು. ಅಪ್ಪ ಅರ್ಜೆಂಟಾಗಿ ಐದು ಸಾವಿರ ರೂ. ಕಳುಹಿಸಪ್ಪ. ತಿಂಗ್ಳ ಕೊನೆ ತುಂಬಾ ತೊಂದ್ರೆಯಾಗಿದೆ ಅಂತ. ಅದರ ಬಾಬ್ತು ಈ ಬರಹ ರಂ... ಐದು ಸಾವಿರ ಕಣೆ. ಅಮ್ಮಾ – ಕ್ಯಾಂಟೀನು ಮುಂದೆ ನಿಂತ್ಕೊಂಡು ಮೆಸೇಜು ಕಳುಹಿಸಿರುವ ನಮ್ಮ ರಂಗಣ್ಣಿ ಮೇಲೆ ಆಣೆ ಕಣೆ.''

''ಈಗ ಸಿಕ್ಕಿ ಹಾಕ್ಕೊತೀರಿ. ಮುಂದಿನ ಪುಟಕ್ಕೆ ಬನ್ನಿ.. ಇದೇನ್ರಿ... ವಲ್ಲಿ ಎರಡೂವರೆ ಸಾವಿರ ಅಂತಿದೆ. ಯಾವಳ್ರಿ... ಈ ವಲ್ಲೀ? ಅಗ್ನಿಸಾಕ್ಷಿ ಸೀರಿಯಲ್ನಲ್ಲಿ ನಮ್ಮ ಚಂದ್ರಿಕನಿಗೆ ಕಾಟ ಕೊಡ್ತಾ ಇದಾಳಲ್ಲ ಆ ತರಹ ನಿಮ್ಗೂ ಯಾರಾದ್ರೂ ಬ್ಲ್ಯಾಕ್ ಮೇಲ್ ಮಾಡ್ತಾ ಇದಾರೇನ್ರಿ?''

ನನ್ಗೊತ್ತಿಲ್ಲದ ಹಾಗೆ ನೀವೂ ದುಡ್ಡು ಪೀಕ್ತಾ ಇದಿರೇನ್ರೀ? ಮೊನ್ನೆ ಅಮಾವಾಸ್ಯೆಯ ಮಧ್ಯಾಹ್ನ ನಮ್ಮ ಮನೆ ಕೆಲಸದ ನಿಂಗಿ ಮೂರು ಸಾರಿ ಬಾಗಿಲು ತಟ್ಟಿ ಅಮ್ನೋರೆ.... ಅಮ್ನೋರೆ..., ಎಂದು ಕೂಗಿದಾಗ ನೀವ್ಯಾಕ್ರಿ ಬೆವತು ಥರ ಥರ ನಡುಗ್ತಿದ್ರೀ?

''ನಿಮ್ಮತ್ತಾತನ ಆಣೆಗೂ ಇಲ್ಲ ಕಣೆ. ಈ ಮನೆ ಹಾಳ ಟಿವಿ ಸೀರಿಯಲ್ಲುಗಳನ್ನು ನೋಡಿ ನೋಡಿ ನೀನ್ಯಾಕೊ ಶರಪಂಜರ ಸಿನಿಮಾದ ಕಲ್ಪನಾ ಥರಹ ಸೈಕಿಕ್ ಆಗ್ಹೋಗ್ತಿದೀಯಲ್ಲೇ..?

'ಸಾಕು ನಿಲ್ಸಿಸ್ರಿ.. ನಿಮ್ಮ ಆಣೆ... ಪ್ರಮಾಣ... ನಾನು ಆವಾಗ್ಲಿಂದ ಅಬ್ಸರ್ವ್ ಮಾಡ್ತಾನೇ ಇದ್ದೀನಿ.. ಆಣೆ ಇಡೋಕ್ಕೆ ನಮ್ಮ ಸಂಬಂಧಿಕರೇ ಬೇಕೇನ್ರಿ ನಿಮ್ ಕಡೆ ಯಾರೂ ಗತಿಯಿಲ್ಲವೇನ್ರಿ?'

'ದಿಟ ಕಣೆ. ಅವ್ರೆಲ್ಲಾ ಮತ್ತೆ ಹುಟ್ಟಿ ಬಂದು ನಿನ್ಮುಂದೆ ಸಾಕ್ಷಿ ಹೇಳುವ ಸ್ಥಿತಿಯಲ್ಲಿ ಇಲ್ಲವಲ್ಲೇ? ನನ್ಗೂ ಕೊಂಚ ಮಾತಾಡೋಕ್ಕೆ ಬಿಡೆ.'

''ಹ್ದೂಂ ಹೇಳಿ...''

''ನೆನ್ನೆ ಸಂಜೆ... ತಮ್ಮ ಮಗಳ ಮದುವೆಗೆ ಇನ್ವಟೇಷನ್ ಕೊಡಲು ಮನೆಗೆ ನನ್ನ ಗಳಸ್ಯ–ಕಂಠಸ್ಯ ಕಿಟ್ಟಿ ದಂಪತಿ ಬಂದಿದ್ರೂ ತಾನೆ?''

''ಹೌದು''

''ಹೊರಡುವ ಮುನ್ನ ಕಿಟ್ಟಿ ನಿನ್ನೆದುರಿಗೇ ರಿಕ್ವೆಸ್ಟ್ ಮಾಡಿಕೊಂಡನಲ್ಲೆ, ಮದುವೆಗೆ ಅವರ ಕಡೆಯ ಹಿರಿಯರಿಗೆ ರಿಟರ್ನ್ ಗಿಫ್ಟ್ ಅಂತ 'ವಲ್ಲಿ' ಕೊಡುವ ಪದ್ಧತಿ ಇದೆ. ಪರಿಚಯದ ನಾರಾಯಣಪ್ಪನವರ ಜವಳಿ ಅಂಗಡಿಯಲ್ಲಿ ಒಂದೈವತ್ತು 'ವಲ್ಲಿ' ಬೇಕು ಅಂತ ಹೇಳಿದ್ದರ ಬಾಬ್ತಿನ ಎಂಟ್ರಿ ಡೈರಿಯಲ್ಲಿ ವಲ್ಲಿ... ಎರಡೂವರೆ ಸಾವಿರ ಅಂತಿದೆ ಕಣೆ''

''ನೌ ಯು ಕಾಂಟ್ ಎಸ್ಕೇಪ್... ಯು ಆರ್ ಕಾಟ್ ರೆಡ್‌ಹ್ಯಾಂಡೆಡ್, ಡೈರಿಯ ಈ ಟಿಪ್ಪಣಿಗಳನ್ನು ನೋಡಿ ರಾ.ಗಾ. ಇಪ್ಪತ್ತು ಕೋಟಿ, ಸೋ.ಗಾ.. ಮೂವತ್ತು ಕೋಟಿ. ಅ.ಪ.



ಹತ್ತು ಕೋಟಿ, ಮೋವ್ಲೋ... ಎಂಟು ಕೋಟಿ... ರ್‍ರೀ ನನಗ್ಯಾಕೋ ಸಿಕ್ಕಾಪಟ್ಟೆ ಡೌಟು ಬರ್ತಿದೆ. ಆ ಮುನಿಸಿಪಲ್ ಪ್ರೆಸಿಡೆಂಟು ತೋಲಾಂಡರಾಯರ ಜತೆ ಸೇರ್ಕೊಂಡು, ಪಬ್ಲಿಕ್ ಮನೀನ ಲೂಟಿ ಹೊಡಿಯೋಕೆ ಸ್ಕೆಚ್ ಹಾಕ್ಕೊಂಡಿದಿರೇನ್ರಿ? ಕೋರ್ಟ್ ಸುಮ್ನೆ ಬಿಡುತ್ತೇನ್ರಿ ನಿಮ್ಮನ್ನ? 'ಚಿನ್ನಮ್ಮ'ನ ಪಕ್ಕದ ಸೆಲ್ಲಿಗ್ಗೆ ಹಾಕಿದರೆ ನನ್ನ ಗತಿ ಏನ್ರಿ?

'ಲೇ...ಲೇ... ನಿನ್ಗೆ ತಲೆ ಕೆಟ್ಟಿದೆ ಅಂದ್ಕೊಂಡಿದ್ದೆ. ಈಗ ಕಣ್ಣೂ ಕೆಟ್ಟಿದೆ ಅಂತ ಖಾತ್ರಿಯಾಯ್ತು. ಇನ್ನೊಂದ್ಸರಿ ಓದು... ಅವು 'ಕೋಟಿ' ಅಲ್ಲಾ.. ಕೋತಿ ಕಣೆ. ನಂಜುಡೇಶ್ವರನ ಈ ಪುಣ್ಯಕ್ಷೇತ್ರದಲ್ಲಿ ಕೋತಿಗಳ ಹಾವಳಿ ವಿಪರೀತವಾಗಿ ಭಕ್ತಾದಿಗಳಿಂದ ಮುನ್ಸಿಪಾಲ್ಟಿಗೆ ಕಂಪ್ಲೆಂಟು ಬಂದಿತ್ತು ಕಣೆ. ರಾಗಾ... ಸೋಗಾ... ಅಪ... ಮೋವ್ಲೋ... ಇವರೆಲ್ಲಾ ಕೋತಿ ಹಿಡಿಯುವ ಪ್ರಸಿದ್ಧ ಕಂಟ್ರ್ಯಾಕ್ಟರುಗಳು. ಟೌನ್‌ನಲ್ಲಿ ವಾರ್ಡಾನುಸಾರ ಹಿಡಿದಿರುವ ಕೋತಿಗಳ ಲೆಕ್ಕ ಕಣೆ ನನ್ಗೆ ಡೈರಿಯಲ್ಲಿ ದಾಖಲಿಸುವುದಕ್ಕೆ ಪ್ರೆಸಿಡೆಂಟರ ಅಪ್ಪಣೆಯಾಗಿತ್ತು ಕಣೆ. ಬಿಲೀವ್ ಮಿ..''

''ಕೋರ್ಟ್ ಈಸ್ ಅಡ್ಜರ್ನ್ಡ್ ಫಾರ್ ದಿ ಲಂಚ್' ಎಂದಳು ಲಾಯರ್ ಮಡದಿ ಪದ್ದಿ.

ಬದುಕಿದೆಯಾ ಬಡಜೀವವೇ ಎಂದು ನಾನೂ ಎದ್ದು ಟಾಯ್ಲೆಟ್‌ಗೆ ಹೋಗಿ, ಹಜಾರಕ್ಕೆ ಬಂದು ಟಿ.ವಿ. ಆನ್ ಮಾಡ್ದೆ.

ಎಲ್ಲಾ ಛಾನಲ್ಲಿಗಳಲ್ಲೂ 'ಗೋವಿಂದರಾಜನ ಡೈರಿ ಬಹಿರಂಗ ಸಿ.ಎಂ ಅಜ್ಞಾತವಾಸ'ಕ್ಕೆ ಎಂಬ ಕ್ಯಾಪ್ಶನ್ ಪ್ರಸಾರವಾಗುತ್ತಿತ್ತು.

ಸಿ.ಎಂ.ರವರನ್ನು ಕಾಪಾಡಲು ಹಲವಾರು 'ಕೈ'ಗಳು ಸಿದ್ಧವಾಗಿವೆ. ಆದರೆ ನನ್ನಂಥಹ ಹುಲು ಮಾನವನ ಗತಿ!

ಯಾಕೊ ದಿಗಿಲು ಹೆಚ್ಚಾಗಿ ಟಿವಿ ಆಫ್ ಮಾಡಿ, ಅಡುಗೆ ಕೋಣೆಗೆ ಹೋದೆ. ಪದ್ದಿಯ ಕೈಯಲ್ಲಿ ಲಟ್ಟಣಿಗೆ ಇತ್ತು.

'ಚಪಾತಿಗೇರಿ...' ಎಂಬ ವಿವರಣೆ ಕೇಳಿ ಮನಸ್ಸು ನಿರುಮ್ಮಳವಾಯ್ತು.

## ನೋಟ್ ಕಟ್ಟು!

ನದಿಯ ನೀರು
ನಿಲ್ಲಿಸಲು
ಅಣೆಕಟ್ಟೆ ಬೇಕು!
ಹೆಂಡತಿ ಕಣ್ಣೀರು
ನಿಲ್ಲಿಸಲು
ಸಾಲದು ಆಣೆ
ನೋಟ್ ಕಟ್ಟೇ ಬೇಕು!

~ ತುರುವೇಕೆರೆ ಪ್ರಸಾದ್



# ಕೆಲಸದವಳೇ ಕಣ್ಣಿಗೆ ಕಾಣುವ ದೇವರು

- ಛಾಯಾ ಭಟ್

**ಬೆ**ಳಿಗ್ಗೆ ಒಂಭತ್ತರ ನಂತರ ನಮ್ಮ ಮನೆಯಲ್ಲಿ ಯಾವುದೇ ಕ್ಷಣದಲ್ಲಾದರೂ ದೇವರು ಪ್ರತ್ಯಕ್ಷವಾಗಬಹುದು. ಕೆಲವೊಮ್ಮೆ ಸ್ವಲ್ಪ ತಡವಾಗಿ, ಕೆಲವು ದಿನ ಸ್ವಲ್ಪ ಬೇಗ.. ಎಲ್ಲವೂ ನನ್ನ ದಿನ ಭವಿಷ್ಯದ ಮೇಲೆ ನಿಂತಿದೆ. ಅಂದುಕೊಂಡಂತೆ ನಡೆಯಿತಾದರೆ ಆಮೇಲೇನಿದ್ದರೂ ಮಹಾಪೂಜೆ, ನೈವೇದ್ಯ ಎಲ್ಲಾ, ಮಂಗಳಾರತಿಯ ಸರದಿ ಬಂದಾಗ ಮಾತ್ರ ಯಾವ ಮುಲಾಜಿಲ್ಲದೆ ನಾನೇ ನನ್ನ ಮುಖ ಒಡ್ಡಬೇಕಾಗುತ್ತದೆ. ಅಷ್ಟಾದರೂ ನಮ್ಮನೆಯ ದೇವರಿಗೆ ನನ್ನ ಸೇವೆ ತೃಪ್ತಿ ತಂದಿದೆ ಎಂದು ಖಾತ್ರಿಯಾಗುವುದು ಮರುದಿನದ ನನ್ನ ದಿನ ಭವಿಷ್ಯವನ್ನೇ ಅವಲಂಬಿಸಿದೆ, ಯಾರಿಗೆ ಗೊತ್ತು ಅಕ್ಕ ಪಕ್ಕದ ಮನೆಯವರ ವಕ್ರದೃಷ್ಟಿ ನನ್ನ ಮೇಲೆ ಹೊರಳಿ ಶಾಂತವಾಗಿರುವ ಶುಕ್ರ, ಶನಿ, ರಾಹು, ಕೇತುಗಳೆಲ್ಲ ಸ್ಥಾನಪಲ್ಲಟಗೊಂಡು ದೇವರು ಕೈ ಕೊಟ್ಟುಬಿಟ್ಟರೆ!!

> **ನಮ್ಮನೆಯ ಈ ಭಾಗ್ಯ ದೇವತೆಯ ಆರೋಗ್ಯವೇ ನಮ್ಮೆಲ್ಲರ ಭಾಗ್ಯ...!!**

ಸದ್ಯಕ್ಕೆ ನಮ್ಮ ಪಾಲಿನ ದೇವರು ಗಂಗಮ್ಮ, ನಮ್ಮ ಮನೆಯ ಕೆಲಸದಾಕೆ. ಕಳೆದ ಮಾರ್ಚ್ ತಿಂಗಳ ಪರೀಕ್ಷೆಯ ಬೇಗೆಯಲ್ಲಿ ಬೇಯುತ್ತಿದ್ದ ನಮಗೆ ಲಕ್ಷ್ಮಮ್ಮ ಕೆಲಸಕ್ಕೆ ಬರದೆ ಕೈ ಕೊಟ್ಟಾಗ ಕಂಗಾಲಾಗಿದ್ದ ನಮಗೆ ಆಸರೆಯಾದವಳೇ ಗಂಗಮ್ಮ. ನಡು ನೀರಿನಲ್ಲಿ ಕೈ ಬಿಟ್ಟ ಗಂಗೆಯಂತಲ್ಲ ನಮ್ಮ ಗಂಗಮ್ಮ, ಮೂಗಿನವರೆಗೆ ನೀರು ಬಂದು ಹತಾಶೆಯ ಪರಮಾವಧಿ ತಲುಪಿದ್ದ ನಮಗೆ ನೆಮ್ಮದಿಯ ಬದುಕು ಕಾಣಿಸಿದವಳು. ತಿಂಗಳಲ್ಲಿ ಬರೀ ಮೂರೇ ರಜೆ ಹಾಕಿ ನಮ್ಮೆಲ್ಲರ ಮನಸ್ಸನ್ನು ಗೆದ್ದುಬಿಟ್ಟಳು. ಗಂಗಮ್ಮನ ಕೈ ಕೆಳಗಿನ ದಾಸ್ಯ ನಮಗೆ ಎಷ್ಟು ಒಗ್ಗಿ ಹೋಯಿತೆಂದರೆ ನಮ್ಮ ಮನೆಯಲ್ಲಿ ಇಡ್ಲಿ ಮಾಡಬೇಕೆಂದಿದ್ದರೂ ಗಂಗಮ್ಮನ ಬಿಡುವಿನ ದಿನಗಳನ್ನೇ ಆಯ್ದುಕೊಳ್ಳಬೇಕಾಗಿ ಬಂದಾಗಲೂ ಖುಷಿಯಿಂದಲೇ ಸಮ್ಮತಿಸಿದ್ದೆವು. ಇಡ್ಲಿಯ ತಟ್ಟೆಗಳನ್ನು ನೀರಲ್ಲಿ ನೆನೆ ಹಾಕಿ, ಉಜ್ಜಿ ಉಜ್ಜಿ ತೊಳೆಯಲು ಬಹಳ ಸಮಯಬೇಕೆಂದು ಆಕೆಯ ಅಂಬೋಣ. ನಮಗೆ ಅರ್ಜೆಂಟಾಗಿ ಕೆಲಸದವಳು ಬೇಕಾಗಿದ್ದರಿಂದ ಅವಳ ಇಂತಹ ಕಂಡೀಷನ್ನುಗಳೆಲ್ಲ ದೊಡ್ಡದು ಎನ್ನಿಸಲೇ ಇಲ್ಲ. ಎಂಥಾ ಮುಂದಾಲೋಚನೆ ಇರುವವಳು ಎಂದು ನಾಲ್ಕು ಹಗಲು ಮೂರು ರಾತ್ರಿಗಳನ್ನು ಅವಳ ಗುಣಗಾನದಲ್ಲೇ ಕಳೆದೆವು.

ಗಂಗಮ್ಮ ಸಿಕ್ಕ ಮರು ಘಳಿಗೆಯೇ ಅಂತೂ ನಮ್ಮನೆಯ ಪಾತ್ರೆಗಳಿಗೆಲ್ಲ ಶುಕ್ರದೆಸೆ ಶುರುವಾದಂತೆ ಎಂದು ನಿಟ್ಟುಸಿರಿಟ್ಟೆ, ಕಾರಣವಿಷ್ಟೇ, ಕೆಲಸದವರಿಂದ ಹಲ್ಲೆಗೊಳಗಾದ ನಮ್ಮನೆಯ ಒಂದೊಂದು ಪಾತ್ರೆಗಳಿಗೂ ಒಂದೊಂದು ಇತಿಹಾಸವಿದೆ, ಪಾತ್ರೆಗಳಲ್ಲಿನ ಒಂದೊಂದು ಹಳ್ಳ ದಿಣ್ಣೆಗಳಿಗೂ ಬಹಳಷ್ಟು ಕಾರಣಗಳಿವೆ. ಹೀಗೆ ದಾಳಿಗೊಳಗಾದ ಪಾತ್ರೆಗಳು ಮೊದಲಿನ ಚಾರ್ಮ್ ಕಳೆದುಕೊಂಡು ಮಂಕಾಗಿಬಿಟ್ಟಿವೆ. ಎಲ್ಲವುಗಳಿಗಿಂತ ದೀನ ಸ್ಥಿತಿ ಬಂದಿದ್ದು ನಮ್ಮನೆಯ ಇಡ್ಲಿ ದಳ್ಳೆಗೆ. ಚಿಂತಾಮಣಿಯಲ್ಲಿ ಕಂಡಷ್ಟೇ ಸ್ಪಷ್ಟವಾಗಿ ನನ್ನ




ಮುಖ ಕಾಣಿಸುತ್ತಿದ್ದ ದಳ್ಳೆ ಈಗ ಮೈ ತುಂಬಾ ಬಳಸಿದ ಟಿಕ್ಕಲಿಗಳನ್ನು ಮೆತ್ತಿಕೊಂಡು, ಅವುಗಳ ಅಂಟಿನಿಂದ ಕಜ್ಜಿ ಹಿಡಿದಂತೆ ಕಾಣುವ ಅಪ್ಪನ ದಾಡಿ ಪೆಟ್ಟಿಗೆಯಲ್ಲಿರುವ ಕನ್ನಡಿಯಂತೆ ಕುರೂಪವಾಗಿದೆ. ಇದು ದಳ್ಳೆಯ ದಳ್ಳುರಿಯಾದರೆ ಬೆಣ್ಣೆ ಕಾಯಿಸುವ ಬೋಗುಣಿ ಬಚ್ಚಲು ಮನೆಯಲ್ಲಿ ಸೌದೆಗೆ ಮೈ ಕಾಸುವ ಹಂಡೆಯಂತಾಗಿದೆ. ಮಜ್ಜಿಗೆ ಕಡೆಯುವ ಬೊಡ್ಡೆಗೆ ಮೈ ತುಂಬಾ ಗುಳಿ ಕೆನ್ನೆ ಮೂಡಿದೆ. ನನ್ನ ಪಾತ್ರೆಗಳಿಗೆ ಪ್ರೀತಿಯ ಅಗತ್ಯವಿದೆ ಎಂದು ನನಗೆ ಯಾವಾಗಲೋ ತಿಳಿದಿದ್ದರೂ ಅನುರೂಪ ಕೆಲಸದಾಕೆ ಸಿಗದೆ ಪರಿತಪಿಸುತ್ತಿದ್ದೆ. ಅಂಥದ್ದರಲ್ಲಿ ಕೈಗೆ ಸಿಕ್ಕ ತುತ್ತನ್ನು ಬಾಯಿಗಿಡದವರುಂಟೇ? ಗಂಗಮ್ಮ ತೇಲಿ ಹೋಗುತ್ತಿದ್ದ ನಮಗೆ ಗರಿಕೆ ಹುಲ್ಲಿನಂತೆ ಸಿಕ್ಕವಳು, ನನ್ನ ಕನಸಿನ ಕೆಲಸದವಳು..!!

ಇದಕ್ಕೂ ಮುಂಚೆ ಕೆಲಸದಾಕೆಯಿಲ್ಲದೆ ಕಳೆದ ದಿನಗಳು ಯಾವ ಶತ್ರುವಿಗೂ ಬೇಡ ಎಂಬಂತಾಗಿತ್ತು ನನ್ನ ಸ್ಥಿತಿ. ಕೆಲಸಕ್ಕೆ ಸೇರಿದವರೆಲ್ಲರೂ ಸೇರಿದ ನಾಲ್ಕು ತಿಂಗಳಿಗೇ ಏನೋ ಒಂದು ನೆವ ತೆಗೆದು ಕಳಚಿಕೊಳ್ಳುತ್ತಿದ್ದರು.. ಇದಕ್ಕೆಲ್ಲ ಕಾರಣ ತಿಳಿಯದೆ ಕಂಗಾಲಾಗಿ, ನನ್ನಲ್ಲಿರುವ ನ್ಯೂನತೆಗಳನ್ನೆಲ್ಲ ಪಟ್ಟಿ ಮಾಡಿ ನನ್ನ ಹಾವ ಭಾವ, ವರ್ತನೆ, ಗುಣಗಳನ್ನೆಲ್ಲ ಕೆಲಸದವರಿಗೆ ತಕ್ಕಂತೆ ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ, ಇದ್ಯಾವುದರಿಂದಲೂ ಸಮಸ್ಯೆಗೆ ಪರಿಹಾರ ಸಿಗದಿದ್ದಾಗಲೇ ಜಾತಕ ತೋರಿಸಿ ಪರಿಹಾರ ಕೇಳುವ ಯೋಚನೆ ಬಂದಿದ್ದು. ಗಂಗಮ್ಮ ಕೆಲಸಕ್ಕೆ ಸೇರಿದ ಎರಡು ದಿನಗಳಲ್ಲೇ ಪುಸಲಾಯಿಸಿ, ಬೇಡಿ ಕಾಡಿ ಅವಳ ಜಾತಕವನ್ನು ತರಿಸಿಕೊಂಡು ಪುರೋಹಿತರ ಮನೆಗೆ ಓಡಿದ್ದೆ. ನಮ್ಮಿಬ್ಬರ ಜಾತಕ ಎಷ್ಟು ಹೊಂದಾಣಿಕೆಯಾಗುತ್ತಿತ್ತೆಂದರೆ ಇನ್ನು ಎರಡು ವರ್ಷ ನಮ್ಮಿಬ್ಬರ ನಡುವೆ ಯಾವ ಕದನ, ವೈಮನಸ್ಸೂ ಬರದಂತೆ!! ಅದೂ ಒಂದು ಕಂಡಿಷನ್ ಮೇರೆಗೆ. ಅದೇನೆಂದರೆ ಅವಳ ನಿಬಂಧನೆಗಳಿಗೆ ನನ್ನ ಗೋಣು ಊಹೂಂ ಎಂದು ಆಡಿಸುವಂತಿಲ್ಲ, ಬಗೇರ್ ಹುಕುಂ ನಮ್ಮ ಮನೆಯಲ್ಲಿ ಇಡ್ಲಿ, ಒಬ್ಬಟ್ಟು, ಚಕ್ಕುಲಿ ಮಾಡುವಂತಿಲ್ಲ, ನೆಂಟರನ್ನು ಕರೆಯುವಾಗಲೂ ನಾವು ಗಂಗಮ್ಮನ ಬಿಡುವಿನ ದಿನಗಳನ್ನು ನೋಡಿಯೇ ನಿರ್ಧರಿಸಬೇಕು. ಇವೆಲ್ಲದಕ್ಕೂ ಜೀ ಹುಜೂರ್ ಎಂದೆ, ಮುಂದಿನ ನನ್ನ ಪಾತ್ರಕ್ಕೆ ಪೂರ್ವಾಭ್ಯಾಸ ಇಂದಿನಿಂದಲೇ ಶುರುವಾಗಲಿ ಎಂದು.

ಕೆಲಸದವಳಿಗೆ ತಕ್ಕ ಮನೆಯೊಡತಿ ಆಗಬೇಕೆಂದು ಹಗಲಿರುಳೂ ಹಂಬಲಿಸಿ, ನಾನಾ ರೂಪದಲ್ಲಿ ವಿನಂತಿಸಿಕೊಳ್ಳುವುದನ್ನು, ದಯನೀಯವಾಗಿ ಅಂಗಲಾಚುವುದನ್ನು ಕಲಿತೆ. ಕೆಲಸಕ್ಕೆಂದು ಬೆಳಿಗ್ಗೆ ಗಂಗಮ್ಮ ಪ್ರತ್ಯಕ್ಷವಾದೊಡನೆ ಚಹ, ತಿಂಡಿಯ ನೈವೇದ್ಯ. ನಂತರ ಅವಳ ಹಾಗು ಅವಳ ಪರಿವಾರದವರ ಆರೋಗ್ಯ ವಿಚಾರಣೆ. ಎಲ್ಲವೂ ಸಾಂಗವಾಗಿದೆ ಎಂದು ಖಾತ್ರಿಯಾದ ಮೇಲೇ ಮನೆ ಕೆಲಸಕ್ಕೆ ಅಸ್ತು. ಇಷ್ಟಾದರೂ ವಾರಕ್ಕೆರಡು ಬಾರಿ ಗಂಗಮ್ಮನಿಗೆ ಕಾಣಿಸಿಕೊಳ್ಳುವ ಅರ್ಧ ತಲೆನೋವು, ನೆಗಡಿ, ಮೈ-ಕೈ ನೋವು ನನ್ನ ನಗು-ನೆಮ್ಮದಿಯನ್ನೆಲ್ಲ ಕಸಿದುಬಿಡುತ್ತದೆ. ಅದಕ್ಕಾಗಿ ಗಂಗಮ್ಮನ ಖಾಯಿಲೆ ಕಸಾಲೆಗಳಿಗೆಲ್ಲ ಪ್ರತ್ಯೇಕ ಔಷಧದ ಡಬ್ಬಿಯೇ ಇದೆ. ಗಂಗಮ್ಮ ಯಾವುದಾದರೂ ತಿರುಗಾಟಕ್ಕೆ ಹೊರಟರಂತೂ ಎಲ್ಲೆಲ್ಲಿಯ ನೀರು ಕುಡಿಯಬೇಕು, ಎಣ್ಣೆಯಲ್ಲಿ ಕರಿದ ತಿಂಡಿ ತಿಂದು ಗಂಟಲು ಕೆರೆಸಿದರೆ ಬಿಸಿ ನೀರಿಗೆ ಏನನ್ನು ಬೆರೆಸಿ ಕುಡಿಯಬೇಕು, ಭರ್ಜರಿ ಉಂಡು ತಿಂದು ಹೊಟ್ಟೆ ಕೆಟ್ಟರೆ ಯಾವ ಗುಳಿಗೆ ನುಂಗಬೇಕು.. ಎಲ್ಲವನ್ನೂ ವಿವರಿಸಿಯೇ ಬೀಳ್ಕೊಡುತ್ತೇನೆ. ಯಾಕೆಂದರೆ ನಮ್ಮನೆಯಲ್ಲಿ ಅವಳ ಆರೋಗ್ಯವೇ ನಮ್ಮೆಲ್ಲರ ಭಾಗ್ಯ..!!



ಹೊಸದಾಗಿ ಈ ಮನೆಗೆ ಸೊಸೆಯಾಗಿ ಬಂದಾಗ ಅತ್ತೆ ಮಾವನನ್ನು ಒಲಿಸಿಕೊಳ್ಳಲೂ ಎಂತಹ ಸರ್ಕಸ್ಸನ್ನೂ ಮಾಡದ ನಾನು ಕೆಲಸದವರನ್ನು ಒಲಿಸಿಕೊಳ್ಳಲು ಮಾತ್ರ ಎಲ್ಲಾ ವಿಧದ ಕಸರತ್ತನ್ನೂ ಮಾಡಿದ್ದೇನೆ. ಇದರಿಂದಾಗಿಯೇ ಮುಖ ನೋಡಿದೊಡನೆಯೇ ಅವರ ಇಂಗಿತ ಅರಿಯುವ ಶಕ್ತಿ ನನಗೆ ಸಾಕ್ಷಾತ್ಕಾರವಾಗಿದ್ದು. ಗಂಗಮ್ಮ ಅಕ್ಕ ಪಕ್ಕದವರ ಕೈ ಅಡುಗೆಯನ್ನು ಹೊಗಳಲು ಶುರು ಮಾಡಿದ್ದಾಳೆ ಎಂದರೆ ನನ್ನ ಆರೈಕೆಯಲ್ಲಿ ಅವಳಿಗೇನೋ ಕುಂದುಕೊರತೆ ಕಂಡಿದೆ ಎಂದು. ಮುಖಕ್ಕೆ ಮುಖ ಕೊಟ್ಟು ಮಾತಾಡದೆ, ನನ್ನ ಮಾತಿಗೆ ಹೂಂ–ಊಹೂಂ ಏನೂ ಅನ್ನದೆ ಇದ್ದರೆ ನನ್ನ ದನಿಯ ಟೆಂಪೋ, ವಾಲ್ಯೂಮ್‌ನಲ್ಲಿ ಬದಲಾವಣೆ ಅವಶ್ಯಕ ಅಂತ, ಸ್ವಲ್ಪ ಸಿಡುಕುತ್ತಿದ್ದಾಳೆ ಎಂದರೆ ಬಾಕಿ ಕೆಲಸದವರನ್ನೆಲ್ಲ ತೆಗಳಿ ಇವಳನ್ನು ಹೊಗಳಿದ್ದು ಕಮ್ಮಿಯಾಯಿತು ಅಂತ. ನನ್ನ ಈ ಎಲ್ಲಾ ಸಾಹಸಗಳಿಗೆ ನಿಧಾನವಾಗಿ ಸ್ಪಂದಿಸಿದ ಗಂಗಮ್ಮ ನಾಲ್ಕನೇ ತಿಂಗಳಾದ ನಂತರವೂ ನಮ್ಮನೆಯ ಕೆಲಸಕ್ಕೆ ಬರುತ್ತಿದ್ದಾಳೆ ಎಂದರೆ ಪವಾಡವೇ ಆದಂತಾಯಿತು.

ದಿನ ಕಳೆದಂತೆ ನಮ್ಮನೆ ಸಣ್ಣ ಕೋರ್ಟಿನಂತೆ ಆಗತೊಡಗಿತು. ನಮ್ಮ ಮನೆಯೊಳಗೆ ಕಾಲಿಡುತ್ತಲೇ ತನ್ನ ಗಂಡ, ಅತ್ತೆ ಮಾವನನ್ನು ನೆನೆದು ಸಣ್ಣ ತಾಂಡವ ನೃತ್ಯ ಮಾಡಿಯೇ ಕೆಲಸ ಶುರುಮಾಡುತ್ತಿದ್ದಳು. ಅವಳು ಕಷ್ಟ ಹೇಳಿಕೊಂಡಾಗ ಯಾವುದೇ ಭಾವನೆ ನನ್ನಲ್ಲಿ ಉದ್ಭವಿಸದಿದ್ದರೂ ಬಹಳ ನೋವಾದಂತೆ ತೋರಿಸಿಕೊಳ್ಳಬೇಕಿತ್ತು. ಮತ್ತು ನಾನು ಕೊಡುವ ತೀರ್ಪು ಯಾವತ್ತಿಗೂ ಅವಳ ಪರವಾಗಿಯೇ ಇರಬೇಕಿತ್ತು. ಇವೆಲ್ಲ ನನ್ನ ಮಾಮೂಲಿ ದಿನಚರಿ ಆಗಿಹೋದ್ದರಿಂದ ಗಂಗಮ್ಮ ಎಂದೊಡನೆಯೇ ಎಂತಹ ಪರಿಸ್ಥಿತಿಯಲ್ಲಿಯೂ ನನ್ನ ಮುಖದಲ್ಲಿ ಕನಿಕರದ ಭಾವ ಕೋಡಿಯಾಗಿ ಹರಿಯತೊಡಗಲು ಶುರುವಾಯ್ತು.

ಇಷ್ಟೊಂದು ಶಾರೀರಿಕ, ಮಾನಸಿಕ ಬದಲಾವಣೆಗಳನ್ನು ನನ್ನಲ್ಲಿ ತಂದುಕೊಂಡು ನಮ್ಮನೆಯ ಭಾಗ್ಯ ದೇವತೆ ಗಂಗಮ್ಮನನ್ನು ಅನರ್ಘ್ಯ ರತ್ನ ಎಂಬಂತೆ ಯಾರ ಕೆಟ್ಟ ದೃಷ್ಟಿಯೂ ಬೀಳದಂತೆ ಕಾಪಿಟ್ಟುಕೊಂಡಿದ್ದೇನೆ.

---

## ಶುದ್ಧ 'ದನ'!

ಕಪಿಲವಸ್ತುವಿನ ರಾಜ
ಶುದ್ದೋಧನ
ರಾತ್ರೋ ರಾತ್ರಿ ಎದ್ದೋದನಾ!
ಎಷ್ಟೋ ಜನ ಹೆಂಗೆಳೆಯರು
ಶಪಿಸುತ್ತಿದ್ದಾರೆ
ಎಂದು ಎದ್ದು ಹೋದೀತೋ
ನಮ್ಮನೆ ಶುದ್ದ 'ದನ'?

~ ತುರುವೇಕೆರೆ ಪ್ರಸಾದ್



# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

ಲೆಕ್ಕಾಚಾರದ ಮನುಷ್ಯರು ಹಿಂದಿನ ಕಾಲದಲ್ಲೂ ಇದ್ದರು ಬಿಡಿ. ಸುಮಾರು 35 ವರ್ಷಗಳಷ್ಟು ಹಳೆಯದಾದ ಈ ವ್ಯಂಗ್ಯಚಿತ್ರಗಳಲ್ಲಿ ಲೆಕ್ಕಾಚಾರದ ಪರಿ ಕಂಡರೆ ನೀವು ಕಕ್ಕಾಬಿಕ್ಕಿಯಾಗಬೇಕು!



ಚಿಕ್ಕ ದೇವರಿಗೂ ಒಂದೆ , ದೊಡ್ಡ ದೇವರಿಗೂ ಒಂದೇ ದಕ್ಷಿಣೆ ಹಾಕುತ್ತೀರಲ್ಲಾ ಸಾಹುಕಾರ್ರೇ.



ಆದರೆ ನಮ್ಮ ಜಾತಕಗಳು ನೂರಕ್ಕೆ ನೂರರಷ್ಟು ತಾಳೆಯಾಗಿದ್ದವು ...



ನಾಳೆ ಮಾತ್ರ ಬಾಕಿ ವಸೂಲಿಗೆ ಬರಬೇಡ್ರೀ. ವರ್ಷವೆಲ್ಲಾ ಹಾಗೇ ಬರಬೇಕಾಗುತ್ತೆ ! ಹಾಗಂತ ಹಿರಿಯರ ಅಂಬೋಣವಿದೆ...



# ಸೈಕಲ್ ಕಳವು - (ಕಿರು ಪ್ರಹಸನ)

**- ಬೇಲೂರು ರಾಮಮೂರ್ತಿ**

(ಪೋಲೀಸ್ ಸ್ಟೇಷನ್ ಒಬ್ಬ ಪೇದೆ ತಲೆ ಕೆರೆಯುತ್ತಾ, ಆಕಳಿಸುತ್ತಾ ಕೂತಿದ್ದಾನೆ. ಆಗಾಗ ಸೊಳ್ಳೆ ಹೊಡೆದುಕೊಳ್ಳುತ್ತಾನೆ. ಕುಳಿತಿರುವ ಭಂಗಿಯನ್ನು ಬದಲಾಯಿಸುತ್ತಾನೆ. ಗಡಿಯಾರದ ಕಡೆ ನೋಡುತ್ತಾನೆ. ಕಣ್ಣು ಮುಚ್ಚಿಕೊಳ್ಳುತ್ತಾನೆ. ಆಗ ಒಬ್ಬ ಓಡೋಡಿ ಬರುತ್ತಾನೆ. ಪೇದೆಯ ಮುಂದೆ ನಿಂತು ಅಚ್ಚರಿ ತೋರುತ್ತಾನೆ.)

ರಾಮ (ಆತಂಕ ಮತ್ತು ಗಾಬರಿಯಿಂದ) ಸಾರ್, ನನ್ನ ಸೈಕಲ್ ಕಳುವಾಗಿದೆ ಸರ್. ಬೇಗ ಅದನ್ನು ಹುಡುಕಿಕೊಡಿ ಸರ್.

(ಪೇದೆ ನಿಧಾನವಾಗಿ ಕಣ್ಣು ಬಿಟ್ಟು ರಾಮನನ್ನು ತಿರಸ್ಕಾರದಿಂದ ನೋಡಿ ಮತ್ತೆ ಕಣ್ಣು ಮುಚ್ಚಿಕೊಳ್ಳುತ್ತಾನೆ).

ರಾಮ : ಸರ್. ಏಳಿ ಸರ್, ನನ್ನ ಸೈಕಲ್ ಹುಡುಕಿಕೊಡಿ ಸರ್. ನಾನು ದಿನಾಗ್ಲೂ ಅದರಲ್ಲೇ ಹಾಲು ತಗೊಂಡು ಹೋಗಿ ಮನೆಮನೆಗೆ ಹಾಕೋದು. ಸೈಕಲ್ ಇಲ್ಲದಿದ್ರೆ ನನ್ನ ಸಂಪಾದನೆಗೇ ಕೊಕ್ಕು ಸರ್.

(ಪೇದೆ ಮತ್ತೆ ಬೇಜಾರಿನಿಂದ ಕಣ್ಣು ಬಿಟ್ಟು ಡ್ರಾ ಎಳೆದು ಒಂದು ಪೇಪರ್ ತೆಗೆದು ರಾಮನ ಮುಂದೆ ಬಿಸಾಕ್ತಾನೆ).

ರಾಮ : ಇದೇನ್ಸಾರ್ ಇದು ಬಿಳಿ ಹಾಳೆ.

ಪೇದೆ : (ಸಿಟ್ಟಿನಿಂದ) ಕಂಪ್ಲೇಂಟ್ ಬರೆದು ಅಲ್ಲಿ ಒಗೆದು ಹೋಗು ನನ್ನ ನಿದ್ದೆ ಕೆಡಿಸಬೇಡ

ರಾಮ : ಇದು ನಿದ್ದೆ ಮಾಡೋ ಹೊತ್ತಲ್ಲ ಸರ್. ನಿಮ್ಮ ಸಾಹೇಬರು ಬಂದ್ರೆ ನಿಮ್ಮನ್ನು ಮನೆಗೆ ಕಳಿಸ್ತಾರೆ. ನನ್ನ ಸೈಕಲ್ ಹಾಗೆ ನಿಮ್ಮ ಬದುಕೂ ಕಳೆದುಹೋಗುತ್ತೆ, ನನ್ನ ಸೈಕಲ್ ಹುಡುಕಿಕೊಡಿ ಸರ್. ನನಗೆ ಓದು ಬರೆಯೋದು ಬರಲ್ಲ, ಅದೇನು ಬರ್ಕೊಬೇಕೋ ನೀವೇ ಬರ್ಕೊಳಿ ನಾನು ಹೆಬ್ಬೆಟ್ಟು ಒತ್ತುತ್ತೀನಿ

ಪೇದೆ : (ದೊಡ್ಡದಾಗಿ ಕಣ್ಣುಬಿಟ್ಟು) ಥತ್ ಏನು ದರಿದ್ರದವರೋ ಒಂದು ಘಳಿಗೆ ಕಣ್ಣು ಮುಚ್ಕೋಕೂ ಬಿಡಲ್ಲ

ರಾಮ : ಸರ್ ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ಸ್ವಲ್ಪ ಇರಯ್ಯ ಹೊಡ್ಕೊಬೇಡ. ಏನು ನಿನ್ನ ಹೆಸರು

ರಾಮ : ರಾಮ ಅಂತ ಸರ್

ಪೇದೆ : ರಾಮ ಅಂತೀಯ, ಸೀತೆನೂ ಇಲ್ಲ ಹನುಮಂತನೂ ಇಲ್ಲ, ಲಕ್ಷ್ಮಣನಂತೂ ಮೊದಲೇ ಇಲ್ಲ ಒಬ್ಬನೇ ಬಂದಿದೀಯ ಅದ್ಯಾವ ಸೀಮೆ ರಾಮನಯ್ಯ ನೀನು.



ರಾಮ : ಸರ್. ನನ್ನ ಸೈಕಲ್ ಬೇಗ ಹುಡುಕ್ಕೊಡಿ ಸರ್. ಇಲ್ಲದಿದ್ರೆ ಕಳ್ಳ ಅದನ್ನು ತುಂಬಾ ದೂರ ತಗೊಂಡು ಹೋಗಿರ್‍ತಾನೆ. ಆಮೇಲೆ ನಿಮಗೇ ಕಷ್ಟ

ಪೇದೆ : ಸರಿ ಸರಿ ಯಾವೂರು ನಿನ್ನದು (ಪೆನ್ಸಿಲ್‌ನಿಂದ ತಲೆ ಕಿವಿ ಕೆರೆದುಕೊಳ್ತಾನೆ)

ರಾಮ : ಇದೇ ಊರು ಸರ್

ಪೇದೆ : ಮನೆ ಅಡ್ರೆಸ್ಸು

ರಾಮ : ಶ್ರೀನಿವಾಸ ನಿಲಯ, 38, 6ನೇ ಕ್ರಾಸ್, 20ನೇ ಮುಖ್ಯರಸ್ತೆ, ಬಾಟಾ ಷೋರೂಂ ಎದುರು, ಹಾಲಿನ ಬೂತ್ ಪಕ್ಕ, ಇನ್ನೊಂದು ಪಕ್ಕ ಮುರಳಿ ಇಸ್ತ್ರಿ ಅಂಗಡಿ, ನಮ್ಮ ಮನೆ ಮುಂದೆ ಒಂದು ಲೈಟ್ ಕಂಬ ಇದೆ, ಇನ್ನೊಂದು ಪಕ್ಕ ಟೆಲಿಫೋನ್ ಕಂಬ ಇದೆ

ಪೇದೆ : ಸಾಕಯ್ಯಾ ಸಾಕು ಮಾಡು. ಅಡ್ರೆಸ್ ಹೇಳಯ್ಯ ಅಂದ್ರೆ ಗೂಗಲ್ ಮ್ಯಾಪೇ ಮುಂದಿಡ್ತಾ ಇದೀಯ. ವಯಸ್ಸು ಎಷ್ಟು

ರಾಮ : ಮೊನ್ನೆ ಯುಗಾದಿಗೆ ಮೂವತ್ತು ಆಯ್ತು. ಮುಂದಿನ ಯುಗಾದಿಗೆ ಮೂವತ್ತೊಂದಾಗುತ್ತೆ.

ಪೇದೆ : ಎಷ್ಟು ಮದುವೆ ಎಷ್ಟು ಮಕ್ಕಳು

ರಾಮ : (ಸ್ವಲ್ಪ ನಾಚಿಕೊಂಡು) ತೆಗ್ ತೆಗೀರಿ ಎರಡೂ ಇನ್ನೂ ಇಲ್ಲ

ಪೇದೆ : ಏನಯ್ಯಾ ಮೂವತ್ತು ವರ್ಷ ಆಯ್ತು ಅಂತೀಯ ಇನ್ನೂ ಮದುವೆ ಆಗಿಲ್ಲ, ಮತ್ತೆ ದಿನ ಹೇಗೆ ಕಳೀತೀಯ

ರಾಮ : ಸರ್ ನನ್ನ ಸೈಕಲ್ ಕಳೆದುಹೋಗಿದೆ. ಅದನ್ನು ಹುಡುಕಿಕೊಡಿ ಸರ್

ಪೇದೆ : ಓ. ನಿನ್ನ ಸೈಕಲ್ ಕಳೆದಿದೆ ಅಲ್ವಾ, ಅದ್ಸರಿ ನಿಮ್ಮ ತಂದೆ ಏನು ಮಾಡ್ತಾರೆ

ರಾಮ : ಈಗ ನೀವು ನನ್ನ ಸೈಕಲ್ ಹುಡುಕಿಕೊಡ್ದೇ ಇದ್ರೆ ನಿಮ್ಮ ತಲೆ ತೆಗಿತಾರೆ. ಅವರೇನಾದ್ರೂ ಮಾಡ್ತಾ ಇರ್‍ಲಿ ಮೊದಲು ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ನೋಡಯ್ಯ ನೀನು ನಾನು ಕೇಳೋ ಪ್ರಶ್ನೆಗಳಿಗೆ ಉತ್ತರ ಹೇಳದಿದ್ರೆ ನಿನ್ನ ಸೈಕಲ್ ಅಷ್ಟೇ ಅಂದ್ಕೊ

ರಾಮ : ಎಲ್ಲ ನನ್ನ ಗ್ರಹಚಾರ ಕೇಳಿ ಅದೇನು ಪ್ರಶ್ನೆ

ಪೇದೆ : ಹಾಗೆ ಬಾ ದಾರಿಗೆ, ನಿಮ್ಮ ತಂದೆ ಏನು ಮಾಡ್ತಾರೆ

ರಾಮ : ಅಂಗಡಿ ಇಟ್ಟಿದಾರೆ ಚಿಲ್ಲರೆ ಅಂಗಡಿ

ಪೇದೆ : (ಖುಷಿಯಿಂದ) ಹೌದಾ ಹಾಗಾದ್ರೆ ಹೋಗಿ ಒಂದು ಪ್ಯಾಕ್ ಸಿಗರೇಟು, ಒಂದು ಬೆಂಕಿ ಪೊಟ್ಟಣ ತಗೊಂಬಾ. ಅಷ್ಟರಲ್ಲಿ ನಾನು ನಿನ್ನ ಸೈಕಲ್ ಬಗೆಗೆ ಯೋಚನೆ ಮಾಡ್ತೀನಿ



ರಾಮ : ಸರ್ ನಮಪ್ಪ ಅಂಗಡಿ ಬಾಗಿಲು ಹಾಕ್ಕೊಂಡು ಸಂತೆಗೆ ಹೋಗಿದಾರೆ ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ನಿಮ್ಮ ತಂದೆಗೆ ನೀವು ಎಷ್ಟು ಜನ ಅಣ್ಣ ತಮ್ಮಂದಿರು, ಎಷ್ಟು ಜನ ಅಕ್ಕ ತಂಗಿಯರು

ರಾಮ : ನಾನು ನನ್ನ ತಮ್ಮ ಇಬ್ಬರೇ ಸರ್

ಪೇದೆ : (ಅಚ್ಚರಿಯಿಂದ) ಏನಯ್ಯಾ ನಿಮ್ಮ ತಂದೆಗೆ ಇಬ್ಬರೇ ಮಕ್ಕಳಾ. ಮತ್ತೆ ನಿಮ್ಮ ತಂದೆ ಇಷ್ಟು ವರ್ಷ ಏನಯ್ಯಾ ಮಾಡ್ತಿದ್ರು

ರಾಮ : ಸರ್ ನನ್ನ ಸೈಕಲ್ಲು ಸರ್

ಪೇದೆ : ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳ್ದಿದ್ರೆ ಇಲ್ಲಿಂದ ಹೋಗ್ತಾ ಇರು. ನಿನ್ನ ಸೈಕಲ್ ಮರೆತುಬಿಡು

ರಾಮ : ತಪ್ಪಾಯ್ತು ತಪ್ಪಾಯ್ತು ಸರ್. ಕೇಳಿ ಅದೇನು ಪ್ರಶ್ನೆ ಕೇಳಿ

ಪೇದೆ : ಈಗ ನಿನ್ನ ತಮ್ಮನಿಗೂ ನಿಮ್ಮ ತಂದೆಗೂ ಸೈಕಲ್ ಓಡಿಸೋಕೆ ಬರುತ್ತಾ

ರಾಮ : ಹೌದು ಸರ್ ಇಬ್ಬರಿಗೂ ಬರುತ್ತೆ

ಪೇದೆ : ಹಾಗಾದರೆ ಅವರಿಬ್ಬರಲ್ಲೇ ಯಾರಾದರೊಬ್ಬರು ಸೈಕಲ್ ತಗೊಂಡು ಹೋಗಿರ್ತಾರೆ ಹೋಗಿ ವಿಚಾರಿಸು

ರಾಮ : ಕೇಳಿದೆ ಸರ್. ಅವರಿಬ್ಬರೂ ತಗೊಂಡಿಲ್ಲ, ಸೆಲೂನ್ ಮುಂದೆ ನಿಲ್ಲಿಸಿದ್ದ ಸೈಕಲ್ ಕಾಣೆಯಾಗಿದೆ ಸರ್

ಪೇದೆ : ಹಾಗಾದರೆ ನಿನ್ನ ಸೈಕಲ್ ನಿಜವಾಗಿ ಕಳುವಾಗಿದೆ ಅಂದ ಹಾಗಾಯ್ತು

ರಾಮ : ಅದನ್ನೇ ಸರ್ ನಾನು ಅವಾಗ್ಲಿಂದ ಬಡ್ಕೊಕೊತಾ ಇರೋದು. ಸರ್ ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ಈಗ ಹೇಳು ನಿನ್ನ ಸೈಕಲ್ ಯಾವ ಕಲರಿಂದು

ರಾಮ : ಕಪ್ಪು ಸರ್, ಎಲ್ಲ ಕಡೆಯೂ ಕಪ್ಪು ಸರ್. ಹಿಂದೆ ಡಾ. ರಾಜಕುಮಾರ್ ಅಂತ ನಾನೇ ಬರೆಸಿದೀನಿ

ಪೇದೆ : ಕಪ್ಪು ಅಂದ್ಯಲ್ಲ ಅದು ತೆಳುಗಪ್ಪೋ ಅಚ್ಚಗಪ್ಪೋ, ಸೈಕಲ್ ಕೊಂಡ್ಕೊಂಡಾಗ್ಲೇ ಕಪ್ಪು ಬಣ್ಣ ಇತ್ತೋ ಇಲ್ಲಾ ನೀನು ಕಪ್ಪು ಬಣ್ಣ ಹೊಡೆಸಿದ್ಯಾ

ರಾಮ : ಅದು ಕೊಂಡ್ಕೊಂಡಾಗ ಇದ್ದ ಬಣ್ಣವೇ ಸರ್. ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ನಿನ್ನ ಸೈಕಲ್‌ಗೆ ಬೆಲ್ಲು ಬ್ರೇಕು ಎರಡೂ ಇತ್ತಾ

ರಾಮ : ಇತ್ತು ಸರ್, ಬೆಲ್ಲು ಬ್ರೇಕು ಎಲ್ಲಾ ಅವಾಗವಾಗ ಚೆಕ್ ಮಾಡಿಸ್ತಿದ್ದೆ

ಪೇದೆ : ಸರಿ ಸೈಕಲ್ ಕಳುವಾಯ್ತು ಅಂದ್ಯಲ್ಲ ಅದು ಎಲ್ಲಿ ಯಾವಾಗ ಹೇಗೆ ಕಳುವಾಯ್ತು ಅಂತ ಹೇಳು

ರಾಮ : (ನೆಮ್ಮದಿಯಿಂದ) ಸಧ್ಯ ವಿಷಯಕ್ಕೆ ಬಂದ – ಸರ್. ಇವತ್ತು ಬೆಳಗ್ಗೆ ನಾನು ಸೆಲೂನಿಗೆ ಹೋಗಿದ್ದೆ. ಅಂಗಡಿ ಮುಂದೆ ಸೈಕಲ್ ನಿಲ್ಲಿಸಿ ಹೋಗಿದ್ದೆ ವಾಪಸ್ ಬಂದಾಗ ಸೈಕಲ್ ಕಳುವಾಗಿತ್ತು



ಪೇದೆ : ಸೆಲೂನಿಗೆ ಯಾಕೆ ಹೋಗಿದ್ದೆ

ರಾಮ : ಸೆಲೂನಿಗೆ ಯಾಕೆ ಹೋಗ್ತಾರೆ ಸರ್ ಹೇರ್ ಕಟ್‌ಗೆ

ಪೇದೆ : ಅದ್ಸರಿ ಹೇರ್ ಕಟ್‌ಗೆ ಸೈಕಲ್ ಯಾಕಯ್ಯಾ ತಗೊಂಡು ಹೋದೆ. ನಡ್ಕೊಂಡು ಹೋಗೋದಲ್ವಾ

ರಾಮ : ಅದೆಲ್ಲ ಆಯ್ತುಲ್ಲ, ಸೈಕಲ್ ಹುಡುಕಿಕೊಡಿ ಸರ್

ಪೇದೆ : ಇರ್ಲಿ ಸೆಲೂನ್ ಅಂದ್ಯಲ್ಲ ಯಾವ ಸೆಲೂನು ಅದರ ಹೆಸರು ಏನು

ರಾಮ : ಸಾಯಿರಾಮ್ ಹೇರ್ ಡ್ರೆಸ್ಸರ್ಸ್ ಅಂತ

ಪೇದೆ : ಏನಯ್ಯಾ ಅವನು ಹೇರ್ ಕಟಿಂಗ್ ಸೆಲೂನಿಗೆ ಸಾಯಿಬಾಬ ಹೆಸರು ಇಟ್ಟಿದಾನೆ ದರಿದ್ರದವನು. ಅದರ ಮಾಲೀಕನ ಹೆಸರು ಏನು

ರಾಮ : ನಾಗರಾಜ ಅಂತ ಸರ್

ಪೇದೆ : ಮತ್ತೆ ನಾಗರಾಜ ಸೆಲೂನ್ ಅಂತಲೇ ಹೆಸರಿಡೋದು ಬಿಟ್ಟು ಸಾಯಿರಾಮ್ ಅಂತ ಯಾಕಯ್ಯಾ ಇಟ್ಟ

ರಾಮ : ಸರ್ ಹೆಸರು ಮನೆ ಹಾಳಾಯ್ತು ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ಇರಯ್ಯಾ, ಆ ನಾಗರಾಜನಿಗೆ ಸೈಕಲ್ ಬಿಡೋಕೆ ಬರುತ್ತಾ

ರಾಮ : ಅದನ್ನು ಯಾವ ನನ್ನ ಮಗ ಕೇಳಿದಾನೆ ನನ್ನ ಸೈಕಲ್ ಹುಡುಕಿಕೊಡಿ ಸರ್

ಪೇದೆ : ಇರ್ಲಿ ನೀನು ಸೆಲೂನಿಗೆ ಹೋಗಿದ್ದೆ ಅಂದ್ಯಲ್ಲ ಆಗ ಅಲ್ಲಿ ಎಷ್ಟು ಜನರಿದ್ರು. ಎಷ್ಟು ಜನರಿಗೆ ಹೇರ್ ಕಟ್ ಮಾಡ್ತಿದ್ರು ಇನ್ನು ಎಷ್ಡು ಜನ ಕಾಯ್ತಿದ್ರು, ಅವರಲ್ಲಿ ನೀನು ಎಷ್ಟರವನು ಅಂತ ಹೇಳು

ರಾಮ : (ಎತ್ತರದ ಧ್ವನಿಯಿಂದ) ರೀ ನಾನು ಅವಾಗ್ಲಿಂದ ನೋಡ್ತನೇ ಇದೀನಿ, ಏನ್ರೀ ಬಾಯಿಗೆ ಬಂದ ಹಾಗೆ ಪ್ರಶ್ನೆ ಕೇಳ್ತಾ ಇದೀರ. ಇದೇನೇನ್ರೀ ನೀವು ಕಳ್ಳನನ್ನು ಹುಡುಕಿಕೊಡುವ ರೀತಿ ಇಷ್ಟೊತ್ತಿಗೆ ಕಳ್ಳ ನನ್ನ ಸೈಕಲ್ನ ಮುಂಡೇಮೋಚಿ ನೀರು ಕುಡಿದಿರ್ತಾನೆ

ಪೇದೆ : (ಸದ್ದು ಮಾಡಬೇಡ ಅನ್ನುವಂತೆ ಬಾಯ ಮೇಲೆ ಬೆರಳಿಟ್ಟು) ಷ್, ಜೋರಾಗಿ ಕೂಗಬೇಡ ಇನ್ಸ್‌ಪೆಕ್ಟರ್‌ಗೆ ಎಚ್ಚರವಾದರೆ ಅವರು ನನ್ನನ್ನು ಕೆಲಸದಿಂದ ತೆಗೀತಾರೆ

ರಾಮ : (ತಲೆ ಚಚ್ಚಿಕೊಂಡು) ಅಂದ್ರೆ ನೀವು ಸಬ್ ಇನ್ಸ್‌ಪೆಕ್ಟರಲ್ವಾ (ಎಸ್. ಐ)? ಹಾಗಾದರೆ ನೀವು ಯಾರು?

ಪೇದೆ : ಒಂದು ಸ್ಟೇಷನ್ನಿಗೆ ಇಬ್ಬಿಬ್ಬರು ಇನ್ಸ್‌ಪೆಕ್ಟರು ಇರೋಕಾಗುತ್ತೇನಯ್ಯಾ, ಅವರು ಎಸ್ ಐ. ನಾನು ಪೇದೆ

ರಾಮ : ಅಯ್ಯೋ ಇದನ್ನು ಮೊದಲೇ ಹೇಳಕ್ಕಿಲ್ವಾ (ಒಳಗೆ ಹೋಗೋಷ್ಟರಲ್ಲಿ) ಇನ್ಸ್‌ಪೆಕ್ಟರು ಹೊರಗೆ ಬಂದು ಪೇದೆ ಖಾಲಿ ಮಾಡಿದ ಕುರ್ಚಿಯಲ್ಲಿ ಕೂರುತ್ತಾರೆ)



ಎಸ್ ಐ : ಏನು ಏನು ಗಲಾಟೆ ನಡೀತಾ ಇದೆ ಇಲ್ಲಿ

ಪೇದೆ : ಸರ್ ಇವರು ಸೆಲೂನಿನಲ್ಲಿ ತಲೆ ಕಳ್ಕೊಂಡಿದಾರೆ ಅಲ್ಲಲ್ಲ ಸೆಲೂನಿಗೆ ಹೋದಾಗ ಸೈಕಲ್ ಕಳ್ಕೊಂಡಿದಾರೆ

ರಾಮ : ಸರ್ ಈ ಪೇದೆ ಬಹಳ ತಡ ಮಾಡ್ತಿದಾರೆ ನೀವು ನನ್ನ ಸೈಕಲ್ ಹುಡುಕ್ಕೊಡಿ ಸರ್

ಎಸ್.ಐ : ಏನಯ್ಯಾ ಕಂಪ್ಲೇಂಟ್ ಬರ್ಕೊಂಡಿದೀಯ

ಪೇದೆ : ಎಲ್ಲಾ ಬರ್ಕೊಂಡಿದೀನಿ ಇಲ್ಲಿದೆ ನೋಡಿ ಸರ್ (ಪೇಪರ್ ತೋರಿಸುತ್ತಾನೆ)

ರಾಮ : ಸರ್ ನನ್ನ ಸೈಕಲ್ ಹುಡುಕ್ಕೊಡಿ ಸರ್ ಅದೊಂದೇ ನನ್ನ ಜೀವನಾಧಾರ ಸರ್

ಎಸ್.ಐ : ಯೋಚನೆ ಮಾಡಬೇಡ ನಿನ್ನ ಸೈಕಲ್ ನಾನು ಹುಡುಕ್ಕೊಡ್ತೀನಿ. ಪೇದೆ ನೀನು ಹೋಗು ನಾನು ಇವರ ಕಂಪ್ಲೇಂಟ್ ಅಟೆಂಡ್ ಮಾಡ್ತೀನಿ (ಪೇದೆ ಸೆಲ್ಯೂಟ್ ಹೊಡೆದು ಹೋಗ್ತಾನೆ)

ರಾಮ : ಸರ್ ನನ್ನ ಸೈಕಲ್ಲು ಸ್ವಲ್ಪ ಬೇಗ ಸರ್. ಆ ಪೇದೆ ಏನೇನೋ ಪ್ರಶ್ನೆ ಕೇಳ್ತಿದ್ರು ಸರ್

ಎಸ್.ಐ : ನೋಡಿ, ಕಂಪ್ಲೇಂಟ್ ಅಟೆಂಡ್ ಮಾಡಬೇಕಾದರೆ ಕೆಲವು ಪ್ರಶ್ನೆಗಳನ್ನು ಕೇಳಲೇಬೇಕಾಗುತ್ತೆ. ಆದರೆ ನಾನು ಹಾಗಲ್ಲ ಕೇವಲ ಮೂರೇ ಮೂರು ಪ್ರಶ್ನೆ ಕೇಳ್ತೀನಿ ಅದಕ್ಕೆ ನೀನು ಉತ್ತರ ಹೇಳಿದ್ರೆ ನಿನ್ನ ಸೈಕಲ್ ಸಿಕ್ತು ಅಂದ್ಕೊ

ರಾಮ : (ಖುಷಿಯಿಂದ) ಮೂರೇ ಮೂರು ಪ್ರಶ್ನೆನಾ ಸರ್. ಕೇಳಿ ಸರ್ ಕೇಳಿ

ಎಸ್.ಐ : ಮೊದಲನೇ ಪ್ರಶ್ನೆ – ನಿನ್ನ ಸೈಕಲನ್ನು ಕಳ್ಳ ಕದ್ಕೊಂಡು ಹೋದ ಅಂದ್ಯಲ್ಲ ಆ ಕಳ್ಳ ನೋಡೋಕೆ ಹೇಗಿದ್ದ.

ರಾಮ : (ಗಾಬರಿಯಿಂದ ಕಣ್ಣು ಬಿಡುತ್ತಾನೆ)

ಎಸ್.ಐ : ಈಗ ಎರಡನೇ ಪ್ರಶ್ನೆ ಆ ಕಳ್ಳನ ಹೆಸರು, ವಯಸ್ಸು, ಬಣ್ಣ, ಹೋಲಿಕೆ ಇತ್ಯಾದಿ

ರಾಮ : (ನೆಲಕ್ಕೆ ಕುಸಿಯುತ್ತಾನೆ)

ಎಸ್.ಐ : ಈಗ ಮೂರನೆಯ ಪ್ರಶ್ನೆ ಕಳ್ಳನ ಮನೆ ಅಡ್ರೆಸ್ಸು, ಫೋನ್ ನಂಬರು ಇದೆಯಾ, ಆಧಾರ್ ಕಾರ್ಡು, ರೇಷನ್ ಕಾರ್ಡು, ಪ್ಯಾನ್ ಕಾರ್ಡು ಇದೆಯಾ

ರಾಮ : (ತಲೆ ತಿರುಗಿ ಅಂಗಾತ ಬಿದ್ದುಬಿಡುತ್ತಾನೆ)

ಎಸ್.ಐ : (ಬಿದ್ದ ರಾಮನ ಕಡೆ ಅಸಡ್ಡೆಯಿಂದ ನೋಡಿ) ಏನ್ ಜನಾನೋ ಕಂಪ್ಲೇಂಟ್ ಕೊಡೋಕೆ ಬರ್ತಾರೆ. ಸರಿಯಾದ ಮಾಹಿತಿನೇ ಕೊಡಲ್ಲ. (ಪ್ರೇಕ್ಷಕರ ಕಡೆ ನೋಡಿ) ನೀವೇ ಹೇಳಿ ನಾನು ಕೇಳಿದ ಪ್ರಶ್ನೆಗಳಿಗೆ ಇವರು ಉತ್ತರ ಕೊಟ್ಟಿದ್ರೆ ಕಳ್ಳನನ್ನು ಚಿಟಿಕೆ, ಚಿಟಿಕೆ ಹೊಡೆಯೋಷ್ಟರಲ್ಲಿ ಹುಡುಕಿಕೊಡ್ತಿದ್ದೆ. ಏನು ಮಾಡೋದು, ಏ 420 ಇವರನ್ನು ಎತ್ತಿ ಆಚೆಗೆ ಹಾಕೋ ನಾನು ಕಾಫಿ ಕುಡ್ಕೊಂಡು ಬರ್ತೀನಿ (ನಿರ್ಗಮಿಸುತ್ತಾನೆ)

---

**ಮದುವೆಗೆ ಮುನ್ನ**

ಬರ್ತ್ ಡೆ
ವ್ಯಾಲೆಂಟಿನ್ಸ್ ಡೆ
ರೋಸ್ ಡೆ
ಮ್ಯಾಚಿಂಗ್ ಡೆ
ಫ್ರೆಂಡ್‌ಶಿಪ್ ಡೆ



ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು **ತುಂತುರು**

**- ದಂನಳ**

- ದೇವರನ್ನು ನಂಬುವುದಷ್ಟೇ 'ಆಸ್ತಿಕತೆ' ಅಲ್ಲ. ನಂಬದಿರುವುದೂ ಅಷ್ಟೇ 'ನಾಸ್ತಿಕತೆಯೂ' ಅಲ್ಲ.
- ಬಟ್ಟೆ ನೋಡಿ ಬಡತನ ಅಳೆಯೋದಿಕ್ಕೆ ಆಗುವುದಿಲ್ಲ; ಸೆಲ್‌ಫೋನ್ ನೋಡಿ ಶ್ರೀಮಂತಿಕೆ ಅಳೆಯಲು ಸಾಧ್ಯವಿಲ್ಲ.
- ನಗಿಸಬೇಕಾದಾಗ ಹೆಲ್ತಿಯಾಗಿ ನಗಿಸಬೇಕು.
- ಗಿವ್ ವಿಂಗ್ಸ್ ಟು ಯುವರ್ ಸ್ಟ್ರೆಸ್ ಅಂಡ್ ಇಟ್ ವಿಲ್ ಫ್ಲೈ ಅವೆ.
- ಜೀವ ಇರುವ ವ್ಯಕ್ತಿಗಳು ತುಂಬಾ ಜನ ಇದ್ದಾರೆ. ಆದರೆ ಜೀವಂತವಾಗಿರುವವರು ಕಡಿಮೆ.
- 'ಅದು ಇದು ಬೇಕು' ಎಂಬ ಬಾಹ್ಯ ಅನ್ವೇಷಣೆಗಿಂತಲೂ 'ಇಷ್ಟು ಸಾಕು' ಎನ್ನುವ ಅಂತರಂಗದ ತೃಪ್ತಿಯೇ ನೆಮ್ಮದಿಯ ಮೂಲ ಬಂಡವಾಳ.
- ಸಂ ಪೀಪಲ್ ಆರ್ ವೈಸ್; ಸಂ ಅದರ್‌ವೈಸ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಮತ್ತೆ ಅದು ಮರುಕಳಿಸದು ಎಂಬ ಭಯದಿಂದ ಒಂದು ಯಶಸ್ಸಿಗೇ ಅಂಟಿಕೊಂಡಿರುವುದು ಒಂದು ಬಗೆಯ ಅಭದ್ರತೆ.
- ಬೇರೆಯವರಿಗೆ ಏನೂ ಕಾಣ ಬರದ ಸಾಮಾನ್ಯ ಜಾಗಗಳಲ್ಲೂ ಸೌಂದರ್ಯವನ್ನು ಕಾಣುವವರು ಅದೃಷ್ಟವಂತರು.
- ಇಫ್ ಯು ಕೆನ್, ಪರ್‌ಫಾರ್ಮ್; ಇಫ್ ಯು ಕೆನಾಟ್, ಪ್ರಾಕ್ಟೀಸ್.
- ಜನ ನಿಮ್ಮ ಮಾತುಗಳನ್ನು ಕೇಳಬಹುದು ಆದರೆ ಅವರ ಮನತಟ್ಟುವುದು ನಿಮ್ಮ ಮನೋಭಾವ.
- ನೀವು ಅಧಿಕಾರವನ್ನು ಬೇರೆಯವರಿಗೆ ವಹಿಸಬಹುದು ಆದರೆ ಜವಾಬ್ದಾರಿಯನ್ನಲ್ಲ.
- ಡಾಕ್ಟರ್ಸ್ ಕೆನ್ ಬಿ ಇನ್‌ಜೂರಿಯಸ್ ಟು ಹೆಲ್ತ್.
- ಕರ್ತವ್ಯ ಎಂಬುದು ನಾವು ಬೇರೆಯವರಿಂದ ನಿರೀಕ್ಷಿಸುವಂತಹದು.
- ಲಾಂಗೆಸ್ಟ್ ಸೆಂಟೆನ್ಸ್ ಇನ್ ಇಂಗ್ಲಿಷ್; ಲೈಫ್ ಇಂಪ್ರಿಸನ್‌ಮೆಂಟ್.
- ಹೆಣ್ಣು ಚಿತ್ರಕಲೆ ಇದ್ದಂತೆ, ಏನೂ ಅರ್ಥವಾಗುವುದಿಲ್ಲ. ಆದರೂ ಸುಂದರವಾಗಿರುತ್ತದೆ.



*With Best Compliments from*

**Omega Lasertech**

Pre-press and Print Service
since 1989

No. 17, Mission Road, Subbaiah Circle
Bangalore - 560 027
Tel: 080-22225633

*With Best Compliments from*

# Sreeraj Lassi Bar

*Since 1973*

• Lassi • Kulfi • Falooda • Milk Shakes
• Icecreams • Fruit Juices • Curds
• Shreekhand and • Special Items

**BRANCHES : Shantinagar Kammanahalli**
**Palace Road Jayanagar Shivajinagar**
**Commercial Street RT Nagar SG Palya Malleshwaram**
**and DUBAI**

**Contact for Bulk requirement : 98861 35656**



# ಚಿತಂಪರ ರಗಸಿಯಮ್

**– ವಾಣೀ ಸುರೇಶ್**

“ಏ ನೋಡೇ! ಇಲ್ಲಿ ಸೂಯಿಂಗ್ ಮಿಷಿನ್ ಡ್ರಾಯರಿನ ಸೀಕ್ರೆಟ್ ಪ್ಲೇಸಲ್ಲಿ ನಾನಿಟ್ಟುಕೊಳ್ಳೋ ಕೋಡುಬಳೆ, ಬಾಳಕ ನಾನು ತಿಂದಿಲ್ಲದೇದ್ರೂ ಎಲ್ಲಾ ಖಾಲಿಯಾಗಿ ಎಲ್ಲೋ ಒಂಚೂರು ಮಾತ್ರಾ ಉಳಿದಿರತ್ತೆ! ಅದ್ಹೇಗೆ ಸಾಧ್ಯ? ನನಗಂತೂ ಒಳ್ಳೇ ಚಿದಂಬರ ರಹಸ್ಯವಾಗ್ಬಿಟ್ಟಿದೆ!” – ಅಂತ ಅಲವತ್ತುಕೊಂಡ ಅವತ್ತು ನನ್ನ ಚಿಕ್ಕಮ್ಮನ ಮಗ ಸತೀಶ. ಸನ್ನಿವೇಶ – ನಾವೆಲ್ಲಾ ಸೇರು ಪಾವು ಚಟಾಕುಗಳೂ ಮಾಮೂಲಿನಂತೆ ಬೇಸಿಗೆ ರಜೆಯಲ್ಲಿ ಶೇಷಾದ್ರಿಪುರದ ನಮ್ಮಜ್ಜಿ ಮನೇಲಿ ಸೇರಿ ದಾಂಧಲೆ ನಡೆಸುತ್ತಿದ್ದ ಸುವರ್ಣ ದಿನಗಳು. ಅಷ್ಟೊತ್ತಿಗಾಗಲೇ ಓದೋ ಹುಚ್ಚು ಬೆಳೆಸಿಕೊಂಡಿದ್ದ, ಅವನಿಗಿಂತಾ ಮೂರು ವರ್ಷ ದೊಡ್ಡವಳಾದ ನನಗೆ, ಈ ಭೋಳೆ ಸತೀಶ ಬಚ್ಚಿಟ್ಕೊಳ್ಳೋ ಬಾಳಕ ಕೋಡುಬಳೇತ್ಯಾದಿಗಳನ್ನು ಅವನಿಗೆ ಗೊತ್ತಿಲ್ಲದಂತೆ ಎಗರಿಸಿ ತಿನ್ನೋದ್ರಲ್ಲಿ ಏನೋ ಒಂದು ರೀತಿಯ ಖುಶಿ. ಆದರೆ ಅವತ್ತವನು ಪೆಚ್ಚುಮುಖ ಹಾಕ್ಕೊಂಡು ಅದುವರೆಗೂ ನಾನು ಕೇಳಿಲ್ಲದ “ಚಿದಂಬರ ರಹಸ್ಯ” ಅನ್ನೋ ಪದಾನ್ನ ಅಷ್ಟು ಸಲೀಸಾಗಿ ಬಳಸಿದ್ದರಿಂದಾದ ಹೊಟ್ಟೆ ಕಿಚ್ಚೇ ಆ ಖುಶಿಗಿಂತಾ ಜಾಸ್ತಿಯಾಯ್ತು. ನಾನದನ್ನಷ್ಟಕ್ಕೇ ಬಿಡದೇ ಹಾಗಂದರೇನೂಂತ ವಿಚಾರಿಸಿದಾಗ ಗೊತ್ತಾಯ್ತು, ಅವನೆಲ್ಲೋ ನಮ್ಮಜ್ಜಿ ಫ್ರೆಂಡು ಮೂಲೆ ಮನೆ ಗೌರಮ್ಮನೋರು ಹೇಳಿದ್ದು ಕೇಳಿಸಿಕೊಂಡು ನನ್ನೆದುರಿಗೆ ಆ ಪದ ಪ್ರಯೋಗಿಸಿದ್ದನಂತೆ ಅಂತ. ಸದ್ಯ ಗೌರಮ್ಮನೋರ ಹೆಸರೆತ್ತಿದ್ದರಿಂದ ಆಕ್ಷಣಕ್ಕೆ ಅದೇನೋ ನಿವಾರಣೆಯಾಯಿತು ಅಂತಿಟ್ಕೊಳ್ಳಿ. ಹೀಗೆ ನನ್ನ ತಲೆಯಲ್ಲಿ ಹೊಕ್ಕ “ಚಿದಂಬರ ರಹಸ್ಯ”ದ ಮತ್ತು ನನ್ನ ನ್ಯಾಸ್ತ, ಆ ದಿನಗಳಲ್ಲಿ ಅನೇಕ ಬಾರಿ ವಿವಿಧ ಸಂದರ್ಭಗಳಲ್ಲಿ ಬೆಳೀತು. ಉದಾಹರಣೆಗೆ ನಮ್ಮ ಸೋದರಮಾವನ ಟೇಬಲ್ ಮೇಲಿರ್ತಿದ್ದ ತೇಜಸ್ವಿಯ ಕತೆ ಪುಸ್ತಕದ ಟೈಟಲ್ ನೋಡಿದಾಗಿರಬಹುದು ಅಥವಾ ನಮ್ಮಜ್ಜಿ ಮನೇಲಿ ಮೂ.ಮ.ಗೌ. ಅವರ ಅಧ್ಯಕ್ಷತೇಲಿ ಮತ್ತೆ ಮತ್ತೆ ನಡೀತಿದ್ದ ಗಾಸಿಪ್ ಸೆಷನ್ನುಗಳಿರಬಹುದು. ಆಮೇಲಾಮೇಲಂತೂ ದಿನಬೆಳಗಾದ್ರೆ ನಡೆಯೋ ರಾಜಕೀಯ ಹಗರಣಗಳ ದೆಸೆಯಿಂದ – ನ್ಯೂಸ್ ಪೇಪರುಗಳಲ್ಲಿ, ಟೀವಿ ನ್ಯೂಸ್ ಚಾನೆಲ್ಲುಗಳಲ್ಲಿ, ಸೀರಿಯಲ್ಲುಗಳಲ್ಲಿ ಅದನ್ನ ತಲೆ ಚಿಟ್ಟು ಹಿಡಿಯೋವಷ್ಟು ಕೇಳಿ, ಅದು ಸರ್ವೇಸಾಧಾರಣದ ಪದವೇ ಆಗಿ ನನ್ನ ಮನಸ್ಸಲ್ಲಿ ಬೇರೂರಿಬಿಡ್ತೂನ್ನಿ.

ಆದರೆ ಅದು ಒಂದು ರೀತೀಲಿ ನಿರಾಕಾರ ಪರಬ್ರಹ್ಮನಲ್ಲಿ ಆ ಚಿಕ್ಕ ವಯಸ್ಸಿನಿಂದಲೇ ನನಗುಂಟಾದ ಆಸಕ್ತಿ ಅಂತ ಮೊನ್ನೆ ಮೊನ್ನೆ ಗೊತ್ತಾಯ್ತು! ಆದರೆ ಆಗಲೇ ಅದು ಗೊತ್ತಾಗಿದ್ದರೆ ಹೀಗ್ಯಾಕೆ ಬಿಂಗಿಬಿಂಗಿಯಾಗಿ ಒಂಟಿಯಾಗಿರ್ತಿದ್ದೆ! ಅದನ್ನು ಬೆಳೆಸಿಕೊಂಡಿದ್ದರೆ ಕಡೇಪಕ್ಷ ನನ್ನ ಮುಖಕ್ಕೂ ಒಂದು ರೆಸಾರ್ಟಿನ ತರದ ಆಶ್ರಮಾನೋ, ನಡೆಮುಡಿ ಹಾಸೋ ಶಿಷ್ಯರೋ ಇತ್ಯಾದಿಗಳು ನಂಗೂ ಇರ್ತಿರಲಿಲ್ಲವೇ? ಅಯ್ಯೋ ಎಲ್ಲಾ ಯೋಗಗಳು ಬಿಡಿ.



ಅಲ್ಲ ಯಾಕೆ ಹಾಗಂದೆ ಅಂದ್ರೆ, ಮೊನ್ನೆ ನಾವು ಚಿದಂಬರಕ್ಕೆ ಹೋಗಿಬಂದ್ವಾ? ಅಲ್ಲಿ ನಾನು ''ಚಿದಂಬರ ರಹಸ್ಯ'' ಖ್ಯಾತಿಯ ಸಾಕ್ಷಾತ್ ತಿಲ್ಲೈ ನಟರಾಜನ ಸನ್ನಿಧಿಯಲ್ಲಿ ನಿಂತಾಗ ತಟಕ್ಕಂತ ಚಿಕ್ಕಂದಿನ ಈ ಸನ್ನಿವೇಶಗಳೆಲ್ಲಾ ಜ್ಞಾಪಕಕ್ ಬಂದ್ವು! ಇನ್ ಫ್ಯಾಕ್ಟ್, ನಾವು ಅಲ್ಲಿಗೆ ಹೊರಟುನಿಂತಾಗಲೇ ನಮ್ಮ ಬಂಧುಮಿತ್ರಮಹಾಜನರು ''ಚಿದಂಬರ ರಹಸ್ಯ ಅಂದರೇನೂಂತ ಸ್ವಲ್ಪ ನೋಡ್ಕೊಂಡು ಬಂದು ನಮಗೂ ಹೇಳೇ'' – ಅಂತಲೇ ರಿಯಾಕ್ಟಿಸಿ ಕುಹಕವಾಡಿದ್ದರು.

''ಅದೇನೋ ಆ ದೇವಸ್ಥಾನದಲ್ಲಿ ಆಕಾಶಲಿಂಗಾಂತ ಬರೀ ಆಕಾಶಾನೇ ತೋರಿಸ್ತಾರಂತೆ! ಆಕಾಶ ನೋಡುಕ್ಕೆ ನೂಕುನುಗ್ಗಲೇ ಅಂತ ಮೊದಲೇ ಗಾದೆ. ಅದಕ್ಕೋಸ್ಕರ ಅಷ್ಟೊಂದು ದೂರ ದುಡ್ಡು ಖರ್ಚು ಮಾಡ್ಕೊಂಡು ಈ ಬಿಸಿಲಲ್ಲಿ ಹೋಗ್ತಾರೇನೇ, ಸ್ವಲ್ಪ ಯೋಚಿಸು'' ಅಂತ ಸೋಂಭೇರಿತನಕ್ಕೇ ಎತ್ತಿದ ಕೈ ಅಂತ ಹೆಸರಾದ ಒಬ್ಬರೆಂದರೆ.., ''ಅಯ್ಯಯ್ಯೋ, ಆ ಚಿದಂಬರ ರಹಸ್ಯಕ್ಕೆ ತೆರೆ ಹಾಕಿಬಿಟ್ಟಿದ್ದಾರಂತೆ ಕಣೇ. ಅದೇನೂಂತ ತಿಳ್ಕೊಂಬರ್ತಿಯೋ ನಂ ಗೊತ್ತಿಲ್ಲಪ್ಪ'' ಅಂತ ಅದಕ್ಕೆ ಪರ್ಯಾಯವಾಗಿ ಇನ್ನೊಬ್ಬರು.

ಅದೆಲ್ಲಾ ಹಳೇ ಕಾಲಕ್ಕಾಯ್ತು. ಈಗೆಲ್ಲಾ ಗರ್ಭಗುಡಿಯ ದೇವರೇ ಈ ಕಲಿಯುಗದ ಪೂಜಾರಿಗಳ ಅವಾಂತರ, ಭಕ್ತಾದಿಗಳ ದಾಂಧಲೆ ತಡೀಲಾರದೆ ದೇವಸ್ಥಾನ ಬಿಟ್ಟು ಓಡಿ ಹೋಗೋ ಪರಿಸ್ಥಿತಿಯಿರುವಾಗ ಇನ್ನು ಆ ಚಿದಂಬರ ರಹಸ್ಯ ಒಂದು ಮಾತ್ರಾ ಅಲ್ಲೇ ಕಾಯ್ಕೊಂಡು ಕೂತಿರತ್ಯೇ? ಅದಕ್ಕೇ, ನಾವು ದೇವಸ್ಥಾನಗಳಿಗೆ ಹೋಗೋದೇ ಬಿಟ್ಬಿಟ್ಟಿದ್ದೀವಿ ನಮ್ಮನೇಲಿ'' – ಅಂತ ಬುದ್ಧಿಜೀವಿ ಸಿನಿಕಮಹಾಶಯರೊಬ್ಬರ ಅಂಬೋಣ! ಇದಕ್ಕೆಲ್ಲಾ ಸೊಪ್ಪು ಹಾಕದೇ ನಾವಂತೂ ಬ್ಯಾಗಿಗೆ ಬಟ್ಟೆ ತುರುಕ್ಕೊಂಡು, ನಮ್ಮ ಮೀನಾಕ್ಷಮ್ಮನೋರ ಕೈಲಿ ಚಕ್ಲಿ, ಕೋಡುಬಳೆ, ರವೇ ಉಂಡೆ, ಗುಳ್ಪಾವಟೆ ಮಾಡಿಸಿಕೊಂಡು ಹೊರಟೇಬಿಟ್ವಿ.

ಸಾಮಾನ್ಯವಾಗಿ ನಮ್ಮ ದೇವಾಲಯಗಳ ಗರ್ಭಗುಡಿ ಉಳಿದ ಪ್ರಾಕಾರಗಳ ಮಟ್ಟದಲ್ಲೇ ಇರತ್ತಲ್ವೇ? ಆದರೆ ಅಲ್ಲಿ, ಗರ್ಭಗುಡಿಯ ಭಾಗ, ದೇವಾಲಯದ ಉಳಿದ ಪ್ರಾಕಾರಗಳಿಗಿಂತಾ ಸುಮಾರು ಐದಡಿಯಷ್ಟು ಹೆಚ್ಚಿನ ಎತ್ತರದಲ್ಲಿದೆ. ಹಾಗಾಗಿ, ಆಮ್ ಆದ್ಮಿಗಳಾದ ನಮ್ಮಂಥಾ ಭಕ್ತಾದಿಗಳು ಕೆಳಗಿನ ಪ್ರಾಕಾರದಲ್ಲೇ ನಿಂತು ದೇವರ ದರ್ಶನಮಾಡಬೇಕು. ಅರ್ಚಕರು ಕೊಡೋ ಮಂಗಳಾರತಿ, ತೀರ್ಥ, ಪ್ರಸಾದಗಳಿಗಾಗಿ ಎಂದಿನಂತೆ ಮಧ್ಯದಲ್ಲಿ ಎರಡು ಭಾಗವಾಗಿ ಸೀಳಿರದ ಈ ಗುಂಪಲ್ಲಿ, ತಲೆಯೆತ್ತಿಕೊಂಡು ದೇವರನ್ನ ನೇರಾನೇರ ದರ್ಶಿಸುತ್ತಾ ನಿಲ್ಲೋದೇ ಒಂದು ರೀತಿಯ ವಿಫ್ ಆಫ್ ಫ್ರೆಷ್ ಏರ್ ತರೋ ಅನುಭವ. ಅಲ್ಲಿದ್ದೋರಲ್ಲಿ ಹಲವರು ಭಕ್ತಪರವಶರಾಗಿ ತಾರಕಸ್ವರದಲ್ಲಿ ಮೈಮರೆತು ಪ್ರಾಚೀನ ತೇವಾರಂಗಳನ್ನು ಹಾಡುವುದನ್ನು ಕೇಳುವಾಗ, ಸ್ತ್ರೀಪುರುಷರೆನ್ನದೇ ಒಟ್ಟಾಗಿ ನಿಂತಿದ್ದರೂ ಜನಸಾಮಾನ್ಯರ ವಿಕೃತಿಗಳಿಗೆ ಆ ದಿವ್ಯ ಮೂರ್ತಿಯೆದುರು ಅಸ್ಪದವೆಲ್ಲಿರತ್ತೆ ಸದ್ಯ! ಅಂತೂ, ಅದನ್ನೆಲ್ಲಾ ನೋಡಿ ನಾನಂತೂ ಫಿದಾ ಆಗ್ಬಿಟ್ಟಿದ್ದೆ.

ಅಲ್ಲದೆ ಆ ಭವ್ಯ ದೇವಸ್ಥಾನಕ್ಕೆ ಕಾಲಿಟ್ಟಾಗಿನಿಂದ ನಂಗೋ ಚಿ.ರ.ಕ್ಕೆ ಅಂಟಿರೋ ಸೂಕ್ಷ್ಮ ನಿಗೂಢತೆಯನ್ನು ತಿಳಿಯಲೇಬೇಕಲ್ಲ ಅಂತ ಕಾಡೋ ಗೀಳು. ನೋಡಿದರೆ ಎಲ್ಲೂ ಅದರ ಸುಳಿವಿರಲಿ, ಒಬ್ಬರೂ ಅದರ ಬಗ್ಗೆ ಏನು ವಿವರ ಕೊಡಕ್ಕೂ ತಯಾರಿದ್ದ ಹಾಗಿರ್ಲಿಲ್ಲ. ಅದೇ ಅರ್ಥ ಅದರ ಬಗ್ಗೆ ಇದ್ದ ಕುತೂಹಲಾನ ಇನ್ನೂ ಹೆಚ್ಚಿಸ್ತು. ಹೋಗಿ ಯಾರನ್ನಾದ್ರೂ ವಿಚಾರಿಸೋಣಾಂದರೆ ನಮ್ಮ ತಾತ ಅಂತಿದ್ದ ಹಾಗೆ ನನಗೂ, ಕ್ಷಮಿಸಿ, ಆ ಹರಳೆಣ್ಣೆ ಭಾಷೆಯ ತೊಂದರೆ! ನನ್ನ ಖಾಸಾ ಸ್ನೇಹಿತೆಯರಾದ ರಮಾಮಣಿ, ಶ್ರೀವಲ್ಲಿ ಮುಂತಾದ ಹೆಬ್ಬಾರೈನ್ಗಾರಿಸಿಂದ



ಕಷ್ಟಪಟ್ಟು ಕಲಿತಿದ್ದ ''ಪೋದು, ಆಮ, ಇಲ್ಲೆ, ವೇಣು ವಾಂಡಾ, ಅಪ್ಪಡಿಯಾ''ಗಳು, ಅಲ್ಲಿಯ ಹೋಟೆಲ್ಲಲ್ಲಿ ಅವರು ಬಡಿಸುವ ಚಟ್ನಿ, ಸಾಂಬಾರುಗಳಿಗಷ್ಟೇ ಸರಿಹೋಯ್ತೇ ವಿನಃ ಇನ್ನೇನಕ್ಕೂ ಸಾಕಾಗಲೇ ಇಲ್ಲ. ಹಾಗಾಗಿ ಅವರ ಅಪ್ಪಟ ''ಚಂಗಂ'' ತಮಿಳಿನ ಮುಂದೆ ನನ್ನ ಭಾಷಾಜ್ಞಾನ ಸರ್ಯಾಗಿ ಉಲ್ಟಾ ಹೊಡೀತು. ಇನ್ನು ಅಲ್ಲಿದ್ದ ಬೋರ್ಡುಗಳೋ.. ಶ್ರೀರಾಮರಕ್ಷೆ! ಪ್ರತಿಯೊಂದನ್ನೂ ನಮ್ಮ ಕನ್ನಡವನ್ನೂ ಮೀರಿಸಿದ ಅವರ ಜಿಲೇಬಿ ಲಿಪಿಯಲ್ಲೇ ಬರೆಸಿ ಅಲ್ಲಿನ ಅರ್ಚಕವರ್ಗದೋರು ತಮ್ಮ ಭಾಷಾಭಿಮಾನ ಉಕ್ಕಿ ಹರಿಸಿ ಮೆರೆದಿದ್ದರು! ಇಷ್ಟೆಲ್ಲಾ ಅಡ್ಡಿಗಳ ನಡುವೆಯೂ ನನ್ನ ಆಶಾವಾದಿತ್ವ ಮಾತ್ರಾ ಕೈಬಿಡದಿದ್ದರಿಂದ ಆ ಪರಿಸರದಲ್ಲೂ ಬೇರೆ ಭಾಷೆ ಮಾತಾಡಬಹುದೇನೋಂತನ್ನಿ ಸಿದೋರನ್ನ (ಮನೆಯೋರ ಕೈಲಿ ಚೆನ್ನಾಗಿ ಬೈಸಿಕೊಂಡ್ರೂ ಕೇರೇ ಮಾಡದೇ) ತಲಾಶಿಸಿ, ಚಿ.ರ.ದ. ಬಗ್ಗೆ ಮಾಹಿತಿ ಸಂಗ್ರಹಿಸಕ್ಕೆ ಆರಂಭಿಸೇ ಬಿಟ್ಟೆ.

ಎತ್ತಿಕೋತಾನೇ ಸಿಕ್ಕೋರು ಒರಿಸ್ಸಾದಿಂದ ಬಂದಿದ್ದ ಗಜೇಂದ್ರನಾಥ ಪಟ್ಟನಾಯಕ್ ಅವರು. ಸ್ಪೆಷಲ್ ದರ್ಶನಕ್ಕಾಗಿ ಪಕ್ಕದಿಂದ ಮೇಲೆ ಹತ್ತಿ ಹೋಗಲು ಅಂತ ಪಾಪ ಅವರು ಏಳ್ನೂರೈವತ್ತು ರೂಪಾಯಿ ಪೀಕಿದ್ದರೂ ಬೆಳಗ್ಗೆ ಏಳರಿಂದ ಕಾದು, ಹನ್ನೆರಡಾದರೂ ಅಲ್ಲೇ ನಿಂತಿದ್ರಂತೆ. ಪಂಚೆ, ಪ್ಯಾಂಟನ್ನು ಬಿಟ್ಟು ಬನಿಯನ್ನು ಷರಟಿನ ಗೊಡವೆಯೇ ಇಲ್ಲದಂತಿದ್ದ ಆ ವಿಭೂತೀಕೃತ ದ್ರಾವಿಡ ಜನಸಂದಣಿಯ ಸಾಲನ್ನು ನೋಡಿ ತಬ್ಬಿಬ್ಬಾದಂತೆ ಕಂಡ ಆತ ಮೇಲೆಯೂ ಹತ್ತಿ ಹೋಗದೆ ದೂರದಲ್ಲೇ ನಿಂತು ಸುಮ್ಮನೆ ದಿಗ್ಭ್ರಾಂತರಾಗಿ ಎಲ್ಲವನ್ನೂ ನೋಡ್ತಾ ನಿಂತಿದ್ದರಿಂದ ನನ್ನ ಗಮನ ಸೆಳೆದರು. ಅವರು 'ನೋಡಿ. ಈ ಚಿದಂಬರ ರಹಸ್ಯ ಅನ್ನೋದು ಈ ದೇವಸ್ಥಾನದಲ್ಲಿಲ್ಲ. ಅದನ್ನು ಇವರು ತೊಗೊಂಡು ಹೋಗಿ ಇಲ್ಲಿಂದ ಹತ್ತು ಮೈಲಿಯಾಚೆ ಸಮುದ್ರದಂಚಿನ ಪಿಚ್ಚಾವರಂನ ಹಿನ್ನೀರಲ್ಲಿರೋ ತಿಲ್ಲೈವನಂ ಅನ್ನೋ ಕಾಡಿನಲ್ಲಿ ಬಚ್ಚಿಟ್ಟಿದ್ದಾರೆ. ಅಲ್ಲಿಗೆ ಹೋಗಬೇಕಿದ್ದರೆ ಒಂದರ್ಧ ದಿನವೆಲ್ಲಾ ದೋಣಿಯಲ್ಲಿ ಪ್ರಯಾಣ ಮಾಡಬೇಕು'' ಅಂತೆಲ್ಲಾ, ಏನೋ ಮಹತ್ವದ ವಿಚಾರವನ್ನು ತಿಳಿಸೋ ಹಾಗೆ ಗುಟ್ಟಲ್ಲಿ ಅವರ ವಿಚಿತ್ರ ಒರಿಯಾ ಉಚ್ಚಾರಣೆಯ ಹಿಂದೀಲಿ ಹೇಳಿದ್ರು. ಅದ್ಯಾರು ಅದೇನು ಹೇಳಿದ್ದರೋ! ಇವರು ಅದೇನು ಅರ್ಥ ಮಾಡಿಕೊಂಡಿದ್ದರೋ ಅಥವಾ ನನ್ನ ಥರ್ಡ್ ಲಾಂಗ್ವೇಜ್ ಹಿಂದಿಯ ಹರಕು-ಮುರುಕು ಪ್ರಶ್ನೆಯೇ ಹಾಗಿತ್ತೋ! ಇನ್ನು ನನ್ನ ಅಯೋಮಯತೆಯನ್ನು ನೋಡಿ ನನಗೆ ಅರ್ಥ ಮಾಡಿಸಲು ಅವರು ಪ್ರಯತ್ನಿಸಿದ ಇಂಗ್ಲೀಷೋ ತಿಲ್ಲೈ ನಟರಾಜನಿಗೇ ಪ್ರೀತಿ! ತಪ್ಪು ನಂದೇ ಇರ್ಬೇಕು. ಯಾರಾದ್ರೂ ಸ್ಥಳೀಕರನ್ನ ಕೇಳೋದ್ ಬಿಟ್ಟು, ಹೀಗೆ ಇರಲಾರದೆ ಇರುವೆ ಬಿಟ್ಕೊಂಡೋರ ಹಾಗೆ, ಅದೂ ಹೋಗಿ ಹೋಗಿ ಒಳ್ಳೇ ಒರಿ.. ಅಯ್ಯೋ ಏನಿಲ್ಲ ಬಿಡಿ.

ಅಂತೂ ಚಿ.ರ.ದ ಜ್ಞಾನಕ್ಕಾಗಿ ಏನು ಮಾಡಲೂ ಸಿದ್ಧಳಿದ್ದ ನನಗೆ ನಂತರ ಸಿಕ್ಕಿದ್ದು ಬಣ್ಣಬಣ್ಣದ ಷರಟನ್ನು ಬಿಚ್ಚಿ ಹೆಗಲ ಮೇಲೆ ಹಾಕ್ಕೊಂಡು, ಬೆವರ್ತಿದ್ದ ಹಣೆ ಭರ್ತಿ ಢಾಳಾಗಿ ವಿಭೂತಿ ಬಳ್ಕೊಂಡ, ತಮಿಳಿನ ಅದೇನೋ ಸ್ತೋತ್ರವನ್ನು ಗುನುಗ್ತಾ ಒಂದೇ ಸಮ ಹಾಕ್ತಿದ್ದ ಪ್ರದಕ್ಷಿಣೆಗಳಲ್ಲಿ



ಮಗ್ನನಾಗಿದ್ದ ಕುಂಭಕೋಣದ ಸೆಂದಿಲ್ ಕುಮಾರನ್ ಶಿವರಾಮಕೃಷ್ಣನ್‌ನೆಂಬ ಈಗಷ್ಟೇ ಕಾಲೇಜಿನ ಮೆಟ್ಟಲೇರಿದ್ದ ಹುಡುಗ. ಆತ ನನ್ನ ಪರದಾಟ ಗಮನಿಸಿರಬೇಕು. ಅವನಾಗವನೇ- ''ಮಾಮಿ ಏನಾದರೂ ಸಹಾಯ ಬೇಕಿತ್ತೆ?'' ಅಂತ ಇಂಗ್ಲೀಷಲ್ಲಿ ಬಹು ಕಾಳಜಿಯಿಂದ ವಿಚಾರಿಸಿದ! ಕೊನೆಗೂ ಅರ್ಥವಾಗುವ ಭಾಷೆ ಕಿವಿಗೆ ಬಿದ್ದ ಖುಶಿಯಲ್ಲಿ ನಾನು ನವೋತ್ಸಾಹದಿಂದ ವಿಚಾರಿಸಿದೆ. ಉತ್ತರ ಮಾತ್ರಾ ತೀರಾ ನಿರಾಶಾದಾಯಕ. ಅವನಿಗೆ ಅವರಜ್ಜಿ ಬಾಯಲ್ಲಿ ಚಿ.ರ.ದ ಹೆಸರು ಕೇಳಿದ್ದ ನೆನಪಿತ್ತೇ

ಹೊರತು, ಪೀಯೂಸೀಲಿ ಪಾಸಾಗಕ್ಕೆ ಅಲ್ಲಿ ದೇವರಿಗೆ ಪ್ರದಕ್ಷಿಣೆ ಹಾಕೋದು ಬಿಟ್ಟು ಬೇರೆ ಯಾವ ಅಜೆಂಡಾ ಆಗಲೀ ಕುತೂಹಲವಾಗಲೀ ಇದ್ದ ಹಾಗಿರ್ಲಿಲ್ಲ.

ಇನ್ನು ಮುಂದಿನ ಕೇಸು, ಶೀರಕಾಳಿಯ ಶಿವಸುಬ್ರಮಣಿಯನ್ ವೈತೀಶ್ವರಪ್ಪನ್. ಇಂದಿನ ಪಡ್ಡೆ ಹುಡುಗರ ಪ್ರತಿನಿಧಿಯಂತಿದ್ದ ಆತ ಒಂದೇ ಅವಸರದಲ್ಲಂದದ್ದು – ''ಈ ಚಿತಂಪರ ರಗಸಿಯಂ ಅನ್ನೋದು ಕುಂಭಾಭಿಷೇಕದ ಸಮಯದಲ್ಲಷ್ಟೇ ಇತ್ತು ಅಂತ ಕೇಳಿಪಟ್ಟಿದ್ದೇನೆ. ಬಾಕಿಯಂತೆ ಅದನ್ನು ಭದ್ರವಾಗಿ ದೇವರ ಪಕ್ಕದ ಕೊತಡಿಯಲ್ಲಿ ಪರದೆಯ ಹಿಂದೆ ಇಟ್ಟುಬಿಟ್ಟಿದ್ದಾರೇಂತ ಪ್ರತೀತಿ. ಅಲ್ಲಿ ನೋಡಿ'' – ಅಂತ ಮೂರ್ತಿಯ ಪಕ್ಕದಲ್ಲಿದ್ದ ಕೋಣೆಯ ಕಡೆ ಕೈಮಾಡಿ ತೋರಿಸಿ, ಮೊದಲೇ ತಡವಾಗಿದ್ದ ಅವನ ಆಫೀಸ್ ಕೆಲಸಕ್ಕೋ ಎಲ್ಲಿಗೋ ಓಡಿದ. ನೋಡಿದರೆ ಅಲ್ಲಿ ಗರ್ಭಗುಡಿಯ ಪಕ್ಕದಲ್ಲಿ, ಉಪೇಕ್ಷಿಸಲ್ಪಟ್ಟಂತಿದ್ದ ಅತ್ಯಂತ ಆರ್ಡಿನರಿಯಾಗಿದ್ದ ಒಂದು ಚಿಕ್ಕ ಕೋಣೆ ಕಾಣಿಸ್ತಿತ್ತು. ಅದರ ಮುಂದೆ ಸೊಟ್ಟಗೆ ಮಣಕುಗಟ್ಟಿದ ಪರದೆಯೊಂದನ್ನು ತೂಗುಬಿಟ್ಟಿದ್ದರು. ಒಂದು ಕಾಲದಲ್ಲಿ ತಿಳಿ ನೀಲಿ ಬಣ್ಣದ್ದಾಗಿರಬಹುದಾದ ಅದು ಈಗ ಬೂದು ಬಣ್ಣಕ್ಕೆ ತಿರುಗಿತ್ತು. ಒಟ್ಟಲ್ಲದೇನೂ ನಮ್ಮ ಚಿ.ರ.ದ ಬಗ್ಗೆ ಅಷ್ಟೇನೂ ಭರವಸೆ ಮೂಡಿಸೋ ಹಾಗಿರಲಿಲ್ಲ.

ಅಷ್ಟೊತ್ತಿಗೆ ಬಹುಶಃ ನನ್ನ ಚಡಪಡಿಕೆ ನೋಡಲಾರದೆ ಕರುಣಾಮಯಿ ತಿಲ್ಲೈ ನಟರಾಜನೇ ನನ್ನನ್ನು ಅಲ್ಲೇ ಪಕ್ಕದಲ್ಲಿದ್ದ ಶಿವಕಾಮೇಶ್ವರಿ ಗುಡಿಯಲ್ಲಿ ಡೆಸ್ಕ್ ಮುಂದೆ ಕೂತ್ಕೊಂಡು ಪ್ರಸಾದದ ಕುಂಕುಮದ ಪೊಟ್ಟಣ ಕಟ್ತಿದ್ದ ಮಹಾ ಕನಕಸಭಾಪತಿ ದೀಕ್ಷಿತರೆಂಬ ಇನ್ನೊಬ್ಬ ನವಯುವಕನ ಬಳಿ ಕಳಿಸಿದನೇನೋ! ಚಿದಂಬರಂ ದೇವಸ್ಥಾನದ ವಿಶಿಷ್ಟ ಪುರೋಹಿತವರ್ಗವಾದ ದೀಕ್ಷಿತರ ಲೇಟೆಸ್ಟ್ ತಲೆಮಾರಿನವರಾದ್ರೂ ಇವರದ್ದೂ ಅದೇ ವಿಶಿಷ್ಟ ರೀತಿಯ ಫ್ಯಾಮಿಲಿ ಹೇರ್ಸ್ಟೈಲ್. ಅವರು ಮಾತ್ರಾ ಅಲ್ಲಿಯ ಸಂಹಿತೆಯನ್ನು ಮುಲಾಜೇ ಇಲ್ಲದಲೇ ಮುರಿದರು! ಶುದ್ಧ ಇಂಗ್ಲೀಷಲ್ಲವರು ಶ್ರೀಮದ್ಗಾಂಭೀರ್ಯದಿಂದ – ''ರಾತ್ರಿ ಹತ್ತಕ್ಕೆ ನಡೆಯುವ ವಿಶೇಷ ಪೂಜೆಯ ಮಹಾ ಮಂಗಳಾರತಿಯ ವೇಳೆಗೆ ಸ್ವಾಮಿಯ ಹಿಂದಿರೋ ತೆರೆ ಸರಿದಾಗ ತಂಕ ವಿಲ್ವಮಿನ ದರ್ಶನವಾದರೆ ಚಿತಂಪರ ರಗಸಿಯಮಂಥಾ ಪವಿತ್ರತಮ ರಗಸಿಯಂ, ನಿಮ್ಮ ನಮ್ಮಂಥಾ ಪಾಮರರಿಗೂ ತಿಳಿಯಬಹುದು ಪೂರ್ವಾರ್ಜಿತ ಪುಣ್ಯವಿದ್ದರೆ!'' ಅಂತಂದು, ಮತ್ತೆ ತಲೆ ಬಗ್ಗಿಸಿ ಕುಂಕುಮದ ಪೊಟ್ಟಣಗಳಿಗೆ ಸ್ಟೇಪಲ್ ಹಾಕೋದನ್ನ ಮುಂದುವರೆಸಿದರು. ಆಮೇಲೆ, ಹಾಗೆ ಬಗ್ಗಿಸಿದ ತಲೆ ಎತ್ತದಲೇ – ''ಏನೋ ಕಾಣಿಸದಿದ್ದರೆ ಮಾತ್ರಾ, ಅದನ್ನು ನಿಮ್ಮೂರಿನೋರ ತರಾ ಇಟ್ಟ ನಾಮ ಇಟ್ಟ ಹಾಗೆ ಪೆದ್ದು ಪೆದ್ದಾಗಿ ಹೇಳದೇ, ಓಹೋ ಎಂಥಾ ಅದ್ಭುತ ದೃಶ್ಯ! ಅಂತ ಎಲ್ಲರೂ ಅನ್ನೋ ಹಾಗೆ ಉದ್ಗರಿಸಿಬಿಡಿ'' – ಅಂತ ಹೇಳಿ ನಗಲೋ ಬೇಡವೋ ಅನ್ನೋ ಹಾಗೆ ನಕ್ಕರು! ಆಸಾಮಿ ಶಹಣೆ, ಒಳ್ಳೆ ಭವಿಷ್ಯವಿದೆ ಇವರಿಗೆ ಅಂತನ್ನಿಸ್ತು.

ಈಗ ಸ್ವಲ್ಪ ಫಾಸ್ಟ್ ಫಾರ್ವರ್ಡ್ ಮಾಡ್ದೇದ್ರೆ ಈ ನನ್ನ ಕತೆ ಆ ದೇವಸ್ಥಾನದಷ್ಟೇ ವಿಸ್ತಾರವಾಗತ್ತಷ್ಟೇ. ಸೋ. ತಮಿಳುನಾಡಿನ ಹೊಟೇಲಿನೋರು ಮಾಮೂಲಿನಂತೆ, ಎಲ್ರಿಗೂ ರಾತ್ರಿ ಊಟ ಖೋತಾ ಮಾಡಿ ಕಂಪಲ್ಸರಿಯಾಗಿ ತಿನ್ನಿಸೋ 'ಟಿಫಿನ್ನನ್ನ' ಬೇಗ್ಬೇಗ ಗದುಕಿಕೊಂಡು ರಾತ್ರಿ ಮತ್ತೆ ದೇವಸ್ಥಾನಕ್ಕೆ ಓಡಿದ್ವಿ. ಸಾಕ್ಷಾತ್ ಶಂಕರ ಭಗವತ್ಪಾದರೇ ಸ್ಥಾಪಿಸಿದ್ದಾರೇಂತ ಐತಿಹ್ಯವಿರೋ ಅಲ್ಲಿಯ ಮುದ್ದಾದ ಸ್ಫಟಿಕಲಿಂಗಾನ ದೀಕ್ಷಿತರ ಮುಖ್ಯಸ್ಥರೇ ಗರ್ಭಗುಡಿಯಿಂದಾಚೆಗೆ



ತಂದಿಟ್ಕೊಂಡು ತುಂಬಾ ಶ್ರದ್ಧೆಯಿಂದ ರುದ್ರಾಭಿಷೇಕ ಮಾಡ್ತಿದ್ದರು. ಆಮೇಲೆ ಅತೀ ರಮ್ಯವಾದ ಮಹಾ ಮಂಗಳಾರತಿಯ ಕಲಾಪವು ಅನೇಕ ಚಿಕ್ಕ ದೊಡ್ಡ ಕಂಚಿನ ತಾಳಗಳು ಹಾಗೂ ಅಲ್ಲಿದ್ದ ದೈತ್ಯ ಗಾತ್ರದ ಎರಡು ಬಂಗಾರದ (?) ಘಂಟಾನಿನಾದವನ್ನೂ ಮೀರಿ ಕೇಳಿಸುತ್ತಿದ್ದ ಮಂತ್ರಘೋಷದೊಂದಿಗೆ ಪ್ರಾರಂಭವಾಯಿತು. ನಾನಂತೂ ಬೆರಗು ಬೆರಗಾಗಿ ಆ ವೈಭವಾನ ನೋಡ್ತಾ ಇದ್ದಾಗ್ಲೇ, ಮಂಗಳಾರತಿಯ ಬೆಳಕಲ್ಲಿ ದೇವರ ವಿಗ್ರಹದ ಹಿಂದಿದ್ದ ಒಂದು ತೆರೆಯನ್ನ ಅರ್ಚಕರ ಕೈ, ಚಕ್ಕಂತ ಸರಿಸಿದ್ದು ಕಾಣಿಸಿತು! ಆದರದು ಸರಿಸಿದ್ದಕ್ಕಿಂತಾ ಬೇಗ ಮತ್ತೆ ಮುಚ್ಚಿಕೊಂಡೂ ಬಿಟ್ಟಿತ್ತೂನ್ನಿ! ಅಷ್ಟರಲ್ಲಿ ಮೂರ್ತಿಯ ಹಿಂದೆ ಇದ್ದ ಆ ಕಗ್ಗತ್ತಲೇಲಿ ನೇತುಹಾಕಿದ್ದಂತಿದ್ದ, ಅವರೆಲ್ಲರೂ ಭಕ್ತಿಯಿಂದ ಕರೆಯೋ ''ತಂಗ ವಿಲ್ವಂ'' (ಚಿನ್ನದ ಬಿಲ್ವದೆಲೆ)ನ ಚಿಕ್ಕ ಚಿಕ್ಕ ಎಲೆಗಳನ್ನು ಉದ್ದಕ್ಕೆ ಇಳಿಬಿಟ್ಟಿದ್ದಂತಿದ್ದ ತೋರಣದ ಪರದೆಯೂ ಕ್ಷಣಾರ್ಧದಲ್ಲಿ ಫಳ್ ಅಂತ ಮಿಂಚಿ ಮಾಯವಾಯಿತು! ನಿಜಕ್ಕೂ ಚಿ.ರ.ದ ಬಗ್ಗೆ ನಾನೆಣಿಸಿದ್ದಕ್ಕಿಂತಲೂ ಇದು ವಿಪರೀತ ಬೇರೆಯೇ ಆಗಿದ್ದರೂ ಚಿ.ರ.ನ ಒಂದು ವಿಧದಲ್ಲಿ ಬೇಧಿಸಿದ್ದಕ್ಕೆ ನಂಗೆ ಮಾತ್ರಾ ಬಲು ಖುಶಿಯಾಗಿ ಬಿಡ್ತು!

ಮಾರನೆಯ ದಿನ ಬೆಳಗ್ಗೆ, ಹೊತ್ತಿಗೆ ಮುಂಚೆಯೇ ಎದ್ದು ಎಂ.ಕೆ.ಎಸ್. ದೀಕ್ಷಿತರನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿ ತಂಗ ವಿಲ್ವಂನ ಬಗ್ಗೆ ಹೆಚ್ಚಿಗೆ ಮಾಹಿತಿ ಪಡೆಯೋಣಾಂತ ಮತ್ತೆ ಶಿವಕಾಮಿಯ ಗುಡಿ ಕಡೆ ದೌಡಾಯಿಸಿದೆ. ''ಈಗಿನ ಕಾಲದಲ್ಲೂ ನಾವು ಹೇಳುವ ಮಾತನ್ನು ಚಾಚೂ ತಪ್ಪದೆ ಕೇಳುವವರಿದ್ದಾರಲ್ಲ!'' ಎಂದು ಸಂತೋಷಪಟ್ಟ ಆತ (ಅವರಿಗೇನು ಗೊತ್ತು ನನ್ನ ಮತ್ತು ಚಿ.ರ.ದ ನಡುವೆ ದೀರ್ಘಕಾಲದಿಂದಲೂ ಕಾಡ್ತಿದ್ದ ಅನುಬಂಧ!), ನಾನು ಕೇಳಿದ್ದೇ ತಡ ಮತ್ತಷ್ಟು ತಪಶೀಲು ಒದಗಿಸಿದರು.

''ನಿರ್ವಿಕಲ್ಪ, ನಿರ್ಗುಣ, ನಿರಾಕಾರ ಬ್ರಹ್ಮನಲ್ಲಿ ಸದಾ ನೆಲೆಯಾಗಿರುವ ಪರಶಿವನ ದಿವ್ಯ ಸಾನಿಧ್ಯವೇ ಚಿದಂಬರಂನ ಆಕಾಶಲಿಂಗ. ಪಾಂಚಭೌತಿಕತತ್ವದಲ್ಲಿನ ಆಕಾಶತತ್ವದ ಸಾಂಕೇತಿಕ ಪ್ರತಿನಿಧಿಯೂ ಅದೇ! ಆ ಆಕಾಶಲಿಂಗದ ದಿವ್ಯ ಉಪಸ್ಥಿತಿಯ ಪುರಾವೆಯೇ ಆ ಹೊನ್ನಿನ ಬಿಲ್ವದೆಲೆಗಳು. ಅದನ್ನೇ ಚಿದಂಬರ ರಗಸಿಯಮ್ ಎಂದು ಕರೆಯೋದು! ಆ ನಿರ್ಗುಣ, ನಿರಾಕಾರ ಪರಬ್ರಹ್ಮನನ್ನೇ ನಮ್ಮ ಹೃದಯಕಮದಲ್ಲಿರುವ ದಹರಾಕಾಶದಲ್ಲೂ ಕಾಣಲು ಪ್ರಯತ್ನಿಸುವುದು ಅದ್ವೈತ ಸಾಧನೆಯ ಪರಮೋಚ್ಚ ಗುರಿ, ಬ್ರಹ್ಮ ಸಾಕ್ಷಾತ್ಕಾರವೆಂದರೆ ಅದೇ'' ಅಂತೆಲ್ಲಾ ಸವಿವರವಾಗಿ ಹೇಳಿದರು. ನನಗೆ ಅದೆಲ್ಲಾ ಗ್ರೀಕ್ ಒಂದೇ ಅಲ್ಲ, ಲ್ಯಾಟನ್ನಿನಂತೆಯೂ ಕೇಳಿಸಿತು.

ಕಾರಿನ ಕಡೆ ಹಾಗೇ ಹೆಜ್ಜೆ ಹಾಕ್ತಾ ಹಾಕ್ತಾ, ವಾಪಸ್ ಹೋದ್ಮೇಲೆ ಚಿ.ರ.ದ ಬಗ್ಗೆ ಎಲ್ಲರೂ ಮತ್ತೆ ಕೇಳಿದಾಗ ಏನೂಂತ ಹೇಳಲಿ ಅಂತ ಯೋಚನೇ ಬಂತು. ಆದರೆ ಹಿಂದೇನೇ – ''ಅಯ್ಯೋ ಆದೇನ್ ಮಹಾ? ಈಗ ತಾನೇ ಕೇಳಿದ ಚಿ.ರ.ದ ಚಿಕ್ಕಪ್ಪನಂಥಾ ಎಂ.ಕೆ.ಎಸ್. ದೀಕ್ಷಿತರ ಕ್ಲಾಸೇ ಇದೆಯಲ್ಲ! ಕೇಳ್ದೋರಿಗದನ್ನೇ ಯಥಾವತ್ತಾಗ್ ಇಳಿಸಿಬಿಟ್ರಾಯ್ತೂಂತ – ಹೊಳೆದೂ ಬಿಡ್ತು! ಎಲ್ಲಾ ಆ ತಿಲ್ಲೈ ನಟರಾಜನ ಮಹಿಮೆಯೇ ಇರಬೇಕು.



# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

-1-

ಅತಿಯಾದ ತೂಕ ಆರೋಗ್ಯಕ್ಕೆ ಮಾರಕ
ಅನ್ನುತ್ತದೆ ವೈದ್ಯ ಲೋಕ
ಈ ಮಾತಿಗೊಂದು ವಿನಾಯಿತಿ
ಮಹಾಕಾಯ ವಿನಾಯಕ
ಸಿಕ್ಕಾಪಟ್ಟೆ ತಿಂತಾನೆ
ವಾಕಿಂಗ್ ಬೇಡ ಅಂತಾನೆ
ಆದರೂ ಆರೋಗ್ಯವಂತ ಗಣಪತಿ
ಏಕೆಂದರೆ ಹಾಸ್ಯರಸಕ್ಕೆ
ಈತನೇ ಅಧಿಪತಿ!

-2-

ಪಟಾಕಿಯಂತೆ ಹಚ್ಚಿ ಎಸೆಯಬೇಕು
ಸಿಡಿದರೆ ಅದು ಜೋಕು
ಸಿಡಿಯಲಿಲ್ಲವೆಂದು ಕೆದಕಿದರೆ
ನಿಮ್ಮ ಮುಖಕ್ಕೇ
ಸಿಡಿದೀತು ಜೋಕೆ!

-3-

ಹಾಸ್ಯವನ್ನು ನಾವು
ವಿವರಿಸಬಾರದು
we ವರಿಸಬಾರದು
ಓದಿದ, ಕೇಳಿದ ನೀವು
You ವರಿಸಬೇಕು!

-4-

ಸಹಜವಾಗಿ ಹರಿದರೆ
ಹಾಸ್ಯಮಯ
ಒತ್ತಾಯಕ್ಕೆ ಬರೆದರೆ
ಹಾಸ್ಯ ಮಾಯ!

-5-

ಹಾಸ್ಯ ಕವನ ಓದಿದಾಗ
ನಗಿಸಿದ್ದಕ್ಕೆ ಚಪ್ಪಾಳೆ
ಗಂಭೀರ ಕವನ ಓದಿದಾಗ
ಮುಗಿಸಿದ್ದಕ್ಕೆ ಚಪ್ಪಾಳೆ!



# ಕರಭಾರ

**- ಎಂ.ಎಸ್. ನರಸಿಂಹಮೂರ್ತಿ**

ಎಷ್ಟು ಕಟ್ಟಿದ್ರೂ ಮುಗಿಯೋಲ್ಲ. ಹುಟ್ಟಿದಾಗಿಂದ ಸಾಯೋವರೆಗೂ ಕಟ್ತಾನೇ ಇರ್ಬೇಕು. ಹುಟ್ಟಿದಕ್ಕೂ ಟ್ಯಾಕ್ಸು, ಸತ್ತಿದ್ದಕ್ಕೂ ಟ್ಯಾಕ್ಸು, ಕೆಲ್ಸಕ್ಕೆ ಸೇರಿದ್ರೆ ಟ್ಯಾಕ್ಸು, ಸಂಬಳಕ್ಕೂ ಟ್ಯಾಕ್ಸು, ಕೊತ್ತಂಬರಿಸೊಪ್ಪು ತಗೊಂಡ್ರೂ ಟ್ಯಾಕ್ಸು.

ಏನಿದು ಟ್ಯಾಕ್ಸು?

ಎಷ್ಟೋ ದೇಶಗಳಲ್ಲಿ ಟ್ಯಾಕ್ಸೇ ಇಲ್ಲ. ಗಲ್ಫ್ ಕಂಟ್ರೀಸಲ್ಲಿ ಇನ್‌ಕಂಟ್ಯಾಕ್ಸ್‌ನ ಸುದ್ದೀನೇ ಇಲ್ಲ. ಪೋರ್ಟ್‌ಲ್ಯಾಂಡ್‌ನಲ್ಲಿ ಸೇಲ್ಸ್ ಟ್ಯಾಕ್ಸ್ ಇಲ್ಲ. ಆದ್ರೂ ನಮ್ಮಲ್ಲಿ ಟ್ಯಾಕ್ಸ್ ವಿಪರೀತ. ಟ್ಯಾಕ್ಸಿನ ಶೂಲಕ್ಕೆ ಸಿಗದೆ ಇರೋ ಪ್ರಾಣೀನೇ ಇಲ್ಲ.

ನಮ್ಮಲ್ಲಿ ಎರಡು ಐಟಂ ಬಹಳ ಕಷ್ಟದ್ದು. ಒಂದು ತೆರಿಗೆ, ಇನ್ನೊಂದು ಹೆರಿಗೆ. ತೆರಿಗೆ ಆದ್ರೆ ಜೇಬಿಗೆ ಕನ್ನ, ಹೆರಿಗೆ ಆದ್ರೆ ಹೊಟ್ಟೆಗೆ ಕನ್ನ! ಎರಡೂ ಕೂಡ ಖರ್ಚಿನ ಬಾಬತ್ತುಗಳೇ. ಎರಡೂ ಕೂಡ ಕಷ್ಟದ ಕಣ್ಣೀರು ತರ್ಸೋ ಐಟಂಗಳೇ. ಆದರೆ ವಿಧಿ ಇಲ್ಲ. ಎರಡನ್ನೂ ಇಟ್ಕೊಳ್ಳಲೇ ಬೇಕಲ್ಲಾ? ಹಳೇ ಟ್ಯಾಕ್ಸನ್ನ ಆಚೆಗೆ ನೂಕಿ, ಹೊಸ ಟ್ಯಾಕ್ಸನ್ನ ಸರ್ಕಾರ ತರ್ತಾ ಇದೆ. ಜುಲೈ ಒಂದರಿಂದ ಜಿ.ಎಸ್.ಟಿ. ಅಂತ ಹೊಸ ಟ್ಯಾಕ್ಸ್ ಬರ್ತಿದೆ. ಸುಂದರವಾಗಿ ಡ್ರಸ್ ಮಾಡ್ಕೊಂಡು ಮನೆ ಮುಂದೆ ಬಂದು ಅದು ನಿಲ್ಲುತ್ತೆ. ನೀನು 26 ಟ್ಯಾಕ್ಸ್‌ಗಳನ್ನ ಕಟ್ಬೋವಸ್ಬಿಲ್ಲ. ನನ್ನ ಮಾತ್ರ ಚೆನ್ನಾಗಿ ನೋಡ್ಕೋ ಸಾಕು ಅಂತ ಹೇಳುತ್ತೆ. ಇದನ್ನು ಕೇಳಿದ ನಮ್ಮ ವಿಶ್ವನಿಗೆ ಗಾಬರಿ!

''ಜಿ.ಎಸ್.ಟಿ. ಸ್ವಾಮಿಗಳೇ, ನಿಮ್ಮ ಬದಲು ಇದ್ದ ಟ್ಯಾಕ್ಸ್‌ಗಳು ಯಾವ್ಯಾವ್ವು?'' ಎಂದು ಕೇಳಿದ. ಆಗ ಜಿ.ಎಸ್.ಟಿ. ಸಾಹೇಬ್ರು ಹೇಳಿದರು. ನೋಡು ಮುಂಚೆ ನೀನು ಸೇಲ್ಸ್ ಟ್ಯಾಕ್ಸ್ ಕಟ್ತಾ ಇದ್ದೆ, ವ್ಯಾಟು, ಜೂಜು ತೆರಿಗೆ, ಲಾಟರಿ ತೆರಿಗೆ, ಲಕ್ಷುರಿ ತೆರಿಗೆ, ಎಂಟ್ರಿ ಫೀಸ್, ಎಲ್ಲಾ ಕಟ್ತಾ ಇದ್ದೆ.

''ಅಂದ್ರೆ ಒಂದೊಂದು ರಾಜ್ಯದಲ್ಲಿ ಒಂದೊಂದು ತೆರಿಗೆ ಇತ್ತು''.

''ಹೌದು. ಟೋಲ್ ಗೇಟ್‌ಗಳ ಮುಂದೆ, ಸುಂಕದಕಟ್ಟೆಗಳ ಮುಂದೆ ಸಾಲು ಸಾಲಾಗಿ ಲಾರಿಗಳು ನಿಂತಿರೋವು. ಎಷ್ಟೋ ಜನ ಲಾರಿ ಡ್ರೈವರ್‌ಗಳು ಲಾರಿಗಳಲ್ಲೇ ಮುದುಕರಾಗಿಬಿಡೋರು. ಹುಡುಗನಾಗಿ ಲಾರಿ ಏರಿದವನು ಮುದುಕನಾಗಿ ಲಾರಿ ಇಳಿದು ಮನೆಗೆ ಹೋಗ್ತಾ ಇದ್ದ. ಅದಕ್ಕೆಲ್ಲ ಈಗ ಕಡಿವಾಣ ಬಿದ್ದಿದೆ. ಕಾರಣ ಜಿ.ಎಸ್.ಟಿ., ಅದು ನಾನೇ ಎಂದು ಜಿ.ಎಸ್.ಟಿ. ಸಾಹೇಬ್ರು ಮೀಸೆ ತಿರುವಿದರು.

''ನಿಮ್ಮನ್ನ ನಂಬ್ಕೊಂಡ್ರೆ ನಮಗೆ ಏನ್ ಅನುಕೂಲ ಇದೆ?

''ಬೇರೆ ಯಾವ ಟ್ಯಾಕ್ಸನ್ನು ನೀವು ಕಟ್ಬೋಷ್ಬಿಲ್ಲ. ನನ್ನ ನಂಬಿ. ನನಗೇ ಕಟ್ಟಿ. ಏನ್ ಕಟ್ಟಬೇಕಾದ್ರೂ ನನಗೆ ಕಟ್ಟಿ.

''ತಾಳಿ ಕಟ್ಟಬೇಕಾದ್ರೂ ನಿಮಗೇ ಕಟ್ಬೋದೇನು? ಏಕೆಂದ್ರೆ ಹೆಂಡ್ತಿ ಕೂಡ ಟ್ಯಾಕ್ಸೇ.

''ಬೇಡ. ತಾಳೀನ ಹೆಂಡ್ತಿಗೆ ಕಟ್ಟಿ, ಟ್ಯಾಕ್ಸ್‌ನ ನನಗೆ ಕಟ್ಟಿ.



ವಿಶ್ವ ಯೋಚನೆ ಮಾಡಿದ. ಹೆಂಡ್ತಿ ಕೂಡ ಒಂದು ರೀತಿ ಟ್ಯಾಕ್ಸ್ ಇದ್ದ ಹಾಗೆ. ಅವಳನ್ನ ಸುಧಾರಿಸೋ ಹೊತ್ತಿಗೆ ಎಷ್ಟೋ ಕಷ್ಟ ಆಗಿರುತ್ತೆ. ಮದುವೆ ಸಮಯದಲ್ಲೂ ಎಲ್ಲಕ್ಕೂ ಟ್ಯಾಕ್ಸ್ ಕಟ್ಟೀವಿ. ವರದಕ್ಷಿಣೆ ಕೂಡ ಒಂದು ರೀತಿ ಟ್ಯಾಕ್ಸ್ ಇದ್ದ ಹಾಗೇನೆ. ಮೊದಲನೆ ರಾತ್ರಿ ಕೂಡ ಟ್ಯಾಕ್ಸೇ. ಅವಳು ತಂದು ಕೊಡೋ ಹಾಲಿಗೂ ಟ್ಯಾಕ್ಸ್ ಬಿದ್ದಿರುತ್ತೆ. ಈ ಟ್ಯಾಕ್ಸ್‌ಗಳ ಸಾಮ್ರಾಜ್ಯದಲ್ಲಿ ಟ್ಯಾಕ್ಸ್ ಇಲ್ಲದೆ ಬದುಕಿ ಬಾಳೋದು ಹೇಗೆ?

ಹಿಂದಿನ ಕಾಲದಲ್ಲಿ ಋಷಿ ಮುನಿಗಳು ಗೆಡ್ಡೆ ಗೆಣಸು ತಿಂದುಕೊಂಡು ಬದುಕ್ತಾ ಇದ್ರು. ಅವರಿಗೆ ಟ್ಯಾಕ್ಸ್‌ನ ತೊಂದರೆ ಇರಲಿಲ್ಲ. ರಾಜ ಮಹಾರಾಜರು ಕಪ್ಪ ಕೇಳ್ತಿದ್ರು. ಕಪ್ಪ ಅಂತ ರೈತರೇ ತಗೊಂಡು ಹೋಗಿ ಕೊಡ್ತಾ ಇದ್ರು. ರಾಜ ಡಿಮ್ಯಾಂಡ್ ಮಾಡ್ತಾ ಇರಲಿಲ್ಲ. ರೈತ ನೊಂದು ಕೊಡ್ತಾ ಇರಲಿಲ್ಲ. ಆದರೆ ಈಗ ಮನೆ ಬಾಗಿಲಿಗೇ ಟ್ಯಾಕ್ಸ್ ಆಫೀಸು ನೋಟೀಸು. ಜಗ್ಗಲಿಲ್ಲ ಅಂದ್ರೆ ವಾರೆಂಟು.

ಜಿ.ಎಸ್.ಟಿ. ಸಾಹೇಬ್ರನ್ನ ವಿಶ್ವ ಕೇಳಿದ

''ಹೌದು ಸಾಹೇಬ್ರೆ, ಈಗ ಪೆಟ್ರೋಲು, ಡೀಸೆಲ್ ಬಗ್ಗೆ ಟ್ಯಾಕ್ಸ್ ಹಾಕ್ತಾ ಇದ್ದೀರಲ್ಲ ಅದೂ ಕೂಡ ಜಿ.ಎಸ್.ಟಿ. ಒಳಗೆ ಸೇರಿಕೊಳ್ಳುತ್ತಾ?''

''ಇಲ್ಲ, ಇಲ್ಲ. ಅದು ಎಣ್ಣೆ ಬಾಬ್ತು. ಎಣ್ಣೆ ಸೇರೋದಿಲ್ಲ. ಅದು ಆಯಾ ರಾಜ್ಯಕ್ಕೆ ಬಿಟ್ಟಿದ್ದು. ಯಾಕಂದ್ರೆ ಅದರ ವಹಿವಾಟು ತುಂಬಾ ಜಾಸ್ತಿ ಇರುತ್ತಲ್ಲ. ರಾಜ್ಯದವರೇ ನೇರವಾಗಿ ಸುಂಕ ತಗೊಳ್ಳಿ ಅಂತ ಬಿಟ್ಟಿದ್ದೀವಿ.''

''ಹಾಗಾದ್ರೆ, ಲಿಕ್ಕರ್, ಬ್ರಾಂದಿ, ಸಾರಾಯಿ, ಈ ಟ್ಯಾಕ್ಸ್‌ಗಳು ಜಿ.ಎಸ್.ಟಿ.ನಲ್ಲಿ ಬರುತ್ತಾ?

''ಇಲ್ಲ, ಇಲ್ಲ, ಇಲ್ಲ. ಅವೂ ಕೂಡ ಎಣ್ಣೆ ಬಾಬ್ತು. ಅದು ರಾಜ್ಯಕ್ಕೆ ಬಿಟ್ಟಿದ್ದು. ಯಾರು ಎಷ್ಟು ಬೇಕಾದ್ರೂ ಟ್ಯಾಕ್ಸ್ ಹಾಕ್ಕೋಬಹುದು, ಹೊಟ್ಟೆಗೂ ಹಾಕ್ಕೋಬಹುದು.

ಅಲ್ಲಿಗೆ ಎಣ್ಣೆ ಜಿ.ಎಸ್.ಟಿ. ಯಿಂದ ದೂರ ಇದೆ ಅಂತ ಆಯ್ತು. ಗಾಡಿಗೆ ಹಾಕೋ ಎಣ್ಣೆ ಮೇಲೂ ನಿಯಂತ್ರಣ ಇಲ್ಲ. ಬಾಡಿಗೆ ಹಾಕೋ ಎಣ್ಣೆ ಮೇಲೂ ನಿಯಂತ್ರಣ ಇಲ್ಲ. ಇವೆರಡರಿಂದಾನೇ ಸರ್ಕಾರಕ್ಕೆ ವಿಪರೀತ ಆದಾಯ ಬರ್ತಾ ಇರೋದು. ಯಾವುದೇ ಬಜೆಟ್ ಬಂದ್ರೂ, ಮೊದಲು ಟ್ಯಾಕ್ಸ್ ಬೀಳೋದೇ ತಂಬಾಕು ಉತ್ಪನ್ನಗಳ ಮೇಲೆ. ಸಿಗರೇಟ್ ಸೇದಬಾರದು ಅಂತಾರೆ. ಆದರೆ ತಂಬಾಕು ಬೆಳೆಯೋಕೆ ಸಾಲ ಕೊಡ್ತಾರೆ. ಸಿಗರೇಟ್ ಸೇದಬಾರದು ಅಂತಾರೆ. ಸಿಗರೇಟು ಫ್ಯಾಕ್ಟರಿಗೆ ಲೈಸೆನ್ಸ್ ಕೊಡ್ತಾರೆ.

''ಈ ಟ್ಯಾಕ್ಸ್‌ಗಳೇ ಇಲ್ಲದಿರುವ ಲೋಕ ಯಾವುದಿದೆ?'' ಎಂದು ವಿಶ್ವ ಕೇಳಿದ.

''ಆ ರೀತಿ ಬೇರೆ ಲೋಕ ಇಲ್ಲ. ಇರೋದರಲ್ಲಿ ಜಿ.ಎಸ್.ಟಿ.ನೇ ಬೆಸ್ಟು. ನೀನು ಜುಲೈ 1ನೇ ತಾರೀಖು ಸರ್ವೀಸ್ ಟ್ಯಾಕ್ಸ್‌ನಿಂದ ಜಿ.ಎಸ್.ಟಿ. ಟ್ಯಾಕ್ಸ್‌ಗೆ ಮೈಗ್ರೇಟ್ ಆದರೆ ಬದುಕ್ತೀಯಾ, ಇಲ್ಲಾಂದ್ರೆ ದೇವರೇ ಗತಿ. ಎಂದು ಹೇಳಿ ಜಿ.ಎಸ್.ಟಿ. ಅಂತರ್ಧಾನನಾದ.



ವಿಶ್ವ ತಲೆ ಮೇಲೆ ಕೈ ಹೊತ್ತ. ಮಡದಿ ಬಂದಳು.

''ರೀ, ಕಸ ಎತ್ತೋಕೆ ಟ್ಯಾಕ್ಸ್ ಕೊಡ್ತೀವಲ್ಲ, ಅವರು ಯಾಕ್ರೀ ಕಸ ಎತ್ತೋಲ್ಲ?

''ಗೊತ್ತಿಲ್ಲಮ್ಮ

''ವಾಟರ್ ಟ್ಯಾಕ್ಸ್ ಕಟ್ತೀವಲ್ಲ, ನೀರ್ ಯಾಕ್ರೀ ಸರಿಯಾಗಿ ಬಿಡಲ್ಲ?

ವಿಶ್ವ ಸುಮ್ಮನಿದ್ದ.

''ಕರೆಂಟ್ ಬಿಲ್ ಕಟ್ತೀವಲ್ಲ, ಕರೆಂಟ್ ಯಾಕ್ರೀ ನೆಟ್ಟಗೆ ಕೊಡಲ್ಲ?

ವಿಶ್ವ ಮಾತಾಡಲಿಲ್ಲ.

''ಊಟ ಹಾಕ್ತೀಯೇನು? ಟೈಂ ಆಯ್ತು ಅಂದ.

''ಇಲ್ಲ ಟ್ಯಾಕ್ಸ್‌ಗಳು ಜಾಸ್ತಿ ಆಗಿದೆ ರೀ. ನಮ್ಮ ಕ್ಯಾಂಟೀನ್ ಶುರುವಾಗ್ತಿದೆಯಂತೆ. ಐದು ರೂಪಾಯಿಗೊಂದು ತಿಂಡಿ. ಹತ್ತು ರೂಪಾಯಿಗೊಂದು ಊಟ. ಅಲ್ಲೇ ಹೋಗೋಣ.

''ಯಾವಾಗ? ಎಂದ ವಿಶ್ವ.

''ಜುಲೈ ಫಸ್ಟ್‌ನಿಂದ.

''ಅಲ್ಲಿವರೆಗೆ? ವಿಶ್ವನಿಗೆ ಗಾಬರಿ.

''ಅಲ್ಲಿವರೆಗೂ ಹಣ್ಣು ಹಂಪಲು ತಿಂದುಕೊಂಡು ಆರಾಮಾಗಿರೋಣ

ವಿಶ್ವನಿಗೆ ಶಾಕ್.



# ಕಾಂಗ್ರೆಸ್‌ನ ಜನ್ಮ ಜಾತಕ

**- ಎಂ.ಕೆ. ಭಾಸ್ಕರ ರಾವ್**

**ಬೆ**ಳಗಾಗೆದ್ದ ತಕ್ಷಣದಲ್ಲಿ ಮಾಡಬೇಕಾದ ಕೆಲಸವೆಂದರೆ ಅಂಗಡಿಗೆ ಓಡುವುದು, ಟೂಥ್ ಪೇಸ್ಟ್ ಕೊಂಡು ಓಡುತ್ತೋಡುತ್ತ ತಿರುಗಿ ಬರುವುದು ಎಂದು ರಾತ್ರಿ ಮಲಗುವಾಗಲೇ ನಿರ್ಧರಿಸಿದ್ದೆ. ರಾತ್ರಿ ಹತ್ತರ ಬಸ್ಸಿಗೆ ಊರಿಗೆ ಹೊರಟಿದ್ದ ಮಗರಾಯ, ಸಣಕಲಾಗಿದ್ದ ಪೇಸ್ಟಿನ ಟ್ಯೂಬನ್ನು ಬ್ಯಾಗಿಗೇರಿಸಿಕೊಂಡು ಹೋಗಿದ್ದ. ಆತ ಹೋದ ನಂತರ ಬ್ರಷ್ ಮಾಡಲು ಹೋದಾಗಲೇ ಮನೆಯಲ್ಲಿ ಪೇಸ್ಟಿಲ್ಲ ಎನ್ನುವುದು ಗೊತ್ತಾಗಿದ್ದು.

**ಶೇಂಗಾ ಬೀಜವನ್ನು ಎರಡಾಗಿ ಹೋಳು ಮಾಡಿ ಅದಕ್ಕೆ ಲಘು ಮಸಾಲೆ ಸವರಿದರೆ ಹೇಗೆಂಬುದೇ ಅವರಿಗೆ ಹೊಳೆದ ಹೊಸತು**

ನಿತ್ಯವೂ ಅಂಗಡಿಗೆ ಅದು ಇದು ಬೇಕೆಂದು ಹೋಗುವ ಅವಳಿಗೆ ಪೇಸ್ಟು ತರುವುದು ಹೊಳೆದಿರಲಿಲ್ಲ. ನಿತ್ಯವೂ ಸಿಗರೇಟಿಗೆಂದು ಅಂಗಡಿಗೆ ಎಡತಾಕುವ ನನಗೂ ಹೊಳೆದಿರಲಿಲ್ಲ. ಮಗರಾಯ ಎಂದೂ ಅಂಥ ಜವಾಬ್ದಾರಿ ಸ್ವಂತ ಬುದ್ಧಿಯಿಂದ ನಿಭಾಯಿಸಿದ ಇತಿಹಾಸದವನಾಗಿರಲಿಲ್ಲ. ಇಷ್ಟಕ್ಕೂ ಅವನಿಗೆ ಅದೊಂದು ಅಗತ್ಯ ವಸ್ತು ಎಂದೆನಿಸಿಲ್ಲ ಎನ್ನುವುದು ನನ್ನ ಅನುಮಾನ. ಹಲ್ಲುಜ್ಜದೆ ಮಲಗುವ, ಬೆಳಗ್ಗೆ ಗಡಿಬಿಡಿಯಲ್ಲೆದ್ದು ಹಲ್ಲುಜ್ಜದೆಯೂ, ಕಡೇ ಪಕ್ಷ ಸ್ನಾನ ಮಾಡದೆಯೂ ಧಡಭಡ ಹೊರಡುವ ಅವನನ್ನು ಆ ವಿಚಾರದಲ್ಲಿ ನೆಚ್ಚುವುದು ಸಾಧ್ಯವೇ ಇರಲಿಲ್ಲ.

''ನಿಮಗೆ ಒಂಚೂರೂ ಜವಾಬ್ದಾರಿ ಇಲ್ಲಾರೀ. ಸಿಗರೇಟಿಗಾಗಿ ಹತ್ತು ಸಲ ಬೇಕಾದ್ರೂ ಅಂಗಡಿಗೆ ಹೋಗ್ತೀರಿ, ಇಂಥದಕ್ಕೆಲ್ಲ ಅಂಗಡಿಗೆ ಹೋಗುವುದೆಂದರೆ ನಿಮಗೆ ಆಗೋಲ್ಲ'' ಎಂದು ಅವಳು ಅತ್ತ ಮುಖ ಮಾಡಿ ಮಲಗುವ ಮುನ್ನ ಮಂಗಳಾರತಿ ಮಾಡಿದ್ದಳು. ಹಾಗಾಗಿ ಬೆಳಗಾಗೆದ್ದ ತಕ್ಷಣ, ಕಾಫಿ ಕುಡಿಯುವ ಪೂರ್ವದಲ್ಲೇ ಪೇಸ್ಟು ತರುವ ಸಂಕಲ್ಪ ಮಾಡಿದ್ದೆ. ಬೆಳಗಾಯಿತು, ಆಗದೇ ಇರುತ್ತದೆಯೇ...? ಬೆಳಕು ಹರಿಸುವ ಕೆಲಸವನ್ನು ಸೂರ್ಯನಲ್ಲದೆ ಇನ್ಯಾರೇ ಒಪ್ಪಿಕೊಂಡಿದ್ದರೂ ಎಷ್ಟೋ ದಿನಗಳಲ್ಲಿ ಬೆಳಕೇ ಹರಿಯುತ್ತಿರಲಿಲ್ಲ. ಆ ಕ್ಷಣದಲ್ಲಿ ಆ ಸೂರ್ಯನ ಆ ನಿಯತ್ತೂ ಒಂಥರಾ ಸಿಟ್ಟನ್ನು ಬರಿಸಿತು.

ಏಳುವ ಹೊತ್ತಿಗೆ ಏಳಾಗಿತ್ತು. ಪೇಸ್ಟಿನ ವಿಚಾರ ಮರೆತಿರಲಿಲ್ಲ. ಫ್ಲ್ಯಾಟ್‌ನ ಬಾಲ್ಕನಿಯಲ್ಲಿ ನಿಂತು ಅಷ್ಟು ದೂರದಲ್ಲಿರುವ ಶೆಟ್ಟರ ಅಂಗಡಿಯತ್ತ ನೋಡಿದೆ. ಬಾಗಿಲು ತೆರೆದಿರಲಿಲ್ಲ. ಮನೆ ಬಾಗಿಲಿಗೆ ಪತ್ರಿಕೆ ಬಂದಿತ್ತು. ಹೆಡ್‌ಲೈನ್ಸ್ ಮೇಲೆ ಕಣ್ಣಾಡಿಸುತ್ತ, ಶೆಟ್ಟಿ ಬಂದನೇ ಎಂದು ಆಗೀಗ ಕಣ್ಣು ಹಾಯಿಸುತ್ತ ಹೋದೆ. ''ಆ ಅಂಗಡೀನೇ ಆಗಬೇಕಾ... ಹತ್ತು ಹೆಜ್ಜೆ ಮುಂದೆ ಹೋದರೆ ಮಾರ್ವಾಡಿ ಅಂಗಡಿಯಿಲ್ಲವಾ... ನಿಮಗೊಂದು ನೆಪ...'' ಎಂದು ತನ್ನಷ್ಟಕ್ಕೇ ಎಂಬಂತೆ ಆಕೆ ಹೇಳಿಕೊಳ್ಳುತ್ತಿದ್ದುದು ಕೇಳಿಸಿದರೂ ನನಗ್ಯಾಕೋ ಶೆಟ್ಟಿ ಅಂಗಡಿಯದೇ ವ್ಯಾಮೋಹ.



ಅಸಲಿಗೆ ಕಾರಣವೂ ಇತ್ತು. ಇದ್ದೊಂದು ಸಿಗರೇಟು ಬೆಳಗ್ಗೆ ಉರಿದು ಹೋಗಿತ್ತು. ಮಾರ್ವಾಡಿಯದು ಸಕಲ ಸಾಮಗ್ರಿ ಮಳಿಗೆ ಹೌದಾದರೂ ಬೀಡಿ, ಸಿಗರೇಟು, ಗುಟ್ಕಾ ಮುಂತಾದವನ್ನು ಆತ ಮಾರುತ್ತಿರಲಿಲ್ಲ. ಅದಲ್ಲದೆ ಸಂಜೆಯ ಹೊತ್ತಿಗೆ ಅನಿವಾರ್ಯವಾಗಿ ಬೇಕಾಗುವ ಇಂಗು ಮಿಶ್ರಿತ ಕಾಂಗ್ರೆಸ್ ಸಿಗುವುದು ಶೆಟ್ಟಿ ಅಂಗಡಿಯಲ್ಲೇ ಆಗಿದ್ದರಿಂದ ಆ ಅಂಗಡಿ ಹೆಚ್ಚು ಆಪ್ಯಾಯಮಾನದ್ದಾಗಿತ್ತು.

ಅಷ್ಟೇ ಅಲ್ಲದೆ ಈಗ ಪೇಸ್ಟಿಗೆ ಎಂದು ಮಾರ್ವಾಡಿ ಅಂಗಡಿಗೆ ಪುನಃ ಸಿಗರೇಟಿಗೆ ಎಂದು ಶೆಟ್ಟಿ ಅಂಗಡಿಗೆ ಹೋಗುವುದು ವ್ಯಾವಹಾರಿಕವಾಗಿ ಸಮ್ಮತ ಎನಿಸಲಿಲ್ಲ. ಎರಡನೆ ಮಹಡಿಯಲ್ಲಿದ್ದ ನಮ್ಮ ಮನೆಗೆ ಲಿಫ್ಟ್ ಬೇರೆ ಇಲ್ಲ, ಮೆಟ್ಟಿಲು ಹತ್ತುವುದು ಇಳಿಯುವುದು ಮನಸ್ಸಿಗೆ ಹಿಡಿಸಲಿಲ್ಲ. ಹೆಂಡತಿಯಾಡುತ್ತಿದ್ದ ಮಾತೋ ಗೊಣಗಾಟವೋ ಕೇಳಿಸದವನಂತೆ ಹಾಲ್‌ಗೆ ಬಂದು ಟಿವಿ ಹಾಕಿದೆ.

ಕನ್ನಡದ ಟೀವಿಗಳದ್ದು ಆ ಜಾತಿಯಲ್ಲೇ ವಿಶೇಷ ಠೀವಿ. ಕನ್ನಡದ ಯಾವ ಚಾನೆಲ್‌ನ ಬೇಕಾದರೂ ಬೆಳ್ಳಂಬೆಳಗ್ಗೆ ಹಾಕಿ ನೋಡಿ. ತಲೆಯನ್ನು ಮೊಸರು ಗಡಿಗೆ ಮಾಡುವ ಬ್ರಹ್ಮಾಂಡ ಹಾವಳಿ ಚಾನೆಲ್‌ಗಳಲ್ಲಿ ನಡೆದಿರುತ್ತದೆ. ಒಂದರಲ್ಲಿ ವಾಸ್ತು ವಿಶೇಷ, ಇನ್ನೊಂದರಲ್ಲಿ ಜೋತಿಷ, ಮತ್ತೊಂದರಲ್ಲಿ ನಿತ್ಯ ಭವಿಷ್ಯ, ಮಗದೊಂದರಲ್ಲಿ ರಾಶಿ ಫಲ.. ಇವು ಇಲ್ಲದ ಟೀವಿಗಳಲ್ಲಿ ಯೋಗ ಕಲಿಸುವ ಸ್ವಾಮಿಗಳ ಹಾವಳಿ. ಅವರೆಲ್ಲರೂ ಒಂದಲ್ಲಾ ಒಂದು ಬ್ರ್ಯಾಂಡ್ ಹೆಸರಿನ ಔಷಧಿ ಮಾರುವ ಏಜೆಂಟರಂತೆ ಕಾಣಿಸುತ್ತಾರೆ. ಅವರ ಕಾರ್ಯಕ್ರಮ ಅಂತ್ಯವಾಗುವುದು ಅವರ ಅಂಗಡಿ ವಿಳಾಸ, ಫೋನ್ ನಂಬರಿನೊಂದಿಗೆ. ಮನಸ್ಸನ್ನು ಕೆಡಿಸುವ ಇಂಥ ಯಾವುದೇ ಒಂದು ಚಾನೆಲ್‌ನಲ್ಲಿ ಅರೆ ಕ್ಷಣವೂ ಗಮನ ಕೇಂದ್ರೀಕರಿಸುವುದು ಸಾಧ್ಯವೇ ಇಲ್ಲ ಎನಿಸುತ್ತದೆ ನನಗೆ. ನಿಮಗೆ ಹೇಗೋ ನನಗೆ ಗೊತ್ತಿಲ್ಲ.

ಆದರೂ ಟಿವಿಯನ್ನು ನೋಡಬೇಕಲ್ಲ. ಯಾಕೆ ನೋಡಬೇಕು ಎಂದು ನೀವು ಕೇಳಬಹುದು. ಹತ್ತು ಘಂಟೆಯಾಯಿತೆಂದರೆ ಆಕೆಯ ಅಡುಗೆ ಮನೆ ಕೆಲಸ ಮುಗಿಯುತ್ತದೆ. ನಿನ್ನೆ ಟೆಲಿಕ್ಯಾಸ್ಟ್ ಆದ ಬಹುತೇಕ ಎಲ್ಲ ಧಾರಾವಾಹಿಗಳ ರೀ ಟೆಲಿಕ್ಯಾಸ್ಟ್ ಶುರುವಾಗುವುದು ಹತ್ತಕ್ಕೆ. ನಂತರ ಒಂದರ ಬಳಿಕ ಇನ್ನೊಂದು. ರಾತ್ರಿ ಒಂದು ಚಾನೆಲ್‌ನಲ್ಲಿ ಒಂದು ಧಾರಾವಾಹಿಯನ್ನು ನೋಡುತ್ತಿದ್ದಾಗ ಇನ್ನೊಂದರಲ್ಲಿ ಪ್ರಸಾರ ಆಗುತ್ತಿರುವುದು ಮಿಸ್ ಆಗಿರುತ್ತದೆ. ಹಾಗೆ ಮಿಸ್ ಆಗಿರುವುದನ್ನು ಮನೆಯಲ್ಲಿರುವ ಮಿಸೆಸ್‌ಗಳೆಲ್ಲರೂ ನೋಡಿ ಆನಂದಿಸಲಿ ಎಂದೇ ರೀ ಟೆಲಿಕ್ಯಾಸ್ಟ್ ಆಗುತ್ತದೆ. ಇಂಥ ಅವಕಾಶವನ್ನು ನನ್ನಾಕೆ ಅಷ್ಟು ಸುಲಭಕ್ಕೆಲ್ಲ ತಪ್ಪಿಸಿಕೊಳ್ಳುವ ಗಿರಾಕಿ ಅಲ್ಲ.

ಹಾಗಾಗಿ ಟಿವಿ ನನ್ನ ಪಾಲಿಗೆ ಬೆಳಗ್ಗೆ ಏಳು ಘಂಟೆಯಿಂದ ಹತ್ತರವರೆಗೆ ಅಷ್ಟೆ. ರಾತ್ರಿ ಹನ್ನೊಂದರವರೆಗೂ ಒಂದಲ್ಲ ಒಂದು ಧಾರಾವಾಹಿ ಜೊತೆ ನನ್ನಾಕೆ, ಸಂಜೆಯಾಯಿತೆಂದರೆ ಅತ್ತ ಬಾಲ್ಕನಿಯಲ್ಲಿ ನನ್ನ ಜೊತೆ ಓಲ್ಡ್ ಮಾಂಕ್. ಅದಕ್ಕೂ ಒಂದು ಜೊತೆ ಬೇಕಲ್ಲ, ಆ ಜೊತೆಗಾರನೇ ಶೆಟ್ಟಿ ಅಂಗಡಿಯ ಕಾಂಗ್ರೆಸ್. ಈ ದಿನಮಾನಗಳಲ್ಲಿ ಬೇಕರಿ ಅಂಗಡಿಗಳಲ್ಲಿ ಅತ್ಯಧಿಕ ಪ್ರಮಾನದಲ್ಲಿ ಬಿಕರಿಯಾಗುವ ಅತ್ಯಂತ ಜನಪ್ರಿಯ ವಸ್ತುವೆಂದರೆ ಕಾಂಗ್ರೆಸ್ಸೇ. ಸರ್ವೆ ಮಾಡಿದರೆ ಅದಕ್ಕೇ ನಂಬರ್ ಒನ್ ಸ್ಥಾನ ಗ್ಯಾರಂಟಿ ಎನ್ನುವುದು ಖಾತ್ರಿ. ಆ ಅಸೂಯೆಯೇ



ಯಾವುದೇ ಸರ್ವೆ, ಸಮೀಕ್ಷೆ ನಡೆಯದಂತೆ ತಡೆದಿದೆ ಎಂದು ಕ್ಲಬ್ ದಿನಾಚರಣೆ ದಿವಸ ಶಂಭು ವಾದ ಮಾಡಿದ್ದ.

ಆ ಮಾತು ಅತ್ತ ಬಿದ್ದಿರಲಿ; ಈ ಕಾಂಗ್ರೆಸ್ ವಿಚಾರದಲ್ಲಿ ಎರಡು ಮಾತನ್ನು ಹೇಳುವುದು ಐತಿಹಾಸಿಕವಾದೊಂದು ದಾಖಲೆಯ ಕಾರಣವಾಗಿ ಪ್ರಸ್ತುತವಾಗಿದೆ. ಓದುಗ ಮಹಾಶಯರಲ್ಲಿ ಅನೇಕರಿಗೆ 1969ರಲ್ಲಿ ಘಟಿಸಿದ ಕಾಂಗ್ರೆಸ್ ಪಕ್ಷದ ವಿಭಜನೆಯ ಇತಿಹಾಸ ನೆನಪಿರಬಹುದು. ಆಗ ಇಂದಿರಾ ಗಾಂಧಿ ಪ್ರಧಾನಿ. ಮುರಾರಜಿ ದೇಸಾಯಿ ಹಣಕಾಸು ಖಾತೆಯನ್ನೂ ಹೊಂದಿದ್ದ ಉಪ ಪ್ರಧಾನಿ. ಕಾಂಗ್ರೆಸ್ ಹೋಳಾಗಿ ಹೋಯಿತು. ಮುಂದಿನದೆಲ್ಲ ರಾಜಕೀಯ ಇತಿಹಾಸದ ವಿದ್ಯಾರ್ಥಿಗಳಿಗೆ ಬಿಟ್ಟಿದ್ದು. ಆದರೆ ಕಾಂಗ್ರೆಸ್‌ನಲ್ಲಾದ ಹೋಳು ಕರಂಕುರುಂ ವಿಭಾಗದಲ್ಲಿ ಹೊಸದಾದೊಂದು ಆವಿಷ್ಕಾರಕ್ಕೆ ಕಾರಣವಾಯಿತು ಎನ್ನುವುದು ನಮ್ಮ ಅಂಗಡಿ ಶೆಟ್ಟಿ ಹೇಳುವ ಇತಿಹಾಸ.

ಈ ನಮ್ಮ ಮನೆ ಹತ್ತಿರ ಅಂಗಡಿ ಇಟ್ಟಿರುವ ಶೆಟ್ಟಿಯ ತಂದೆ, ಆಗ ಬೆಂಗಳೂರಿನ ಲಾಲ್‌ಬಾಗ್ ರಸ್ತೆ ಹತ್ತಿರ ಅಂಗಡಿ ಇಟ್ಟುಕೊಂಡಿದ್ದರಂತೆ. ತಾವೇ ತಯಾರಿಸಿದ ನಿಪ್ಪಟ್ಟು, ಹುರಿದ ಖಾರಾ ಶೇಂಗಾ, ಕಡ್ಲೆಕಾಯಿ-ಬೆಲ್ಲದ ಸರಿಪಾಕ ಸಮ್ಮಿಶ್ರಣದ ಚಿಕ್ಕಿ, ಹುರಿಗಾಳು, ಚಕ್ಕಲಿ, ಕೋಡುಬಳೆ ಮುಂತಾದವುಗಳನ್ನು ಸೀನಿಯರ್ ಶೆಟ್ಟರಷ್ಟು ಸೊಗಸಾಗಿ ಮಾಡುವವರು ಯಾರೂ ಇಲ್ಲ ಎಂದು ಅವರ ಅಂಗಡಿಯ ಉದ್ರಿ ಗಿರಾಕಿಗಳು ಹೊಗಳುತ್ತಿದ್ದಂತೆ. ಇದೆಲ್ಲ ನನಗೆ ಗೊತ್ತಾಗಿದ್ದು ಕುರುಂಕುರುಂ ಪರಿಕರವನ್ನು ಈಗ ಮಾರುತ್ತಿರುವ ಜ್ಯೂನಿಯರ್ ಶೆಟ್ಟಿಯಿಂದ.

ಸೀನಿಯರ್ ಶೆಟ್ಟರು ಹೊಸ ಹೊಸ ಆವಿಷ್ಕಾರಕ್ಕೆ ತುಡಿಯುತ್ತಿದ್ದಂತೆ. ಅಂಥ ಒಂದು ತುಡಿತದ ಫಲ, ಈಗ ನಾವೆಲ್ಲರೂ ಜಾತಿ-ಮತ-ಧರ್ಮ-ಕುಲ-ಕೋಮು ಮರೆತು ಪ್ರೀತಿಯಿಂದ ಚಪ್ಪರಿಸುವ ಕಾಂಗ್ರೆಸ್ಸು. ನಮ್ಮ ಕ್ಲಬ್‌ನಲ್ಲಿ ನಾನು ನೋಡಿದಂತೆ ಹೆಣ್ಮಕ್ಕಳ ಅತ್ಯಂತ ಪ್ರೀತಿಗೂ ಇದು ಪಾತ್ರವಾಗಿದೆ. ಅಂದಮೇಲೆ ಲಿಂಗ ತಾರತಮ್ಯದ ಕಾಟವೂ ಅದಕ್ಕೆ ಸೋಂಕಿಲ್ಲ ಎಂದಾಯಿತು! ನನಗೆ ಅತ್ಯಂತ ಪ್ರೀತಿಪಾತ್ರನಾಗಿರುವ ಜ್ಯೂನಿಯರ್ ಶೆಟ್ಟಿ ಹೇಳಿದ ಅವರ ತಂದೆ ಮಾಡಿದ ಆವಿಷ್ಕಾರದ ಮಾತು ನಿಜವೋ ಸುಳ್ಳೋ ತನಿಖೆ ಮಾಡುವ ಅಗತ್ಯ ನನಗಂತೂ ಬರಲಿಲ್ಲ, ಅದನ್ನ ನಿಜ ಎಂದು ನಂಬಿದವನು ನಾನು. ಆ ನಿಜ ಇಷ್ಟೇ: ಒಂದು ರಾತ್ರಿ ಕಡ್ಲೆಹಿಟ್ಟು ಖಾರದ ಪುಡಿ ಮಿಶ್ರಣದ ಮಸಾಲೆ ಸವರಿದ ಇಡಿ ಇಡಿ ಶೇಂಗಾವನ್ನು ಕರಿಯುತ್ತ ಕುಳಿತಿದ್ದ ಶೆಟ್ಟರಿಗೆ ಏನೋ ಹೊಳೆದಂತಾಯಿತಂತೆ. ಬೋಧಿ ವೃಕ್ಷದ ಕೆಳಗೆ ಕುಳಿತ ಸಿದ್ಧಾರ್ಥನಿಗೆ ಜ್ಞಾನೋದಯ ಆದಂತೆ. ಮರಮರ ಎನ್ನುತ್ತಿದ್ದ ವಾಲ್ಮೀಕಿಗೆ ರಾಮ ದರ್ಶನವಾದಂತೆ. ಇದೇ ಶೇಂಗಾ ಬೀಜವನ್ನು ಎರಡಾಗಿ ಹೋಳು ಮಾಡಿ ಅದಕ್ಕೆ ಲಘು ಮಸಾಲೆ ಸವರಿದರೆ ಹೇಗೆಂಬುದೇ ಅವರಿಗೆ ಹೊಳೆದ ಹೊಸತು.


ಕುಳಿತಲ್ಲೇ ಆ ಕೆಲಸ ಮಾಡಿದರಂತೆ. ಇಡೀ ಶೇಂಗಾಕ್ಕೆ ಹಾಕುವಷ್ಟು ಮಸಾಲೆ ಇದಕ್ಕೆ ಬೇಡ ಎನಿಸಿತಂತೆ. ನಂತರದಲ್ಲಿ ಒಂದಿಷ್ಟು ಅರಿಷಿಣ, ಮೆಣಸಿನ ಪುಡಿಯನ್ನು, ಕರಿ ಬೇವಿನ ಸಹಿತ ಇಂಗು ಬೆರೆಸಿ ಕಲೆಸಿದರಂತೆ. ಹಾಗೇ ತಾನೇ ಸಿದ್ಧಪಡಿಸುವುದು ತಾನೇ ಸವಿಯುವುದು ಬಹಳ ಹೊತ್ತು ನಡೆಯಿತಂತೆ. ಆಗ ಶೆಟ್ಟರ ಗರ್ಭಿಣಿ ಹೆಂಡತಿ ಅಲ್ಲಿಗೆ ಬಂದು ''ಏಮಿ ಇದಿ'' ಎನ್ನದಿದ್ದರೆ ತಿನ್ನುತ್ತಲೇ ಇರುತ್ತಿದ್ದರೋ ಏನೋ ನಮ್ಮಪ್ಪ ಎನ್ನುತ್ತಾರೆ ನಮ್ಮ ಶೆಟ್ಟಿ. ಆಗ ತಾಯಿಯ ಹೊಟ್ಟೆಯಲ್ಲಿ ಈ ಶೆಟ್ಟಿ ಇದ್ದರಂತೆ.



ಕಥೆ ನಿಜವಿದ್ದರೂ ಇರಬಹುದು. ಅದನ್ನು ಕಂಡುಹಿಡಿದುದು ತಾವು ಎಂದು ಇನ್ಯಾರಾದರೂ ಹೇಳಿಯಾರು. ವಾದಕ್ಕೆ ಹೋಗಲು ನಾನ್ಯಾರು. ನಮ್ಮ ಶೆಟ್ಟಿ ಅಂಗಡಿಯಲ್ಲಿ ಸಿಗುವ ಕಾಂಗ್ರೆಸ್ ನನ್ನ ಪಾಲಿಗೆ ಯಾವತ್ತೂ ಶ್ರೇಷ್ಟ. ಅದಿರಲಿ ಅದಕ್ಕೆ ಕಾಂಗ್ರೆಸ್ ಎಂಬ ಹೆಸರೇ ಏಕೆ...? ಅದನ್ನು ಹೇಳಲು ಹೊರಟು ಅದನ್ನೇ ಮರೆತಿದ್ದೆ. ಅಂದಹಾಗೆ ಕಾಂಗ್ರೆಸ್ ವಿಭಜನೆಯಾಗಿ ಎರಡಾಯಿತಲ್ಲ, ಇನ್ನೆಂದೂ ಅದು ಒಂದಾಗುವುದು ಸಾಧ್ಯವೇ ಇಲ್ಲ ಎನಿಸಿತಂತೆ ಸೀನಿಯರ್ ಶೆಟ್ಟರಿಗೆ. ತಮ್ಮ ಹೊಸ ಪದಾರ್ಥಕ್ಕೆ ಕಾಂಗ್ರೆಸ್‌ನ ಹೆಸರನ್ನೇ ಇಟ್ಟು ಜನಪ್ರಿಯಗೊಳಿಸಿದರಂತೆ.

ಆ ರೆಸಿಪಿಯನ್ನು ವಂಶದ ಬಳುವಳಿಯಾಗಿ ಪಡೆದಿರುವ ನಮ್ಮ ಶೆಟ್ಟಿ ಅದನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸಿದ್ದಾರೆ. ಆ ಪದಾರ್ಥಕ್ಕೆ ನನ್ನಂಥ ಅನೇಕಾನೇಕ ಜನರ ಶುಭ ಹಾರೈಕೆ ಆಶೀರ್ವಾದ ಅರೆಪ್ರಜ್ಞಾವಸ್ಥೆಯಲ್ಲೂ ಇದೆ. ಅತ್ತ ಬೀದಿಯತ್ತ ಕಣ್ಣು ಹಾಯಿಸಿದೆ. ಶೆಟ್ಟಿ ಅಂಗಡಿ ಬಾಗಿಲು ತೆರೆದಿದ್ದ. ಸೀದಾ ಹೋಗಿ ಸಿಗರೇಟಿನ ಜೊತೆ ಪೇಸ್ಟನ್ನೂ ತಂದೆ.





Ravi Graphics
OFFSET PRINTERS
BRINGING colours ALIVE
colours
53/8, 2nd Main Road, Industrial Town, Rajajinagar, Bangalore - 560 010
Tel: 4088 9999/77, Fax : 4088 9944 | website : www.ravigraphics.com




# ಜ..ಜ..ಜಾಹೀರಾತು..

- ಅನಿತಾ ನರೇಶ್ ಮಂಚಿ

ಬಿಳಿ ಬಣ್ಣದ ಹಾಲಿನ ಧಾರೆ.. ಅದರ ಜೊತೆಗೆ ಕತ್ತರಿಸಿದ ಬಣ್ಣ ಬಣ್ಣದ ರಸಭರಿತ ಹಣ್ಣುಗಳ ತುಂಡುಗಳು, ಒಣಗಿದ ದ್ರಾಕ್ಷಿ ಗೋಡಂಬಿಯ ಆಕರ್ಷಕ ಮಿಳಿತ.. ನಾಲಿಗೆಯಲ್ಲಿ ಆಗಲೆ ನೀರೂರತೊಡಗಿತೇ.. ಸ್ವಲ್ಪ ನಿಲ್ಲಿ ಇದು ಐಸ್ ಕ್ರೀಮ್, ಹಣ್ಣಿನ ಸಲಾಡುಗಳ ಜಾಹೀರಾತಲ್ಲ. ಇದು ನಿಮ್ಮ ಮುಖಕ್ಕೆ ಹಾಕುವ ಕ್ರೀಮಿನ ಟ್ಯೂಬಿನೊಳಗೆ ಅವರು ಸೇರಿಸಿದ್ದೇವೆ ಎಂದು ಹೇಳುವ ಸತ್ವಗಳು.

**ಅಂಗೈಗೊಂದಿಷ್ಟು ಶ್ಯಾಂಪೂ ಬಗ್ಗಿಸಿಕೊಂಡು ಹೆಂಡತಿಯ ನೀಳ ಕೂದಲಿಗೆ ಹಚ್ಚಿದ್ದೇ ಹಚ್ಚಿದ್ದು. ಒಳ್ಳೆಯ ಪರಿಮಳ ಬೇರೆ. ಆದರೆ..**

ನಿಂಬೆಹಣ್ಣಿನ ಉರುಟುರುಟು ತುಂಡುಗಳ ಒಳಗಿನಿಂದ ಸಿಡಿಯುವ ನೀರು ಹರಳು ಹರಳಾದ ಉಪ್ಪಿನ ತುಣುಕುಗಳು.. ಇದೆಂತ ಉಪ್ಪು ಶರ್ಬತ್ತು ಮಾಡಲಿರುವುದಲ್ಲ ಮಾರಾಯ್ರೇ.. ಬಟ್ಟೆ ಒಗಿಯಲಿರುವ ಸಾಬೂನಿನಲ್ಲಿ ಇರುವ ಅಂಶಗಳಂತೆ..

ಆಗಸದಿಂದ ಉದುರುವ ಬಣ್ಣ ಬಣ್ಣದ ತರಕಾರಿಗಳ ರಾಶಿ.. ಇದನ್ನೆಲ್ಲಾ ಸೇರಿಸಿ ಅವಿಯಲ್ ಮಾಡಿದರೆ ಒಂದು ಸೇರು ಅಕ್ಕಿಯ ಅನ್ನ ಒಬ್ಬನೇ ಉಂಡೇನು ಎಂದೇನು ಕನಸು ಕಾಣಬೇಡಿ.. ಇದು ತಲೆಗೆ ಹಚ್ಚುವ ಶ್ಯಾಂಪೂನೊಳಗೆ ಅಡಗಿರುವ ರಹಸ್ಯ..

ತೆಂಗಿನ ಮರದಿಂದ ಡಬಕ್ಕೆಂದು ಬೀಳುವ ಹಸಿರು ಬಣ್ಣದ ಎಳೆನೀರು, ನೆಲಕ್ಕೆ ಬಿದ್ದೊಡನೆ ಹೋಳಾಗಿ ಅದರೊಳಗಿನಿಂದ ಮಂದವಾದ ತೆಂಗಿನೆಣ್ಣೆ ಹೊರಬರುವುದು.. ಒಣಗಿಲು ಕಾಯಿಗಳನ್ನು ಸುಲಿದು ಒಡೆದು ಒಣಗಿಸಿ ಕೊಬ್ಬರಿ ಮಾಡಿ ಮಿಲ್ಲಿಗೆ ಕೊಟ್ಟು ಎಣ್ಣೆ ತರುವ ಕ್ರಮದವರಾದ ಕರಾವಳಿಗರನ್ನು ಕ್ಷಣ ಕಾಲ ಬೆರಗಾಗುವಂತೆ ಮಾಡುವ ಇವರ ತೆಂಗಿನೆಣ್ಣೆಯ ರಹಸ್ಯ.. ಹೀಗೆ ಒಂದೇ ಎರಡೇ ಹೇಳುತ್ತಲೇ ಹೋದರೆ ಇವರದ್ದು ಮುಗಿಯದ ಪುರಾಣ

ಇದೆಲ್ಲ ಜಾಹೀರಾತುಗಳು ನಮ್ಮನ್ನು ಮರುಳು ಮಾಡಲೆಂದೇ ಇರುವುದು. ದಿನಾ ನೋಡಿ ನೋಡಿ ಅಭ್ಯಾಸವಾದಾಗ ಒಮ್ಮೆ ತಂದು ಉಪಯೋಗಿಸಿದರೇನು ಎಂಬಾಸೆ ಮೂಡುವಂತೆ ಮಾಡಿ ಮಾರಾಟ ಏರಿಸಿಕೊಳ್ಳುವುದು. ಇದೇ ಅವರ ವ್ಯಾಪಾರದ ಮೂಲ ಮಂತ್ರ. ಎಂದೆಲ್ಲಾ ನಾನೂ ಉಪದೇಶ ನೀಡುವವಳೇ.

ನಮ್ಮ ಮನೆಯ ಪಕ್ಕ ಒಂದು ಮಲಯಾಳೀ ಕುಟುಂಬ ವಾಸಿಸುತ್ತಿತ್ತು. ಈಗೇನೋ ಸಂಪೂರ್ಣ ಸಾಕ್ಷರ ನಾಡೆಂಬ ಹೆಮ್ಮೆ ಅದಕ್ಕಿದ್ದರೂ ಆಗ ನಮ್ಮ ಪಕ್ಕದ ಮನೆಯಲ್ಲಿದ್ದ ಗಂಡ ಹೆಂಡತಿ ಇಬ್ಬರೂ ಅನಕ್ಷರಸ್ಥರೇ ಆಗಿದ್ದರು. ನೆಲಕ್ಕೆ ಮುಟ್ಟುವಷ್ಟುದ್ದದ ಕಡು ಕಪ್ಪು ಕೂದಲು ಆ ಮನೆಯಾಕೆಯ ಆಸ್ತಿ. ಅವಳ ಗಂಡನಿಗೋ ಕೊಡಗಿನ ಬೆಡಗಿಯರಿಗಿಲ್ಲದ ತನ್ನ ಹೆಂಡತಿಯ ಕೂದಲಿನ ಬಗ್ಗೆ ಹೆಮ್ಮೆ. ತಮ್ಮೂರಿನಲ್ಲೇ ತಯಾರಾದ ತೆಂಗಿನೆಣ್ಣೆಯನ್ನು



ಕೂದಲಿನಿಂದ ಇಳಿಯುವಷ್ಟು ಹಚ್ಚಿ ನಿಂತರೆ ಆತ ಅವಳ ಉದ್ದದ ಜಡೆಯನ್ನು ಬಾಚಿ ಕೊಡುತ್ತಿದ್ದ. ತಲೆಯಿಂದ ಬಿದ್ದ ಕೂದಲನ್ನು ಪೇಪರಿನ ಸುರುಳಿಯ ಹೊರಗಿನಿಂದ ಸುತ್ತಿಡುತ್ತಿದ್ದ. ನಾವು ಕೇಳಿದರೆ ಅದರಲ್ಲಿ ನಮಗೆ ಉದ್ದದ ಚವುರಿ ಮಾಡಿಕೊಡುವುದಾಗಿ ಹೇಳುತ್ತಿದ್ದ. ಪ್ರತಿ ನಿತ್ಯ ತಲೆ ಸ್ನಾನ ಮಾಡುವ ಅಭ್ಯಾಸವೂ ಇಲ್ಲದ ಕಾರಣ ಆಕೆ ನಿಂತಲ್ಲಿ ಕೂತಲ್ಲಿ ಎಲ್ಲಾ ಕಡೆಯೂ ಎಣ್ಣೆ ಅಂಟಿಕೊಳ್ಳುತ್ತಿತ್ತು. ತಿಂಗಳಿಗೊಮ್ಮೆಯೋ ಅಥವಾ ಅದಕ್ಕಿಂತಲೂ ಹೆಚ್ಚು ದಿನ ಕಳೆದ ನಂತರ ಆಕೆ ತಲೆ ಕೂದಲಿಗೆ ನೀರು ತೋರಿಸುತ್ತಿದ್ದಳು. ಆ ದಿನ ಕೂಡಾ ಸೋಪಿನ ಬಳಕೆಯಿಲ್ಲ. ಅವರ ಊರಿನಿಂದಲೇ ತರುತ್ತಿದ್ದ ಸೀಗೆ, ಬಾಗೆ, ಮತ್ತೇನೇನೋ ಬೇರು ನಾರುಗಳನ್ನು ಸೇರಿಸಿ ಮಾಡಿದ ಪುಡಿ ತಲೆಗೂದಲಿಗೆಂದೇ ಇತ್ತು. ಆ ದಿನವಂತೂ ಅವಳಿಗೆ ನಡೆಯುತ್ತಿದ್ದ ಉಪಚಾರವನ್ನು ವರ್ಣಿಸಲು ಒಂದು ಪುಸ್ತಕವೇ ಬರೆಯಬೇಕೇನೋ.. ಅವಳ ಗಂಡನೇ ಕೂದಲನ್ನು ಒರೆಸಿ ಬೆರಳುಗಳಿಂದ ಸಿಕ್ಕು ಬಿಡಿಸಿ ಅವಳಿಗೆ ಸಹಾಯ ಮಾಡುತ್ತಿದ್ದ. ನಮ್ಮ ಕನಸೂ ಕೂಡಾ ಇಂತಹದ್ದೇ ಕೂದಲು ಮತ್ತು ಗಂಡನಿಗಾಗಿಯೇ ಇತ್ತೆಂದರೂ ತಪ್ಪಾಗಲಾರದು. ಆದರೇನು..? ಉದ್ದ ಕೂದಲು ನಮಗೂ ಬರಲೆಂದು ಅವರೂರಿನಿಂದಲೇ ತೆಂಗಿನೆಣ್ಣೆ ತರಿಸಿ ಹಚ್ಚಿಕೊಂಡರೂ ನಮ್ಮ ಕೂದಲು ಮಲಗಿದರೆ ಮಾತ್ರ ನೆಲ ಮುಟ್ಟುತ್ತಿತ್ತಷ್ಟೇ.

ದಿನ ಬೆಳಗಾದರೆ ಅವರ ತಲೆ ಬಾಚುವಿಕೆಯ ಪ್ರಹಸನ ಮುಗಿಯದೇ ನಮಗೆ ಶಾಲೆಗೆ ಹೊರಡಲು ಮನಸ್ಸಾಗುತ್ತಿರಲಿಲ್ಲ. ಅದು ನಮ್ಮೂರಿಗೊಂದು ಟಿ.ವಿ ಬರುವವರೆಗೂ ಮುಂದುವರಿದಿತ್ತು.

ಕಪ್ಪು ಬಿಳುಪಿನ ಟಿ.ವಿಯೊಂದು ನಮ್ಮೂರಿಗೆ ಬಂದು ನಮ್ಮ ಬದುಕನ್ನೇ ಬದಲಾಯಿಸಿಬಿಟ್ಟಿತ್ತು. ನಮಗೆಲ್ಲ ಅದರಲ್ಲಿ ಏನು ಕಂಡರೂ ಚೆಂದವೇ. ಥಿಯೇಟರಿನಲ್ಲಿ ಮಾತ್ರ ಕಾಣುತ್ತಿದ್ದ ಸಿನೆಮಾಗಳೆಲ್ಲ ಅದರೊಳಗೆ ಕಾಣುವುದು ಅಚ್ಚರಿಯ ವಿಷಯ. ಪೇಟೆ ಬದಿಯ ಮನೆಯೊಂದರಲ್ಲಿದ್ದ ಅದರೆದುರು ಸಂಜೆಯ ಹೊತ್ತಿಗೆ ನೂಕು ನುಗ್ಗಲು. ಪಕ್ಕದ ಮಲೆಯಾಳಿ ಕುಟುಂಬವಂತೂ ಟಿವಿಯ ಎದುರಿನ ಜಾಗವನ್ನೇ ಆಕ್ರಮಿಸಿಕೊಳ್ಳುತ್ತಿದ್ದರು.

ಅದರಲ್ಲಿ ನೋಡಿದ ಮೊದಲ ಎಡ್ವರ್ಟೈಸ್ ಎಂದರೆ ವಾಶಿಂಗ್ ಪೌಡರ್ ನಿರ್ಮಾ ಅಂತ ಸುತ್ತಿ ಸುತ್ತಿ ಹಾಡುವ ಹುಡುಗಿಯದ್ದು. ಅದಾದ ನಂತರ ಬರುತ್ತಿದ್ದುದು ಎಗ್ ಶ್ಯಾಂಪೂ ಎಂಬ ಇನ್ನೊಂದು ಜಾಹೀರಾತು. ಅದರಲ್ಲೊಬ್ಬಳು ಹುಡುಗಿಯ ನೀಳ ಕೂದಲು ಜಲಪಾತದಂತೆ ಅಗಲವಾಗಿ ಹರಡಿಕೊಳ್ಳುತ್ತಿತ್ತು. ಇಡೀ ಪ್ರಪಂಚದಲ್ಲಿ ತನ್ನ ಹೆಂಡತಿಯಷ್ಟುದ್ದದ ಚೆಂದದ ಕೂದಲಿಲ್ಲ ಎಂದುಕೊಂಡ ಪತಿಗೆ ಇದನ್ನು ನೋಡುವಾಗ ಉಂಟಾಗುವ ಕಸಿವಿಸಿ ನಮ್ಮರಿವಿಗೂ ಬರುತ್ತಿತ್ತು. ಹಾಗಂತ ಈ ಜಾಹೀರಾತು ಮುಗಿದ ಮೇಲೆ ಬಂದರೆ ಕುಳಿತುಕೊಳ್ಳಲು ಸ್ಥಳ ಇರುತ್ತಿರಲಿಲ್ಲ. ಸ್ವಲ್ಪ ದಿನ ಇದನ್ನು ಸಹಿಸಿ ಸಾಕಾದ ಆತ ಆ ಮನೆಯವರನ್ನು ಕಾಡಿ ಬೇಡಿ ಮಡಿಕೇರಿಯಿಂದ ಒಂದು ಬಾಟಲ್ ಶ್ಯಾಂಪೂ ತರಿಸಿಯೇ ಬಿಟ್ಟಿದ್ದ. ಗಾಜಿನ ಸಣ್ಣ ಬಾಟಲಿಯಲ್ಲಿ ಅರಶಿನ ಬಣ್ಣದ ಮಂದವಾದ ಲೋಶನ್. ನಾವುಗಳು ಅದನ್ನು ಕಣ್ಣೆತ್ತಿ ನೋಡುವುದರೊಳಗಾಗಿ ಮನೆಗೆ ತೆಗೆದುಕೊಂಡು ಹೋಗಿದ್ದ.



ಮರು ದಿನ ಅಂಗೈಗೊಂದಿಷ್ಟು ಶ್ಯಾಂಪೂ ಬಗ್ಗಿಸಿಕೊಂಡು ಹೆಂಡತಿಯ ನೀಳ ಕೂದಲಿಗೆ ಹಚ್ಚಿದ್ದೇ ಹಚ್ಚಿದ್ದು. ಒಳ್ಳೆಯ ಪರಿಮಳ ಬೇರೆ. ಆ ದಿನವಂತೂ ಗಂಡ ಹೆಂಡತಿ ಇಬ್ಬರಿಗೂ

ಅದನ್ನು ಪರಿಮಳೆದೆಣ್ಣೆ ಅಂತ ಓಣಿಯ ಎಲ್ಲರಿಗೂ ತೋರಿಸುವುದೇ ಕೆಲಸ. ಇನ್ನೂ ಉದ್ದವಾಗಿ ಹರಡಿ ಹರಡಿ ಬೀಳುವ ತನ್ನ ಹೆಂಡತಿಯ ಕೂದಲಿನ ಬಗ್ಗೆಯೇ ಆತನ ಮಾತುಗಳೆಲ್ಲಾ..

ಮತ್ತೆ ಕೆಲವು ದಿನಗಳು ಅದರದ್ದೇ ಮಾಲೀಶು. ದಿನಗಳುರುಳಿದಂತೆ ಆತ ಆಕೆಯ ನೀಳ ಜಡೆಯನ್ನು ಬಾಚುತ್ತಿದ್ದರೆ ಉದ್ದುದ್ದ ಕೂದಲುಗಳ ರಾಶಿ ರಾಶಿಯೇ ಬೀಳುತ್ತಿತ್ತು. ಚೌರಿ ಮಾಡಲೆಂದು ಆತ ಎತ್ತಿಡುತ್ತಿದ್ದ ಕೂದಲ ರಾಶಿ ಹೆಚ್ಚುತ್ತಾ ಹೋದಂತೆ ಅವಳ ಕೂದಲು ಸಣ್ಣಗಾಗತೊಡಗಿತು.

ಆ ದಿನ ತಲೆ ಸ್ನಾನ ಮಾಡಲು ಒಳ ಹೋದವಳು ಸ್ವಲ್ಪ ಹೊತ್ತಿನಲ್ಲೇ ಕಿರುಚಿಕೊಂಡು ಹೊರ ಬಂದಳು. ಕೂದಲಿನ ಮೇಲೆ ಬೆಳ್ಳನೆಯ ನೊರೆಯ ಬುರುಗು.. ಗಂಡ ಹೆಂಡತಿಗಿಬ್ಬರಿಗೂ ಗಾಬರಿ. ಹಾಗೆಯೇ ಓಡಿಕೊಂಡು ನಮ್ಮನೆಗೆ ಬಂದರು. ಅಪ್ಪನ ಹತ್ತಿರ ತಮ್ಮ ತಲೆಗೂದಲಿನ ಪುರಾಣವನ್ನೆಲ್ಲಾ ಹೇಳಿದರು. ಅಯ್ಯೋ.. ಅದು ಸೋಪಿನ ಬದಲು ತಲೆಗೆ ಹಾಕಲಿರುವ ಶ್ಯಾಂಪೂ, ದಿನಾ ಹಚ್ಚಿಕೊಳ್ಳುವ ಪರಿಮಳದೆಣ್ಣೆ ಅಲ್ಲ, ಎಂದವರಿಗೆ ಬಿಡಿಸಿ ಹೇಳಿ ಅವರಿಗೆ ಅರ್ಥ ಮಾಡಿಸುವಾಗ ಅಪ್ಪನ ತಲೆಗೂದಲು ಉದುರತೊಡಗಿತ್ತು.. ಮತ್ತವರು ನಿಧಾನಕ್ಕೆ ತಮ್ಮ ತೆಂಗಿನೆಣ್ಣೆಯ ಮಸಾಜಿಗೆ ಮರಳಿದರು.

ಇಷ್ಟೆಲ್ಲಾ ಪುರಾಣ ಸುಮ್ಮ ಸುಮ್ಮನೇ ನೆನಪಾಗಲೇನು ಮರುಳೇ? ಮೊನ್ನೆಯಷ್ಟೇ ಒಂದು ಸೀರೆ ಕೊಂಡರೆ ಒಂದು ಫ್ರೀ ಅಂತ ಶಾಪಿನ ಹೊರಗೆ ನೇತುಹಾಕಿದ್ದ ಜಾಹೀರಾತು ನೋಡಿ ಕುತೂಹಲಕ್ಕಿಂತ ಹೆಚ್ಚಿಗೆ ಆಸೆಯಲ್ಲೇ ಒಳಗೆ ಕಾಲಿಟ್ಟಿದ್ದೆ. ಅಲ್ಲಿರುವ ಸೀರೆಗಳ ರಾಶಿಯಿಂದ ಹೆಚ್ಚಿಗೆ ಜನರೂ ತುಂಬಿದ್ದರು. ನಾನೇನು ಕಡಿಮೆಯೇ, ಆ ಚಕ್ರವ್ಯೂಹದೊಳಗೆ ಅಭಿಮನ್ಯುವಿನಂತೆ ನುಗ್ಗಿದೆ. ಅಡ್ಡ ಬಂದವರನ್ನೆಲ್ಲಾ ಅತ್ತಿತ್ತ ಸರಿಸಿ ಸೀರೆ ಹರವಿದ್ದ ಮೇಜು ತಲುಪಿದ್ದೆ. ಪಕ್ಕದವಳ ಕೈಯಲ್ಲಿ ಚಂದದ ವಿನ್ಯಾಸದ ಸೀರೆಯ ಸೆರಗಿತ್ತು. ಅವಳಿಗೇಕೋ ಅದು ಇಷ್ಟ ಆಗಲಿಲ್ಲವೇನೋ, ಕೆಳಗೆ ಬಿಟ್ಟಳು. ಅವಳು ಬಿಟ್ಟ ಕೂಡಲೇ ಅದು ನನ್ನ ಕೈಸೇರಿತ್ತು ಅವಳ ಕಡೆಗೆ ಕೋಪದ ನೋಟದೊಂದಿದೆ. ಕೋಪ ಯಾಕಂದ್ರೆ ಅದನ್ನು ಮೇಜಿನಲ್ಲಿ ಹಾಕುವಷ್ಟು ಮ್ಯಾನರ್ಸ್ ಇರ್ಲಿಲ್ಲ ನೋಡಿ ಆಕೆಗೆ. ಅವಳು ನನ್ನ ಕಡೆ ಕಣ್ಣೂ ಹಾಯಿಸದೇ ಅಲ್ಲಿಂದ ಹೊರಡುವ  ಪ್ರಯತ್ನದಲ್ಲಿದ್ದಳು.

ಸೀರೆಯ ತುದಿ ಕೈಯಲ್ಲಿದ್ದರೂ ಇನ್ನೊಂದು ಬದಿ ಎಲ್ಲಿತ್ತೆಂದು ತಿಳಿಯದೇ ಅದನ್ನು ಎಟಗಿಸಿಕೊಳ್ಳುವ ಗಡಿಬಿಡಿಯಲ್ಲಿ ಎಳೆದೆ. ಉಹೂಂ ಬರಲಿಲ್ಲ, ಮತ್ತೊಮ್ಮೆ, ಮಗದೊಮ್ಮೆ ಪ್ರಯತ್ನ ಮಾಡಿದೆ. ಇನ್ನಷ್ಟು ಬಲವಾಗಿ ಎಳೆದೆ. ''ಯಾರ್ರೀ ಅದು, ಯಾಕ್ರೀ ಸೀರೆ ಎಳೀತಿದ್ದೀರಾ ಬಿಡ್ರೀ'' ಎಂಬ ಅಶರೀರವಾಣಿಯೊಂದು ಕೇಳಿತು. ಇವಳ್ಯಾವ ದೊಣ್ಣೆನಾಯಕ ಅಂತ ಇವಳಪ್ಪಣೆ ಕೇಳಬೇಕು ನಾನು ಎಂದು ಇದ್ದ ಶಕ್ತಿಯೆಲ್ಲಾ ಹಾಕಿ ಎಳೆದಿದ್ದೆ. ''ಅಯ್ಯೋ ಬಿಡ್ರೀ, ನೀವು ಎಳೀತಾ ಇರೋದು ನನ್ನ ಸೀರೇನೇ'' ಎಂದು ಆ ವಾಣಿ ಬೊಬ್ಬೆ ಹಾಕುವಷ್ಟರಲ್ಲಿ ಸೀರೆಯ ತುಂಡೊಂದು ಪರ್ರನೆ ಹರಿದು ನನ್ನ ಕೈ ಸೇರಿ ಆಗಿತ್ತು. ಅದು ಅರಿವಾಗದೇ ಸೀರೆಯನ್ನು ಬಿಟ್ಟ ಕೂಡಲೇ ಆ ಸುಸ್ವರ ನಿಂತಿತ್ತು. ಕೈಯೊಳಗಿದ್ದ ತುಂಡನ್ನು ಹಾಗೇ ಹಿಡಿದು ಅವಸರದಿಂದ ಎರಡು ಕಾಟನ್ ಸೀರೆ ಆರಿಸಿ ದುಡ್ಡು ಕೊಟ್ಟು ಉಶ್ಯಪ್ಪಾ ಎಂದು ಹೊರ ಬಂದಿದ್ದೆ.



ಮನೆಗೆ ಬಂದು ನನ್ನ ಪೌರುಷವನ್ನು ಕೊಚ್ಚಿ, ಹೊಸಾ ಸೀರೆಯನ್ನು ನೀರಿಗದ್ದಿದ್ದೆ. ಬಣ್ಣ ಬಣ್ಣ ತುಂಬಿತಣ್ಣಾ ಬಕೆಟ್ ಸಿಂಗಾರಾ ಎಂತ ಬಣ್ಣವೆಲ್ಲಾ ನೀರಿನೊಳಗೇ ಇತ್ತು. ಹೆಚ್ಚೇನು ದುಡ್ಡು ಕೊಟ್ಟ ಮಾಲಲ್ಲ ಎಂದು ಸಮಾಧಾನ ಮಾಡಿಕೊಂಡು ಹರವಿ ಹಾಕಿದ್ದೆ. ಬೆಳಗ್ಗೆ ನೋಡುತ್ತೇನೆ. ಸೀರೆ ಇರುವ ಜಾಗದಲ್ಲಿ ಅದೇ ಮಸುಕು ಬಣ್ಣದ ಟವೆಲ್ಲಿನಷ್ಟು ದೊಡ್ಡ ಬಟ್ಟೆ ನೇತುಕೊಂಡಿತ್ತು.

ಇಲ್ಲಿಗೆ ಕೊಂಡ್ಕೊಂಡವ ಕೋತಿ, ಕೊಟ್ಟವ ಈರಭದ್ರ ಎಂಬ ಹೊಸ ಗಾದೆಯೊಂದು ಹುಟ್ಟಿ ಕನ್ನಡ ಲೋಕಕ್ಕೆ ಅರ್ಪಣೆಯಾಯಿತು.

ನಾವೇನು ನೀವೇನು ಅವರೇನೂ.. ಒಂದೇ ಎಲ್ಲರೂ.. ಎಂಬ ಗೀತೆಯನ್ನು ಹಾಡುತ್ತಾ ನನಗೆ ನಾನೇ ಸಮಾಧಾನ ಮಾಡ್ಕೊಂಡೆ ಎನ್ನುವಲ್ಲಿಗೆ ಜಾಹೀರಾತು ಪುರಾಣದ ನೂರತೊಂಬತ್ತೇಳನೇ ಅಧ್ಯಾಯವು ಮುಗಿದುದು.

❖❖

---






# ಒಂದೇ ಒರೆ ಎರಡು ಖಡ್ಗ

- ಚಿತ್ರಾ ರಾಮಚಂದ್ರನ್

**ಬಾ**ಯ್ತುಂಬ ಸಿಹಿಯನ್ನಿಟ್ಟುಕೊಂಡು ಹೆಂಡತಿಯ ಕೈಯಲ್ಲಿ ಸಿಕ್ಕಿಬಿದ್ದ ಡಯಾಬಿಟಿಕ್ ಗಂಡನಂತೆ, ಮಾತನಾಡಲಾರದೆ ಮಿಕ ಮಿಕ ಕಣ್ಣು ಬಿಟ್ಟರು ಕೃಷ್ಣಪ್ಪ. ಇಷ್ಟಕ್ಕೂ ಗೆಳೆಯರಾದ ನಂಜುಂಡಿ ಕೇಳಿದ್ದು ಒಂದೇ ಒಂದು ಸರಳವಾದ ಪ್ರಶ್ನೆ!

''ಕೃಷ್ಣಪ್ಪನವರೇ ನೀವು ಇನ್ನೂ ಆ ಕಥೆ ಓದಿಲ್ವೇ?'' ಕೃಷ್ಣಪ್ಪ 'ಗುಲಗಂಜಿ' ವಾರ ಪತ್ರಿಕೆಯನ್ನು ನಂಜುಂಡಿಯ ಕೈಯಿಂದ ಕಸಿದುಕೊಂಡ, 'ಒಂದೇ ಒರೆ ಎರಡು ಖಡ್ಗ' ಕಥೆಯ ಮೇಲೆ ಕಣ್ಣಾಡಿಸಿದರು.

'ಹರ್ಷಭರಿತವಾದ ಆ ಸಾಯಂಸಂಧ್ಯಾ ವೇಳೆಯಲ್ಲಿ ....' ಕಥೆಯ ಮೊದಲನೇ ಸಾಲನ್ನು ಓದಿದೊಡನೆ ಕೃಷ್ಣಪ್ಪನವರ ಎದೆ ಹಳಿ ತಪ್ಪಿದ ರೈಲು ಗಾಡಿಯಂತೆ ಧಡಮ್ ಧಡಮ್ ಎಂದು ಎಗರ ತೊಡಗಿತು.

ಅದೇ! ಅದೇ!ಕಥೆ! ತನ್ನ ಪ್ರೀತಿಯ ಮೊಮ್ಮಗ ಹರ್ಷನ ಹೆಸರಿನೊಂದಿಗೆ ಶುರುವಾಗುವ ಕಥೆ! ಕಂಪ್ಯೂಟರ್ ಕಡೆ ತಲೆ ಇಟ್ಟು ಕೂಡ ಮಲಗದ ತನಗಾಗಿ, ತನ್ನ ಹಸ್ತಪ್ರತಿಯನ್ನು ನೋಡಿ ಅವನೇ ಕಥೆಯನ್ನು ಟೈಪು ಮಾಡಿ 'ಗುಲಗಂಜಿ' ಕಥಾ ಸ್ಪರ್ಧೆಗೂ ಮೇಲ್ ಮಾಡ್ದ! 'ತಾತಾ ಗುಡ್ ಲಕ್'! ಎಂದು ಶುಭ ಹಾರೈಸಿ ಊರಿಗೂ ಹೊರಟೆ ಹೋಗಿದ್ದ! 'ಈ ವಿಷಯ ನಮ್ಮಿಬ್ಬರಲ್ಲೇ ಇರ್ಲಿ! ಅಜ್ಜಿಗೆ ಹೇಳ್ಬೇಡ.' ಎಂದು ಹರ್ಷನನ್ನು ತಾನು ಎಚ್ಚರಿಸಿದ್ದಾಗ, ಅವನು ಕಿರುನಗೆ ಬೀರಿ 'ಸರೀ ತಾತ!' ಎಂದಿದ್ದ.

'ಲೇ! ಮಣಿ! ರಮಣಿ! ರಾಧಾರಮಣಿ! ನೀನೊಬ್ಬಳೇ ಕಥೆ ಬರೆಯೋದರಲ್ಲಿ ಕಿಲಾಡಿ ಅನ್ನೋ ನೆನಪೇ ನಿನಗೆ? ನೀನೊಬ್ಬಳೇ ಕಂಪ್ಯೂಟರ್ ಪಂಡಿತೆ ಅಂದುಕೊಂಡೆಯಾ? ನನ್ನ ಕಂಪ್ಯೂಟರ್ ಜ್ಞಾನ ಶೂನ್ಯತೆಯನ್ನು ಹೇಗೆಲ್ಲ ಮೂದಲಿಸಿದೆ? ನೋಡ್ತಿರು! ನನ್ನ 'ಒಂದೇ ಒರೆ ಎರಡು ಖಡ್ಗ' ನಿನ್ನ ಡಂಬ ಆಡಂಬರಕ್ಕೆಲ್ಲ ತಕ್ಕ ಶಾಸ್ತಿ ಮಾಡುತ್ತದೆ!'

''ಕಥೆ ಅಂದ್ರೆ ಹೀಗಿರಬೇಕು! ಹೊಸ ಲೇಖಕರು ಅನ್ಸತ್ತೆ! ಮೈಸೂರಿನವರೇ ಆಗಿರ್ಬೇಕು! ಕಥಾನಾಯಕ ತಿರುಗಾಡೋ ಇಡೀ ಮೈಸೂರು ಪ್ರದೇಶವನ್ನೆಲ್ಲ ಕಣ್ಣಿಗೆ ಕಟ್ಟಿದ ಹಾಗೆ ಬಣ್ಣಿಸಿದ್ದಾರೆ!'

'ನೀವೂ ಆಗ್ಲೇ ಓದ್ಬಿಟ್ರೆನ್ರೀ? ಇಡೀ ಸೀನಿಯರ್ ಸಿಟಿಜನ್ ಕ್ಲಬ್ ಸದಸ್ಯರೆಲ್ಲ 'ಒಂದೇ ಒರೆ ಎರಡು ಖಡ್ಗ'ದ ಬಗ್ಗೆಯೇ ಮಾತಾಡ್ತಿದ್ದಾರೆ.'' ಎನ್ನುತ್ತಾ ತನ್ನ ಚದುರಂಗದ ಕುದುರೆಯನ್ನು ಮುಂದೆ ಚಲಿಸಿದರು ವೆಂಕಟ್.

''ಅಷ್ಟೇಯಲ್ಲ ವೆಂಕಟ್! ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳು ಎಲ್ಲರ ಬಾಯಲ್ಲೂ ಇದೇ ಕಥೆಯ ವಿಮರ್ಶೆಗಳು. 'ಗುಲಗಂಜಿ' ಪತ್ರಿಕೆಯ ಫೇಸ್ ಬುಕ್ ಪೇಜಲ್ಲಿ ಸ್ಪರ್ಧೆಗೆ ಬಂದಿರೋ ಕಥೆಗಳಲ್ಲಿ ಹತ್ತನ್ನ ಆಯ್ಕೆ ಮಾಡಿ ಲಿಂಕ್ ಕೊಟ್ಟಿದ್ದಾರಂತೆ. ಹೆಚ್ಚು ಲೈಕ್ ಗಳಿಸೋ ಕಥೆಗೆ ಸನ್ಮಾನವಂತೆ!' ಆಟವನ್ನು ಮರೆತು ಕೇಶವಮೂರ್ತಿ ಹೀಗೆಂದಾಗ, ಎಲ್ಲರೂ ತಮ್ಮ ತಮ್ಮ ಮೊಬೈಲ್ಗಳಲ್ಲಿ ಫೇಸ್ ಬುಕ್ ಪೇಜ್ ತೆಗೆಯಲು ಶುರು ಮಾಡಿದರು.



ಕೃಷ್ಣಪ್ಪನವರಿಗೆ ಈ ಆಧುನಿಕ ಯಂತ್ರಗಳ ಬಗ್ಗೆ ಅದೇನೋ ಒಂದು ಜಿಗುಪ್ಸೆ! ಫೋಬಿಯಾ ಎಂದು ಬೇಕಾದರೂ ಅನ್ನಬಹುದು. ಇದೆಲ್ಲ ಇಲ್ಲದ ಕಾಲದಲ್ಲೇ ದುಡಿದು ನಿವೃತ್ತಿಯೂ ಹೊಂದಿದ್ದಾಯಿತು. ಕುಶಾಲಾಗಿ ತಿರುಗಾಡುತ್ತ, ಸ್ನೇಹಿತರ ಜೊತೆ ಹರಟುತ್ತ ಆರಾಮವಾಗಿರೋದು ಬಿಟ್ಟು ಇಲ್ಲದ ಫಜೀತಿ

ಎಲ್ಲ ಯಾಕೆ! ಇಲ್ಲಿ ಸೀನಿಯರ್ ಸಿಟಿಜನ್ ಕ್ಲಬ್ಬಿಗೆ ಬರುವ ತನ್ನ ಸಹಪಾಠಿಗಳೆಲ್ಲ ಮೊಬೈಲ್ಗೆ ಗಂಟು ಬಿದ್ದು ಸದಾ ಚಡಪಡಿಸುತ್ತಿರೋದು ನೋಡುವಾಗ, ತನ್ನ ಪಾಡು 'ಹಾಯ್' ಎನ್ನಿಸುತ್ತದೆ ಅವರಿಗೆ. ಆದರೆ ಇವಾಗ?

ಕೃಷ್ಣಪ್ಪನವರಿಗೆ ತಲೆ ಬಹಳ ಹಗುರವಾದಂತೆ ಭಾಸವಾಯಿತು. ಹರ್ಷ ಎಷ್ಟೋ ಸರ್ತಿ ಹೇಳಿದ್ದ. ''ತಾತಾ! ನಿನ್ ಹೈದರ್ ಕಾಲದ ಮೊಬೈಲ್ ದೂರ ಬಿಸಾಡು. ಇಂಟರ್ನೆಟ್ ಅನುಕೂಲದೊಂದಿಗೆ ಎಷ್ಟೆಲ್ಲಾ ಹೊಸ ಮೊಬೈಲುಗಳು ಬಂದಿವೆ, ತಗೋಬಾರದೇ!'' ತಾನೂ ಒಂದು ಅಧುನಿಕ ಮೊಬೈಲ್ ಕೊಂಡಿದ್ದರೆ?

''ಅಲ್ಲ! ನಾವು ಇಷ್ಟೆಲ್ಲಾ ಮಾತಾಡ್ತಿದ್ದೀವಿ! ಕೃಷ್ಣಪ್ಪನೋರು ಯಾಕೋ ಬಾಯೇ ಬಿಡ್ತಿಲ್ಲ!'' ಎಂದರು ವಿಮಲಮ್ಮ ಮೊಬೈಲ್ ದಿಟ್ಟಿಸುತ್ತ.

''ಸಾರ್ ತನ್ನ ಶ್ರೀಮತಿಯವರ ಕಥೆ ಬಿಟ್ಟು ಬೇರೇನೂ ಓದೋದಿಲ್ವೋ ಏನೋ!'' ಶಾರದಮ್ಮನವರ ಧ್ವನಿಯಲ್ಲಿ ಅಸೂಯೆಯ ಛಾಯೆ ಇಣುಕಿದಂತಿತ್ತು.

''ಅಂದ ಹಾಗೆ, ಈ ಸ್ಪರ್ಧೆಗೆ ನಿಮ್ಮಾಕೆ ಕಥೆ ಕಳಿಸಿಲ್ವೇನು? ಆಯ್ಕೆಯಾಗಿರೋ ಕಥೆಗಳಲ್ಲಿ ಅವರ ಹೆಸರೇ ಕಾಣ್ತಿಲ್ಲ!'' ವಿಮಲಮ್ಮ ಮೊಬೈಲ್ನಿಂದ ಕಣ್ಣೆತ್ತದೆ ಪ್ರಶ್ನಿಸಿದರು.

''ಸರಿಯಾಗಿ ನೋಡಿ ವಿಮಲಾ! ಅವರ ಕಥೆ ಇಲ್ದೆ ಯಾವ ಸ್ಪರ್ಧೆಯೂ ಇರಲ್ವಲ್ಲ!'' ಕುತೂಹಲದಿಂದ ನುಡಿದರು ವೆಂಕಣ್ಣ.

'ಯೂ ಆರ್ ರೈಟ್!ಒಂದ್ ವೇಳೆ 'ಒಂದೇ ಒರೆ ಎರಡು ಖಡ್ಗ'ವನ್ನ ಅವರೇ ಬರೆದಿದ್ದಾರೋ ಏನೋ! ಬರೆದವರ ಹೆಸರು ನೋಡಿದ್ರೆ ಹಾಗೆ ಅನ್ಸತ್ತೆ.'' ಎಂದರು ನಂಜುಂಡಿ.

'ಇಲ್ಲ! ಇಲ್ಲ! ಈ ಕಥೆ ಬರೆದವನು ನಾನು, ನಾನೇ ನಾನು!' ಎಂದು ಕೂಗಬೇಕೆನ್ನಿಸಿದರೂ ಕೃಷ್ಣಪ್ಪ ಬಾಯಿ ಬಿಗಿಯಾಗಿ ಮುಚ್ಚಿ ಕುಳಿತಿದ್ದರು.

ಇರಲಿ! ಪತ್ರಿಕೆಯ ಮೂಲಕವೇ ಫಲತಾಂಶ ಬರಲಿ! ಎಲ್ಲರಿಗೂ ಸರ್ಪ್ರೈಸ್ ಆಗಿರಲಿ! ಅಲ್ಲಿಯವರೆಗೆ ತಾನು ಅನಾನಿಮಸ್ ಆಗೇ ಇರೋದು ಒಳ್ಳೇದು. ತನ್ನ ಕಥೆಯ ಬಗ್ಗೆಯ ವಿಮರ್ಶೆಗಳನ್ನ ಕೇಳಿಸಿಕೊಳ್ಳುತ್ತಿರಬಹುದು.

''ಓ ಗಾಡ್! ನೋಡ್ರೀ ಇಲ್ಲಿ! ಈ ಕಥೆ ಆಗ್ಲೇ 299 ಲೈಕ್ ಗಳನ್ನ ಗಳಿಸಿದೆ! ನಾನ್ನದೂ ಸೇರಿಸದರೆ 300!'' ವಿಮಲಾ ಚಿಕ್ಕ ಹುಡುಗಿಯ ಹಾಗೆ ಎದ್ದು ಕುಣಿದೇ ಬಿಟ್ಟರು.

''ಹೌದಾ! ಗ್ರೇಟ್! ಉಳಿದವಕ್ಕೆಲ್ಲ ಎಷ್ಟೆಷ್ಟು ಬಂದಿವೆ?''

''ಉಳಿದವೆಲ್ಲ ನೂರನ್ನೂ ಮುಟ್ಟಿಲಾ!''

ಕೃಷ್ಣಪ್ಪನವರ ಹೃದಯದಲ್ಲಿ ಛಲದಿಂದ ಗೆದ್ದ ಯಕ್ಷಗಾನದ ಭೀಮಸೇನ 'ತ ತೋಮ್ ತೋಮ್ ತೋಮ್' ಎಂದು ಉಲ್ಲಾಸದಿಂದ ಕುಣಿಯ ತೊಡಗಿದ.

'ಛೆ! ಅದೆಲ್ಲ ಸರಿ ಹೋಗಲ್ಲ! ನಿಮಗೆ ಅದೆಲ್ಲ ಗೊತ್ತಾಗಲ್ಲ! ನಾನು ಏನಾದರೂ ಐಡಿಯಾ ಕೊಟ್ಟರೆ ಹೇಗೆಲ್ಲ ಕೀಳಾಡಿದೆ! ಇವಾಗ ನೋಡು! ನಿನ್ನ ಮಟ್ಟ ಹಾಕಕ್ಕೆಂದೇ ಬರೆದ 'ಒಂದೇ ಒರೆ ಎರಡು ಖಡ್ಗ' ಕಥೆಗೆ ಎಷ್ಟರ ಮಟ್ಟಿಗೆ ಪ್ರಶಂಸೆಗಳ ಸುರಿಮಳೆ! ಮುನ್ನೂರಕ್ಕೂ ಹೆಚ್ಚಾದ ಫೇಸ್ ಬುಕ್ ಲೈಕ್‌ಗಳು! ಹೌದು! ವಿಮಲಾ ಲೆಕ್ಕ ಹೇಳಿದ ಮೇಲೆ ಕ್ಲಬ್ ಸ್ನೇಹಿತರೆಲ್ಲ ಇನ್ನೂ ಲೈಕ್ ತಾನೇ ಇದ್ದಾರೆ!'

'ಕೃಷ್ಣಪ್ಪನವರೇ! ನೀವ್ಯಾಕೊ ಇವತ್ತು ಮಂಕಾಗಿದ್ದೀರಿ! ಬಿ ಪಿ ಗಿ ಪಿ ಏರಿದೆಯೇನು?'' ಕಾಳಜಿಯಿಂದ ವಿಚಾರಿಸಿದರು ನಂಜುಂಡಿ.

''ಏನಿಲ್ಲ! ಸ್ವಲ್ಪ ರೆಸ್ಟ್ ತಗೊಂಡರೆ ಸರಿಯಾಗತ್ತೆ! ನಾನ್ ಹೊರಡ್ತೀನಿ!'' ಕುಳಿತಲ್ಲಿ ಕೂರಲಾರದೆ ಎದ್ದರು ಕೃಷ್ಣಪ್ಪನವರು.

ಸ್ನೇಹಿತರಿಮದ ಬೀಳ್ಕೊಂಡು ರಸ್ತೆಗೆ ಇಳಿದು ನಡೆಯ ತೊಡಗಿದಾಗ ಅವರ ಮೊಬೈಲ್ ಕರೆಯಿತು. ಇನ್ಯಾರು? ತನ್ನ ಆಜನ್ಮ ವೈರಿ! ತನ್ನ ಸಹ ಧರ್ಮಿಣಿಯ ಕರೆಯೇ ಅದು.



''ರೀ! ಬರೋವಾಗ ಬಜಾರಲ್ಲಿ ಸ್ವಲ್ಪ ಗೋಡಂಬಿ ತಂದ್ಬಿಡಿ! 'ಗುಲಗಂಜಿ'ಯಿಂದ ಬರ್ತಿದ್ದಾರೆ!''

ಅಷ್ಟೇ! ಕಟ್ ಮಾಡಿ ಬಿಟ್ಟಳು! ಏಕೆ, ಏನು ಎತ್ತ? ಯಾವೊಂದು ವಿವರವೂ ಇಲ್ಲ!

'ರಾಕ್ಷಸಿ'!

ಕೃಷ್ಣಪ್ಪನವರು ಗೋಡಂಬಿ ಸಹಿತ ಮನೆಸೇರಿದಾಗ, ಅಡುಗೆ ಮನೆಯಿಂದ ಸಿಹಿ ತಿಂಡಿಯಸುವಾಸನೆ ಹೊರಗೆಲ್ಲ ಪಸರಿಸುತ್ತಿತ್ತು.

''ಬೇಗ ರೆಡಿಯಾಗಿ! ಅವರು ಬಾರೋ ಹೊತ್ತಾಯ್ತು!''

'ಗುಲಗಂಜಿ'ಯಿಂದ ಬಂದ ಇಬ್ಬರಲ್ಲಿ ಒಬ್ಬರು ಭೇಟಿಯನ್ನು ತೊಡಗಿದರು. ಮತ್ತೊಬ್ಬರು ಕ್ಯಾಮರಾ ಹಿಡಿದು ಕ್ಲಿಕ್ಕಲು ತಯಾರಾಗಿದ್ದರು.

''ಮ್ಯಾಡಮ್! ನಿಮ್ಮ 'ಒಂದೇ ಒರೆ ಎರಡು ಖಡ್ಗ' ಭಾರಿ ಮೆಚ್ಚುಗೆ ಪಡೀತಿದೆ.''

ಲೇಖಕಿ ರಾಧಾರಮಣಿಯ ಮೊಗದಲ್ಲಿ ಕಿರುನಗೆಯರಳಿತು.

'ಕಿರಾತಕಿ! ಮತ್ತೊಬ್ಬರಿಗೆ ಸೇರಬೇಕಾದ ಮೆಚ್ಚುಗೆಯನ್ನ ಮನಃಸಾಕ್ಷಿಯೇ ಇಲ್ಲದೆ ಹೇಗೆ ಸ್ವೀಕರಿಸುತ್ತಿದ್ದಾಳೆ!'

''ಈ ಕಥೆ ನಿಮ್ಮ ಮಾಮೂಲಿ ಕಥೆಗಳ ಹಾಗಲ್ಲದೆ ಹೊಸ ಶೈಲಿಯಲ್ಲಿದೆ! ಇದ್ದಕ್ಕಿದ್ದ ಹಾಗೆ ನಿಮ್ಮ ಹೆಸರಿನೊಂದಿಗೆ ನಿಮ್ಮ ಪತಿಯವರ ಹೆಸರನ್ನೂ ಸೇರಿಸಿ ಯಾಕೆ 'ರಾಧೇಕೃಷ್ಣ' ಎಂಬ ಕಾವ್ಯನಾಮ?''

'ಮತ್ತೆ ನಗುತ್ತಾಳಲ್ಲ ಶೂರ್ಪಣಕಿ! ಅಯ್ಯೋ! ನಾನು ಒಬ್ಬ ಮೂರ್ಖ! ನಾನೇಕೆ ಈ ಕಾವ್ಯನಾಮ ಸೃಷ್ಟಿಸಿಕೊಂಡೆ! ಛೆ! ಇನ್ನೂ ನನಗೆ ಇವಳ ಮೇಲಿರೋ 'ಇದು' ಹೋಗಿಲ್ಲ! ಇನ್ಮೇಲೆ ಬರೆಯೋ ಯಾವ ಕಥೆಗೂ ಈ ಕಾವ್ಯನಾಮ ಬೇಡ! ಒಂದೇ ಒರೆಯಲ್ಲಿ ಎರಡು ಖಡ್ಗಗಳು ಎಂದಿಗೂ ಇರಲಾಗದು! ಹಾಗೆಯೇ ಒಂದೇ ಮನೆಯಲ್ಲಿ ಇಬ್ಬರು ಲೇಖಕರು ಇರುವುದೂ ಅಸಾಧ್ಯ!'

''ಹೇಳಿ ಮ್ಯಾಡಮ್! ಕಥೆ ನಿಮ್ ಇಮೇಲ್ ಅಡ್ರೆಸ್ಸಿನಿಂದಲೇ ಬಂದಿದೆ!''

ಅಯ್ಯೋ! ಎಂತ ಕೆಲಸವಾಗಿ ಹೋಯಿತು? ನಮ್ಮ ಮನೆಯಲ್ಲಿ ಕಂಪ್ಯೂಟರ್ ಉಪಯೋಗಿಸೋದು ಇವಳೊಬ್ಬಳೇ! ಹಾಗಾಗಿ ಇವಳ ಈಮೇಲ್ ಅಡ್ರೆಸ್ಸಿಂದಲೇ ನನ್ನ ಕಥೆಯೂ ಹೋಗಿದೆ! ನನಗೆ ಸ್ವಂತವಾಗಿ ಈಮೇಲ್ ಅಡ್ರೆಸ್ ಇಲ್ಲ ಅನ್ನೋದನ್ನೇ ಮರೆತನಲ್ಲ! ಅಜ್ಜಿಗೆ ಹೇಳಬೇಡ ಎಂದಾಗ ಆ ಪೋಕ್ರಿ ಹರ್ಷ ಅದಕ್ಕೇ ನಕ್ಕನೇ! ಛೆ! ನನಗೆ ನಿಜಕ್ಕೂ ಮರ ಮುಂಡೆಯೇ ಹೌದು!'

''ಸರ್! ಕಥೆಯನ್ನ ನಾನು ಕಳಿಸಿಲ್ಲ! 'ರಾಧೇಕೃಷ್ಣ' ಅನ್ನೋ ಲೇಖಕರು ಇವರು! ನನ್ನ ಪತಿಯವರು!'' ಎಂದಾಗ ರಾಧಾರಮಣಿಯ ಮೊಗದಲ್ಲಿ ಅದೆಷ್ಟು ಹೆಮ್ಮೆ!

'ಹಾ! ರಾಧೇ! ನನ್ನ ಸ್ವೀಟ್ ರಾಧೇ! ನಿನಗೂ ನನ್ನ ಬಗ್ಗೆ ಇನ್ನೂ 'ಇದು' ಇದೆಯೇ?'

'ಸಾರ್! ಇದು ಒಳ್ಳೆ ಸರ್ಪ್ರೈಸ್ ಆಗಿದೆ! ಒಂದೇ ಮನೆ! ಒಂದೇ ಈಮೇಲ್ ಅಡ್ರೆಸ್! ಎರಡು ಲೇಖಕರು! ನಮ್ಮ ರೈಟ್ ಅಪ್ಗೆ ಒಳ್ಳೆ ಶಿರೋನಾಮೆ ಸಿಕ್ತು!'

ಕೃಷ್ಣಪ್ಪನವರ ಮನದಲ್ಲಿ ಯಕ್ಷಗಾನದ ಭೀಮಸೇನ ನಿರ್ಗಮಿಸಿ ನಾಟ್ಯಮಯೂರೀ ಕುಣಿಯತೊಡಗಿತು.



'ಒಂದೇ ಒರೆಯಲ್ಲಿ ಎರಡು ಖಡ್ಗ ಇರಲು ಸಾಧ್ಯವಿಲ್ಲ! ಆದರೆ ಒಂದೇ ಮನೆಯಲ್ಲಿ ಎರಡು ಲೇಖಕರು ಇರಬಾರದೆಂದು ಹೇಳಿದವರ್ಯಾರು?'

ಕೃಷ್ಣಪ್ಪ ನವರು ಬಾಯ್ತುಂಬ ಸಿಹಿಯನ್ನಿಟ್ಟುಕೊಂಡು ಸ್ನೇಹದಿಂದ ಹೆಂಡತಿಯನ್ನು ನೋಡಿ ಮುಗುಳುನಕ್ಕರು!

# ಒಂದು ಕತೆಯ 99 ಅವತಾರಗಳು

**- ಎಸ್. ದಿವಾಕರ್**

“ಎಸ್ ಎಂಬ ಬಸ್ಸಿನಲ್ಲಿ ನೂಕುನುಗ್ಗಲಿನ ಸಮಯ. ರಿಬ್ಬನ್ನಿಗೆ ಬದಲಾಗಿ ದಾರ ಸುತ್ತಿಕೊಂಡ ಹ್ಯಾಟಿನ, ಯಾರೋ ಎಳೆದುಬಿಟ್ಟಿರಬೇಕೆಂದು ಅನ್ನಿಸುವಂಥ ಉದ್ದ ಕುತ್ತಿಗೆಯ ಸುಮಾರು 26 ವರ್ಷದ ಒಬ್ಬ ವ್ಯಕ್ತಿ. ಜನರು ಕೆಳಗಿಳಿಯುತ್ತಿದ್ದಾರೆ. ಮೇಲೆ ಸೂಚಿಸಿದ ವ್ಯಕ್ತಿ ತನ್ನ ಪಕ್ಕದಲ್ಲಿ ನಿಂತಿರುವವನ ದೆಸೆಯಿಂದ ಕೆರಳುತ್ತಾನೆ. ಯಾರಾದರೊಬ್ಬರು ಹಾದು ಹೋದಾಗಲೆಲ್ಲ ನನ್ನನ್ನೇಕೆ ತಳ್ಳುತ್ತಿ ಎಂದು ಬೈಯುತ್ತಾನೆ. ಆಕ್ರಮಣಕಾರಿಯೆನಿಸುವ, ಮೂಗು ಸೊರಗುಟ್ಟುವ ಧ್ವನಿ. ಒಂದು ಖಾಲಿ ಸೀಟನ್ನು ನೋಡಿದ್ದೇ ಅವನು ಅದರಲ್ಲಿ ಕುಸಿದು ಕೂರುತ್ತಾನೆ.

**ವಿವಿಧ ಸಾಹಿತ್ಯ ಪ್ರಕಾರಗಳಿಗೊಂದು ಮಾರ್ಗದರ್ಶಿ**

*“ಎರಡು ಗಂಟೆಯ ನಂತರ ನಾನು ಅವನನ್ನು ಗಾರ್ ಸೇಂಟ್-ಲಜಾರ್ ಎದುರಿಗಿರುವ ಕೋರ್‌ದರೋಮ್ ಬಳಿ ನೋಡುತ್ತೇನೆ. ಅವನು ಒಬ್ಬ ಸ್ನೇಹಿತನ ಜೊತೆಗಿದ್ದು ಆ ಸ್ನೇಹಿತ “ನೀನು ನಿನ್ನ ಓವರ್‌ಕೋಟಿಗೆ ಇನ್ನೊಂದು ಗುಂಡಿ ಹೊಲಿಸಿಕೊಳ್ಳಬೇಕು” ಎಂದು ಹೇಳುತ್ತಾನೆ. ಎಲ್ಲಿ (ಲೇಪಲ್ಲುಗಳ ಮೇಲೆ), ಯಾಕೆ ಎಂದು ಕೂಡ ತೋರಿಸುತ್ತಾನೆ.”*

ಇದು ಫ್ರೆಂಚ್ ಲೇಖಕ ರೇಮಂಡ್ ಕ್ವೆನೊ (1903-1976) ಬರೆದಿರುವ ಎಕ್ಸರ್‌ಸೈಸಸ್ ಇನ್‌ದ ಸ್ಟೈಲ್ (ಶೈಲಿಯ ಅಧ್ಯಾಯಗಳು) ಎಂಬ ಕಾದಂಬರಿಯ ಮೊದಲ ಅಭ್ಯಾಸ. 1979ರಲ್ಲಿ ಬಾರ್ಬರಾರೈಟ್ ಎಕ್ಸರ್‌ಸೈಸಸ್ ಇನ್ ಸ್ಟೈಲ್ ಎಂದು ಇಂಗ್ಲಿಷಿಗೆ ಅನುವಾದಿಸಿದ ಈ ಕಾದಂಬರಿ ಮೇಲಿನ ಪ್ರಸಂಗವನ್ನು 99 ಬಾರಿ ಬೇರೆ ಬೇರೆ ಶೈಲಿಗಳಲ್ಲಿ, ಬೇರೆ ಬೇರೆ ಸಾಹಿತ್ಯ ಪ್ರಕಾರಗಳಲ್ಲಿ ಪುನರ್ರೂಪಿಸುತ್ತದೆ. ಪ್ರತಿಯೊಂದರಲ್ಲೂ ಎಸ್ ಎಂಬ ಬಸ್ಸನ್ನು ಹತ್ತುವ ನಿರೂಪಕ, ಉದ್ದ ಕುತ್ತಿಗೆಯಿರುವ ವಿಚಿತ್ರ ಹ್ಯಾಟಿನವನೊಬ್ಬ ಇನ್ನೊಬ್ಬ ಪ್ರಯಾಣಿಕನ ಜೊತೆ ವಾಗ್ವಾದ ಮಾಡುವುದಕ್ಕೆ ಸಾಕ್ಷಿಯಾಗುತ್ತಾನೆ; ಎರಡು ಗಂಟೆಯ ನಂತರ ಅದೇ ವ್ಯಕ್ತಿಗಾರ್ ಸೇಂಟ್-ಲಜಾರ್ ಬಳಿ ಇನೊಬ್ಬನಿಂದ ತನ್ನ ಓವರ್‌ಕೋಟಿಗೆ ಇನ್ನೊಂದು ಗುಂಡಿ ಹೊಲಿದುಕೊಳ್ಳುವ ಬಗ್ಗೆ ಸಲಹೆ ಪಡೆಯುವುದನ್ನು ಗಮನಿಸುತ್ತಾನೆ. ಇಷ್ಟೇ ಈ ಕಾದಂಬರಿಯ ಕಥಾ ಸಂವಿಧಾನ. ಇದೊಂದು ಅತಿ ಸಣ್ಣ ಕತೆಯೆನ್ನಿ. ಆದರೆ ಇದೇ ಒಂದು ಸುನೀತ, ಒಂದು ಅಪೇರಾ, ವೈಜ್ಞಾನಿಕ ಕತೆ, ದ್ವಿಪದಿ, ಹಾಯ್ಕು, ಅಧಿಕೃತ ವರದಿ, ಪಾಟಿ ಸವಾಲು, ಕನಸು, ಬೆನ್ನುಡಿ, ಅಜ್ಞಾನ, ಗತಕಾಲ, ಕಾಮೆಡಿ, ಸಸ್ಯಶಾಸ್ತ್ರೀಯ ವಿವರ, ಸ್ವಚ್ಛಂಧ ಪದ್ಯ - ಹೀಗೆ ವಿವಿಧ ರೂಪಗಳಲ್ಲಿ, ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ, ಆಡುಮಾತಿನಲ್ಲಿ ಅಥವಾ ಶಿಷ್ಟ ಭಾಷೆಯಲ್ಲಿ ರೂಪಾಂತರಗೊಳ್ಳುತ್ತದೆ. ರೇಮಂಡ್ ಕ್ವೆನೋನ ಪ್ರಕಾರ ಈ ರೂಪಾಂತರಗಳು ಅಥವಾ ಮಾರ್ಪಾಡುಗಳು “ಭಾಷೆಗೆ ಹಿಡಿದ ತುಕ್ಕನ್ನು (ಅಂದರೆ ಚರ್ವಿತಚರ್ವಣವನ್ನು) ನಿವಾರಿಸುವ ಮೂಲಕ ವಿವಿಧ ಸಾಹಿತ್ಯ ಪ್ರಕಾರಗಳಿಗೊಂದು ಮಾರ್ಗದರ್ಶಿಯಾಗುತ್ತವೆ.”



1947ರಲ್ಲಿ ಫ್ರಾನ್ಸಿನಲ್ಲಿ ಪ್ರಕಟವಾದ ಈ ಕಾದಂಬರಿ ತನ್ನ ವಿಶಿಷ್ಟ ವಿಚಾರಗಳನ್ನು ತಾರ್ತಿಕ ಅಂತ್ಯದತ್ತ ಕೊಂಡೊಯ್ದ ಕ್ರಾಂತಿಕಾರಿ ಕೃತಿ. ಪ್ರಯೋಗಶೀಲತೆಗೆ ಹೆಸರಾದ ಕ್ವೆನ್ರೊ ಆಡುಮಾತಿನ ಫ್ರೆಂಚನ್ನು ಪುಟದ ಮೇಲೆ ಪಡಿಮೂಡಿಸಿದವನು. ಈ ಕಾದಂಬರಿಗೆ ಸ್ಫೂರ್ತಿ ನೀಡಿರಬಹುದಾದ ಮೂಲ ಪ್ರಸಂಗವನ್ನು ಅವನೇ ಎಲ್ಲಿಯೋ ಗಮನಿಸಿರಬೇಕು ಅಥವಾ ಯಾರೋ ಅವನಿಗೆ ಹೇಳಿರಬೇಕು ಅಥವಾ ಅವನೇ ಸೃಷ್ಟಿಸಿಕೊಂಡಿರಬೇಕು. ಇಲ್ಲಿರುವ ಒಂದಕ್ಕೊಂದು ಸಂಬಂಧವಿಲ್ಲದ ಎರಡು ಘಟನೆಗಳೇ ಕಥನರೂಪಗಳನ್ನು ಕುರಿತು ಚಿಂತಿಸುವಂತೆ ಅವನನ್ನು ಪ್ರೇರೇಪಿಸಿರಬೇಕು. ಅವನ ದೃಷ್ಟಿಯಲ್ಲಿ ಬರವಣಿಗೆಯೆನ್ನುವುದು ನಾವು ನಮ್ಮ ಕಥನಗಳನ್ನು ಹೇಗೆ ರಚಿಸಬಹುದೆಂದು ನಿರ್ಧರಿಸುವ ಕ್ರಿಯೆ; ನಮ್ಮ ವಿಚಾರಗಳನ್ನು ಒಂದು ಗೊತ್ತಾದ ಮಾರ್ಗದಲ್ಲಿ ಕರೆದೊಯ್ಯುವ ಕ್ರಿಯೆ. ಉದಾಹರಣೆಗೆ ಈ ಕಾದಂಬರಿಯಲ್ಲಿರುವ ''ಸ್ವಚ್ಛಂದ ಪದ್ಯ'' ಎಂಬ ಅಭ್ಯಾಸವನ್ನು ನೋಡಬಹುದು. ಕಾವ್ಯವೆನ್ನುವುದು ಸಾಂದ್ರತೆಯನ್ನು ಹಾಗೂ ಧ್ವನಿಶಕ್ತಿಯನ್ನು ಬಯಸುವುದರಿಂದಲೇ ಈ ಅಭ್ಯಾಸ ಒಂದು ಬಗೆಯ ವಿಷಣ್ಣತೆಯ ಗೀತವಾಗುತ್ತದೆ.

**ತುಂಬಿದ ಬಸ್ಸು**
**ಖಾಲಿ ಹೃದಯ**
**ಉದ್ದಕುತ್ತಿಗೆ**
**ಹೆಣೆದರಿಬ್ಬನ್ನು**
**ಪಾದ ಸಪಾಟು**
**ಖಾಲಿ ಜಾಗ**
**ಉರಿಯದ ಸಾವಿರ ದೀಪಗಳ ಸ್ಟೇಷನ್ನಿನ ಬಳಿ**
**ಆ ಹೃದಯದ, ಆ ಕುತ್ತಿಗೆಯ, ಆ ರಿಬ್ಬನ್ನಿನ,**
**ಆ ಕಾಲುಗಳ, ಆ ಖಾಲಿ ಜಾಗದ,**
**ಆ ಗುಂಡಿಯ**
**ಅನಿರೀಕ್ಷಿತ ಭೇಟಿ.**

ಒಂದು ಘಟನೆಯನ್ನು ಅಥವಾ ಪ್ರಸಂಗವನ್ನು ವಿಭಿನ್ನ ರೂಪಗಳಲ್ಲಿ ಪುನರಾವರ್ತಿಸುವ, ಆ ಮೂಲಕ ನಿರೂಪಣೆಯಲ್ಲಿ ವೈವಿಧ್ಯವನ್ನು ಸಾಧಿಸುವ ಈ ಕಾದಂಬರಿ ಮೊದ ಮೊದಲು ವಿಚಿತ್ರವೆನಿದರೂ ಕ್ರಮೇಣ ಬಗೆಬಗೆಯ ಅಸಂಗತ ಪ್ರಕಾರಗಳನ್ನು ಒಳಗೊಳ್ಳುತ್ತ ಹೋದಂತೆ ವಿನೋದಭರಿತವೂ ಆಗುತ್ತದೆ. ಜೊತೆಗೆ ಒಬ್ಬ ಲೇಖಕನಾಗಿ ಕ್ವೆನೋನ ಪ್ರಾಯೋಗಿಕತೆಯ ಯಶಸ್ಸನ್ನು ತೋರಿಸುವುದಲ್ಲದೆ ಕತೆಯೊಂದರಲ್ಲಿ ವಸ್ತುವಿಗಿಂತ ಶೈಲಿಯೇ (ಅಥವಾ ನಿರೂಪಣೆಯೇ?) ಹೇಗೆ ಮುಖ್ಯವೆಂಬುದನ್ನೂ ತೋರಿಸಿ ಕೊಡುತ್ತದೆ.



ಕಾದಂಬರಿಯ ಎರಡನೆಯ ಅಭ್ಯಾಸದ ಶೀರ್ಷಿಕೆ ಡಬಲ್ ಎಂಟ್ರಿ. ಅದು ''ನಡುಹಗಲಿನತ್ತ, ನಡುಹಗಲಿನಲ್ಲಿ ನಾನು ಬಸ್ಸನ್ನು ಹತ್ತಿ, ಪ್ರಯಾಣಿಕರನ್ನು ಕರೆದೊಯ್ಯುವ ಬಸ್ಸನ್ನು ಏರಿ, ಬಸ್ಸಿನಲ್ಲಿ'' ಎಂದು ಪ್ರಾರಂಭವಾದರೆ ಅಫಿಷಿಯಲ್ ಲೆಟರ್ ಎಂಬ ಅಭ್ಯಾಸ ''ನಾನು ಈ ಮುಂದಿನ ವಾಸ್ತವಾಂಶಗಳಿಗೆ ನಿಷ್ಪಕ್ಷಪಾತ ಸಾಕ್ಷಿಯಾಗಿದ್ದೆ ಎಂದು ತಮ್ಮಲ್ಲಿ ಬಿನ್ನೈಸುತ್ತೇನೆ. ಇವತ್ತು ಹೆಚ್ಚು ಕಡಿಮೆ ನಡುಹಗಲಿನಲ್ಲಿ ನಾನು ಪ್ಲೇಸ್ ಶಾಂಪೆರೆಯ ದಿಕ್ಕಿನಲ್ಲಿ

ಹೊರಟಿದ್ದ ಒಂದು ಬಸ್ಸಿನಲ್ಲಿದ್ದೆ. ಸದರಿ ಬಸ್ಸು ತುಂಬಿ ಹೋಗಿತ್ತು; ಕಂಡಕ್ಟರು ಯಾವುದೇ ವಿಶೇಷ ಕಾರಣವಿಲ್ಲದೆ ತುಂಬಾ ಜನರನ್ನು ಹತ್ತಿಸಿಕೊಂಡಿದ್ದ'' ಎಂದು ಶುರುವಾಗುತ್ತದೆ. ಪಾಟಿ ಸವಾಲು ಎಂಬ ಅಭ್ಯಾಸ ಹೇಗೆ ಮೊದಲಾಗುತ್ತದೆ ನೋಡಿ:

**''ಆ ದಿನ ಪೋರ್ಟ್‌ದ ಶಾಂಪರೆಗೆ ಹೋಗುವ 12.23ರ ಎಸ್ ಬಸ್ಸು ಎಷ್ಟು ಹೊತ್ತಿಗೆ ಬಂತು?''**

**''12.38ಕ್ಕೆ.''**

**''ಆ ಬಸ್ಸಿನಲ್ಲಿ ತುಂಬ ಜನ ಇದ್ದರಾ?''**

**''ಜನವೋ ಜನ.''**

**''ಅವರಲ್ಲಿ ಯಾರನ್ನಾದರೂ ಗುರುತಿಸಿದಿರಾ?''**

**''ಉದ್ದ ಕುತ್ತಿಗೆಯಿದ್ದ, ಹ್ಯಾಟಿನ ಸುತ್ತ ಹೆಣೆದ ದಾರವನ್ನು ಸುತ್ತಿಕೊಂಡಿದ್ದ ಒಬ್ಬನನ್ನು ನೋಡಿದೆ.''**

ಇದು ದೃಷ್ಟಿಗೋಚರ ವಾಸ್ತವಾಂಶಗಳ ಇದಿರಿನಲ್ಲಿ ಜೀವಂತ ಭಾವನೆಗಳಿಗೆ ಬೆಲೆಯಿಲ್ಲವೆಂದು ಸೂಚಿಸುವಂತಿದೆ. ನಮ್ಮಲ್ಲಿ ಕೆಲವರು ಮಾತುಮಾತಿಗೂ ಕೆಲವು ನುಡಿಗಟ್ಟುಗಳನ್ನು ಪೋಣಿಸುವುದುಂಟಷ್ಟೆ. ಇಲ್ಲಿ ನಿಂಗೊತ್ತಲ್ಲ ಎನ್ನುವುದು ಅಂಥದೊಂದು ಅಭ್ಯಾಸ:

**ಸರಿ, ನಿಂಗೊತ್ತಲ್ಲ, ಬಸ್ಸು ಬಂತು, ನಾನು ಹತ್ತಿಕೊಂಡೆ. ಆಮೇಲೆ ನಿಂಗೊತ್ತಲ್ಲ, ಒಬ್ಬ ನನ್ನ ಕಣ್ಣಿಗೆ ಬಿದ್ದ. ನಾನು, ನಿಂಗೊತ್ತಲ್ಲ, ಅವನ ಉದ್ದ ಕುತ್ತಿಗೆಯನ್ನ, ಅವನ ಹ್ಯಾಟನ್ನು ಸುತ್ತಿಕೊಂಡಿದದ್ದ ದಾರವನ್ನ ನೋಡಿದೆ. ಆಮೇಲೆ, ನಿಂಗೊತ್ತಲ್ಲ, ಅವನು ತನ್ನ ಪಕ್ಕದಲ್ಲಿದ್ದ ವ್ಯಕ್ತಿಯ ಮೇಲೆ ರೇಗಾಡಿದ. ಆ ವ್ಯಕ್ತಿ, ನಿಂಗೊತ್ತಲ್ಲ, ಅವನ ಕಾಲನ್ನು ತುಳೀತಿದ್ದ. ಆಮೇಲೆ, ನಿಂಗೊತ್ತಲ್ಲ, ಅವನು ಹೋಗಿ ಕೂತುಕೊಂಡ.**

**ಸರಿ, ಆಮೇಲೆ, ನಿಂಗೊತ್ತಲ್ಲ, ನಾನು ಅವನನ್ನ ಕೋರ್‌ದರೋಮ್‌ನಲ್ಲಿ ನೋಡಿದೆ. ಅವನು, ನಿಂಗೊತ್ತಲ್ಲ, ಒಬ್ಬ ಸ್ನೇಹಿತನ ಜೊತೆ ಇದ್ದ.**

**ಆ ಸ್ನೇಹಿತ, ನಿಂಗೊತ್ತಲ್ಲ ''ನಿನ್ನ ಕೋಟಿಗೆ ಇನ್ನೊಂದು ಗುಂಡಿ ಬೇಕೇ ಬೇಕು'' ಅಂತ ಅವನಿಗೆ ಹೇಳುತ್ತಿದ್ದ, ನಿಂಗೊತ್ತಲ್ಲ.**

ಇನ್ನೊಂದು ಅಭ್ಯಾಸ ಕಾಮನಬಿಲ್ಲು. ಇದರಲ್ಲಿ ವ್ಯಕ್ತಿಗಳಿಗೂ ವಸ್ತುಗಳಿಗೂ ವಿವಿಧ ಬಣ್ಣಗಳನ್ನು ಆರೋಪಿಸಲಾಗಿದೆ:

**ಒಂದು ದಿನ ನಾನು ಊದಾ ಬಣ್ಣದ ಒಂದು ಬಸ್ಸಿನಲ್ಲಿರಬೇಕಾಯಿತು. ಅಲ್ಲೊಬ್ಬ ನಗೆಪಾಟಲ ಹುಡುಗ – ನೀಲಿ ಕುತ್ತಿಗೆ, ದಾರ ಸುತ್ತಿದ ಹ್ಯಾಟು. ಇದ್ದಕ್ಕಿದ್ದಂತೆ ಅವನು ನೀಲಿ ಮನುಷ್ಯನೊಬ್ಬನಿಗೆ ಛೀಮಾರಿ ಹಾಕಿದ. ಬಸ್ಸಿಂದ ಯಾರಾದರೂ ಕೆಳಗಿಳಿದಾಗಲೆಲ್ಲ ತನ್ನನ್ನು ನೂಕುತ್ತಿದ್ದನೆಂದು ಹಸಿರು ದನಿಯಲ್ಲಿ ಅವನಿಗೆ ಧಮಕಿ ಹಾಕಿದ. ಅಷ್ಟು ಹೇಳಿದ್ದೇ ಹಳದಿ ಸೀಟಿನತ್ತ ನುಗ್ಗಿ ಅದರಲ್ಲಿ ಕೂತುಕೊಂಡ.**



**ಎರಡು ಗಂಟೆಯ ನಂತರ ನಾನು ಅವನನ್ನು ಒಂದು ಕಿತ್ತಳೆ ಬಣ್ಣದ ಸ್ಟೇಷನ್ನಿನ ಎದುರಿಗೆ ಕಂಡೆ. ಅವನು ಒಬ್ಬ ಸ್ನೇಹಿತನ ಜೊತೆಗಿದ್ದ. ಆ ಸ್ನೇಹಿತ ಅವನ ಕೆಂಪು ಓವರ್‌ಕೋಟಿಗೆ ಇನ್ನೊಂದು ಗುಂಡಿ ಹೊಲಿಸಿಕೊಳ್ಳಬೇಕೆಂದು ತಾಕೀತು ಮಾಡುತ್ತಿದ್ದ.**

ಮೊದಲೇ ಹೇಳಿದಂತೆ ಶೈಲಿಯ ವೈವಿಧ್ಯವನ್ನೂ ನಿರೂಪಣೆಯ ಸಾಧ್ಯತೆಗಳನ್ನೂ ಒಟ್ಟಿಗೆ ತೋರಿಸಿಕೊಡುವ ಈ ಕಾದಂಬರಿ ಇದುವರೆಗೆ 30ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿದೆ; ಒಂದು ಕಾಮಿಕ್ ಪುಸ್ತಕವಾಗಿ, ಒಂದು ನಾಟಕವಾಗಿ ಕೂಡ ರೂಪಾಂತರಗೊಂಡಿದೆ. ಇಟಲಿಯ ಉಂಬರ್ತೊ ಈಕೊ, ಸೆರ್ಬಿಯಾದ ದನಿಲೊ ಕಿಸ್, ಸ್ಪೇನಿನ ಎನ್ರಿಕೆ ವಿಲಾ-ಮಾತಾಸ್ ಮೊದಲಾದ ಪ್ರಸಿದ್ಧ ಲೇಖಕರು ಕ್ವೆನೋನ ಈ ಅಭ್ಯಾಸಗಳಿಗೆ ತಮ್ಮತಮ್ಮ ಭಾಷೆಗಳಲ್ಲಿ ತಮ್ಮ ಅಭ್ಯಾಸಗಳನ್ನೂ ಸೇರಿಸುವಂತೆ ಪ್ರೇರೇಪಿಸಿದೆ.

ಕಾದಂಬರಿಯಲ್ಲಿರುವ ಎರಡು ಪಾತ್ರಗಳ ಬಗ್ಗೆ ನಮಗೇನೂ ಗೊತ್ತಿಲ್ಲ. ಅವರು ಮೊದಲು ಏನಾಗಿದ್ದರು, ಎಲ್ಲಿಗೆ ಹೊರಟಿದ್ದಾರೆ ಎಂಬುದೂ ನಮಗೆ ತಿಳಿಯುವುದಿಲ್ಲ. ಆದರೆ ಈ ಎರಡು ಪಾತ್ರಗಳು ಮತ್ತು ಇಲ್ಲಿರುವ ಎರಡು ಅತಿ ಸಣ್ಣ ಘಟನೆಗಳು ಮತ್ತೆಮತ್ತೆ ನಿರೂಪಣೆಗೊಂಡು, ಕೆಲವು ಸಂದರ್ಭಗಳಲ್ಲಿ ಪುನರ್‍ರೂಪಗೊಂಡು, ಪುನರ್‌ಧ್ವನಿಗೊಂಡು ಹಾಗೂ ಪುನರ್‌ವ್ಯಾಖ್ಯಾನಗೊಂಡು ಭಾಷೆಯ ಶಕ್ತಿಯನ್ನು ಹೇಗೋ ಹಾಗೆ ಕತೆ ಹೇಳುವ ಪ್ರತಿಭೆಯನ್ನೂ ಸಮರ್ಥಿಸುವ ಮೂಲಕ ಒಂದು ಮಿಥಕವೇ ಆಗಿಬಿಡುತ್ತವೆ. ಈ ಮಾತಿಗೊಂದು ನಿದರ್ಶನವಾಗಿ ನಮ್ಮ ರಾಮಾಯಣವನ್ನೇ ನೋಡಬಹುದು. ರಾಮಾಯಣವೆನ್ನುವುದು ಅನೇಕ ಮಂದಿ ಬೇರೆ ಬೇರೆ ಭಾಷೆಗಳಲ್ಲಿ ಬರೆದಿರುವ ಕಾವ್ಯ, ಜಾನಪದಕಥೆ, ಕೀರ್ತನೆ, ಹಾಡು, ಮೊದಲಾದವುಗಳ ಮೊತ್ತ. ಅದನ್ನು ಆಧರಿಸಿದ ನಾಟಕಗಳಿಗೆ, ನೃತ್ಯರೂಪಕಗಳಿಗೆ, ಸಿನೆಮಾಗಳಿಗೆ, ವರ್ಣಚಿತ್ರಗಳಿಗೆ, ಟಿ.ವಿ. ಧಾರಾವಾಹಿಗಳಿಗೆ ಲೆಕ್ಕವಿಲ್ಲ. ಆದರೆ ಇವೆಲ್ಲಕ್ಕೂ ಮೂಲವಾಗಿರುವ ಕತೆಯೊಂದು ಇದ್ದೇ ಇದೆಯಷ್ಟೆ

ರೇಮಂಡ್ ಕ್ವೆನೊ ಹುಟ್ಟಿದ್ದು 1903ರಲ್ಲಿ, ಫ್ರಾನ್ಸಿನ ಲ ಹಾವ್ರ್ ಎಂಬಲ್ಲಿ. ಮೊದಲು ಲ್ಯಾಟಿನ್, ಗ್ರೀಕ್ ಭಾಷೆಗಳನ್ನು ಕಲಿತ ಅವನು ಸೋರ್ಬೋನ್ ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರದಲ್ಲೂ ಮನಃಶಾಸ್ತ್ರದಲ್ಲೂ ಪದವೀಧರನಾದ. ಫ್ರಾನ್ಸಿನ ಸೈನಿಕ ಪಡೆ ಸೇರಿ ಆಲ್ಜೀರಿಯ, ಮೊರೋಕೊ, ಜರ್ಮನಿಗಳಲ್ಲಿ ಸೇವೆ ಸಲ್ಲಿಸಿದ. 1938ರಿಂದ ಕೊನೆಯವರೆಗೂ ಎಡಿಷನ್ಸ್ ಗಾಲಿಮಾ ಎಂಬ ಪ್ರಸಿದ್ಧ ಫ್ರೆಂಚ್ ಪ್ರಕಾಶನ ಸಂಸ್ಥೆಯಲ್ಲಿ ಸಂಪಾದಕನಾಗಿದ್ದ. ಗಣಿತಶಾಸ್ತ್ರದಲ್ಲೂ ಪಾರಂಗತನಾಗಿದ್ದ ಕ್ವೆನೊ ಸರ್‍ರಿಯಲಿಸ್ಟರ ಗುಂಪಿನಲ್ಲೂ ಸಕ್ರಿಯನಾಗಿದ್ದ. ಅವನು ಸ್ಥಾಪಿಸಿದ ಒಂದು ಸಾಹಿತ್ಯ ಪಂಥದ ಹೆಸರು ಔಲಿಪೊ. ಹಾಗೆಂದರೆ ಸಂಭವನೀಯ ಸಾಹಿತ್ಯ ಶಿಬಿರ ಎಂದರ್ಥ.



ಕೊನೆಯದಾಗಿ ಈ ಕಾದಂಬರಿಯ ಬೆನ್ನುಡಿ ಹೇಗಿರಬಹುದು? ಅಂಥದೊಂದು ಅಭ್ಯಾಸ ಈ ಕೃತಿಯೊಳಗೇ ಇದೆ:

**ಅನೇಕ ಅದ್ವಿತೀಯ ಕೃತಿಗಳನ್ನು ನೀಡಿ ನಮ್ಮನ್ನು ಚಿರಋಣಿಗಳನ್ನಾಗಿ ಮಾಡಿರುವ ಪ್ರಖ್ಯಾತ ಕಾದಂಬರಿಕಾರ ಎಕ್ಸ್ ತಮ್ಮ ಅದ್ಭುತ ಪ್ರತಿಭೆಯನ್ನು ಧಾರೆಯೆರೆದು**

ರಚಿಸಿರುವ ಈ ಹೊಸ ಕಾದಂಬರಿಯಲ್ಲಿ ತಮ್ಮನ್ನು ತುಂಬ ಸ್ಪಷ್ಟವಾದ ಪಾತ್ರಗಳಿಗಷ್ಟೇ ಸೀಮಿತಗೊಳಿಸಿಕೊಂಡಿದ್ದಾರೆ. ಆ ಪಾತ್ರಗಳು ವಯಸ್ಕರು, ಮಕ್ಕಳು ಸೇರಿದಂತೆ ಎಲ್ಲರಿಗೂ ಅರ್ಥವಾಗುವಂತೆ ವರ್ತಿಸುತ್ತವೆ. ಇಲ್ಲಿನ ಕಥಾಸಂವಿಧಾನ ಈ ಕತೆಯ ನಾಯಕನ ಹಾಗೂ ನಾಯಕನನ್ನು ನೋಡಿದ ತಕ್ಷಣ ಜಗಳಕ್ಕಿಳಿಯುವ ಒಬ್ಬ ನಿಗೂಢ ಮನುಷ್ಯನ ನಡುವೆ ನಡೆಯುವ ಭೇಟಿಯೊಂದರ ಸುತ್ತ ಸುತ್ತುತ್ತದೆ. ಕಡೆಯ ಪ್ರಸಂಗದಲ್ಲಿ ನಾವು ಆ ನಿಗೂಢ ಮನುಷ್ಯ ದರ್ಜಿಯ ವೃತ್ತಿಯಲ್ಲಿ ಪಾರಂಗತನಾದ ತನ್ನ ಗೆಳೆಯನೊಬ್ಬನ ಸಲಹೆಯನ್ನು ಅತೀವ ಆಸಕ್ತಿಯಿಂದ ಆಲಿಸುತ್ತಿರುವುದನ್ನು ನೋಡುತ್ತೇವೆ. ಕಾದಂಬರಿಕಾರ ಎಕ್ಸ್ ಅಪೂರ್ವ ಒಳನೋಟಗಳಿಂದ ಸೃಷ್ಟಿಸಿರುವ ಈ ಕೃತಿ ನಮ್ಮನ್ನು ಪರವಶಗೊಳಿಸುವುದರಲ್ಲಿ ಸಂಶಯವಿಲ್ಲ.

---

ಯಾರೋ ನಮ್ಮ ಸರ್ಕ್ಯುಲರ್‌ನಲ್ಲಿ ಬೇಕು ಅಂತಲೇ ...
ಟಿಪ್ಪು ಜಯಂತಿಯನ್ನು 'ತಪ್ಪು ಜಯಂತಿ' ಅಂತ ಮಾಡಿದ್ದಾರೆ!



# ಬೇಕಾಗಿದೆ ಬಾಡಿಗೆ ಮನೆ

- ಸಿ.ಆರ್. ಸತ್ಯ

**ಮೊ**ನ್ನೆ ರಿಯಲ್ ಎಸ್ಟೇಟ್ ನಡೆಸೋ ನನ್ನ ಸ್ನೇಹಿತ ರಂಗು ನಮ್ಮ ಮನೆಗೆ ಬಂದು ನನ್ನ ಹತ್ತಿರ ಹರಟೆ ಕೊಚ್ಚುತ್ತಿದ್ದ. ಅವನ ಮೊಬೈಲ್ ರಿಂಗ್ ಆಯ್ತು. ಬೇಜಾರಿನಿಂದ ಮೊಬೈಲ್ ಕೈಗೆ ತೊಗೊಳ್ಳಲಿಲ್ಲ. ಇನ್ನೊಂದು ಸಲ ರಿಂಗ್ ಆಯ್ತು. ಅಸಮಾಧಾನದಿಂದಲೇ ಮೊಬೈಲ್ ಕೈಗೆತ್ತಿಕೊಂಡು, ''ಹಲೋ! ಯಾರು ಬೇಕಿತ್ತು?'' ಅಂತ ಕೇಳಿದ. ಆ ಕಡೆಯಿಂದ ಉತ್ತರ ಬಂದ ತಕ್ಷಣ ಒಂದು ಕ್ಷಣ ಸೆಟೆದು ಕೂತ. (ನನಗೆ ಇನ್ನೊಂದು ಪಾರ್ಟಿಯ ಮಾತು ಕೇಳಿಸುತ್ತಿರಲಿಲ್ಲ)

**ಇವರಿಗೆ ಕಾರ್ಪೊರೇಷನೆ ಎದುರಿಗೆ ತಮ್ಮ ಸ್ಟ್ಯಾಚ್ಯೂ ನೋಡ್ತಾ ಕಾಲ ಕಳೆಯೋ ಆಸೆ!**

ಅವನು ಮಾತಾಡಿದ್ದು ಹೀಗೆ :

''ಓ ಹೋ! ಹೋ!! ಹ್ಯಾಗಿದೀರಿ ಸಾರ್? ಸಾರಿ ಸಾರ್, ಬಾತ್ ರೂಮಿನಲ್ಲಿದ್ದೆ. ನಿಮ್ಮ ಕಾಲ್‌ನ ತಕ್ಷಣ ಅಟೆಂಡ್ ಮಾಡೋಕ್ಕೆ ಆಗಲಿಲ್ಲ.''

''ಖಂಡಿತಾ ಇಲ್ಲ, ಏನ್ ಸಾರ್ ಹಾಗಂದರೆ? ನಿಮ್ಮನ್ನ ಮರೆಯೋಕ್ಕೆ ಆಗುತ್ಯೆ? ನಮ್ಮಂತವರಿಗೆ ನಿಮ್ಮಂತಹ ಕಸ್ಟಮರ್‌ಗಳು ಅಂದರೆ ದೇವರ ಸಮಾನ. ಅದರಲ್ಲೂ ನೀವೂ ಅಂದರೆ''

''ನೋಡ್ತಿದೀನಿ ಸಾರ್, ನೋಡ್ತಿದೀನಿ. ನಿಮ್ಮ ಬಾಡಿಗೆ ರೇಂಜ್‌ನಲ್ಲಿ ಮೂರು ಬೆಡ್‌ರೂಮ್ ಮನೆ ಬಾಡಿಗೆಗೆ ಸಿಗೋದು ಬಹಳ ಕಷ್ಟ ಸಾರ್. ಈಗ ಬೆಂಗಳೂರಿನಲ್ಲಿ ಬಾಡಿಗೆಗಳು ಹೇಗೆ ಏರ್ತಿವೆ ಅಂದರೆ''

''ಹಾಗಲ್ಲ ಸಾರ್. ಹಳೇ ಮನೆಗಳಾದ್ರೂ ಬಾಡಿಗೆ ಕಮ್ಮಿ ಇರಬಹುದು. ಆದರೆ ಅಲ್ಲೇ ವರ್ಷಗಟ್ಟಲೆ ಠಿಕಾಣಿ ಹೂಡಿರೋ ಬಾಡಿಗೆಯವರು ಮನೆ ಬಿಡಲ್ಲವಲ್ಲ?

ಕೆಲವರು ಬಿಡೋದಕ್ಕೆ ಐದು, ಹತ್ತು ಲಕ್ಷಕೊಡಿ, ಬಿಡ್ತೀವಿ ಅಂತಾರೆ. ನಿಮಗೆ ಕಷ್ಟ ಆಗಲ್ವೆ?''

ಗೊತ್ತು ಸಾರ್. ನಾನು ಮರೆತಿಲ್ಲ, ಅದೂ ಅಲ್ಲದೆ ನಿಮಗೆ ಕಾರ್ಪೊರೇಶನ್ ಆಫೀಸ್ ಹತ್ತಿರಾನೇ ಮನೆ ಆಗ್ಬೇಕು ಅಂತೀರಿ. ಅದೆಲ್ಲಾ ಈಗ ಕಮರ್ಷಿಯಲ್ ಜಾಗಗಳಾಗಿವೆ ಸಾರ್. ಅಲ್ಲಿ ಮನೆಗಳು''

''ಹಾಗಲ್ಲ ಸಾರ್. ನೀವು ಹೇಳ್ತಿರೋ ಪೇಟೆಗಳು ಇನ್ನೂ ಇವೆ. ಅವುಗಳಲ್ಲಿ ಬಾಡಿಗೆಗೆ ಇರೋರು ನೂರು ಇನ್ನೂರು ವರುಷಗಳಿಂದ ಪಿತ್ರಾರ್ಜಿತ ಆಸ್ತಿ ಅನ್ನೋ ಹಾಗೆ ಮನೆಗಳನ್ನ ತಮ್ಮದೇ ಮಾಡ್ಕೊಂಡು ಹಾಯಾಗಿದ್ದಾರೆ.''



ಏನಂದ್ರಿ? ನೀರಿನ ಸಮಸ್ಯೇನೇ? ಅದು ಬೆಂಗಳೂರಿನಲ್ಲಿ ಎಲ್ಲಿ ಹೋದರೂ ಇದೆ ಬಿಡಿ!''

''ಸಾರ್, ಈಗ ಕೆರೆಗಳ ಪಕ್ಕ ನಿಮಗೆ ಸಿಗೋದು ಅಂದರೆ ಲಕ್ಷುರಿ ಫ್ಲಾಟ್‌ಗಳು! ನೀವು ಹೇಳ್ತಿರೋ ಕೆರೆ, ನದಿಗಳೂ ಮಾಯವಾಗಿ ಎಷ್ಟೋ ದಶಕಗಳಾದವು ಬಿಡಿ.

ಈಗ ಕೆಂಪಾಂಬುಧಿ ಕೆರೆ, ಸಂಪಂಗಿ ಕೆರೆ, ವೃಷಭಾವತಿ ನದಿ, ಅರ್ಕಾವತಿ ನದಿ ಇವೆಲ್ಲಾ ಚರತ್ರೆ ಪುಸ್ತಕಗಳಲ್ಲಿ ಸೇರ್ಕೊಂಡಿವೆ.''

''ನೀವು ಯೋಚನೆ ಮಾಡಬೇಡಿ ಸಾರ್. ನಲ್ಲಿ ನೀರು ಇಲ್ಲದಿದ್ದರೂ ಬೋರ್ವೆಲ್ ಇರೋ ಕಡೆ ನಿಮಗೆ ಖಂಡಿತಾ ಮನೆ ಮಾಡಿಕೊಡ್ತೀನಿ. ಅಲ್ಲಿ ತನಕ ಸ್ವಲ್ಪ ಸಮಾಧಾನವಾಗಿ ನಿಮ್ಮ ಊರಲ್ಲೇ ಇರಿ. ನೀವು ಇಲ್ಲಿಗೆ ಬೇಗ ಬಂದ್ರೂನೂ, ನಿಮ್ಮನ್ನ ಹೇಳೋವರು ಇಲ್ಲ, ಕೇಳೋವರು ಇಲ್ಲ ಅಂತ ನೀವೇ ಎಷ್ಟೋ ಸಲ ನನಗೆ ಹೇಳಿದ್ದೀರ. ಹಾಗೇ ನೀವಿರೋ ಜಾಗದಲ್ಲೇ ಹ್ಯಾಗೋ ಮ್ಯಾನೇಜ್ ಮಾಡ್ತಿರಿ ಸಾರ್. ನಾನು ನನ್ನ ಬ್ಯುಸಿನೆಸ್ ಫ್ರೆಂಡ್ಸ್‌ಗೆಲ್ಲಾ ಹೇಳಿದೀನಿ. ನನ್ನನ್ನ ನಂಬಿ.''

''ಛೆ! ಛೆ!! ನಿಮ್ಮಂತಹವರು ಒನ್‌ಬೆಡ್ ರೂಮ್ ಫ್ಲಾಟ್‌ನಲ್ಲಿ ಇರ್ತೀರಿ ಅಂದರೆ ಏನು ಅರ್ಥ ಸಾರ್? ನಿಮ್ಮ ದೊಡ್ಡ ಪೇಟ, ಓವರ್ ಕೋಟು, ಕಚ್ಚೆ ಪಂಚೆನೆಲ್ಲಾ ಒಗೆದು ಬಾಲ್ಕನೀಲಿ ಒಣಗಿಸುವುದಕ್ಕೆ ಆಗುತ್ಯೆ? ಯೋಚನೆ ಮಾಡ್ಬೇಡಿ ಸಾರ್. ನಾನು ಇಂಡಿಪೆಂಡೆಂಟ್ ಮನೇನೆ ನೋಡ್ತೀನಿ.''

''ಥ್ಯಾಂಕ್ಸ್ ಸಾರ್. ಬೇಡ, ಬೇಡ! ನಾನೇ ನಿಮಗೆ ಫೋನ್ ಮಾಡ್ತೀನಿ. ಇಡ್ಲಾ...?'' ಅಂತ ಕೊನೆಗೂ ಫೋನ್ ಆಫ್ ಮಾಡಿದ.

ನಾನು, ''ಏನಂತೋ ರಂಗು?'' ಅಂತ ವಿಚಾರಿಸಿದೆ.

''ಅಯ್ಯೋ, ನನ್ನ ಹಳೇ ಕಸ್ಟಮರ್ ಕಣಯ್ಯ. ಸಾವಿರ ರೂಪಾಯಿ ಬಾಡಿಗೇಗೆ ಕಾರ್ಪೋರೇಷನ್ ಆಫೀಸ್ ಮುಂದೆ ಕೆಂಪೇಗೌಡರ ಸ್ಟಾಚ್ಯೂ ಇದ್ಯಲ್ಲ, ಅದು ಕಾಣೋ ಹಾಗೆ ಇರೋ ಒಂದು ಮನೆ ಬಾಡಿಗೇಗೆ ಬೇಕಂತೆ, ಮನೇಗೆ ಒಳ್ಳೇ ನೀರಿನ ಸಪ್ಲೈ ಇರಬೇಕಂತೆ. ಬಾಡಿಗೇಗೆ ಕೊಡಿಸಿ ಅಂತ ನನ್ನನ್ನ ಗೋಳು ಹೊಯ್ಕೋತಾ ಇದಾರೆ. ನಾನು ಎಲ್ಲಿಂದ ತರಲಯ್ಯ ಅಂತಹ ಮನೆ?'' ಅಂದ.

''ಯಾರು ಆತ?'' ಅಂತ ಕೇಳಿದೆ.

''ಮಾಗಡಿ ಕೆಂಪೇಗೌಡರು ಕಣೋ! ನೂರಾರು ವರ್ಷಗಳ ಕಾಲ ಮಾಗಡೀಲೇ ಇದ್ದೂ ಇದ್ದೂ ಬೇಜಾರಾಗಿದೆಯಂತೆ. ಅಲ್ಲಿ ಇಲ್ಲಿ ಸ್ಟೈಟ್‌ಗೆ ಅಪ್ಲೈ ಮಾಡಿದರಂತೆ. ಯಾರೂ ಕ್ಯಾರೇ ಅನ್ನಲಿಲ್ಲವಂತೆ. ಈಗ ಬೆಂಗಳೂರಿಗೆ ಬಂದು ಕಾರ್ಪೋರೇಶನ್ ಆಫೀಸ್ ಮುಂದೆ ತಮ್ಮ ಸ್ಟಾಚ್ಯೂನ ನೋಡ್ತಾ ಕಾಲ ಕಳೆಯೋಕ್ಕೆ ಆಸೆಯಂತೆ. ನಾನೇನು ಮಾಡ್ಲಿ ಹೇಳು?'' ಅಂತ ನಕ್ಕು ನನ್ನ ಹೆಂಡತಿ ತಂದಿಟ್ಟಿದ್ದ ಕೋಡುಬಳೇನ ಬಾಯಿಗೆ ಹಾಕ್ಕೊಂಡ.

---

**ಮದುವೆ ನಂತರ**

ಬಿಸಿ ನೀರ್ ಕೊಡೆ
ಕಾಫೀ ಕೊಡೆ
ತಿಂಡಿ ಕೊಡೆ
ಊಟ ಕೊಡೆ
ಹೋಗಲಿ ಬಿಡೆ
ಆರಾಮವಾಗಿ ಇರಲು ಬಿಡೆ



# ಉಪಮಾ, ಮುರುಕು, ಮೆದುವಡಾ...

**- ಜೈಕುಮಾರ್ ಮರಿಯಪ್ಪ**

ಇದ್ಯಾವನೋ ಇವನು ಹೋಟಲ್ ಮಾಣಿ ತಿಂಡಿ ಹೆಸರು ಒದರ್ತಾ ಅವನಲ್ಲಾ ಅನ್ಕೊಂಡ್ರಾ. ಹೈ ಸುಮ್ನಿರಿ ಸ್ವಾಮಿ ನನ್ನ ಕಷ್ಟ ನನಗೆ! ಅಲ್ಲ ಶುದ್ಧ ಕನ್ನಡದ ಹೆಸರು ಎಲ್ಲೆಲ್ಲೋ ಹೇಗೇಗೋ ಬಳಕೆ ಆಗ್ತಾ ಇದ್ದರೆ ಕನ್ನಡವನ್ನು ಕಷ್ಟ ಪಟ್ಟು ಕಲಿತು ಸ್ವಂತ ಮಾಡಿಕೊಂಡ ಕನ್ನಡ ಪದಗಳೆಲ್ಲ ತಿರುಚು ಮುರುಚು ಆಗಿ ಬಳಕೆ ಆಗುತ್ತಾ ಇದ್ದರೆ ನನ್ನ ಶುದ್ದ ಕನ್ನಡ ಪ್ರೇಮಕ್ಕೆ ಎಂಥ ಧಕ್ಕೆ ನೋವು ಆಗಬಹುದು ಊಹಿಸಿದ್ದೀರಾ. ತಪ್ಪು ತಿಳಿಬೇಡಿ ಮಾರಾಯರೆ ನಾನು ಮಂಗಳೂರು ಕನ್ನಡ, ಧಾರವಾಡ ಕನ್ನಡ, ಕೊಳ್ಳೆಗಾಲ ಕನ್ನಡ ಇತ್ಯಾದಿ ಇತ್ಯಾದಿ ಕನ್ನಡ ಉಪಭಾಷೆಗಳ ಬಗ್ಗೆ ಮೂಗುಮುರಿದು ಮಾತನಾಡುತ್ತಿಲ್ಲ. ಮೇಲೆ ಬರೆದ ಶೀರ್ಷಿಕೆ ಮೇಲೆ ಆಣೆ ಅದಲ್ಲ ವಿಷಯ. ಅವೆಲ್ಲಾ ಕನ್ನಡಮ್ಮನ ವಿವಿಧ ಮುಖಗಳು. ಅವುಗಳ ಬಳಕೆಗೆ ನನ್ನ ತಕರಾರಿಲ್ಲ.

> **ಕನ್ನಡದ ಹೆಸರುಗಳು ವಿಚಿತ್ರ ರೂಪ ಪಡೆಯುತ್ತಿರುವುದರ ಬಗ್ಗೆ ಒಂದು ಸಂಶೋಧನೆ**

ನನ್ನ ನೋವು ಇಷ್ಟೆ. ಇತ್ತೀಚೆಗೆ ಇಡೀ ಭಾರತವೇ ''ಹುಟ್ಟಿದರೆ ಕನ್ನಡನಾಡಿನಲಿ ಹುಟ್ಟಬೇಕು ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟ ಬೇಕು'' ಧೋ ಅಂತಾ ಮಹಾ ಪ್ರವಾಹದ ತರಹ ಬೆಂಗಳೂರು ನಗರ ಪ್ರವೇಶ ಮಾಡಿ ಹೋಟಲು ವಗೈರೆಯೆಲ್ಲಾ ಎಂತಂತದ್ದೋ ವಿಶೇಷ ಕನ್ನಡ ಸೃಷ್ಟಿ ಮಾಡಿದರೆ ನನ್ನ ತಲೆ ಗರ್ರ್ ಅಂತಾ ತಿರುಗದೇ ಏನು?

ಒಂದೆಡೆ ಮೆನು ಪಟ್ಟಿಯಲ್ಲಿ ಬರೆದಿತ್ತು. ಕಡಾಯಿ ಮಿಕ್ಸೆಡ್ ವೆಜಿಟಬಲ್. ಆಗ ನನ್ನ ಮನಸ್ಸಿಗೆ ಹೊಳೆದದ್ದು ನಮ್ಮ ಬಚ್ಚಲು ಮನೆ ಕಡಾಯಿ ಅಂದರೆ ತಾಮ್ರದ ಗುಡಾಣ. ಅದರ ತುಂಬಾ ತರಕಾರಿ ಹೇಗೆ ಹುರಿತಾನೆ ಎಂದು ಆಲೋಚಿಸುತ್ತಾ ಅವನ ತೆರೆದ ಅಡುಗೆ ಮನೆಯನ್ನು ಬಿಡದೆ ಗಮನಿಸಿದಾಗ ಆತ ತಗೊಂಡಿದ್ದು ಒಂದು ಸಾಧಾರಣ ಬಾಣಲೆ. ವಿಚಾರಿಸಿದಾಗ ಗೊತ್ತಾಯಿತು ಅವರು ಬಾಂಡಲಿಯನ್ನು ಕಡಾಯಿ ಎನ್ನುತ್ತಾರಂತೆ. ಎರಡು ಪಾತ್ರೆಗಳ ಹೆಸರು ಎಕ್ಕುಟ್ಟಿ ಹೋಯ್ತು. ಅದೇ ರೀತಿ ಹಂಡಿ ಅಂದರೆ ನಮ್ಮ ಹಂಡೆ ಅಲ್ಲ ಒಂದು ಪಾವಿನ ಆಕಾರದ ಲೋಟ ಎಂಬ ಮಾತು ತಿಳಿದು ಏನೆನ್ನಬೇಕು.

ಹೀಗೆ ಕನ್ನಡದ ಹೆಸರುಗಳು ವಿಚಿತ್ರ ರೂಪ ಪಡೆಯುತ್ತಿರುವುದರ ಬಗ್ಗೆ ಸಂಶೋಧನೆ ಆರಂಭಿಸಿದೆ.



ಮೊದಲನೆ ಕೇಸು: ಅಚ್ಚ ಕನ್ನಡದ ಉಪ್ಪಿಟ್ಟನ್ನು ದಾದಿಮಾ ಅಲ್ಲಲ್ಲ ಉಪಮಾ ಅಂಥ ಮಾಡಿದ್ದು. ಇದು ಹೆಚ್ಚಾಗಿ ಉತ್ತರ ಭಾರತೀಯರು ಕರೆಯುವ ರೂಪವಾದರೂ ಇದರ ಸೃಷ್ಟಿಕರ್ತರು ನಮ್ಮ ಮಲೆಯಾಳಿ ಮಿತ್ರರೋ ತಮಿಳು ಬಾಂಧವರೋ ಗೊತ್ತಾಗಲಿಲ್ಲ. ಹೀಗೇಕೆ ವಿರೂಪ ಗೊಳಿಸಿದರು ಎಂದು ಒಮ್ಮೆ ನಮ್ಮ ಮಲೆಯಾಳಿ ಮಿತ್ರರನ್ನು ವಿಚಾರಿಸಿದಾಗ

ಅದರ ಮೂಲ ರೂಪ ವಿವರಿಸಿದರು ಉಪ್ಪು + ಮಾವು = ಉಪ್ಪುಮಾವು. ತಮಿಳು ಮತ್ತು ಮಲೆಯಾಳದಲ್ಲಿ ಹಿಟ್ಟು ಅನ್ನುವುದಕ್ಕೆ ಮಾವು ಎನ್ನುತ್ತಾರೆ ಸ್ವಾಭಾವಿಕವಾಗಿ ಉಪ್ಪಿಟ್ಟು ನೆರೆ ದ್ರಾವಿಡ ಭಾಷೆಯಲ್ಲಿ ಉಪ್ಪುಮಾವು ಆಗಿದೆ ಎಂದು ವಿವರಿಸಿದರು. ಕನ್ನಡ ನಾಡಿನವರಿಗಿಂತ ಮಲೆಯಾಳಿ ಮತ್ತು ತಮಿಳರೇ ಹೆಚ್ಚು ಉತ್ತರ ಭಾರತದಲ್ಲಿ ಲಗ್ಗೆ ಇಟ್ಟಿರುವುದರಿಂದ ನಮ್ಮ ಹಿಟ್ಟಿಗಿಂತ ಮಾವು ಉತ್ತರದವರ ನಿಲುಕಿಗೆ ಬೇಗ ಸಿಕ್ಕಿದೆ. ಹೀಗಾಗಿ ಉತ್ತರ ಭಾರತೀಯರ ನಾಲಿಗೆಯಲ್ಲಿ ಉಪ್ಪು ಮಾವು ಉಪಮಾ ಆಗಿದೆ. ಸರಿ ಸಂಶೋಧನೆ ಉಪಮಾತೀತ ಎಂದು ಸಂತೋಷ ಪಟ್ಟೆ. ಅಲ್ಲ ನಮ್ಮ ಉಪ್ಪಿಟ್ಟು ನಮ್ಮಲ್ಲೇ ಖಾರಾ ಬಾತು (ಮರಾಠಿ) ಆಗಿರುವಾಗ ದೂಸರಾ ಬಾತ್ ಯಾಕೆ ಎಂದು ಸುಮ್ಮನಾದೆ.

ಇನ್ನು ಮುರುಕಿನ ವಿಷಯಕ್ಕೆ ಬರೋಣ. ನನ್ನ ಪರಿಕಲ್ಪನೆ ಪ್ರಕಾರ ಮುರುಕು ಮತ್ತು ಚಕ್ಕುಲಿಗೂ ಇರುವ ವ್ಯತ್ಯಾಸ ಎಂದರೆ ಸುತ್ತು ಸುತ್ತಾಗಿದ್ದರೆ ಚಕ್ಕುಲಿ ಅದೇ ಮುರಿದು ಮುರಿದು ಇಟ್ಟರೆ ಮುರುಕು. ಇದು ನಾನು ಸುಲಭವಾಗಿ ಗ್ರಹಿಸಿದ್ದ ವಿಚಾರ ಆದರೆ ನನ್ನ ಎದುರಿಗೆ ಚಕ್ಕುಲಿಯನ್ನು ಮುರುಕು ಎಂದು ನನ್ನ ತಮಿಳು ಮಿತ್ರರು ಕರೆದಾಗ ತಡೆಯಲಾಗಲಿಲ್ಲ ಅವರನ್ನೇ ವಿವರ ಕೇಳಿದೆ. ತಮಿಳಿನಲ್ಲಿ ಮುರುಕು ಎಂದರೆ ಸುತ್ತಿದ್ದು ನುಲಿದದ್ದು ಎಂದು ಅರ್ಥ ಹೇಳಿದರು. ಸುತ್ತು ಸುತ್ತಾಗಿರುವ ಕಾರಣ ಅದನ್ನು ಮುರುಕು ಎಂದು ಕರೆಯುವುದಾಗಿ ಹೇಳಿದರು. ಅದಕ್ಕೆ ಸಾಕ್ಷಿಯಾಗಿ ದಾರವನ್ನು ನುಲಿದಂತೆ ನುಲಿದು ಮತ್ತೆ ಗುಂಡಗೆ ಸುತ್ತಿದ್ದ ನಯವಾದ ಮೈನ ತಮಿಳು ಚಕ್ಕುಲಿ ತೋರಿಸಿದರು. ಆಗ ಇದಕ್ಕೇನಂತೀರಾ ಎಂದು ನಮ್ಮ ಕನ್ನಡ ಚಕ್ಕುಲಿಯನ್ನು ತೋರಿಸಿದೆ. ಅದೂ ಸುತ್ತಿದ್ದೇ ತಾನೆ? ಅದು ಮುಳ್ ಮುರ್ರುಕ್ಕು ಎನ್ನಬೇಕೆ. ಅದನ್ನೇ ಮನವರಿಕೆ ಮಾಡಿಸಲು ಅದರ ಚೂಪು ಮೇಲ್ಮೈ ಮೇಲೆ ಕೈ ಆಡಿಸಿದರು. ನಮ್ಮಲ್ಲೂ ಬಲಮುರಿ ಎಡಮುರಿ ವಂಕಿ ಮುರಿ ಪದಗಳು ಬಾಗು ಬಳಕುಗಳನ್ನು ಹೇಳುವುದರಿಂದ ಕನ್ನಡ ಚಕ್ಕುಲಿ = ತಮಿಳು ಮುರುಕು ಆಗಿರಬಹುದು ಎಂದು ಸಾಚಾ ಸಂಶೋಧಕನಂತೆ ಅಂಗೀಕರಿಸಿದೆ.

ಇನ್ನು ಮೂರನೆ ತಿಂಡಿ ಮೆದುವಡಾ ಬಗ್ಗೆ ಮಾತನಾಡೋಣ. ಪ್ರತಿ ಇಡ್ಲಿ ಸಾಂಬರಿನ ಜೊತೆ ಗರಿಗರಿಯಾಗಿ ಮೆಲ್ಲುವ ಉದ್ದಿನ ವಡೆ ಅಥವಾ ತೂತುವಡೆಗೆ ಯಾಕೆ ಇಂಥ ಹೆಸರು ಬಂತು? ಇಟ್ಟವರು ಯಾರು? ಕಾರಣ ಏನು ಎಂಬ ಚಿಂತೆಯಲ್ಲಿದ್ದಾಗ್ಗ ಯಾವದೋ ಇಂಗ್ಲಿಷ್ ಪತ್ರಿಕೆಯಲ್ಲಿ ಆಘಾತಕಾರಿ ಸಂಶೋಧನೆಯನ್ನು ಯಾರೋ ಅಡನಾಡಿ ಪ್ರಕಟಿಸಿಯೇ ಬಿಟ್ಟಿದ್ದ. ಇಡ್ಲಿ ಕಡಬು ಮುಂತಾದ ಬೇಯಿಸಿ ತಿನ್ನುವ ತಿಂಡಿಯೆಲ್ಲ ಚೀನಾ ದೇಶದ ಮೂಲದಿಂದ ಬಂದದ್ದು ಎಂದು ಪ್ರಕಟಿಸಿಯೇ ಬಿಟ್ಟಿದ್ದ. ಮುಂ...ಮಗ ಯಾರೋ ಮಾಡಿದ ಬೀದಿ ತಿಂಡಿ ಮೋಮು ತಿಂದು ಈ ವಿಪರೀತ ಕಲ್ಪನೆ ಮಾಡಿ ನಮ್ಮ ಅಡುಗೆಯ ಬುಡಕ್ಕೆ ಕೈ ಹಾಕಿದ್ದು ನನ್ನ ಪಿತ್ತ ನೆತ್ತಿಗೇರುವಂತೆ ಮಾಡಿತು.

ಆಗ ನನಗೆ ನೆನಪಿಗೆ ಬಂದದ್ದು ಕನ್ನಡದ ಅದೂ ಹಳಗನ್ನಡದ ನನ್ನ ಅಚ್ಚು ಮೆಚ್ಚಿನ ಗ್ರಂಥ ಸೂಪ ಶಾಸ್ತ್ರ. ನನ್ನ ಪಾಲಿಗೆ ಅಮರ ಸಿಂಹನ ಅಮರ ಕೋಶದಷ್ಟೇ ಉದ್ಗ್ರಂಥ ಮಂಗರಸನ ಸೂಪಶಾಸ್ತ್ರ. 16ನೆ ಶತಮಾನದ ಆದಿಭಾಗದಲ್ಲಿದ್ದ ಮೈಸೂರಿನ ಕಲ್ಲಹಳ್ಳಿಯ ರಾಜನಾಗಿದ್ದ ಈತ ಪ್ರಚಂಡ ಪಾಕಗಳನ್ನು ವಿವರಿಸಿದ್ದಾನೆ. ಈ ಪುಸ್ತಕ ಪಾಶ್ಚಾತ್ಯರ ಕಣ್ಣಿಗೆ ಬಿದ್ದಿದ್ದರೆ ಎಷ್ಟೋ ತಿಂಡಿಗಳ ಪೇಟೆಂಟ್ ಮಾಡಿಕೊಂಡು ಬಿಡುತ್ತಿದ್ದರೋ ಏನೋ ಅಷ್ಟು ವಿಶೇಷ ತಿಂಡಿಗಳನ್ನು ಮಾಡುವ ವಿಧಾನವನ್ನು ಅಕ್ಕರೆಯಿಂದ ಬರೆದಿದ್ದಾನೆ.



ನನಗೆ ಸೂಪ ಶಾಸ್ತ್ರವನ್ನು ಓದಿದಾಗ ಮನವರಿಕೆಯಾದ ಒಂದು ಅಂಶವೆಂದರೆ ಕರುನಾಡ ಜನತೆಗೆ ಕರಿಯಕಾಳಾದ ಉದ್ದು ಬಲು ಪ್ರಿಯವಾದ ಧಾನ್ಯ ಎಂದು ಅನಿಸಿತು. ಉದ್ದು ಎಷ್ಟೊಂದು ಅಡುಗೆಯಲ್ಲಿ ಬಳಕೆ ಆಗುತ್ತಿದೆ ಎಂದು ಲೆಕ್ಕ ಹಾಕಲಾರಂಭಿಸಿದೆ. ಇಡ್ಡಲಿಗೆ ಅರ್ಥಾತ್ ಇಡ್ಡಲಿ ದೋಸೆ, ಕಡುಬು ಉದ್ದಿನ ವಡೆ, ಮೊಸರೊಡೆ, ಚಕ್ಕುಲಿ ಕಡೆಗೆ ಒಗ್ಗರಣೆಗೆ ಸಹ ಬಲು ಬಳಕೆಯಾಗುವ ಧಾನ್ಯ ಇದು. ಅಂದಹಾಗೆ ನಿಮಗೆ ಅಮೃತವಲ್ಲರಿ ಗೊತ್ತೆ? ತಿಂದು ಗೊತ್ತು ಕೇಳಿ ಗೊತ್ತಿಲ್ಲ ಅಲ್ಲವೇ? ಯಾರೋ ಹ್ಯಾಕ್ ಮಾಡಿ ಅದಕ್ಕೊಂದು ಕೆಟ್ಟ ಹೆಸರು ಇಟ್ಟಿದ್ದಾರೆ ಜಹಂಘಿರ್ ಅಂತ. ಅಲ್ಲ ಜಹಂಗಿರ್‌ನ ವಿನ್ಯಾಸ ಮಾಧುರ್ಯ ನೋಡಿ ಯಾವ ಹೆಸರು ಸೂಕ್ತ ಅಂತ ಗೊತ್ತಾಗುತ್ತೆ. ಅಂದ ಹಾಗೆ ಅಮೃತವಲ್ಲರಿ ಸಹ ಉದ್ದಿನ ಪದಾರ್ಥವೇ ಹೀಗಿರುವಾಗ ಕನ್ನಡದ ಉದ್ದಿನ ವಡೆಗೆ ಮೆದುವಡೆ ಎಂಬ ಅಭಿಧಾನ ಹೇಗೆ ಬಂತು ಅನ್ನುವ ಆಲೋಚನೆ ಬಂತು. ಇದು ಮೆದು ವಡೆ ಎಂದಾದರೆ ಒಂದು ಗಟ್ಟಿ ವಡೆ ಇರಬೇಕಲ್ಲ ಎಂದು ಆಲೋಚಿಸಲಾರಂಭಿಸಿದೆ. ಆಗ ಜ್ಞಾಪಕಕ್ಕೆ ಬಂದದ್ದು ತಿರುಪತಿ ವಡೆ ಪ್ರಸಾದದ ಬಗ್ಗೆ. ಅಬದ್ಧ ಮಾತಾಡಬಾರದು ಅಂತೀರಾ. ಆದರೆ ತುಪ್ಪದ ಸವಿ ಬಿಟ್ಟರೆ ಅದು ಹಲ್ಲಿಗೆ ಎಂತ ಕಸರತ್ತು ಕೊಡುತ್ತದೆ ಎಂಬುದನ್ನು ಬಲ್ಲವರೇ ಬಲ್ಲರು ತಮಿಳು ನಾಡಿನಲ್ಲು ಇದೆ ರೀತಿಯ ಗಟ್ಟಿವಡೆ ಅನುಭವ ಬಂತು. ಅಂದರೆ ಮೆದು ವಡೆ ಕನ್ನಡಿಗರ ಅಪ್ರತಿಮ ಸೃಷ್ಟಿ ಎಂಬುದು ಮನಸ್ಸಿಗೆ ಮುದ ತಂದಿತು. ಸೂಪಶಾಸ್ತ್ರದಲ್ಲಿ ಹಾಲು ವಡೆ, ಹೊಸ ಬೆಣ್ಣೆಯಲ್ಲಿ ನೆನಸಿದ ಉದ್ದಿನ ದೋಸೆ ಎಲ್ಲವನ್ನು ಓದಿದಾಗ ಅಯ್ಯೋ ಎಷ್ಟೊಂದು ಚಂದಾದ ಅಡುಗೆಗಳೆಲ್ಲ ಖಿಲವಾಗಿವೆಯಲ್ಲ ಎಂದು ಮನನೊಂದಿತು ಮರುಕ್ಷಣವೇ ಎಂಟಿಆರ್‌ನಂತೆ ಎಂಟಿಎಂ (ಮಂಗರಸ ತಿಂಡಿಮನೆ) ತೆರೆಯುವ ಭವ್ಯ ಐಡಿಯಾ ಮನದಲ್ಲಿ ಬಂದಿದೆ. ನಿಮ್ಮೆಲ್ಲರ ಸಹಕಾರ ಸಿಗೋದು ಗ್ಯಾರಂಟಿ ತಾನೆ?

---

## ಮಹಿಳಾ ದಿನಾಚರಣೆ!

ವೇದಿಕೆಯ ಮೇಲೆ
ಗಂಡು ಜನ್ಮವ ಜಾಲಾಡಿ
ಹೆಂಡತಿಯ ಗಂಟಲು
ಹೂತು ಹೋಯ್ತು!
ಗಂಡ ಪಾಪ ಜೆಂಟಲು!
ನಿಟ್ಟುಸಿರಿಟ್ಟ
ಸದ್ಯ! ಇವತ್ತಾದ್ರೂ
ಬೈಸ್ಕೊಳೋದು ತಪ್ತು!

~ ತುರುವೇಕೆರೆ ಪ್ರಸಾದ್




GIRIJA
SILKS & SAREES
Exclusive
SILK
Sarees
Phone : 23340466
No. 8 & 9, Maruthi Complex, 8th Cross,
Malleshwaram, Bangalore - 560 003.



# ಮೊಬೈಲ್ ಫಜೀತಿ

- ಆರತಿ ಘಟೇಕರ್

ಅಂದು ಲಗುಬಗನೆ ವಾಶಿಂಗ್ ಮಶೀನಿಗೆ ಬಟ್ಟೆಗಳ ತುರುಕಿ, ಹಾಲಿನಲ್ಲಿ ಕುಳಿತು ನನ್ನ ಅಚ್ಚುಮೆಚ್ಚಿನ ಟಿ.ವಿ ಸೀರಿಯಲ್ ನೋಡುವುದರಲ್ಲಿ ತಲ್ಲೀನಳಾಗಿದ್ದೆ. ಸ್ವಲ್ಪ ಹೊತ್ತಿನ ನಂತರ ಮಶೀನಿನಿಂದ ಗಡ ಗಡ ಎಂಬ ಭಾರಿ ಸದ್ದು ಕಿವಿಗೆ ಬಡಿಯಿತು! ತಕ್ಷಣ ಗಾಬರಿಯಾಗಿ ಅದೇನೆಂದು ನೋಡಲು ವಾಶಿಂಗ್ ಮಶೀನು ತನ್ನ ಕಾರ್ಯಾಚರಣೆಯ ಅಂತಿಮ ಘಟ್ಟದಲ್ಲಿ ಜೋರಾಗಿ ತಿರುಗುತ್ತ ತನ್ನ ಹೊಟ್ಟೆಯೊಳಗೆ ಸೇರಿಕೊಂಡ ಯಾವುದೋ ಘನ ವಸ್ತುವಿಗೆ ಎರ್ರಾ ಬಿರ್ರಿ ಪೆಟ್ಟು ಕೊಟ್ಟು ಹಣ್ಣುಗಾಯಿ ನೀರುಗಾಯಿ ಮಾಡಿ ಗಕ್ಕೆಂದು ನಿಂತಿತ್ತು! ಅಯ್ಯೋ! ಬಟ್ಟೆಗಳ ಜೊತೆ ಏನೋ ಸಾಮಾನು ಕೂಡ ಸೇರಿರಬೇಕು (ಹಾಕಿರಬೇಕು) ಎಂಬ ಅನುಮಾನದಿಂದಲೇ ಮಶೀನಿನ ಮಹಾ ದ್ವಾರವನ್ನು ತೆರೆದೆ. ಆ ನೀರಿನ ಚಕ್ರತೀರ್ಥದಲ್ಲಿ ವಕ್ರವಾಗಿ ಬಿದ್ದುಕೊಂಡ ಸಾಮಾನನ್ನು ಕಂಡು ನನ್ನ ಮುಖ ಒಮ್ಮೆಲೆ ಬಿಳಿಚಿಕೊಂಡಿತು!

**ಬಾಳುವ ಜೀನ್ಸ್ ಪ್ಯಾಂಟ್ ಜತೆ ಅದರ ಜೇಬಿನಲ್ಲಿದ್ದ ಬೆಲೆ ಬಾಳುವ ಮೊಬೈಲ್ ಸಹ ವಾಷಿಂಗ್ ಮೇಷೀನ್‌ನಲ್ಲಿ ಜಳಕ ಮಾಡಿದಾಗ..**

ಹಿಂದೆಲ್ಲ ಮಶೀನಿಗೆ ಹಾಕುವ ಬಟ್ಟೆಯ ಜೊತೆಗೆ ಮರೆತು ಕೆಲವು ಚಿಲ್ಲರೆ ಸಾಮಾನುಗಳು ಕೂಡ ಆ ನೀರಿನ ತಿರುಗಣಿಗೆ ಸೇರಿದ್ದುಂಟು! ಹೇರಪಿನ್ನು, ನೋಟು, ಚಿಲ್ಲರೆಗಳು, ಕೀ ಬಂಚ್, ಇಷ್ಟೇ ಅಲ್ಲದೆ ಮಗರಾಯನ ಇಯರ್ ಫೋನ್, ಶಾಲೆಯ ಐಡಿ ಕಾರ್ಡುಗಳಲ್ಲೆಲ್ಲಾ ಮಹಾ ಮಜ್ಜನ ಮಾಡಿಸಿಕೊಂಡ ಬಂದ ಇತಿಹಾಸವಿದ್ದರೂ ಇಂದು ಈ ಚಿಲ್ಲರೆ ಸಾಮಾನುಗಳ ದಾಖಲೆಯನ್ನೆ ಮುರಿದು ಬಿಸಾಡುವ ಭಯಂಕರ ಸೂಚನೆ ಸಿಕ್ಕಿತು!. ನಾನು ಹಾಕಿದ್ದು ಅದಕ್ಕಿಂತಲೂ ಬೆಲೆ ಬಾಳುವ ನನ್ನ ಜೀನ್ಸ್ ಪ್ಯಾಂಟ್ ಅಷ್ಟೇ ಅಲ್ಲ ಅದರ ಜೇಬಿನಲ್ಲಿದ್ದ ನನ್ನ ಮೊಬೈಲ್ ಸಮೇತ ಅಂದ್ರೆ ನೀವು ನಂಬ್ತೀರಾ?! ನೆನ್ನೆ ಸಂಜೆ ಹೊರಗೆ ತಿರುಗಾಡಲು ಹೋಗಿದ್ದಾಗ ಹಾಕಿ ಕಳಚಿಟ್ಟ ಜೀನ್ಸಿಗೆ ಬಹಳ ದಿನಗಳ ಬಳಿಕ ಸಿಕ್ಕ ವಾಶಿಂಗ್ ಮಶೀನ್ ಭಾಗ್ಯವೇನೋ ಸರಿ ಆದರೆ ಅದರ ಜೇಬಿನಲ್ಲೇ ಮುದುಡಿ ಕುಳಿತ ಮೊಬೈಲಿಗೂ ಮಾಘ ಸ್ನಾನ ಮಾಡಿಸಿದ ನನ್ನ ಮರೆಗುಳಿತನಕ್ಕೆ ಪೇಚಾಡಿಕೊಂಡೆ! ಪಾಪ ಅದು ಮೈಕೈಯೆಲ್ಲಾ ಹೊಡೆತ ತಿಂದು ನಿಸ್ತೇಜವಾಗಿ ಧೊಪ್ಪೆಂದು ಹೊರ ಬಿದ್ದಿತು! ಕಳೆದ ವರ್ಷದ ನನ್ನ ಹುಟ್ಟು ಹಬ್ಬದಂದೇ ಉಡುಗೊರೆಯಾಗಿ ಬಂದ ನನ್ನ ಜೀವದ ಗೆಳತಿಗೆ ಹೀಗೆ ನೀರಿನಿಂದಲೆ ಅಪಾಯವಿದೆಯೆಂದು ಮೊದಲೇ ತಿಳಿದಿದ್ದರೆ ಮುಂಜಾಗ್ರತಾ ಕ್ರಮವಾಗಿ ಇದರ ಹೆಸರಿನಲ್ಲಿ ಒಂದು ಜಲ ಹೋಮವನ್ನಾದರೂ ಮಾಡಿಸಬಹುದಿತ್ತು!



ಏನೇ ಆಗಲಿ ಮೊದಲದಕ್ಕೆ ಪ್ರಾಥಮಿಕ ಚಿಕಿತ್ಸೆ ಕೊಡೋಣವೆಂದು ಅದರ ಅವಯವಗಳನ್ನೆಲ್ಲ ಮತ್ತೆ ಯಥಾಸ್ಥಿತಿಯಲ್ಲಿ ಜೋಡಿಸಿ ಬಿಸಿಲಿನಲ್ಲಿ ಅರಿವೆಯ ಜೊತೆ ಅದನ್ನು ಒಣಗಿಸಿ ಸಂಜೀವಿನಿಯಂತೆ ಚಾರ್ಜ್ ಹರಿಸಿದರೂ ಪ್ರಾಣ ಪಕ್ಷಿ ಇಲ್ಲದಂತೆ

ಬಿದ್ದುಕೊಂಡಿತು! ಅಲ್ಲಿಗೆ ನನ್ನ ಅದರ ಸ್ನೇಹದ ನಂಟು ಮುಗಿಯಿತು ಎಂದನಿಸಿತು. ನನ್ನ ದುಬಾರಿ ಮೊಬೈಲು ಕಳೆದುಕೊಂಡ ಬೇಸರ ಒಂದು ಕಡೆಯಾದರೆ ..ಈ ಎಡವಟ್ಟಿಗೆ ತಲೆ ಬಿಸಿ ಏರಿ ಕೊಂಚ ಕೂಲ್ ಆಗಲು ಫ್ರಿಡ್ಜಿನಿಂದ ಧಾರಾಳವಾಗಿ ಒಂದು ಕಪ್ ಐಸ್ಕ್ರೀಮಿನೊಂದಿಗೆ ಹಾಲಿನಲ್ಲಿ ಕುಳಿತೆ ..ಅಷ್ಟರಲ್ಲಿ ಏನೋ ಸೀದಿದ ವಾಸನೆ ನನ್ನನ್ನು ಅಡುಗೆ ಮನೆಯ ಕಡೆಗೆ ಓಡಿಸಿತು.. ಸೀರಿಯಲ್ ವೀಕ್ಷಣೆಯ ಮಧ್ಯೆ ಜಾಹೀರಾತಿನ ಸಮಯದಲ್ಲೇ ಅಡುಗೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವ ನನಗೆ ಅಂದು ಒಲೆ ಮೇಲೆ ಕುದಿಯಲು ಇಟ್ಟಿದ್ದ ತರಕಾರಿ ಹುಳಿಯ ನೆನಪೇ ಇಲ್ಲದೆ ಅದೂ ತಳ ಹಿಡಿದು ಮೇಲಿನ ಭಾಗವನ್ನು ನಿಧಾನವಾಗಿ ಮೊಗೆದರೆ ಮಿಕ್ಸ್ ವೆಜ್ ಪಲ್ಯವಾಗುವ ಎಲ್ಲಾ (ಅವ)ಲಕ್ಷಣಗಳು ಗೋಚರಿಸಿದವು. ಥತ್! ಇಂದೇಕೋ ದಿನವೇ ಸರಿಯಿಲ್ಲ ಎಂದು ಆ ಗುರುವಾರವಾದ ಮೇಲೆಯೇ ಗುರ್ರ್ ಎಂದು ಗೂಬೆ ಕೂರಿಸಿದೆ!. ಆದರೂ ಇದರಲ್ಲಿ ಗೂಬೆಯಾಗಿದ್ದು ನಾನೇ ಎಂಬುದು ಅರಿವಾಗಿ ಮತ್ತಷ್ಟು ತ್ರಾಸಾಯಿತು! ಧಿಡೀರ್ ಸಾರು ಮಾಡಿ ಊಟದ ಶಾಸ್ತ್ರ ಮುಗಿಸಿದೆ. ಅದೇ ಕಾಲಕ್ಕೆ ಮಾರನೆಯ ದಿನ ಗೆಳತಿ ವೀಣಾಳ ಹುಟ್ಟು ಹಬ್ಬದ ಪ್ರಯುಕ್ತ ಬ್ರೇಕ್ ಫಾಸ್ಟ್ ಪಾರ್ಟಿಯ ಆಹ್ವಾನ ದಿಗ್ಗನೆ ನೆನಪಾಯಿತು!. ಇಲ್ಲಿ ನನ್ನ ಆಪ್ತ ಗೆಳತಿಯರ ಗುಂಪಿನಲ್ಲಿ ಯಾರದೇ ಹುಟ್ಟು ಹಬ್ಬವಾದರೂ ಸರಿ ಅದೇ ನೆಪದಲ್ಲಿ ಮುಂಜಾನೆ ಗಂಡ ಮಕ್ಕಳನ್ನು ಕಚೇರಿ ಶಾಲೆಗಳಿಗೆ ಪ್ಯಾಕ್ ಮಾಡಿ ಕಳಸಿದ ನಂತರ ಎಲ್ಲರು ಹೋಟಲಿನಲ್ಲೆ ಭೇಟಿಯಾಗಿ ಇಡ್ಲಿ , ದೋಸೆ, ವಡೆಗಳನ್ನು ಕತ್ತರಿಸುತ್ತಾ ಮನದಣಿಯ ಹರಟೆ ಕೊಚ್ಚಿ ಶುಭಾಶಯಗಳನ್ನು ಹೇಳುವುದು ರೂಢಿಗತವಾಗಿತ್ತು!, ಪಾರ್ಟಿಯ ತಯಾರಿಗೆ ಮುಂದಾದೆ. ನಾಳಿನ ಕೆಲಸವನ್ನು ಇಂದೇ ಮಾಡು ಎನ್ನುವ ಬದಲು ಇಂದಿನ ಕೆಲಸವನ್ನು ನಾಳೆ, ಇಲ್ಲ ನಾಳಿದ್ದು, ಹೋಗಲಿ ಆಚೆ ನಾಳಿದ್ದಾದರೂ ಮಾಡಿ ಮುಗಿಸು ಎಂಬ ಕಠಿಣಾತಿ ಕಠಿಣ ನಿಯಮಗಳನ್ನು ನನ್ನ ಮೇಲೆ ಹೇರಿಕೊಂಡಿದ್ದೆ! ಆದರೆ ಅಂದೇಕೋ ಮೊಬೈಲ್ ವಿಷಯಕ್ಕೆ ಮೂಡು ಆಫಾಗಿ ಯಾವುದಾದರೂ ಆಸಕ್ತಿ ಭರಿತ ಕೆಲಸ ಮಾಡಲು ನಿರ್ಧರಿಸಿ, ನನ್ನ ಇಷ್ಟದ ಇಸ್ತ್ರೀ ತೀಡುವ ಕೆಲಸವನ್ನೇ ಶುರುವಿಟ್ಟುಕೊಂಡೆ. ಸರಿ ಮೊದಲೇ ನಿರ್ಧಾರಿತವಾದ ಪಿಂಕ್ ಥೀಮಿನಲ್ಲಿ ನಾವೆಲ್ಲಾ ಕಾಣಿಸಿಕೊಳ್ಳುವ ಉಮೇದಿನಿಂದ, ನನ್ನ ಗುಲಾಬಿ ಬಣ್ಣದ ಚೂಡಿದಾರು ಬಿಸಿ ಬಿಸಿಯಾಗಿ ಇಸ್ತ್ರೀ ಪೆಟ್ಟಿಗೆಯಿಂದ ಮಸಾಜ್ ಮಾಡಿಸಿಕೊಂಡು ಗರಿ ಗರಿಯಾಗಿ ಹ್ಯಾಂಗರ್ ಸೇರಿದಳು! ಅದಕೊಪ್ಪುವ ದುಪಟ್ಟಾಳನ್ನು ತೀಡಲು ಮರೆತಿದ್ದರಿಂದ ಅದನ್ನು ಹುಡುಕಿ ಇಸ್ತ್ರೀ ಹಚ್ಚಿದ್ದಷ್ಟೇ. ನನ್ನ ದುರಾದೃಷ್ಟಕ್ಕೆ ಆದೆ ಸಮಯದಲ್ಲಿ ಕೆಂಡಾಮಂಡಲವಾಗಿ ಕಾದು ಕುಳಿತ ಇಸ್ತ್ರೀ ಪೆಟ್ಟಿಗೆ ನನ್ನ ಪಾಪದ ದುಪಟ್ಟಾಳನ್ನು ಅಂಗೈಯಗಲದಷ್ಟು ಸುಟ್ಟು ಕಂದಕವನ್ನೇ ಸೃಷ್ಟಿ ಮಾಡಿದಾಗ ಆ ಶಾಕಿಗೆ ಕಂದಕದಷ್ಟೇ ಅಗಲವಾಗಿ ನನ್ನ ಬಾಯಿ ತೆರೆದುಕೊಂಡು ಕೈ ತನ್ನ ತಾನೇ ಹಣೆ ಚಚ್ಚಿಕೊಂಡಿತು!! ಅಯ್ಯೋ ದೇವರೇ! ಇಂದು ಮುಂಜಾನೆಯಿಂದ ಬರೀ ಎಡವಟ್ಟು ಕೆಲಸಗಳೇ! ಯಾರ ಮುಖ ನೋಡಿ ಎದ್ದಿದ್ನೋ ಏನೋ ಎಂದು ಯಾರಾದರೂ ದೋಷಾರೋಪಣೆಗೆ ಸುಲಭದಲ್ಲಿ ಸಿಗುವರೇ ಎಂದು ನೋಡಿದಾಗ ಅಂದು ಎದ್ದ ಬಳಿಕ ಕನ್ನಡಿಯ ದರ್ಶನ ಮಾಡಿದ್ದು ನಾನೇ ಎಂಬುದು ನೆನಪಾಯಿತು! ಇಂದು ನನ್ನ ಗ್ರಹಚಾರದಲ್ಲಿ ಗೃಹಪಯೋಗಿ ಸಾಮಾನುಗಳಿಂದಲೇ ಭಾರಿ ನಷ್ಟ ಎಂಬ ಭವಿಷ್ಯವಾಣಿ ಇತ್ತೇನೋ ಎನ್ನುವ ಭಯಂಕರ ಅನುಮಾನ ಕಾಡಿತು! ಸುಟ್ಟಿದ್ದು ದುಪಟ್ಟಾ ತಾನೇ, ಸದ್ಯ! ಇನ್ನೇನು ಹೆಚ್ಚಿನ ಅನಾಹುತವಾಗಿಲ್ಲವಲ್ಲ ಎಂಬ ಸಕಾರತ್ಮಕ ಧೋರಣೆಗೆ ಶರಣು ಹೋಗಿ ಮತ್ತೊಂದು ಧಿರಸನ್ನು



ಆರಿಸಿಕೊಂಡೆ. ಆದರೆ ಮರೆತೆನೆಂದರೂ ಮರೆಯಲಿ ಹ್ಯಾಂಗ ಮೊಬೈಲ್ ಎಡವಟ್ಟಿನ ವಿಷಯವನ್ನ! ಎಂದು ಸತ್ತಂತೆ ಬಿದ್ದುಕೊಂಡ ನನ್ನ ಪ್ರಿಯ ಮೊಬೈಲು ಮತ್ತೆ ಕಹಿ ನೆನಪಿನ ಕರ್ಕಶ ರಿಂಗ್ ಟೋನ್ ಬಾರಿಸಿತು! ಆ (ಹಾರ್ಟ್) ''ಬ್ರೇಕಿಂಗ್'' ನ್ಯೂಸ್ ಅನ್ನು ಪತಿರಾಯರಿಗೆ ತಿಳಿಸುವ ಅನಿವಾರ್ಯತೆಗೆ ತಕ್ಕ ಸಿದ್ದತೆಗಳನ್ನು ನಡೆಸಿದೆ!. ಅವರಿಗಿಷ್ಟವಾದ ಗರಿಗರಿ ಈರುಳ್ಳಿ ಪಕೋಡ ತಯಾರಾದವು! ಅಷ್ಟೇ ಅಲ್ಲದೆ ಅಂದು ನನ್ನ ಅಚ್ಚುಮೆಚ್ಚಿನ ಕಪಿಲ್ ಶೋ ನೋಡುವುದನು ಬಿಟ್ಟು ಸಿಕ್ಕಾಪಟ್ಟೆ ಕ್ರಿಕೆಟ್ ಕ್ರೇಜಿರುವ ಎಜಮಾನರಿಗಾಗಿ ಭಾರತ ಇಂಗ್ಲೆಂಡ್ ನಡುವಿನ ಟ್ವೆಂಟಿ ಟ್ವೆಂಟಿ ಸರಣಿ ಪಂದ್ಯವನ್ನು ಟಿ.ವಿಯಲ್ಲಿ ಹಾಕಿ ತ್ಯಾಗ ಜೀವಿಯಾಗಿದ್ದು ಒಂದು ಕಡೆಯಾದರೆ. ಅವರು ತಡ ಮಾಡಿ ಬಂದರೂ ನಗು ಮುಖದ ಸ್ವಾಗತಕಾರಣಿಯಾಗಿದ್ದು ಮತ್ತೊಂದು ಅದ್ಭುತಗಳಲ್ಲಿ ಒಂದು! ಕಾರಣ, ಬೇಗ ಬರುತ್ತೇನೆ ಎಂದು ಹೇಳಿ ಸಾಮಾನ್ಯವಾಗಿ ತಡ ಮಾಡಿಯೇ ಮನೆಯ ಕರೆ ಗಂಟೆ ಒತ್ತುವ ಪತಿರಾಯರನ್ನು ನಾನು ಗಂಟು ಮುಖದಲ್ಲೇ ಸ್ವಾಗತಿಸಿ ರೂಢಿ!. ಇಂದು ನನ್ನ ನಗು ಮುಖ ಕಂಡಾಕ್ಷಣ ಅವರು ಗಲಿಬಿಲಿಗೊಂಡು ಹಲ್ಕಿರಿದು ಒಂದೊಂದೇ ಪಕೋಡ ಬಾಯಿಗಿಳಿಸಿ ಕಾಫೀ ಹೀರಿ ಇನ್ನು ನನ್ನ ತಂಟೆಗೆ ಬರದಿರು ಎಂಬ ಭಂಗಿಯಲ್ಲಿ ಟಿ.ವಿ ಮುಂದೆ ಕುಳಿತರೂ ಅವರ ತಂಟೆಗೆ ಬರುವುದು ನನ್ನ ಜನ್ಮ ಸಿದ್ದ ಹಕ್ಕೆಂದು ನಾನು ಮದುವೆಯಾದಗಿಂದ ಭಾವಿಸಿಕೊಂಡು ಬಂದ್ದಿದಷ್ಟೇ!.... ಆದರೂ ಜಗತ್ತಿನ ಪರಿವಿಲ್ಲದಂತೆ ಅವರು ಕ್ರಿಕೆಟ್ ಆಟ ವೀಕ್ಷಿಸುವುದರಿಂದ ನನ್ನ ಮೊಬೈಲ್ ವಿಷಯ ಹೇಳಲು ಇದೆ ಒಳ್ಳೆಯ ಸಮಯವೆಂದು ''ರೀ! ತೇಜು ಗಣಿತದಲ್ಲಿ ನೂರಕ್ಕೆ 90 ಮಾರ್ಕ್ಸ್ ತೆಗೆದ್ದಿದ್ದಾನೆ! ಮಗರಾಯನ ಪರೀಕ್ಷಾ ಫಲಿತಾಂಶದ ಸಿಹಿ ಸುದ್ದಿಯೊಂದಿಗೆ ನಾಂದಿ ಹಾಡಿದೆ! ವೆರಿ ಗುಡ್!. ನೋಡು ತೇಜು ಗಣಿತದಲ್ಲಿ ನನ್ನ ಹಾಗೇನೆ, ಸದ್ಯ ನಿನ್ನ ಹೋತಿಲ್ಲ ಆವಾ! ಎಂದು ರೇಗಿಸಿದರೂ ನಾನಂದು ಮಾಮೂಲಿನಂತೆ ವಾದಕ್ಕೆ ತಯಾರಿರಲಿಲ್ಲ.. ''ರೀ! ಇವತ್ತು ವಾಶಿಂಗ್ ಮಶೀನಿನಲ್ಲಿ ನಿಮ್ಮ ಎಲ್ಲ ಪ್ಯಾಂಟ್ ಶರ್ಟುಗಳು ಸ್ವಚ್ಚವಾಗಿ ಬಂದವು ''ಇವರು ನೆಮ್ಮದಿಯಿಂದ ಹುಂಗುಟ್ಟಿದರು! ''ಜೊತೆಗೆ ನನ್ನ ಜೀನ್ಸು ಪ್ಯಾಂಟ್ ಕೂಡಾ!, ಆದರೆ ಅದರ ಜೇಬಿನಲ್ಲಿ ನನ್ನ ಮೊಬೈಲ್ ಕೂಡ ಇರೋದು ಮರೆತೇ ಹೋಗಿತ್ತು!'' ಎಂದು ಮೊಬೈಲು ಅನ್ನುವುದನ್ನು ಅವರಿಗೆ ಕೇಳಿಸಲಾರದಷ್ಟು ಸಣ್ಣ ದನಿಯಲ್ಲಿ ಹೇಳಿ ''ಅಶ್ವತ್ತಾಮೋ ಹತಃ ಕುಂಜರಃ ''ಎಂದು ಕುರುಕ್ಷೇತ್ರ ಯುದ್ದದಲ್ಲಿ ಧರ್ಮರಾಜ ಹೇಳಿದ ಶೈಲಿಯನ್ನೇ ಅನುಸರಿಸಿದೆ! ಅಷ್ಟರಲ್ಲಿ ಧೋನಿ ಸಿಕ್ಸರ್ ಹೊಡೆದು ಇವರು ಉತ್ಸಾಹದಿಂದ ಎರಡು ಕೈಯೆತ್ತಿ ಅಂಪೈರಾದರು! ನಾನು ಧೋನಿಗೆ ಕೈ ಎತ್ತದೆ ಮನದಲ್ಲೇ ನಮಸ್ಕರಿಸಿ ಬೀಸೊ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು ಎಂದು ಮುಂದಿನ ಬಾಣ ಬೀಸಲು ತಯಾರಾದೆ.. ''ರೀ! ಹೋದ ವರ್ಷ ನನ್ನ ಹುಟ್ಟಿದ ಹಬ್ಬಕ್ಕೆ ಏನ್ ಉಡುಗೊರೆ ತೊಗೊಂಡಿದ್ದೆ ನೆನಪಿದ್ಯ ನಿಮಗೆ ''ಅನುಮಾನದಿಂದಲೇ ಕೇಳಿದೆ . ''ಅಯ್ಯೋ! ನೀನು ಹೋದ ತಿಂಗಳು ಏನು ತೊಗೊಂಡೆ ಅನ್ನೋದೇ ನನಗೆ ನೆನಪಿರಲ್ಲ ಇನ್ನು ಹೋದ ವರ್ಷದ್ದು ಕೇಳ್ತಾ ಇದೀಯಲ್ಲೇ! ಅರೆರೆ! ಇಷ್ಟು ಬೇಗ ಮತ್ತೆ ನಿನ್ನ ಹುಟ್ಟಿದ ಹಬ್ಬ ಬಂದೆ ಬಿಡ್ತಾ ''ಇವರು ತಮ್ಮ ಜೇಬಿಗೆ ಬೀಳುವ ಕತ್ತರಿಯನ್ನು ನೆನದು ಗಾಬರಿಯಾದರು! ''ಅಯ್ಯೋ ! ಅದಕ್ಕೆ ನೀವೇನು ತಲೆ ಕೆಡಿಸ್ಕೋಬೇಡಿ! ನನ್ನ ಮೊಬೈಲ್ ಮಾಡೆಲ್ ಹಳೆಯದಾಯಿತು, ಈ ಸಲ ಹುಟ್ಟಿದ ಹಬ್ಬಕ್ಕೆ ಹೊಸದು ತೊಗೊಳ್ಳೋಣ ಅನ್ಕೊಂಡೆ!'' ಕ್ರಿಕೆಟ್



ಪಂದ್ಯದ ಕೊನೆ ಎರೆಡು ಓವರ್ಗಳು.. ಭಾರತದ ಸೋಲು ಗೆಲುವಿನ ಪ್ರಶ್ನೆ!. ಇದರ ಜೊತೆ ನನ್ನ ತಲೆ ತಿನ್ನುವ ಪ್ರಶ್ನಾವಳಿಗಳು!.. ಇವರು ''ಆಯಿತು ಮಾರಾಯ್ತಿ! ತೊಗೋ.. ಈಗ ಮ್ಯಾಚ್ ನೋಡೋಕೆ ಬಿಡ್ತೀಯಾ ''ಎಂದು ಉಗುರು ಕಚ್ಚುತ್ತಾ ಸೋಫಾ ತುದಿಗೆ ಸರಿದು ಕುಳಿತರು! ''ಈ ಸಲ ನೀವು ನನ್ನ ಶಾಪಿಂಗ್‌ಗೆ ನನ್ನ ಜೊತೆ ಬರೋದೇನು ಬೇಡ ರೀ. ನಾನೇ ಆನ್ಲೈನ್ನಲ್ಲಿ ಹೊಸ ಮಾಡೆಲ್ ನೋಡ್ಕೊಂಡಿದ್ದೀನಿ, ಫ್ಲಿಪ್ಕಾರ್ಟ್‌ನಲ್ಲಿ ಬುಕ್ ಮಾಡಿಬಿಡ್ತೀನಿ! ''ಎಂದು ಅವರಿಗೆ ನನ್ನ ಶಾಪಿಂಗ್ ಎಂಬ ''ಮಾಲ್ ಬಂಧನದಿಂದ'' ಧಾರಾಳವಾಗಿ ಮುಕ್ತಗೊಳಿಸಿದಾಗ ಕಾಮೆಂಟರಿ ಹೊರತಾಗಿ ಇವರ ಕಿವಿಗಳಿಗೆ ಏನೋ ಕೇಳಿಸಲ್ಲಿಲ್ಲ! ಆದರೂ ನಾ ಹೇಳೋದನ್ನು ಕೇಳಿಸಿದಂತೆ ನಟಿಸಿ ''ಓಕೇ ಓಕೇ'' ಎಂಬ ಸಂಜ್ಞೆ ಮಾಡಿದರು. ನಾನು ನನ್ನ ಮ್ಯಾಚ್ ಮುಗಿಸಿ ಗೆಲುವಿನ ನಗೆಯೊಂದಿಗೆ ಜಾಗ ಖಾಲಿ ಮಾಡಿದೆ!



# ನಾನು ಅವರಲ್ಲಾಽಽಽಽ

- ಗಾಯತ್ರಿ ಮೂರ್ತಿ

ಅರೆ, ಇದೇನು? ಬುದ್ಧಿವಂತ ಸಿನಿಮಾ ಡೈಲಾಗ್ ಇದ್ದ ಹಾಗೆ ಇದೆಯಲ್ಲ? ಅಂತ ಆಶ್ಚರ್ಯ ಪಡ್ತಿದೀರಾ? ಸಧ್ಯ, ಆ ಸಿನಿಮಾದಲ್ಲಿ ಪಂಚಾಮೃತನನ್ನು ಹಿಡಿದಂತೆ ನನ್ನನ್ನು ಪೊಲೀಸರು ಹಿಡಿದು ಕೇಸ್ ನಡೆಸ್ತಿಲ್ಲ. ಯಾಕೆ ಹೀಗೆ ಹೇಳ್ತಿದೀನಿ ಅಂದರೆ... ಇಲ್ಲಿ ಕೇಳಿ, ಉಹೂಂ, ಓದಿ. ಅಲ್ಲಾ, ನನ್ನ ಮುಖವೇನು ಅಷ್ಟು ಸಾಮಾನ್ಯವಾಗಿ ಹೋಯಿತೇ ಜನರು ಬಂದು ನನ್ನನ್ನು ಹಾಗೆ ಕೇಳಲು ಅಂತೀನಿ. ಅಯ್ಯೋ, ನಮ್ಮ ಸಹನೆ ಪರೀಕ್ಷೆ ಮಾಡಬೇಡಿ, ಅದೇನು ಅಂತ ಬೇಗ ಹೇಳಿ ಅಂದ್ರಾ? ಅದನ್ನೇ ಹೇಳೊಕೆ ಹೊರಟಿದ್ದು. ಮೊನ್ನೆ ಫುಡ್‌ವರ್ಲ್ಡ್‌ಗೆ ಹೋಗಿದ್ದೆ. ಯಾರೋ ಒಬ್ಬರು ನನ್ನನ್ನೇ ಗಮನಿಸುತ್ತಿದ್ದಾರೆ ಎನ್ನಿಸಿತು. ನೋಡಿದರೆ ನನ್ನ ಗಂಟೇನು ಹೋಯ್ತು ಬಿಡು, ಎಂದು ನನ್ನ ಪಾಡಿಗೆ ನಾನು ನನ್ನ ಕೆಲಸ ಮುಂದುವರೆಸಿದೆ. ನಾನು ಮುಂದಿನ ಸಾಲಿಗೆ ಹೋಗುವಷ್ಟರಲ್ಲಿ ಆ ವ್ಯಕ್ತಿ ನನ್ನ ಪಕ್ಕ ಬಂದು ನಿಂತುಕೊಂಡು, ನೀವು ಮಂಗಳೂರಿನವರೇ? ಎಂದು ಕೇಳಿದರು. ಅಲ್ಲ, ನಾನು ಪಕ್ಕಾ ಮೈಸೂರಿನವಳು? ಎಂದೆ. ಓ ಹೌದಾ? ನೀವು ಅವರೇ ಅಂದುಕೊಂಡು ಬಿಟ್ಟೆ, ಅವರು ನಿಮ್ಮ ಹಾಗೇ ಇದ್ದರು. ದಿನಾ ನಾನು ಹೋಗ್ತಿದ್ದ ಬಸ್ಸಲ್ಲೇ ಬರೋವ್ರು. ನಿಮ್ಮ ತರಹಾನೇ, ಗುಂಡು ಮುಖ, ದೊಡ್ಡ ಹಣೆ, ದೊಡ್ಡದಾಗಿ ಕುಂಕುಮ ಇಡ್ತಿದ್ರು. ನಿಮ್ಮ ತರಾನೇ ಕೂದಲು ಎತ್ತಿ ಕಟ್ಟಿ ಗಂಟು ಹಾಕ್ತಿದ್ರು. ಅದಕ್ಕೇ ನೀವು ಅವರೇ ಅಂತ ಮಾತಾಡಿಸಿಬಿಟ್ಟೆ, ಏನೂ ತಿಳ್ಕೋ ಬೇಡಿ, ಎಂದರು. ನಾನು ಅವರಲ್ಲ ಎಂದಾಗ ಅವರ ಮುಖದಲ್ಲಿನ ನಿರಾಶೆ ನೋಡಿ ನಾನು ಅವರೇ ಎಂದು ಹೇಳಿದ್ದರೆ ಏನಾಗುತ್ತಿತ್ತು? ಎನ್ನಿಸಿತು. ಹಾಗೆ ಮಾಡಿ ಒಮ್ಮೆ ಮೋಜು ನೋಡಬೇಕು ಎನಿಸಿದ್ದೂ ಉಂಟು. ಆದರೆ ಹಾಗೆ ಇನ್ನೊಬ್ಬರನ್ನು ನಾನು ಎಂದುಕೊಂಡರೆ ನನ್ನ ವ್ಯಕ್ತಿತ್ವಕ್ಕೆ ಭಂಗ ಆಗುವುದಿಲ್ಲವೇ?

**ನಾನು ಮೈಸೂರಿನವಳಾದರೂ ಅನೇಕರು ನನ್ನನ್ನು ನೀವು ಮಂಗಳೂರಿನವರಲ್ಲವೇ ಎಂದು ಕೇಳುತ್ತಲೇ ಇರುತ್ತಾರೆ. ಏಕೋ..?**

ನನಗಂತೂ ನಾನು ಮೈಸೂರಿನವಳು ಎಂದು ಹೇಳಿಕೊಳ್ಳುವುದರಲ್ಲಿ ಅಪಾರ ಹೆಮ್ಮೆ. ಆದರೆ ಈವರೆಗೆ ಸುಮಾರು ಒಂದು ಐವತ್ತು ಜನರಾದರೂ ನೀವು ಮಂಗಳೂರಿನವರಲ್ಲವೇ? ಎಂದು ಕೇಳಿ ನನ್ನನ್ನು ಪೇಚಿಗೀಡುಮಾಡಿದ್ದಾರೆ. ಅಲ್ಲಾ, ಮೈಸೂರಿನರಾರಿಗೂ ದೊಡ್ಡ ಹಣೆ ಇರುವುದಿಲ್ಲವೇ? ಅವರು ಬೆಳ್ಳಗಿರುವುದಿಲ್ಲವೇ? ನಾನು ಮೊದಲ ಬಾರಿಗೆ ಯಾವುದಾದರೂ ತರಗತಿಗೆ ಅಂದರೆ ಪ್ರಥಮ ಪಿ.ಯು.ಸಿ ಅಥವಾ ಪ್ರಥಮ ಬಿ.ಎಸ್ಸಿ ತರಗತಿಗೆ ಹೋದರೆ, ತರಗತಿ ಮುಗಿದ ಕೂಡಲೇ ಒಂದಿಬ್ಬರು ವಿದ್ಯಾರ್ಥಿಗಳಾದರೂ ನನ್ನ ಹಿಂದೆ ಓಡಿ ಬಂದು, ಮೇಡಂ, ನೀವು ಮಂಗಳೂರಿನವರಲ್ಲವಾ? ಎಂದು ಕೇಳುತ್ತಿದ್ದರು. ನಾನು ನಕಾರಾತ್ಮಕವಾಗಿ ಉತ್ತರಿಸಿದರೆ, ನೀವು ಸೀತಾ ಆಂಟಿ ಹಾಗೇ ಇದೀರಾ? ಅವರು ಲೆಕ್ಚರರ್ ಆಗಿದ್ರು. ಅವರನ್ನು ನೋಡಿ ತುಂಬಾ ವರ್ಷ ಆಯ್ತು. ನೀವು ಅವರೇ ಇರಬಹುದೇನೋ ಎಂದು ಕೇಳಿದೆ ಎಂದಾಗ, ಕ್ಲಾಸಲ್ಲಿ ಮೊದಲು ನನ್ನ ಹೆಸರು ಗಾಯತ್ರಿ



ಅಂತ ಪರಿಚಯ ಮಾಡ್ಕೊಂಡು ಅಲ್ವಾ ನಾನು ಪಾಠ ಶುರು ಮಾಡಿದ್ದು, ಎಂದು ಹೇಳಿದಾಗ, ಓಽಽ ಹೌದಾ? ನೀವು ಅವರೇ ಅಂತ ತಿಳ್ಕೊಂಡಿದ್ದೆ, ಎಂದು ನಿರಾಸೆಯ ರಾಗ ಹಾಡಿ ವಾಪಸಾದ. ಸೀತಾ, ಇಲ್ಲವೇ ಸಾವಿತ್ರಿ ಅದೂ ಇಲ್ಲದಿದ್ದರೆ ಜಾನಕಿ ಹೀಗೆ ಬೇರೆ ಯಾರ ಹೆಸರೋ ಹೇಳಿ ನೀವು ಅವರೇ ಅಲ್ಲವಾ? ಎಂದು ಜನ ಕೇಳುವುದು ಮಾಮೂಲಿಯಾಗಿ ಬಿಟ್ಟಿದೆ. ಹಾಗೇನಾದರೂ ಕೇಳದಿದ್ದರೆ ಇದ್ಯಾಕಿವತ್ತು? ಯಾರೂ ನನ್ನನ್ನು ಮಾತಾಡಿಸಲಿಲ್ಲ? ಎನ್ನಿಸುವುದೂ ಉಂಟು. ಯಾರಿಗೆ ತಾನೆ ತನ್ನ ಸ್ವಂತಿಕೆಯ ಬಗ್ಗೆ ಅಂದರೆ ತನ್ನ ಸ್ವಂತ ಮುಖದ ಬಗ್ಗೆ ಅಭಿಮಾನ ಇರುವುದಿಲ್ಲ, ಮುಖವೇ ಅಲ್ಲವೇ ಮನುಷ್ಯನಿಗೆ ಒಂದು ಗುರುತು ನೀಡುವುದು. ಅದರಿಂದಲೇ ಅಲ್ಲವೇ ನಾವು ನಮ್ಮ ಪರಿಚಯದವರನ್ನು ಗುರುತಿಸುವುದು. ಅಂತಹುದರಲ್ಲಿ ಆ ಮುಖ ಮತ್ತೊಬ್ಬರಂತೆ ಇದೆ ಎಂದು ಪದೇಪದೇ ಜನರು ಕೇಳಿದರೆ ಹೇಗಾಗಬೇಡ? ಬಹುಶಃ ತಂತಮ್ಮ ಮುಖವೇ ಪ್ರತಿಯೊಬ್ಬರಿಗೂ ಅತ್ಯಂತ ಪ್ರೀತಿಪಾತ್ರವಾದದ್ದು. ಇಲ್ಲದಿದ್ದರೆ ಸೆಲ್ಫಿ ಹುಚ್ಚು, ಅಂದರೆ ಎಲ್ಲೆಂದರಲ್ಲಿ ಮೊಬೈಲ್‌ನಲ್ಲಿ ಕಮರಿಯ ತುದಿಯಲ್ಲಿ ಇಲ್ಲವೇ ಬೆಟ್ಟದ ತುದಿಯಲ್ಲಿ ನಿಂತು, ಸೇತುವೆ ಮೇಲೆ, ನದಿ ದಡದಲ್ಲಿ, ಸಮುದ್ರದ ಬಳಿ ಹೀಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ಆತುರದಲ್ಲಿ ಅಪಾಯದ ಅಂಚನ್ನು ದಾಟಿ ಅದೆಷ್ಟು ಜನ ಪ್ರಾಣ ಕಳೆದುಕೊಂಡಾಗಿದೆಯೋ? ಆದರೂ ಜನರಿಗೆ ಬುದ್ಧಿ ಬಂದಿಲ್ಲ ಎನ್ನುವುದು ಪತ್ರಿಕೆಗಳಲ್ಲಿ ಇನ್ನೂ ಇಂತಹ ಪ್ರಸಂಗಗಳು ವರದಿಯಾಗುತ್ತಲೇ ಇರುವುದು ಓದಿದಾಗ ಖೇದವೆನಿಸುತ್ತದೆ. ಇನ್ನೂ ಅದೆಷ್ಟು ಜನರ ಪ್ರಾಣ ಹೀರಲು ಸೆಲ್ಫಿ ಹುಚ್ಚು ಕಾದು ನಿಂತಿದೆಯೋ ನೋಡಬೇಕು. ಅಂದರೆ, ಜನರಿಗೆ ತಂತಮ್ಮ ಮುಖದ ಮೇಲಿನ ಅಭಿಮಾನ ಯಾವ ಮಟ್ಟದಲ್ಲಿರುತ್ತದೆ ಎನ್ನುವುದಕ್ಕೆ ಸೆಲ್ಫಿ ಹುಚ್ಚು ಜ್ವಲಂತ ಸಾಕ್ಷಿ ಅಲ್ಲವೆ?

★★★

ಇಲ್ಲಿಯವರೆಗೆ ನನ್ನ ಅನುಭವ ಹೇಳಿದೆ. ಇನ್ನೂ ಕೆಲವು ಸ್ವಾರಸ್ಯಕರ ಎನ್ನಿಸುವ ಕೆಲವು ಪ್ರಸಂಗಗಳು– ಇತ್ತೀಚೆಗೆ ನನ್ನ ಮೈದುನನ ಮದುವೆ ಸಮಾರಂಭದಲ್ಲಿ ನಡೆದ ಸಂಗತಿ. ನನ್ನ ತಂಗಿ ಗೀತ ಹಾಂಕ್‌ಕಾಂಗ್‌ನಲ್ಲಿದ್ದಾಳೆ. ಅವಳನ್ನು ನಮ್ಮ ಬೀಗರಾದ ಸುಂದರೇಶ್ ಒಂದೆರಡು ಬಾರಿ ನೋಡಿದ್ದಾರೆ. ಆದರೆ ಅವರಿಗೆ ಆ ದಿನ ಅವಳ ಗುರುತು ಸಿಕ್ಕಿಲ್ಲ, ಬಹುಶಃ ಅವರು ನನ್ನ ತಂಗಿ ಹಾಂಗ್‌ಕಾಂಗ್‌ನಿಂದ ಮದುವೆಗೆ ಬರುತ್ತಾಳೆಂದು ನಿರೀಕ್ಷಿಸರಲಿಲ್ಲವೇನೋ? ಅವಳು ಮಾತಾಡಿಸಲು ಯತ್ನಿಸಿದರೂ, ಅವರು ಹಿಂಜರಿದು ಅತ್ತ ತಿರುಗಿದರಂತೆ! ನನ್ನ ತಂಗಿ ಅವರ ಬಳಿ ಹೋಗಿ, ನಾನು ಗೀತ, ಗಾಯತ್ರಿ ತಂಗಿ. ಚೆನ್ನಾಗಿದೀರಾ? ಎಂದು ಕೇಳಿದಾಗ ಗುರುತು ಹಿಡಿದು ಮಾತಾಡಿಸಿರಂತೆ.

ನಂತರ ನನ್ನ ಮಗನ ಬಳಿ ಅವರು ಹೀಗೆ ಹೇಳಿದರಂತೆ, ವಿಕ್ರಮ್, ಗೀತ ನನ್ನ ಕಣ್ಣಿಗೆ ಪೂಜಾ ಗಾಂಧಿ ತರಹ ಕಾಣಿಸಿದರು. ಅವರೋ ನನ್ನ ಕಡೆ ನೋಡಿ ಮುಗುಳ್ನಗೆ ಬೀರಿದಾಗ, ಪೂಜಾ ಗಾಂಧಿ ನನ್ನನ್ನು ನೋಡಿ ಯಾಕೆ ನಗ್ತಿದಾರೇಂತ ಸಂಕೋಚವಾಗಿ ಪಕ್ಕಕ್ಕೆ ತಿರುಗಿದೆ. ನಂತರ ಅವರು ಮತ್ತೊಮ್ಮೆ ನನ್ನತ್ತ ನೋಡಿ ನಗಬೇಕೇ? ನನಗಂತೂ ತೀರಾ ಸಂಕೋಚವಾಗಿ ಅತ್ತ ಕಡೆ ತಿರುಗಿ ಕುಳಿತು ಬಿಟ್ಟೆ, ಆದರೆ, ಅವರು ಬಿಡಲೇ ಇಲ್ಲ, ನನ್ನ ಬಳಿಯೇ ಬಂದು ಚೆನ್ನಾಗಿದೀರಾ? ನಾನು ಗೀತಾ, ಗಾಯತ್ರಿ ತಂಗಿ, ಅಂತ ಪರಿಚಯ ಹೇಳಿದ ಮೇಲೆ ಬದುಕಿದೆಯಾ ಬಡ ಜೀವಾಂತ ಅವರನ್ನು ಮಾತಾಡಿಸಿದೆ. ನಿಜವಾಗ್ಲೂ ಫೆಬ್ರವರೀನಲ್ಲೇ ನಾನು ಏಪ್ರಿಲ್ ಫೂಲ್ ಆಗಿದ್ದೆ,



ಎಂದರಂತೆ!!! ಈ ಪ್ರಸಂಗವನ್ನು ನನ್ನ ಮಗ ಆ್ಯಕ್ಶನ್ ಸಮೇತ ವಿವರಿಸಿದಾಗ ನಾವೆಲ್ಲಾ ನಕ್ಕಿದ್ದೇ ನಕ್ಕಿದ್ದು.

ನನ್ನ ಪತಿ ಸ್ವಂತ ಊರು ಕೋಲಾರ ಜಿಲ್ಲೆಯ ವೇಮ್‌ಗಲ್. ಇತ್ತೀಚೆಗೆ ಅಲ್ಲಿಗೆ ಹೋಗಿ ನಮ್ಮ ದೂರದ ಬಂಧುಗಳನ್ನು ನೋಡುವ ಸೌಭಾಗ್ಯ ನಮಗೆ ಒದಗಿ ಬಂತು. ಅವರಲ್ಲಿ ಒಬ್ಬರು ರಾಧಾಕೃಷ್ಣ ಅಂತ ಥೇಟ್ ಖ್ಯಾತ ಕನ್ನಡ ಸಿನಿಮಾ ನಟ ಲೋಕನಾಥ್‌ರಂತೆಯೇ ಇರುವುದು ಕಂಡು ಅಚ್ಚರಿಯಾಯಿತು. ಅವರು ನಿಲ್ಲುವುದು, ಕೂರುವುದು, ಮಾತನಾಡುವುದು ಎಲ್ಲವೂ ಲೋಕನಾಥ್‌ರಂತೆಯೇ! ಆದರೆ ಮೊದಲ ಭೇಟಿಯಲ್ಲೇ ಹೇಗೆ ಹೇಳುವುದು? ಸುಮ್ಮನಿದ್ದೆ. ಕೆಲ ದಿನಗಳ ನಂತರ ಮತ್ತೆ ಅವರನ್ನು ಭೇಟಿಯಾಗಿದ್ದೆವು. ಆಗ ನನ್ನಿಂದ ತಡೆಯಲಾಗಲಿಲ್ಲ. ನೀವು ಲೋಕನಾಥ್ ತರಹ ಇದೀರಾ, ಎಂದೆ. ಅವರು ನಕ್ಕು, ತುಂಬಾ ಜನ ಹೇಳ್ತಾರೆ. ಬೆಂಗಳೂರಿಗೆ ಬಂದಾಗ ಆಟೋ ಹತ್ತಿ, ಇಳಿಯುವಾಗ ಅವನಿಗೆ ದುಡ್ಡು ಕೊಡಲು ಹೋದರೆ, ಸಾರ್, ನಿಮ್ಮ ಹತ್ರ ದುಡ್ಡು ತೊಗೋಳೊಲ್ಲ, ನಾನು ನಿಮ್ಮ ಫ್ಯಾನ್, ಅಂತಾರೆ. ಅಯ್ಯೋ, ನಾನು ಸಿನಿಮಾ ನಟ ಅಲ್ಲ, ಸುಮ್ಮನೆ ದುಡ್ಡು ತೊಗೋ, ಅಂದರೆ, ಆಟೋ ಡ್ರೈವರ್ ನಿರಾಸೆಯಿಂದ, ಹಾಗಾದ್ರೆ ನೀವು ಲೋಕನಾಥ್ ಅಲ್ವಾ? ಎಂದು ಕೇಳುತ್ತಾನೆ. ಅಲ್ಲಪ್ಪಾ, ನಾನು ರಾಧಾಕೃಷ್ಣ ಅಂತ, ಎಂದು ಹೇಳುತ್ತೇನೆ. ಅದ್ಹೇಗೆ ಸಾರ್, ನೀವು ಮಾತಾಡೋದು, ನಿಲ್ಲೋದು ಸಹ ಅವರಂತೆಯೇ. ತುಂಬಾ ಚೆನ್ನಾಗಿ ಇಮಿಟೇಟ್ ಮಾಡ್ತೀರಾ, ಎಂದು ಹೇಳುತ್ತಾನೆ. ಈ ಅನುಭವ ನನಗೆ ಮಾಮೂಲು, ಎಂದರು.

ನನಗೂ ಹಾಗೇ ಅನ್ನಿಸ್ತು. ನೀವು ಲೋಕನಾಥ್ ತರಹಾನೇ ಮಾತಾಡ್ತೀರಾ. ಅದನ್ನು ಅಭ್ಯಾಸ ಮಾಡ್ಕೊಂಡ್ರಾ? ಎಂದು ತಮಾಷೆಯಾಗಿ ಕೇಳಿದೆ. ಖಂಡಿತಾ ಇಲ್ಲ, ನಾನು ಮೊದ್ಲಿಂದ ಹೀಗೇ ಮಾತಾಡೋದು, ಎಂದರು. ನಂಬುವುದು ಕಷ್ಟ ಎನ್ನಿಸಿದರೂ ನಾನು ಸೌಜನ್ಯದಿಂದ, ಹೌದಾ? ಎಂದು ಉದ್ಗರಿಸಿ ಸುಮ್ಮನಾದೆ.

ನಾನು ಐಶ್ವರ್ಯ ರೈ ತರಹ ಇದ್ದೇನೆ, ಜೂಹಿ ಚಾವ್ಲಾ ತರಹ ಇದ್ದೇನೆ, ಹೇಮ ಮಾಲಿನಿ ತರಹ ಇದ್ದೇನೆ, ಮಾಧುರಿ ದೀಕ್ಷಿತ್ ತರಹ ಇದ್ದೇನೆ ಎಂದು ಭಾವಿಸಿ, ಅವರಂತೆ ಹಾವಭಾವ ತೋರಿಸುವ ಯುವತಿಯರಿಗೇನೂ ಕಡಿಮೆಯಿಲ್ಲ. ಅಂತೆಯೇ ಹುಡುಗರೂ ಕೂಡ. ನಮ್ಮ ಕನ್ನಡ ಚಿತ್ರರಂಗದ ಕಣ್ಮಣಿ ಡಾ. ರಾಜಕುಮಾರ್‌ರಂತೆಯೇ ಕಾಣುವ, ಅವರನ್ನು ಸಂಪೂರ್ಣವಾಗಿ ಅನುಕರಿಸುವ ನೀವೇನೇ ಅನ್ನಿ, ಕೆಲವರಿಗೆ ತಾವು ಸಿನಿಮಾ ನಟನಂತಿದ್ದೇನೆ ಎಂಬ ಭಾವನೆ ಬೆಳೆಯುತ್ತದೆ. ಅದಕ್ಕೆ ತಕ್ಕಂತೆ ಅವರು ತಮ್ಮ ಅಲಂಕಾರ, ವೇಷಭೂಷಣಗಳೂ ಅವರಂತೆ ಮಾಡಿಕೊಂಡು ಅವರ ಹಾವಭಾವಗಳನ್ನು ಅನುಕರಿಸಿ ಸಂತೋಷ ಪಡುತ್ತಾರೆ.

ನಮ್ಮ ಕನ್ನಡ ಚಿತ್ರರಂಗದ ಕಣ್ಮಣಿ ನಟಸಾರ್ವಭೌಮ ಡಾ. ರಾಜಕುಮಾರ್‌ರಂತೆಯೇ ಕಾಣುವ, ಅವರನ್ನು ಸಂಪೂರ್ಣವಾಗಿ ಅನುಕರಿಸುವ ವ್ಯಕ್ತಿಯನ್ನು ಸಿನಿಮಾಗಳಲ್ಲಿ, ಟೆಲಿವಿಷನ್ ಧಾರಾವಾಹಿಗಳಲ್ಲಿ ನೋಡಿರಬಹುದು. ಓದಿದೆ. ಖ್ಯಾತ ನಟನೊಬ್ಬನಂತಿದ್ದು ಅವರನ್ನೇ ಅನುಕರಿಸುವ ವ್ಯಕ್ತಿ, ಅದರಿಂದಲೇ ಜೀವನ ನಿರ್ವಹಣೆ ಕೂಡ ಮಾಡುತ್ತಿದ್ದಾರೆಂಬ ಸುದ್ದಿ ಓದಿ ಜನರಿಗೆ ಹೀಗೂ ತಮ್ಮತನ ಕಳೆದುಕೊಳ್ಳುವ ಹುಚ್ಚುತನ ಉಂಟೇ ಎಂದು ಅಚ್ಚರಿಯಾಯಿತು.




OMKAR
Offset Printers
Specialists in :
Multi-colour Brochures
Magazines
Annual Reports
News Letters
Variable Data Printing
All Graphic Arts under one roof
No. 3/3, 1st Main Road
New Tharagupet
Bangalore - 560 002.
Telefax : 2670 9026, 2670 8186/7
E-mail : omkaroffset@gmail.com
Website : www.omkaroffset.com
CTP - Trendsetter 800 Quantum Platesetter
IBM RICOH 2190
Variable Data Printer
Komori Lithrone S40



# ಶ್ವಾನ ಪ್ರಲಾಪ

- ನಂನಾಗ್ರಾಜ್

ನಿಮ್ಮ ಮನೆ ಮಂದಿಯನ್ನು ನೋಡಿದಾಗಲೆಲ್ಲಾ ಎಷ್ಟೊಂದು ಪ್ರೀತಿ, ವಿಶ್ವಾಸ, ಸಡಗರದಿಂದ ಹಾಗೂ ಚಾಮರ ಸೇವೆ ಮಾಡುತ್ತಾ ನಿಮ್ಗಳ ಹತ್ತಿರ ಸುತ್ಕೊಂಡಿರ್ತೀನಿ. ಕಳ್ಳಕಾಕರನ್ನು ಹೆದರಿಸಿಕೊಂಡು, ಡ್ರಗ್ ಪೆಡ್ಲರ್ಸನ್ನು ಕೊಲೆಗಡುಕರನ್ನು ಹಿಡಿಯಲು ಸಹಾಯ ಮಾಡ್ಕೊಂಡು ನಾನಾ ರೀತಿಯಲ್ಲಿ ನಿಮ್ಮ ಸೇವೆ ಮಾಡ್ಕೊಂಡು ಬರ್ತಿದೀನಿ. ನೀವುಗಳೇ ನನ್ನನ್ನು ಮನುಷ್ಯನ ಅತ್ಯುತ್ತಮ ಗೆಳೆಯ ಹಾಗೂ ಸ್ವಾಮಿ ನಿಷ್ಠೆಯ ಪ್ರತೀಕ ಎಂದೆಲ್ಲ ಹಾಡಿ ಹೊಗಳ್ತೀರ. ಆದರೆ ಬಹಳಷ್ಟು ವಿಷಯಗಳಲ್ಲಿ ನಮ್ಮ ಶೋಷಣೆ ನಡೆಯುತ್ತಿದೆ. ನೀವು ನಮ್ಮನ್ನು ನೋಡಿಕೊಳ್ಳುತ್ತಿರುವ ರೀತಿ ಯಾವ ಬೆಕ್ಕಿಗೂ ಬೇಡ।

**ನಾಯಿಯೊಂದು ತನ್ನ ವೇದನೆಯನ್ನು ತೋಡಿಕೊಂಡರೆ ಹೇಗಿರಬಹುದು?**

ಮೇಲ್ಕಂಡ ನಮ್ಮ ಸ್ವಭಾವ ಹಾಗೂ ಸೇವೆಗಳಿಗೆ ಪ್ರತಿಯಾಗಿ ನೀವು ಮಾಡ್ತಿರೋದಾದರೂ ಏನು? ದಿನಂಪ್ರತಿ ಒಂದಷ್ಟು ರಾಗಿ ಗಂಜಿಯೋ ಅಥವಾ ಒಂದಷ್ಟನ್ನಕ್ಕೆ ಒಂದೆರಡು ತೊಟ್ಟು ನೀರು ಹಾಲು ಚುಮುಕಿಸಿ ಊಟ ಅಂತ ಹಾಕ್ತೀರ. 24X7 ನಿರಂತರವಾಗಿ ನಿಮ್ಮ ಮನೆ ಕಾಯುವ ನಮಗೆ ಹಿಂಗಾ ಮಾಡೋದು? ನಿಮ್ಮನೆ ಕಾಯ್ವಾಗ।

ಇನ್ನೊಂದು ಸೂಕ್ಷ್ಮದ ವಿಷಯ. ನಿಮ್ಮಗಳ ತರಹ ನಮಗೆ ದಿನಂಪ್ರತಿ ಒಂದೇ ಕಡೆ ಕುಕ್ಕರಿಸಿಕೊಂಡು ಕಳೆಯೊಕ್ಕೆ ಆಗೊಲ್ಲ. ಅದು ಆಗಬೇಕಾದರೆ ಪ್ರತಿ ದಿನ ಬೇರೆ ಬೇರೆ ಜಾಗಗಳು ಬೇಕು ಅರ್ಥಾತ್ ಸ್ಥಳಾಕರ್ಷಣೆ। ಅದನ್ನು ಹುಡುಕುತ್ತೀವಪ್ಪ. ನಮ್ಮ ಈ ಮೂಲ (!) ಚಟುವಟಿಕೆಯ ಶೈಲಿಗೆ ಬೇಸತ್ತು ನೀವು ನಮ್ಮ ಕಾನ್ಸಿಸ್ಟ್ಯೂಟಲ್ ವಾಕ್ ವೇಳೆಯಲ್ಲಿ ನಮ್ಮ ಮೇಲೆ ಅನ್-ಕಾನ್ಸಿಸ್ಟ್ಯೂಟಲ್ ಪದಗಳನ್ನು ಪ್ರಯೋಗಿಸ್ತೀರ. ನಾವು ಕಳೆದುಕೊಳ್ಳುವ ಮುನ್ನ ನೀವು ತಾಳ್ಮೆ ಕಳೆದುಕೊಳ್ಳುತ್ತೀರ!

ಬೇರೆ ನಾಯಿಗಳು ಕಾಣಿಸದಾಗ/ಎದುರಾದಾಗ ಒಂದೆರಡು ಗ್ರೀಟಿಂಗ್ಸ್ (!) ವಿನಿಮಯ ಮಾಡಿಕೊಳ್ಳೋಣವೆಂದರೆ ಬೈದು ಬಾಯಿ ಮುಚ್ಚಿಸುತ್ತೀರ. ನಮ್ಮ ಬೈಗುಳದ ಭಂಡಾರ ಬೆಳೆಯೋದಾದ್ರೂ ಹೇಗೆ?

ಬೆಳಗಿನಿಂದ ಸಂಜೆಯವರೆಗೆ ಒಂದೇ ಕಡೆ ಕಟ್ಟಾಕ್ಬಿರ್ತೀರ. ಕಾನ್ಸಿಸ್ಟ್ಯೂಟಲ್ ವಾಕ್ ಸಮಯದಲ್ಲಿ ಕೂಡ ಲೀಶ್‌ನಲ್ಲಿಟ್ಟಿರ್ತೀರ. ರಾತ್ರಿ ವೇಳೆಯಲ್ಲಿ ಮಾತ್ರ ನಿಮ್ಮ ಅನುಕೂಲಕ್ಕಾಗಿ ಸರಪಣಿ ಕಳಚುತ್ತೀರ. ನಾವುಗಳು ಮೊಬೈಲಾಗಿರೋದೇ ಬೇಡ್ವೇ?

ನಿಮ್ಮ ಕೋಪಾವೇಶದಲ್ಲಿ ಯಾರನ್ನಾದರೂ ಬೈಯ್ಯಬೇಕಾದಲ್ಲಿ ಅಸಂಬದ್ಧವಾಗಿ ನಮ್ಮ ಕುಲದ ಹೆಸರನ್ನು ಪ್ರಯೋಗಿಸುತ್ತೀರ - ದುರ್ನಡತೆ. ನಿಮ್ಮದೇ ಅಗಾಧ ಬೈಗುಳ ಭಂಡಾರದಿಂದ ಬಾಚಿಕೊಳ್ಳಬಾರದೇಕೆ?



ನಿಮ್ಮ ದೃಷ್ಟಿಕೋನವೇ ಸರಿ ಇಲ್ಲ. ವಿವಿಧ ಭಂಗಿಗಳಲ್ಲಿ ಕಲಾತ್ಮಕವಾಗಿ ಸುತ್ತಿಕೊಂಡಿರುವ ನಮ್ಮ ಬಾಲ ಡೊಂಕಾಗಿ ಕಾಣುತ್ತಿದೆಯೇ? ಅದು ಹಾಗಿರಲಿ ನಿಮ್ಮ ನಿರಂತರವಾದ ಹಗರಣ ಹಾಗೂ ಅಕ್ರಮ ವ್ಯವಹಾರಗಳ ಹಿನ್ನೆಲೆ ನೋಡಿದರೆ ನಿಮ್ಮ ತಲೆಯೇ ಡೊಂಕಾಗಿದೆ ಎಂಬುದು ಸ್ಪಷ್ಟವಾಗಿದೆ. ಹ್ವಾ ಹ್ವಾ! ವಿಚಿತ್ರ ರೀ ನೀವು, ನಮ್ಮ ಬಾಲ ಡೊಂಕು ಎಂದು ಕುಚೋದ್ಯ ಮಾಡುತ್ತೀರ. ಮೈಡೊಂಕಿನ ವೈಯಾರಿ ಅಂತ ಹಾಡಿ ಹೊಗಳುತ್ತಾ ಹೆಂಗಸರನ್ನು ಹಿಂಬಾಲಿಸ್ಕೊಂಡಿರ್ತೀರ.

ನಿಮ್ಮಲ್ಲಿ ಕಷ್ಟಕರವಾದ ಅಥವಾ ಹೀನಾಯವಾದ ಜೀವನ ನಡೆಸುತ್ತಿರುವವರನ್ನು ಅವರದು ನಾಯಿಯಂತಹ ಜೀವನ ಎಂದು ಹೀಯಾಳಿಸುತ್ತೀರಿ. ಹೌದು ನಮ್ಮ ಜೀವನ ಸುಖಮಯವಾಗಿಲ್ಲ ತೊಂದರೆಗಳ ಮೇಲೆ ತೊಂದರೆ ಆದರೂ ಅದನ್ನು ನಮಗಿಷ್ಟೇ ಪ್ರಾಪ್ತಿ, ಪಾಲಿಗೆ ಬಂದದ್ದು ಪಂಚಾಮೃತ ಎಂದು ಸ್ವೀಕರಿಸಿ ವೌ ವೌ (!) ಅಂತ ಕೂಡ ಸದಾ ಹೇಳಿಕೊಂಡು ಜೀವನ ತಳ್ತೀದೀವಿ. ನಿಮ್ಮಲ್ಲೋ ಬಹುತೇಕ ಮಂದಿ ಅತೃಪ್ತರು. ನಮ್ಮ ತರಹದ ಮನೋಭಾವ ಬೆಳಸಿಕೊಳ್ಳಿ!

- ನಿಮ್ಮ ಅನೇಕಾನೇಕ ಸನ್ನಿವೇಶಗಳನ್ನು ಉದಾಹರಿಸಲು (?) ನಮ್ಮ ಹೆಸರನ್ನು ಎತ್ತುತ್ತೀರಿ. ಯಾವುದಾದರೂ ಪರಿಸ್ಥಿತಿ ಹದಗೆಟ್ಟಾಗ ಗಾನ್ ಟು ಡಾಗ್ಸ್, ವರ್ಷದಲ್ಲಿ ಅತಿ ಸೆಕೆಯಾಗಿರುವ ಕಾಲವನ್ನು ಡಾಗ್ ಡೇಸ್ ಅಂತೀರ.
- ಎರಡು ಫೈಟರ್ ವಿಮಾನಗಳ ನಡುವಿನ ಮುಖಾಮುಖಿ ಯುದ್ಧವನ್ನು ಡಾಗ್ ಫೈಟ್ ಅನ್ನುತ್ತೀರ.
- ಕಾದಂಬರಿಗಳನ್ನು ಓದುವಾಗ ಬುಕ್‌ಮಾರ್ಕ್ ಉಪಯೋಗಿಸದೆ ಪುಟಗಳ ಮೇಲ್ತುದಿ ವಿಕಾರವಾಗಿ ಮಡಚಿ ಡಾಗ್ ಈಯರ್ಸ್ ಅಂತೀರ.
- ಏನನ್ನಾದರೂ ಖಂಡಿಸಬೇಕಾದರೆ ಡಾಗ್ ಗಾನ್ ಎನ್ನುತ್ತೀರ.
- ಹೋಟೇಲ್‌ಗಳಲ್ಲಿ ಊಟದ ನಂತರ ನೀವು ಮುಗಿಸಿದ ತಿನಿಸುಗಳನ್ನು ಮನೆಗೆ ತೆಗೆದುಕೊಂಡು ಹೋಗಲೋ ಅಥವಾ ಪಾರ್ಟಿಗಳಲ್ಲಿ ಅತಿಥಿಗಳು ತೆಗೆದುಕೊಂಡು ಹೋಗಲೋ ಒಂದು ಬ್ಯಾಗ್ ಕೊಡುತ್ತಾರೆ. ಅದನ್ನು ಡಾಗ್ ಬ್ಯಾಗ್ ಎಂದು ಕರೆಯುತ್ತೀರಿ. ಹ್ಹಿ ಹ್ಹಿ ಏಕೋ ಗೊತ್ತಿಲ್ಲ ನೀವು ವಾಪಸ್ಸು ತಂದ ತಿನಿಸುಗಳನ್ನು ತಂಗಳು ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿ ಸೇರಿಸಿ ಸಾವಕಾಶವಾಗಿ ಸವಿಯುತ್ತೀರ!
- ವಿನಾಕಾರಣಕ್ಕೆ ಅಥವಾ ಕ್ಷುಲ್ಲ ಕಾರಣಗಳಿಗೆ ಯುದ್ಧಗಳನ್ನು ಮಾಡಿ ಅಸಂಖ್ಯಾತ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿ ನಷ್ಟಗಳನ್ನು ಮಾಡಿಕೊಂಡು ಆ ಯುದ್ಧದ ಪರಿಣಾಮವನ್ನು ಡಾಗ್ಸ್ ಆಫ್ ವಾರ್ ಎಂದು ಗುರುತಿಸುತ್ತೀರಿ.
- ಇನ್ನು ನಿಮ್ಮ ಮಕ್ಕಳು ಮೊಮ್ಮಕ್ಕಳು ನಾವು ನಮ್ಮಷ್ಟಕ್ಕೆ ಇದ್ದಾಗ್ಯೂ ದೂರ ನಿಂತು ಕಲ್ಲಿನಿಂದ ಹೊಡೆದು ಕೇಕೆ ಹಾಕಿ ಮಜ ತಗೋತಾರೆ. ನಮ್ಮಂತಹ ಅಸಹಾಯಕ ಹಾಗೂ ಅಮಾಯಕರನ್ನು ಹೀಗೆ ಹಿಂಸಿಸುತ್ತೀರಲ್ಲ ಕಲ್ಲು ಹೃದಯಿಗಳು.



ಇನ್ನೊಂದು ಅವಹೇಳನದ ವಿಷಯವೆಂದರೆ ನಾಯಿ ಇದೆ ಎಚ್ಚರಿಕೆ ಎಂಬ ಬೋರ್ಡ್‌ನ್ನು ಗೇಟಿಗೆ ಕಟ್ಟಿ ನಮ್ಮ ಮೇಲೆ ತಪ್ಪು ಸಂದೇಶ ರವಾನೆ ಮಾಡುವುದಲ್ಲದೆ ನಮ್ಮ ಚಾರಿತ್ರ್ಯವಧೆ ಕೂಡ ಮಾಡುತ್ತಿದ್ದೀರ. ಅಪರಿಚಿತರು ಬಂದಾಗ ನಿಮ್ಮನ್ನು ಎಚ್ಚರಿಸಲೆಂದು ಬೊಗಳುತ್ತೇವೆಯೇ

ಹೊರತು ವಿನಾಕಾರಣ ಯಾರನ್ನೂ ಕಚ್ಚುವ ಮನೋಭಾವ ನಮಗಿಲ್ಲ. ಬೊಗಳುವ ನಾಯಿ ಕಚ್ಚುವುದಿಲ್ಲ ಎಂಬ ನಾಣ್ಣುಡಿಕೂಡ ನೀವು ಮಾಡಿರೋದೇ ಅಲ್ವೇ?

ಈ ಬೋರ್ಡ್ ಹಾಕುವ ಮುಂಚೆ ನಾವು ಮರೆಯಲ್ಲಿದ್ದು ನಿಮ್ಮನೆಗೆ ಬಂದವರು ಗೇಟ್ ಹತ್ತಿರ ಬರುವ ತನಕ ಕಾದಿದ್ದು ದಿಢೀರ್ ಅಂತ ಬೊಗಳಿ ಅವರು ಬೆದರಿ, ಹಾರಿ, ಬೆವತಿದ್ದು ನೋಡುತ್ತಾ ಎಂಥಾ ಮಜ ತಗೋತಿದ್ದವಿ ನಮಗೆ ಸಿಕ್ಕುತ್ತಿದ್ದ ಏಕೈಕ ಮನರಂಜನೆಯನ್ನೂ ಕಿತ್ತುಕೊಂಡಿರಿ.

ಯಾರಾದರೂ ಹೆಚ್ಚಾಗಿ ಅಲೆದಾಡಿದರೆ ನಾಯಿ ಅಲೆದ ಹಾಗೆ ಅಲೆಯುತ್ತಾನೆ ಎಂದು ಹೋಲಿಸುತ್ತೀರಿ. ನಾವುಗಳೋ ಒಂದು ಸಣ್ಣ ಗುಂಪು ಕಟ್ಟಿಕೊಂಡು ಒಂದು ಕ್ಷೇತ್ರ ಮಾರ್ಕ್ ಮಾಡಿಕೊಂಡು ಅದರ ಮಿತಿಯಲ್ಲಿ ಕ್ಷೇತ್ರ ರಕ್ಷಣೆಗಾಗಿ (!) ಓಡಾಡುತ್ತಿರುತ್ತೇವೆ. ನಿಮ್ಮಗಳ ಹಾಗೆ ಕರ/ಕರ್ಣ ಪಿಶಾಚಿಗಳನ್ನಿಟ್ಕೊಂಡು ಮಾತಾಡ್ತಾನೋ, ಟಿವಿ ರಿಮೋಟ್ ಹಿಡ್ಕೊಂಡು ಸೋಫಾಗೆ ಒರಗಿಕೊಂಡು ಇರೋದಾಗ್ಲೀ ಅಥವಾ ಮೌಸ್ ಹಿಡ್ಕೊಂಡು ಗಣಕಯಂತ್ರದ ಮುಂದೆ ಗಂಟೆಗಟ್ಟಳೆ ಕುಕ್ಕರಿಸಿಕೊಂಡಿಕೊಕ್ಕೆ ಆಗೊಲ್ಲ. ಲವಲವಿಕೆಯಾಗಿರೋದೇ ತಪ್ಪೇ? ಇದು ಅತಿ ಆಯ್ತು.

ಸತತವಾಗಿ ಭೋರ್ಗರೆಯುವ ಮಳೆ ಬಂದಾಗ ಇಟ್ ಈಸ್ ರೈನಿಂಗ್ ಕ್ಯಾಟ್ಸ್ ಅಂತ ಗೊಣಗುತ್ತೀರ. ಎಲ್ಲಿಂದೆಲ್ಲಿಯ ಸಂಬಂಧ? ಗಾಯದ ಮೇಲೆ ಬರೆ ಅನ್ನುವ ಹಾಗೆ ನಮ್ಮ ಹೆಸರಿನ ಜೊತೆ ನಮ್ಮ ಪರಮ ಶತ್ರುವಿನ ಹೆಸರನ್ನೂ ಸೇರಿಸಿದ್ದೀರ ನಾವಿಬ್ಬರೂ 'ಗಳಸ್ಯ – ಕಂಠಸ್ಯ' ಅಲ್ಲ 'ಗಂಟಲಸ್ಯ – ಕಂಠಸ್ಯ' ಎಂದು ನಿಮಗೆ ಗೊತ್ತು ತಾನೆ?

ನಿಮ್ಮ ಅಸಂಬಂದ್ಧ, ಅನಾವಶ್ಯಕ ಹಾಗೂ ಆಕ್ಷೇಪಣೀಯ ಹೋಲಿಕೆಗಳನ್ನು ನಿಮ್ಮ ನಿಘಂಟಿನಿಂದ ಉಚ್ಛಾಟಣೆ ಮಾಡಿ, ಈಗಿಂದೀಗಲೇ.

ನಾನು ಬಾಲ ಅಲ್ಲಾಡಿಸಿದಾಗಲೆಲ್ಲ ಅದು ಹಾಯ್! ಎಂದೇ ಅರ್ಥೈಸುತ್ತೀರ. ಕೆಲವೊಮ್ಮೆ ಅದು ಬೈ ಕೂಡ ಆಗಿರುತ್ತೆ. ಅದರ ಸೂಕ್ಷ್ಮ ನಿಮಗೆ ಗೊತ್ತಾಗುವುದಿಲ್ಲ. ಉದಾಹರಣೆಗೆ ನಿಮ್ಮ ಬಂಧು ಮಿತ್ರರಲ್ಲಿ ಕೆಲವರು ವಿಸಿಟ್‌ಗೆ ಅಂತ ಬಂದು ವಿ ಸಿಟ್ ಮಾಡಿಬಿಡ್ತಾರಲ್ಲ ಅಂತಹವರಿಗೆ!

ಈಗ ನಾನು, ಅದೇ ನಾಯಿ ರೀ, ಬಾಲ ಅಲ್ಲಾಡಿಸ್ತಿದೀನಿ ಅದರ ಅರ್ಥ ಸರಿಯಾಗಿ ಊಹಿಸ್ತೀರಾ ಅಂತ ನಂಬಿದೀನಿ.



## ಹಬ್ಬ

ಹಬ್ಬಕ್ಕೆ ವಿಶೇಷ ಆಕರ್ಷಣೆ
ಬಟ್ಟೆ ಬೆಲೆಯಲ್ಲಿ
ಭಾರೀ ಕಡಿತ
ಆ ಬಟ್ಟೆ ತಂದು ಹಾಕಿಕೊಂಡರೆ
ಗ್ಯಾರಂಟಿ
ಮೈ ಕಡಿತ

– ಸುಕೇಶವ

# ಸುರಾಸುರ ನಿವಾಸ – ಇಂದಿನ ಪುರಾಣ

**– ವೈ.ವಿ. ಗುಂಡೂರಾವ್**

**ಸಾ**ತ್ವಿಕ ಗುಣಗಳಾದ ಪ್ರೀತಿ, ಪ್ರೇಮ, ಸತ್ಯ, ಅಹಿಂಸೆ, ಸಹನೆ ಮುಂತಾದವು ಯಾರಲ್ಲಿರುವುವೋ ಅವರನ್ನು ಸಾತ್ವಿಕರು ಅಥವಾ ಸುರರು ಎಂದು ಕರೆಯುತ್ತಾರೆ. ದ್ವೇಷ, ರೋಷ, ಅಸೂಯೆ, ಮೋಸ, ಮತ್ತು ಅಸಹಿಷ್ಣುತೆ, ಶೋಷಣೆ, ಹಿಂಸೆ, ಕಾಮಾದಿ ಬಯಕೆಗಳ ಅತಿ ಇವು ಸಾಮಾನ್ಯವಾಗಿ ಅಸುರೀ ಗುಣಗಳು.

ತುಂಬಾ ಹಿಂದೆ, ಸತ್ಯಯುಗದಲ್ಲಿ ಅಥವಾ ಕೃತಯುಗದಲ್ಲಿ ಈ ಸುರರು ಹಾಗೂ ಅಸುರರು ಬೇರೆಬೇರೆಯಾಗಿ ದೂ...ರ ದೂ...ರದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರಂತೆ. ಒಬ್ಬರಿಗೊಬ್ಬರಿಗೆ ಸಂಪರ್ಕವೇ ಇರಲಿಲ್ಲವಂತೆ. ಆದರೆ ಒಮ್ಮೊಮ್ಮೆ ಕಾಲು ಕೆರೆದುಕೊಂಡೋ, ಒಬ್ಬರು ಇನ್ನೊಬ್ಬರ ಗಡಿ ದಾಟಿದಾಗಲೋ (ಅಕಸ್ಮಾತ್ ಅಥವಾ ಉದ್ದೇಶಪೂರ್ವಕ), ಇಲ್ಲ, ಯಾರಾದರೂ ಋಷಿಯ ಅಥವಾ ರಾಜನ ಕಾರಣದಿಂದಲೋ, ಎದುರಾದಾಗ ಯುದ್ಧ ಮಾಡುತ್ತಿದ್ದರು. ಸ್ವಲ್ಪ ಕಾಲ ಶಾಂತಿ, ಮತ್ತೆ ಯುದ್ಧ... ಮತ್ತೆ ಶಾಂತಿ... ಹೀಗೇ ನಡೀತಾ ಇತ್ತು.

> **ಸುರಾಸುರರು ಒಂದೇ ದೇಹದಲ್ಲಿ ವಾಸಿಸುವಂತಹ ಕಾಲ ಇದು**

ನಂತರ ಬಂತು ತ್ರೇತಾಯುಗ. ಈ ಯುಗದಲ್ಲಿ ಸುರರು ನಗರಗಳಲ್ಲಿ ವಾಸಿಸಹತ್ತಿದರು. ಅಸುರರು ಕಾನನಗಳಲ್ಲಿ. ನಗರಗಳು ಸಾಮಾನ್ಯವಾಗಿ ಶಿಸ್ತನ್ನು ಸೂಚಿಸುತ್ತದೆ. ಯೋಜನೆಗಳನ್ನು ಧ್ವನಿಸುತ್ತವೆ. ನಿಯಂತ್ರಣವನ್ನು ನಿರೂಪಿಸುತ್ತದೆ. ಸಂಸ್ಕೃತಿಯನ್ನು ಬಿಂಬಿಸುತ್ತದೆ. ಕಾನನಗಳು ಈ ಯಾವ ಕಡಿವಾಣವೂ, ನಿಯಂತ್ರಣವೂ ಇಲ್ಲದಿರುವುದರತ್ತ ಬೆರಳು ಮಾಡುತ್ತದೆ. ಸ್ವೇಚ್ಛಾಚಾರ ಇದರ ಮೂಲ ಮಂತ್ರ. ಅಶಿಸ್ತು ಅದರ ಆಸ್ತಿ. ಎಷ್ಟೇ ಸಂಪತ್ತಿದ್ದರೂ ಅವ್ಯವಸ್ಥೆಯಿಂದಾಗಿ ಅದರ ಅಪ್ರಯೋಜಕತೆಯನ್ನು, ಆ ಸಂಪತ್ತಿನ ದುರುಪಯೋಗ ಎದ್ದು ಕಾಣಿಸುವುದು ಕಾಡಿನ ಲಕ್ಷಣ.

ಈ ಎರಡೂ ಸ್ಥಳಗಳು ಅಲ್ಲಿ ವಾಸಮಾಡುವವರ ಚಿಂತನೆಯನ್ನೂ, ಧೋರಣೆಯನ್ನೂ, ಮನೋಧರ್ಮವನ್ನು ಮತ್ತು ಅವರ ನಡವಳಿಕೆಯನ್ನೂ ಸಂಕೇತಿಸುತ್ತದೆ. ಅದಕ್ಕೇ ತ್ರೇತಾಯುಗದಲ್ಲಿ ರಾಮನಂತಹವರು ನಗರಗಳಲ್ಲೂ, ರಾವಣನಂತಹವರು ಕಾಡುಗಳಲ್ಲೂ ವಾಸಿಸುತ್ತಿದ್ದರು. ಲಂಕಾಪಟ್ಟಣ ಎಷ್ಟೇ ಸ್ವರ್ಣಮಯಿಯಾಗಿರಲಿ, ಅಲ್ಲಿನ ಜನಗಳು ಬೀಸ್ಟ್ ಜೀವನಧರ್ಮದವರೇ ಆಗಿದ್ದು ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ವಿಭೀಷಣನಂತಹವರಿದ್ದರು. ಹಾಗೇನೇ ಅಯೋಧ್ಯೆಯಲ್ಲಿ ಸಾಮಾನ್ಯವಾಗಿ ಅಸಾಮಾನ್ಯ ಜನರಿದ್ದರೂ ಅಲ್ಲೂ ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಕೈಕೆಯಿ, ಮಂಥರೆಯಂತಹವರೂ ಇದ್ದರು. ಹಾಗಾಗಿ ಸುರಾಸುರರು ಆವಾಗಲೂ ಒಬ್ಬರು ಇನ್ನೊಬ್ಬರು ಯಾವುದೇ ರೀತಿಯಲ್ಲಿ ಎದುರಾದಾಗ ಕಾದಾಡುತ್ತಿದ್ದರು. ಅದು ಯಜ್ಞಯಾಗಾದಿ



ಸಂದರ್ಭಗಳಲ್ಲಿರಬಹುದು, ಹೆಣ್ಣಿನ ಕಾರಣದಿಂದಿರಬಹುದು, ರಾಜ್ಯ ರಾಜ್ಯಗಳ ವ್ಯಾಜ್ಯ ಕುರಿತಾಗಿರಬಹುದು.

ದ್ವಾಪರಯುಗದಲ್ಲಿ ಸುರಾಸುರರು ಇನ್ನೂ ಹತ್ತಿರ ಬಂದು, ಒಂದೇ ಕುಟುಂಬದಲ್ಲೇ ವಾಸಿಸತೊಡಗಿದರು. ಉದಾಹರಣೆಗೆ ಪಾಂಡವ-ಕೌರವರು. ಪಾಂಡವರು ಸತ್ಯಶೀಲರು ಹಾಗೂ ತತ್ವ ಪಾಲಕರು, ಧರ್ಮನಿಷ್ಠರು... ಕೌರವರು ಹೆಣ್ಣು, ಹೊನ್ನು, ಮಣ್ಣಿಗಾಗಿ ಏನು ಬೇಕಾದರೂ ಮಾಡುವಂತಹವರು, ಏನು ಮಾಡಬಾರದೋ ಅದನ್ನೆಲ್ಲಾ ಮಾಡಲು ಸಿದ್ಧವಿದ್ದವರು. ದುರ್ಯೋಧನ, ಕರ್ಣ, ಇವರೆನ್ನೆಲ್ಲಾ ಹೀರೋ ಮಾಡುವ ವಿಲ್ಲನ್‌ಗಳು, ಈಗಲೂ ಇದ್ದಾರೆ. ಇರಲಿ. ಪಾಂಡವರಿಗೆ ಕೌರವರಿಂದ ಗೌರವ ಸಿಗಲಿಲ್ಲ, ರೌರವ ನರಕ ಸಿಕ್ಕಿತು. ಶೋಷಣೆ, ಕಿರುಕುಳ, ಸ್ವೇಚ್ಛಾಚಾರ, ದುರಹಂಕಾರ, ಅಸೂಯೆ, ಮುಂತಾದ ದುರ್ಗುಣಗಳು ಮಿತಿ ಮೀರಿ, ತಾರಕಕ್ಕೆ ತಲುಪಿ, ಕುರುಕ್ಷೇತ್ರಯುದ್ಧದಲ್ಲಿ ಪರ್ಯವಸಾನವಾಯಿತು......

ತದನಂತರದ್ದೇ ಕಲಿಯುಗ. ಈ ಎಲ್ಲಾ ಯುಗಗಳಿಂದ ಪಾಠ ಕಲಿಯಲು ಅವಕಾಶವಿರುವ ಕಲಿಯುಗ. ಇದರಲ್ಲಂತೂ ಸುರಾಸುರರು ಎಷ್ಟು ಹತ್ತಿರ ಬಂದಿದ್ದಾರೆಂದರೆ, ಒಂದೇ ಲೋಕದಲ್ಲಲ್ಲ, ಒಂದೇ ದೇಶದಲ್ಲಲ್ಲ, ಒಂದೇ ಕುಟುಂಬದಲ್ಲಲ್ಲ... ಒಂದೇ ದೇಹದಲ್ಲಿ ವಾಸವಾಗಿದ್ದಾರೆ... ಹಿಂದೆ, ಅಪರೂಪವಾಗಿ ಯುದ್ಧವಾಗುತಿತ್ತು... ಎಂದೋ ಒಮ್ಮೊಮ್ಮೆ ಕಾದಾಟವಾಗುತ್ತಿತ್ತು... ಯಾವಾಗಲೋ ಬಡಿದಾಟವಾಗುತ್ತಿತ್ತು... ಆದರೆ ಈಗ, ನಿರಂತರ ಯುದ್ಧ, ಕಾದಾಟ, ಬಡಿದಾಟ, ತಿಕ್ಕಾಟ, ನಡೆದೇ ಇದೆ.

ಅದಕ್ಕೇ ಡಿವಿಜಿ ಅವರು ಮಂಕುತಿಮ್ಮನ ಕಗ್ಗದಲ್ಲಿ

ದೇವಾಂಶ ಪಶ್ವಂಶಗಳ ಗಂಟು ಮಾನವತೆ

ಧೀವಿಮರ್ಶೆಯಿನೊಂದ ಸತ್ಕರಿಸಿ, ಬಲಿಸಿ

ಭಾವ ಪರಿಶೋಧನೆಯಿನೊಂದದಂಡಿಪುದೇ

ಜೀವ ಪ್ರಕರ್ಷಗತಿ ಮಂಕುತಿಮ್ಮ

ಅಂದರು. ವಿವೇಕದಿಂದ, ವಿಮರ್ಶಿಸಿ, ದೇವಾಂಶ ಗುಣಗಳನ್ನು ಸತ್ಕರಿಸಿ, ಬಲಿಸಿ, ಸಂಕುಚಿತ ಮನೋಭಾವವನ್ನು ಬಿಟ್ಟು, ನಮ್ಮ ನಮ್ಮ ಭಾವನೆಗಳನ್ನು, ವ್ಯಾಮೋಹಗಳನ್ನು, ಪೂರ್ವನಿರ್ಧಾರಿತ ಮನೋಭಾವವನ್ನುದಂಡಿಪುದೇ, ಜೀವ ಪ್ರಕರ್ಷಗತಿ ಅಂದರೆ, ಜೀವನ ಮುಂದುವರೆಯುವುದಕ್ಕೆ, ಸುಖಮಯವಾಗುವುದಕ್ಕೆ ಹಾದಿ, ಅಂತಾರೆ, ಡಿವಿಜಿ.

---



**ಯುದ್ಧ**

ಗಡಿಯಲ್ಲಿ ನಿಲ್ಲಬಹುದು
ವೈರಿಗಳ ನಡುವಿನ
ಯುದ್ಧ
ನಿಲ್ಲಲಾರದು
ಸಂಸಾರದಲ್ಲಿ
ಗಂಡ ಹೆಂಡಿರ ನಡುವಿನ
ಯುದ್ಧ

– ಸುಕೇಶವ

# ಪಟದ್ದೇ ಯೋಚನೆ

- ಸಹನಾ ಪ್ರಸಾದ್

ಮದುವೆ ಮನೆಗೆ ಹೋಗಲು ಹೊಸ ಸೀರೆ ಉಟ್ಟು, ಮೈ ತುಂಬ ಇರುವ ಒಡವೆಗಳನ್ನು ತೊಟ್ಟು ರೆಡಿಯಾಗಿದ್ದೆ. ಡ್ರೈವರ್ ಅರ್ಥಾತ್ ಯಜಮಾನರು ಆಫೀಸಿನಿಂದ ಬರುವುದು ಬಾಕಿ ಇತ್ತು. ಸ್ವಲ್ಪ ದಪ್ಪ ಕಂಡರೂ ಸೀರೆ ದಪ್ಪ ಎಂದು ಸಮಾಧಾನ ಮಾಡಿಕೊಂಡಿದ್ದೆ.

**ನಾಳೆ ಮುಖ ಪುಸ್ತಕದಲ್ಲಿ, ವಾಟ್ಸಾಪ್‌ನಲ್ಲಿ ಮುಖ ತೋರಿಸುವುದು ಹೇಗೆ?**

ಲೋ ಬಾರೋ, ಒಂದು ಪಟ ತೆಗಿ. ಇನ್ನು ನಿಮ್ಮಪ್ಪ ಬಂದರೆ ಅರ್ಜೆಂಟ್ ಮಾಡುತ್ತಾರೆ ಎಂದು ಮಗರಾಯನಿಗೆ ಕೂಗು ಹಾಕಿದೆ. ಸದಾ ಕಾಲವೂ ಅವನ ರೂಂ ಬಾಗಿಲು ಬಂದ್ ಆಗಿರುತ್ತದೆ. ಒಳಗಿನಿಂದ ಅವನು ಉತ್ತರಿಸಲೂ ಇಲ್ಲ.

ಕ್ಯಾಮೆರಾದಲ್ಲಿ ಸೆಲ್ಫೀ ಹುಡುಕುವಷ್ಟರಲ್ಲಿ 10 ನಿಮಿಷ ಕಳೆಯಿತು. ಕೊನೆಗೂ ಆನ್ ಮಾಡಿ ಹಲ್ಲು ಕಿರಿದೆ. ಮುಖದಲ್ಲಿ ಸುರಿಯುತ್ತಿರುವ ಧಾರಾಕಾರ ಬೆವರು. ವಯಸ್ಸಿಗೆ ಸರಿಹೊಂದದ ಝುಮ್ಕಿ ಯಾಕೋ ಸರಿ ಕಾಣಲಿಲ್ಲ. ಇನ್ನೊಂದು ಕೋನದಿಂದ ಟ್ರೈ ಮಾಡುತ್ತಾ ಮೊಬೈಲ್ ಕ್ಲಿಕ್ಕಿಸುತ್ತಾ ಬಾಗಿಲ ಬಳಿ ಬಂದದ್ದು ತಿಳಿಯಲೇ ಇಲ್ಲ. ಸೆಲ್ ಹಿಡಿದು ಮಾತನಾಡುತ್ತಾ ಬಂದ ಯಜಮಾನರು ನಾನು ಡಿಕ್ಕಿ! ಅವರ ಕೈಯಿಂದ ಲಂಚ್ ಬ್ಯಾಗ್ ಹಾರಿ ಟೇಬಲ್ ಮೇಲೆ ಬಿತ್ತು. ಅಲ್ಲಿಟ್ಟಿದ್ದ ನೀರಿನ ಜಗ್ ಉರುಳಿ ನನ್ನ ಮೇಲೆ ನೀರಿನ ಪ್ರೋಕ್ಷಣೆ ಆಯಿತು. ಅಯ್ಯೋ! ಎಂದು ನಾನು ಎಗರಿದ ರಭಸಕ್ಕೆ ಅಲ್ಲಿದ್ದ ಬೆಕ್ಕು ಹೊರ ಹಾರಲು ಧಾವಿಸಿತು. ಅದನ್ನೆಡವಿ ಬಿದ್ದ ನಾನು ಯಜಮಾನರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ್ದೆ! ಉಕ್ಕಿ ಬರುತ್ತಿರುವ ನಗು ತಡೆದು ನಾಟಕೀಯವಾಗಿ ತಲೆಯ ಮೇಲೆ ಕೈ ಇರಿಸಿ ನಕ್ಕು ನುಡಿದರು: ಹೋಗಲಿ ಬಿಡು ಇವತ್ತಾದರೂ ನನ್ನ ಮೇಲೆ ಭಕ್ತಿ ಉಕ್ಕಿತಲ್ಲ.

ಕಳಚಿದ ಸೀರೆ ನೆರಿಗೆಗಳು, ತೊಯ್ದ ಅಂಚು, ಪೂರ್ತಿ ಅಳಿಸಿ ಹೋದ ಮೇಕಪ್ಪು, ನಗುವುದೋ ಅಳುವುದೋ ತಿಳಿಯದೆ ಪೆಚ್ಚಾಗಿ ನಿಂತೆ. ಅಂತು ಇಂತು ಸೀರೆ ಬದಲಿಸಿ ಎಲ್ಲಾ ಸರಿಪಡಿಸಿಕೊಂಡು ಮದುವೆ ಮನೆಗೆ ಹೋದಾಗಲೂ ಪಟದ್ದೇ ಯೋಚನೆ. ಛೆ! ಒಂದು ಪಟವೂ ಇಲ್ಲ, ನಾನು ಹೊಸ ಸೀರೆ ಕೊಂಡಿದ್ದು ವ್ಯರ್ಥವಾಯಿತಲ್ಲ, ನಾಳೆ ಮುಖಪುಸ್ತಕದಲ್ಲಿ ವಾಟ್ಸಾಪ್‌ನಲ್ಲಿ ಮುಖ ತೋರಿಸುವುದು ಹೇಗೆ?

ಮದುಮಕ್ಕಳಿಗೆ ಉಡುಗೊರೆ ಇತ್ತು, ಕ್ಯಾಮೆರಾ ಮನುಷ್ಯ ಅಪ್ಪಣೆ ಕೊಟ್ಟಾದ ಮೇಲೆ ಇವರಿಗ್ಯಾರೋ ಅಂಟಿಕೊಂಡರು. ಮೆಲ್ಲಗೆ ಮೊಬೈಲ್ ತೆಗೆದು ನೆಟ್ಟಗೆ ನಿಂತೆ. ಯಾಕೊ ಚಿತ್ರವೇ ಮೂಡಿಲ್ಲ. ಮತ್ತೆ ತಿರುಗಿಸಿ, ಮತ್ತೆ ಮುಗಳ್ನಕ್ಕು ಬಟನ್ ಒತ್ತಿದರೂ ಇಲ್ಲ! ಹೊಸ ಹೂವಿನಂತೆ ಕಂಗೊಳಿಸುತ್ತಿದ್ದ ತರುಣಿ ನನ್ನತ್ತ ಬಂದಳು. ನಿಮ್ಮ ಫೋನ್ ಕವರ್ ಉಲ್ಟಾ ಹಾಕಿದೀರಿ ಆಂಟಿ. ನಿಮಗೆ ಕತ್ತಲು ಕಾಣುತ್ತಿರುವುದು ಎಂದು ಅದನ್ನು ಸರಿಪಡಿಸಿ, ಅಲ್ಲೇ ನಿಂತ ಇಬ್ಬರು ತರುಣರತ್ತ ನೋಡಿ ಕಣ್ಣು ಮಿಟುಕಿಸಿದಾಗ ನನ್ನ ಮುಖ ಕೆಂಪಾಯಿತು. ಮನೆಯಲ್ಲಿ ಸೆಲ್ ಒರೆಸಿದಾಗ ಕವರ್ ಸರಿಯಾಗಿ ಹಾಕಿರಲಿಲ್ಲ. ಅವಳಿಗೆ ಧನ್ಯವಾದ ಹೇಳಿ ಅವಳ ಗುಂಪಿನತ್ತಲೂ ನೋಡದೆ ಇವರಿಗೂ ಕಾಯದೆ ಊಟದ ಮನೆಯತ್ತ ದಾಪುಗಾಲು ಹಾಕಿದೆ.




With Best Compliments From
SRI
BHAGYALAKSHMI
SINCE
1972
SRI BHAGYALAKSHMI
TRADING CORPORATION
Manufacturers of :
Friedgram • Gramflour
• Cleaned Rice • Bansi Sooji • Idli Sooji
• Maize Flakes • Avalakki & Wheat Products
• TRISHUL BRAND : Bakers Maida
#28 2nd Main Road, New Tharagupet, Bangalore
Ph : 41223436, 26702536, 26702559
Website: www.sblfoods.com | email : bysaniravi@sblfoods.com



# ಶ್ವಾನ ಚರಿತೆಯೂ ಸ್ವಾತಂತ್ರ್ಯ ಹೋರಾಟವೂ

**- ಎನ್. ರಾಮನಾಥ್**

ಎಂದಿನಂತೆ ಕುಪ್ಪೆತೊಟ್ಟಿಯ ಎಡಮೂಲೆಯಲ್ಲಿ ಶ್ವಾನಸಭೆ ಸೇರಿತ್ತು.

''ಶ್ವಾನಜ್ಞ ನಾಯಿಗಳು ರಾಜಕಾರಣಕ್ಕೆ ಸೇರುತ್ತವೆಯೆ?'' ಪುಟ್ನಾಯಿಮರಿ ಕೇಳಿತು.

''ಛೆ! ಬಿಡ್ತು ಅನ್ನು. ರಾಜಕೀಯ ನಾಯಿಗಳಿಗಲ್ಲ, ಅದು ನಾಯಕರಿಗೆ ಮಾತ್ರ ಮೀಸಲಾದುದು. ನಾವು ನಿಯತ್ತಿಗೆ ಹೆಸರಾದವರು. ನಿಯತ್ತಿನವರು ರಾಜಕಾರಣಕ್ಕೆ ಇಳಿದರೆ ಮಡಿ ಅಜ್ಜಿಯರು ಹತ್ತಿರ ಹೋದ ನಾಯಿಯನ್ನು ಮಡಿಕೋಲಿನಿಂದ ಹೊಡೆದು ಅಟ್ಟುವಂತೆ ಅಟ್ಟಿಬಿಡುತ್ತಾರೆ. ಪ್ರಾಮಾಣಿಕರಿಗೆ ಪಾಕಿಸ್ತಾನವಿದ್ದಂತೆ ನಾಯಿಗಳಿಗೆ ನಾಯಕರ ಚೇಂಬರ್ಸ್. ಶ್ವಾನಕುಲಕ್ಕೇ ಅವಮಾನವಾಗುವಂತಹ ಇಂತಹ ಪ್ರಶ್ನೆಗಳನ್ನು ಕೇಳಬಾರದು'' ಗುರುಗುಟ್ಟಿತು ಶ್ವಾನಜ್ಞ.

''ಹಾಗಾದರೆ.... ತಾವರೆಯ ಎಷ್ಟು ನಾಯಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಡಿದರು ಅಂತ ಒಬ್ರು ದೊಡ್ಡವರು ಕೇಳಿದರು?'' ಸಣ್ಣಾಯಿಮರಿ ಕುಳಿತಲ್ಲಿಂದಲೇ ಕುರುಗುಟ್ಟಿತು.

**ನಾಯಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದವೆ**

''ನಾಯಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದವೆ?'' ಕರಿ ಜೂಲುನಾಯಿ ಕೇಳಿತು.

''ಪಾಲ್ಗೊಳ್ಳದೆ ಏನು! ನಮಗೆ ಬಂದೂಕು ಹಿಡಿಯಲು ಆಗದಿರಬಹುದು; ಕತ್ತಿವರಸೆ ಕಲಿಯಲು ಆಗದಿರಬಹುದು; ಬಾಂಬುಗಳನ್ನು ಎಸೆಯಲು ಕೈ ಇಲ್ಲದಿರಬಹುದು. ಆದರೆ ಸ್ವಾತಂತ್ರ್ಯಕ್ಕೆ ಹೋರಾಡಿದ ವೀರಯೋಧರ ಪಡೆಯ ಜೊತೆಜೊತೆಗೆ ತಮ್ಮದೇ ಆದ ವಿಧದಲ್ಲಿ ವೀರಶ್ವಾನಗಳು ಹೋರಾಡಿ ಮಡಿದಿವೆ. ಒಂದು ವಿಧದಲ್ಲಿ ನಾವು ಕೆಲವು ಮನುಜ ನಾಯಕರಿಗಿಂತ ಶ್ರೇಷ್ಠರು. ನಾಯಕನೊಬ್ಬ ಬಿಳಿಯ ತೊಗಲು ಎಂದರೆ ಬಾಯಿಬಿಡುತ್ತಿದ್ದನಂತೆ. ಆದರೆ ನಮ್ಮ ಶ್ವಾನಕುಲ ಎಂದೂ ವಿದೇಶೀ ತಳಿಗಳಿಗೆ ಬಾಲ ಅಲ್ಲಾಡಿಸಲಿಲ್ಲ.'' ಹಿರಿಶ್ವಾನ ಗರ್ವದಿಂದ ನುಡಿಯಿತು.

''ಯಾವ ವಿಧ ಅದು?''

''ಒಂದೇ... ಎರಡೇ? ಭಾರತದ ಮನುಷ್ಯ ನಾಯಕರಲ್ಲಿ ಕೆಲವರು ಬಿಳಿಯರ ಬೂಟು ನೆಕ್ಕುತ್ತಿದ್ದರು. ಆದರೆ ಶ್ವಾನನಾಯಕರು ಅಂತಹ ಬೂಟುಗಳನ್ನು ರೋಷದಿಂದ ಕಚ್ಚುತ್ತಿದ್ದವು. ಇನ್ನು ಕೆಲವರು ಬಿಳಿಯರ ಕಾಲು ನೆಕ್ಕುತ್ತಿದ್ದರು. ನಮ್ಮ ಕುಲಜರು ಅವರ ಕಾಲನ್ನೂ ಕಚ್ಚುತ್ತಿದ್ದರು. ಇದು ನೇರವಾದ ಅಟ್ಯಾಕ್''

''ಬೇರೆ ವಿಧಗಳೂ ಇದ್ದವೇನು?''

''ಕೆಲವು ಶ್ವಾನಗಳು ಬ್ರಿಟಿಷರ ಪದ್ಧತಿಯನ್ನೇ ಅನುಸರಿಸಿದವು. ಅವರ ಮನೆಗೆ ಸೇರಿ ಅವರನ್ನೇ ದಾರಿತಪ್ಪಿಸುತ್ತಿದ್ದವು. ಬ್ರಿಟಿಷರು ನಾಯಿಯನ್ನು ವಾಕಿಂಗ್ ಕರೆದುಕೊಂಡು



ಹೋಗುತ್ತಿದ್ದೇವೆ ಎಂಬ ಭ್ರಮೆಯಲ್ಲಿರುತ್ತಿದ್ದರು. ವಾಸ್ತವವಾಗಿ ಪೂಜ್ಯವಾದ ನಮ್ಮ ಹಿರಿಯ ಶ್ವಾನಗಳು ಚೈನನ್ನು ಜಗ್ಗಿದ ಕಡೆಗೆ ಅವರು ಬರಬೇಕಾಗುತ್ತಿತ್ತು. ಭಾರತದವರನ್ನು ದಾರಿ ತಪ್ಪಿಸುತ್ತಿದ್ದ ಬ್ರಿಟಿಷರನ್ನು ನಾವು ಈ ರೀತಿ ದಾರಿ ತಪ್ಪಿಸುತ್ತಿದ್ದೆವು. ನೀನೇ ಹೇಳು ಆಗ ಯಾರು ಬಾಸ್? ಬ್ರಿಟಿಷನೋ, ನಾಯಿಯೋ?''

''ವಂಡರ್‌ಫುಲ್.'' ಎಂದಿತು ಸಣ್ಣಾಯಿಮರಿ.

''ವಾಟ್ ಎಬೌಟ್ ದ ಕುದುರೆಗಾಡಿ ಅಟ್ಯಾಕ್? ಮರೆತೆಯೇನು ಅಜ್ಜನಜ್ಜನಜ್ಜನಜ್ಜ ಹೇಳುತ್ತಿದ್ದುದು?'' ಕೇಳಿತೊಂದು ಆಲ್ಸೇಷಿಯನ್.

''ಹೌದಲ್ಲವೇ... ಬ್ರಿಟಿಷರ ಕುದುರೆಗಾಡಿಯನ್ನು ಅಟ್ಟಿಸಿಕೊಂಡುಹೋಗಿ ಕುದುರೆಯ ಕಾಲನ್ನು ಕಚ್ಚಿಬಿಡುತ್ತಿದ್ದೆವು. ಗಾಡಿ ಮೂಕಿ ಎದ್ದು, ಒಳಗಿನವರೆಲ್ಲ ಬಿದ್ದಾಗ ಆ ರಸ್ತೆಯಲ್ಲಿದ್ದ ನಾಯಿಗಳೆಲ್ಲ ಸ್ವಾತಂತ್ರ್ಯ ಹೋರಾಟಗಾರರ ಕಾಲುಗಳ ಸುತ್ತಲೂ ಸುತ್ತುತ್ತಾ, ನಮ್ಮ ಸಂತೋಷವನ್ನು ಜೋರಾಗಿ ಬಾಲ ಅಲ್ಲಾಡಿಸುವುದರ ಮೂಲಕ ಸೂಚಿಸುತ್ತಿದ್ದೆವು. ಒಮ್ಮೆ ಆ ತರಹ ಬಾಲಗಳೆಲ್ಲ ಸೇರಿ ಒಟ್ಟಾಗಿ ಬೀಸಿದಾಗ ಉಂಟಾದ ಗಾಳಿಯ ರಭಸಕ್ಕೆ ಸಣಕಲ ಬಿಳಿಯನೊಬ್ಬ ಹಾರಿಹಾರಿ ಬಿದ್ದಿದ್ದನಂತೆ. ಆದರೂ ಅದು ಸುಖ-ದುಃಖದ ಮಿಶ್ರ ಸನ್ನಿವೇಶ'' ಎಂದಿತು ಓಲ್ಡ್ ಡಾಗ್.

''ದುಃಖವೇಕೆ?''

''ದೊರೆಯೇನೋ ಬಿಳಿಯ. ಆದರೆ ಕುದುರೆ ಭಾರತೀಯ. ಬ್ರಿಟಿಷರಿಗೆ ತೊಂದರೆ ಕೊಡಲು ನಮ್ಮವರನ್ನೇ ಕಚ್ಚಬೇಕಾದುದು ದುಃಖಕರವಾಗಿತ್ತು''

''ಅದಕ್ಕೇ ಆಂಟಿಯಾಂಟಿಯಾಂಟಿಯ ಮುತ್ತಜ್ಜಿ ನಾಯಿಯ ಸಿಸ್ಟಮ್ ಇಷ್ಟವಾಗೋದು'' ಎಂದಿತು ಸ್ತ್ರೀಶ್ವಾನ.

''ಏನದು?''

''ಕುದುರೆಗೆ ಕಚ್ಚುತ್ತಿರಲಿಲ್ಲ. ಆದರ ಕಾಲುಗಳ ಕೆಳಗೆ ತೂರಿ ಕುದುರೆಯನ್ನು ತಬ್ಬಿಬ್ಬು ಮಾಡುತ್ತಿತ್ತು. ಕುದುರೆ ನಿಂತಾಗ ಇಳಿದ ದೊರೆಯ ಕಾಲುಗಳ ನಡುವೆ ತೂರಿ, ಅವನು ಬೆದರಿ ಬೀಳುವಂತೆ ಮಾಡಿ, ಸಂತೋಷದಿಂದ ಬೊಗಳುತ್ತಾ ಹೋಗುತ್ತಿತ್ತು.'' ಹೆಮ್ಮೆಯಿಂದ ನುಡಿಯಿತು ಹೆಣ್ಣಾಯಿ.

''ಅದಕ್ಕಿಂತ ಉತ್ತಮವಾದ ಉಪಾಯವೊಂದಿತ್ತು'' ನುಡಿಯಿತು ಕಿಲಾಡಿ ಶ್ವಾನ.

''ಯಾವುದು?'' ಎಲ್ಲ ಶ್ವಾನಗಳೂ ಒಕ್ಕೊರಲಿನಿಂದ ಕೇಳಿದವು.

''ಬ್ರಿಟಿಷರು ಇದ್ದ ಏರಿಯಾದಲ್ಲೇ ರಾತ್ರಿಯೆಲ್ಲ ಮೊಕ್ಕಾಂ ಹೂಡಿ, ಮಧ್ಯರಾತ್ರಿ ಕಳೆಯುವುದನ್ನೇ ಕಾದಿದ್ದು, ಸಾಧ್ಯವಾದಷ್ಟೂ ತಾರಕ ಸ್ವರದಲ್ಲಿ ಊಊಊಊಊ ಎಂದು ಊಳಿಡುತ್ತಿದ್ದವು. ಬ್ರಿಟಿಷರು ಹೊರಬರುವಷ್ಟರಲ್ಲಿ ಮೂಲೆ ತಿರುಗಿ ಮುಂದಿನ ಬೀದಿಗೆ ಕಾರ್ಯಾಚರಣೆ ಶಿಫ್ಟ್, ಅಲ್ಲಿನ ಜನರನ್ನು ಊಳಿಟ್ಟು ಎಬ್ಬಿಸಿ, ಅವರು ಅಟ್ಟಿಸಿಕೊಂಡುಬಂದಾಗ ಮೊದಲ ರಸ್ತೆಗೆ ಹಿಂದಿರುಗುತ್ತಿದ್ದವು. ಅಷ್ಟರಲ್ಲಿ ನಿದ್ರೆಗೆ ಜಾರಿರುತ್ತಿದ್ದ ಅವರನ್ನು ಮತ್ತೆ ಊಳಿಟ್ಟು ಎಬ್ಬಿಸುತ್ತಿದ್ದವು. ಅಂತೂ ರಾತ್ರಿಯೆಲ್ಲ ದಾಂದಲೆ ಎಬ್ಬಿಸುತ್ತಿದ್ದರಂತೆ. ಬ್ರಿಟಿಷರಿಗೆ ಬೆಳಗೆಲ್ಲ ಮನುಜ ಸ್ವಾತಂತ್ರ್ಯ ಸೇನಾನಿಗಳು ಮಲಗಲು ಬಿಡುತ್ತಿರಲಿಲ್ಲವಂತೆ. ರಾತ್ರಿ ನಮ್ಮವರ ಪಾಳಿ''



''ಅವರು ಬಂದೂಕಿನಿಂದ ಗುಂಡಿಟ್ಟು ಕೊಲ್ಲುತ್ತಿರಲಿಲ್ಲವೆ?''

''ಹ್ಹ! ಹನ್ನೆರಡರ ಹೊತ್ತಿಗೆ ಕುಡಿದ ಕೈ ಸ್ಥಿಮಿತದಲ್ಲಿರುತ್ತಿರಲಿಲ್ಲವಂತೆ'' ನಗುತ್ತಾ ನುಡಿಯಿತು ಡಾಬರ್‌ಮನ್.

''ಈಗ ಕೆಲವು ಶ್ವಾನಗಳು ಕಾರುಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ನೋಡಿರುವಿರಲ್ಲ, ಅದು ಹೆರಿಡಿಟರಿ ಕ್ಯಾರೆಕ್ಟರ್. ಬ್ರಿಟಿಷರನ್ನು ಕಂಡರೆ ಆಗದ ಶ್ವಾನೋತ್ತಮಗಳು ಅವರ ಕಾರು, ಗಾಡಿ, ಸ್ಕೂಟರ್, ಬೈಕ್, ಎಲ್ಲವನ್ನೂ ಅಟ್ಟಿಸಿಕೊಂಡುಹೋಗಿ ಅವರಿಗೆ ಶ್ವಾನಭಯ ಉಂಟುಮಾಡುತ್ತಿದ್ದವು. ಕೋಚ್‌ಗಾಡಿಯಿಂದ ಇಳಿಯಬೇಕಾದರೆ ಹೆದರಿ ಸಾಯುವಂತಾಗಿರುತ್ತಿದ್ದರು ಹಲವಾರು ಬಿಳಿಯರು'' ಕೊಚ್ಚಿಕೊಂಡಿತೊಂದು ಗ್ರೇಟ್ ಡೇನ್.

''ಡೇನಣ್ಣ, ನೀನು, ಆ ಪಾಮರೇನಿಯನ್ನು, ಡಾಬರ್‌ಮನ್ನು ಎಲ್ಲರೂ ಬ್ರಿಟಿಷರ ವಂಶದವರೇ ಅಲ್ವಾ? ನಿಮ್ಮ ಕುಲದವರು ಅದ್ಹೇಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದರು?''

''ಬ್ರಿಟಿಷರು ನಮಗೆ ಮಾಂಸ, ಮೂಳೆ ಎಸೆಯುತ್ತಿದ್ದರು. ಭಾರತೀಯರೇ ನಮಗೆ ಅನ್ನ ಹಾಕುತ್ತಿದ್ದದ್ದು. ಅನ್ನದ ಋಣ ತೀರಿಸುವುದು ಶ್ವಾನಕುಲದ ಅತ್ಯುತ್ತಮ ಧರ್ಮ'' ಹೇಳಿತು ಡೇನ್.

''ಬ್ರಿಟಿಷರ ವಿರುದ್ಧ ಪತ್ರಿಕಾಯುದ್ಧ ಸಾರಿದ ಶ್ವಾನದ ಕಥೆ ಹೇಳು ಶ್ವಾನಜ್ಜ...'' ಕೇಳಿತೊಂದು ಮರಿಮರಿ.

''ಲಾರ್ಡ್ ವೆಲ್ಲೆಸ್ಲಿ ಕಾಲದ ಕಥೆಯಲ್ಲವೇ.... ಬಹಳ ಚೆನ್ನಾಗಿದೆ. ನನ್ನ ಹಿಂದಿನ ಹನ್ನೆರಡನೆಯ ತಲೆಮಾರಿನ ಶ್ವಾನಣ್ಣನಿಗೆ ವೆಲ್ಲೆಸ್ಲಿ ಎಂದರೆ ಅಸಾಧ್ಯ ದ್ವೇಷ. ಆತನ ಚಿತ್ರ ಭಿತ್ತಿಪತ್ರದಲ್ಲಿದ್ದರೆ ಹಾರಿ ಹರಿದುಹಾಕುತ್ತಿದ್ದನಂತೆ. ಆ ಶ್ವಾನಣ್ಣನ ಮನೆಗೆ ದಿನವೂ ದಿನಪತ್ರಿಕೆ ಬರುತ್ತಿತ್ತು. ಮುಖಪುಟದಲ್ಲಿ ವೆಲ್ಲೆಸ್ಲಿಯ ಚಿತ್ರವಿದ್ದರೆ ಗುರುಗುಡುತ್ತಾ ಹಾರಿ, ಕಾಲಿನಿಂದ ಕೊರೆದು, ಹಲ್ಲಿನಿಂದ ಹರಿದು, ಚಿಂದಿ ಮಾಡಿಬಿಡುತ್ತಿತ್ತಂತೆ. ಇದೇ ನಮ್ಮ ಪತ್ರಿಕಾಯುದ್ಧ'' ಹೆಮ್ಮೆಯಿಂದ ಹೇಳಿತು ಶ್ವಾನಜ್ಜ.

''ಇಷ್ಟೆಲ್ಲ ಸ್ವಾತಂತ್ರ್ಯ ಹೋರಾಟದ ಇತಿಹಾಸ ಇರುವ ನಮ್ಮ ಬಗ್ಗೆ ತುಚ್ಛವಾಗಿ ಮಾತನಾಡಿದುದು ಸರಿಯೆ?'' ಕೇಳಿದ ಶ್ವಾನಜ್ಜ.

ಕೂಡಲೆ ಹಿರಿ-ಕಿರಿ-ಮರಿ-ಮುಮ್ಮರಿ ಶ್ವಾನಗಳು ಧಿಕ್ಕಾರಾತ್ಮಕವಾಗಿ ಬಾಲ ಬೀಸುತ್ತಾ, ವಿವಿಧ ರಾಗಗಳಲ್ಲಿ ಬೊಗಳುತ್ತಾ, ಕ್ರೋಧದಿಂದ ಹಲ್ಲು ಮಸೆಯುತ್ತಾ ವಿಧಾನಸೌಧದತ್ತ ಓಡುನಡಿಗೆಯಲ್ಲಿ ಧಾವಿಸಿದವು.

---

**ಶುದ್ಧಿ**

ಅವಳು ಹಾಡಿದರೆ
ಗಂಟಲು ಶುದ್ಧಿ
ಅವಳು ಹಾಡದಿದ್ದರೆ
ನೆರೆಹೊರೆಯವರ
ನೆಮ್ಮದಿ, ಆನಂದ, ಸಂತಸ
ಎಲ್ಲ ಶುದ್ಧಿ

– ಸುಕೇಶವ



# ಆಹಾ! ಬರಲಿದೆ ಇ-ಕಾರ್

- ಇ.ಆರ್. ರಾಮಚಂದ್ರನ್

ಅಜ್ಜಿ ನನ್ನ ಜೊತೆ ಟಿವಿಲಿ ಡಿಸ್ಕವರಿ ಛಾನಲ್‌ನಲ್ಲಿ ಬಂದ ಪ್ರೋಗ್ರಾಮ್ ನೋಡ್ತಿದ್ರು. ಅಜ್ಜಿ ಮಾಡಿದ ಹುರಿಗಾಳು ನಮಗೆ ಕಾಫಿ ಜೊತೆ ಕಂಪನಿ.

ಯಾಕೋ ಟಿವಿ ನೋಡ್ತಾ ನೋಡ್ತಾ ಅಜ್ಜಿ ಸುಸ್ತಾಗಿದ್ರು ಅನ್ನುಸ್ತು.

ಅಜ್ಜಿ! ನೋಡಿದ್ಯಾ...... ಇನ್ನು ಮುಂದೆ ಚಾಲಕನಿಲ್ಲದೆ ಓಡೋ ಕಾರು ಬರುತ್ತೆ.......ಡ್ರೈವರ್‌ಲೆಸ್ ಕಾರು... ಇನ್ನೇನು ಸ್ವಲ್ಪ ವರ್ಷದಲ್ಲೇ ರೋಡಿಗೆ ಇಳಿಯುತ್ತೆ! ಇದನ್ನ ಮಾಡ್ತಿರೋವ್ರು ಯಾರು ಗೊತ್ತಾ? ಕಂಪ್ಯೂಟರ್ ಕಂಪನಿಗಳು!

ನೋಡ್ದೆ ಕಣೋ, ನೋಡ್ದೆ. ಹೀಗೂ ಒಂದು ಕಾರು ಓಡುತ್ತೇಂತ ನಂಬಕ್ಕೇ ಆಗಲ್ಲ, ಅದ್ರಲ್ಲೂ ಕಂಪ್ಯೂಟರ್ ಕಂಪನಿಯವರು ಮಾಡ್ತಿದಾರೇಂದ್ರೆ... ನಮ್ ದೇಶಕ್ಕೂ ಬರುತ್ತಾಂತ ಯೋಚಿಸ್ತಿದ್ದೆ.

**ಇಂತಹ ಕಾರು ಬರುತ್ತೆ ಅಂತ ಕೇಳಿ ಅಜ್ಜಿಗೆ ಯೋಚನೆಯೋ ಯೋಚನೆ**

ಇನ್ನು ಸ್ವಲ್ಪ ವರ್ಷದಲ್ಲಿ ಅಮೆರಿಕ, ಇಂಗ್ಲೆಂಡಿಗೆ ಬರುತ್ತೆ. ಆಮೇಲೆ ನಮ್ ದೇಶಕ್ಕೂ ಬಂದೇ ಬರುತ್ತೆ... ಜಪಾನ್ ಫ್ಲು, ಜರ್ಮನ್ ಮೀಸಲ್ಸ್ ಎಲ್ಲಾನು ಬಂತಲ್ಲ? ಹಾಗೇ ಇದೂ ಬರುತ್ತೆ.

ಯಾಕೋ ಖಾಯಿಲೆ ಜ್ಞಾಪಿಸ್ತಿ? ಬಿಡ್ತು ಅನ್ನು.. ಇದು ಚೆನ್ನಾಗಿ ಓಡಿದ್ರೆ ನಮ್ ಬೀದೀಲಿ ಪ್ರತಿ ಘಂಟೆಗೂ ಆಗೋ ಆಕ್ಸಿಡೆಂಟುಗಳು ತಪ್ಪತ್ತೆ.... ಈಗ ಚಾಲಕರು ಕುಡಿದಿದ್ದಾರಾ ಅಂತ ಅಲ್ಲಲ್ಲಿ ಬಾಟಲ್ ಇಟ್ಟು ಅದರೊಳಗೆ ಊದಿಸಿ ಚೆಕ್ ಮಾಡ್ತಾರಲ್ಲಾ.... ಅದೆಲ್ಲಾ ನಿಲ್ಲುತ್ತೆ! ಇದು ಬಂದ್ರೆ ಗಾಡಿಲಿ ಕೂತವರಿಗೆ ಲಾಭ ನೋಡು. ಅವರು ಕುಡಿದ್ರೂ ಪರವಾಗಿಲ್ಲ, ಗಾಡಿ ತನಗೆ ತಾನೆ ಓಡುತ್ತೆ! ತೂಕಡ್ತಾ, ಮೊಬೈಲ್‌ನಲ್ಲಿ ಮಾತಾಡ್ತಾ ಗಾಡಿ ಓಡ್ಸೋವ್ರ ಕಾಟ ತಪ್ಪತ್ತೆ. ಆದ್ರೆ.... ಪೋಲೀಸರಿಗೆ ದಿನಾ ಬರೋ ವರಮಾನಕ್ಕೆ ಭಾರಿ ಏಟು ಬೀಳುತ್ತೆ ನೋಡು!

ಆಗ್ಲೇ ನೀನು ಅವರಿಗೆ ಸಿಗೋ ಢೈಲಿ ಇನ್ಕಮ್‌ನ ಮೇಲೆ ಕಣ್ಣು ಹಾಕ್ತಿಯಲ್ಲಾ ಅಜ್ಜಿ!

ಪ್ರಧಾನಿ ಮೋದಿಯವರು ರಾಹುಲ್ ಗಾಂಧಿಗೆ ಮಾಡ್ತಾರಲ್ಲಾ.... ಹಾಗೆ ಅಜ್ಜಿ ನಾನು ಹೇಳಿದ್ದಕ್ಕೆ ಏನು ಉತ್ತರ ಕೊಡ್ಲಿಲ್ಲ, ಇಗ್ನೋರ್ ಮಾಡಿ ಮುಂದುವರಿಸಿದರು...

ನನಗೇನೋ ಈ ತರಹ ಕಾರುಗಳನ್ನ ಇಲ್ಲಿಗೆ ಬರಕ್ಕೆ ಬಿಡೋದಿಲ್ಲಾ ಅಂತ ಅನ್ನುತ್ತೆ. ಟಾಕ್ಸಿ ಡ್ರೈವರ್‌ಗಳು ಬಿಡ್ತಾರಾ..? ಚಾಲಕನಿಲ್ಲದ ಕಾರು ಬಂದ್ರೆ ಅವರೆಲ್ಲರ ಬಾಯಿಗೆ ಮಣ್ಣು ಬೀಳುತ್ತೆ... ಪ್ರತಿ ಬೀದೀಲಿರೊ ಡ್ರೈವಿಂಗ್ ಸ್ಕೂಲಿನ ಗತಿಯೇನು? ಅಲ್ಲಿ ಡ್ರೈವಿಂಗ್ ಕಲಿಸೋ ರಿಟೈರ್ಡ್ ಡ್ರೈವರ್ಸ್‌ಗಳಿಗೆ ಹೊಟ್ಟೆ ಮೇಲೆ ಹೊಡೆದ್ರೆ ಅವ್ರೆಲ್ಲಾ ಎಲ್ಲಿಗೆ ಹೋಗ್ಬೇಕೋ? ಹಳೇ ಕಾರು ರಿಪೇರಿ ಮಾಡಿ ಜೀವನ ಮಾಡೋವ್ರೆಲ್ಲಾ ಸುಮ್ನಿರ್ತಾರಾ... ಇವರೆಲ್ಲರ ಯೂನಿಯನ್ ಸುಮ್ನೆ ಬಿಡ್ತಾರಾ? ಈ ತರಹ ಕಾರು ಬಿಡೋಕ್ಕೆ ನಮ್ಹತ್ರ ಒಳ್ಳೆ ರೋಡೆಲ್ಲಿದೆಯೋ!



ಅಬ್ಬ! ನೀ ಕೇಳೋ ಸಾವಿರ ಪ್ರಶ್ನೆ ನೋಡಿದ್ರೆ ನೀನೇ ಹಳೇ ಟಿನ್ ಗರಾಜ್ ಇಟ್ಕೊಂಡಿದಿಯಾಂತ ಅನ್ನುತ್ತೆ. ಒಳ್ಳೆ ರೋಡು ಇಲ್ಲಾಂತಿಯಾ.... ನಿತಿನ್ ಗಡ್‌ಕರಿ ನಮ್ಮ ದೇಶದ ರೋಡ್ ಟ್ರಾನ್ಸ್ಪೋರ್ಟ್ ಮಿನಿಸ್ಟರು.. ಅವರು ಈ ತರಹ ಗಾಡಿಗಳು ಬಂದ್ರೆ ನಮ್ಮ ದೇಶಕ್ಕೆ ಒಳ್ಳೆದು ಅಂತಾರೆ.. ಈಗ ದೇಶವನ್ನೇ ಸುತ್ತಿ ಬರಲು ಹೈವೇಗಳನ್ನು ಅವರೇ ಮಾಡಿಸ್ತಿರೋದು. ನೀನು ಕಾರಿನಲ್ಲಿ ಕೂತು ಹೊರಟರೆ ಸಾಕು.. ಕನ್ಯಾಕುಮಾರಿಯಿಂದ ಹಿಡಿದು ಅಸ್ಸಾಮಿಗೆ ಹೋಗಿ, ಕಾಶ್ಮೀರದ ಮೂಲಕ, ಡೆಲ್ಲಿ, ಪಂಜಾಬು, ಮುಂಬೈನಿಂದ ಬೆಂಗಳೂರು, ಮೈಸೂರಿಗೆ ಬಂದು ಸೇರಬಹುದು. ರೋಡು ಹ್ಯಾಗಿರುತ್ತೇಂದ್ರೆ ಲಾಲು ಯಾವಾಗ್ಲೋ ಹೇಳಿದ್ರಲ್ಲಾ ಹೇಮ ಮಾಲಿನಿ ಕೆನ್ನೆ ತರಹಾಂತ..

ಮೇವಿನಲ್ಲೇ ಮೇವು ತಿಂದ ಭೂಪ ಅಲ್ವಾ ಅವ್ನು! ಅದಿರ್ಲಿ... ಆ ರೋಡಿನಲ್ಲಿ ನಾನು ಹೋಗೋದಿರಲಿ.... ನಿನ್ನ ಮರಿಮಗ ಅಜ್ಜನಾದಾಗ್ಲೂ ಆ ರೋಡಿನ ಕೆಲಸ ಮುಗಿದಿರಲ್ಲ. ಅದರಲ್ಲಿ ಕೂತುಕೊಂಡು ಹೋದ್ರೆ ಎಲ್ಲೋ ಚಂಬಲ್‌ನಲ್ಲಿ ಡಾಕುಗಳ ಮದ್ಯಾನೋ, ಕಾಶ್ಮೀರದ ಟೆರೊರಿಸ್ಟ್ ಮದ್ಯಾನೋ ಮುಂದೆ ರೋಡಿಲ್ಲದೆ ಅಲ್ಲಿಗೇ ನಿಂತು ಹೋಗುತ್ತೆ. ಮಣ್ರೋಗ ಮಾಡೋವ್ರು ಸರ್ಕಾರ ದುಡ್ಡು ಕೊಡ್ಲಿಲ್ಲ ಅಂತ ಕೆಲ್ಸ ನಿಲ್ಸಿರ್ತಾರೆ. ಅಲ್ಲಿ ಯಾರಾದ್ರೂ ತಲೆ ಒಡೆದ್ರೂ ನೀನು ಸತ್ಯಾ, ಬದುಕಿದಿಯಾಂತ ಕೇಳಕ್ಕೆ ಯಾರೂ ಬರಲ್ಲ.. ಇದೆಲ್ಲಾ ಮುಗಿಯೋದಕ್ಕೆ ಯುಗವಾಗುತ್ತೆ ನಮ್ಮ ದೇಶದಲ್ಲಿ.

ಅಜ್ಜಿ! ಅದು ಮನ್ರೆಗಾ, ಮಣ್ಣುರ್ರೋಗ ಅಲ್ಲಾ!

ಏನೋ ಸುಡುಗಾಡು! ಅದಿರ್ಲಿ.... ಚಾಲಕನಿಲ್ಲದ ಕಾರು ಹೋಗುವಾಗ ಆಕ್ಸಿಡೆಂಟ್ ಆಗಲ್ವಾ? ಎದುರಿನಿಂದ ಬಂದ ಕಾರಿ ಢಿಕ್ಕಿ ಹೊಡೆದ್ರೆ?

ಟಿವಿಲಿ ನೋಡಿದ್ಯಲ್ಲಾ ಅಜ್ಜಿ! ಅದು ಸೆನ್ಸರ್‌ನಿಂದ ಬರೋ ಗಾಡೀನ ಸ್ಕಾನ್ ಮಾಡ್ತಾ ತಕ್ಷಣ ಬ್ರೇಕು ಹಾಕಿ ನಿಂತು ಬಿಡುತ್ತೆ. ಅದರ ಸುತ್ತ ಮುತ್ತ ಸೆನ್ಸರ್ ಮತ್ತು ಕಂಪ್ಯೂಟರ್‌ಗಳೇ! ಪಕ್ಕದ ಕಾರೂ ಇದನ್ನು ಹೊಡೆಯದ ಹಾಗೆ ತಡೆ ಹಿಡಿದು ನಿಲ್ಲುತ್ತೆ.

ನಮ್ಮ ರಸ್ತೆಗಳಿಗೆ ಇದೆಲ್ಲಾ ಎಲ್ಲಿ ಸರಿ ಹೋಗುತ್ತೆ? ನಮ್ಮ ರಸ್ತೆ ಅಂದ್ರೆ.... ಗಿಳಿ ಶಾಸ್ತ್ರ ಹೇಳೋ ಜ್ಯೋತಿಷಿ, ಅಥವಾ ಕೋಲೆ ಬಸವ ಪಂಡಿತ, ಜೊತೆಗೆ ವರ್ಷದ ಹಾಳು ಮೂಳು ತೆಗೆಯಕ್ಕೆ ಬಂದ ಸ್ವಚ್ಛ ಭಾರತ್‌ನ ಫಿಲಮ್ ಸ್ಟಾರ್ಸ್ ವಾಲಂಟಿಯರ್ಸ್ ಒಂದು ಕಡೆ, ಹೊಸದಾಗಿ ಕೇಬಲ್ ಹಾಕೋದಕ್ಕೆ ಅಂಬಾನಿ ಜಿಯೋವ್ರು ನೆಲ ಅಗೀತಿದ್ರೆ ಅದರ ಎದುರುಗಡೆ ಕೆಇಬಿ ಬೆಸ್‌ಕಾಮ್‌ನವರು ಕಂಬ ನೆಡೋದಕ್ಕೆ ರಸ್ತೆ ಅಗೀತಾ ಒಂದು ಕಂಬಾನ ಉದ್ದಕ್ಕೆ ಮಲಗಿಸಿ ಇಟ್ಟಿರ್ತಾರೆ.. ಜೂಲು ನಾಯಿನ ಇಶ್ಶಿ ಮಾಡಿಸೋಕ್ಕೆ ಬಂದ ಮಾಡೆಲ್.... ಪಾನಿ ಪೂರಿ ಅಂಗಡಿ ಸುತ್ತ್ಲು ಜನ ಬೇರೆ......ಇವೆಲ್ಲವನ್ನೂ ದಾಟುತ್ತಾ ಹೋಗ್ಬೇಕು ನಿನ್ನ ಡ್ರೈವರ್ ಇಲ್ಲದ ಕಾರು...

ಅಜ್ಜಿ! ಪ್ರಪಂಚದಲ್ಲಿ ಏನು ಮಾಡಿದ್ರೂ, ಇಂಡಿಯನ್ ಕಂಡಿಷನ್ಸ್‌ಗೆ ಅಂತ ಬೇರೆ ಬೇರೆ ಏನಾದ್ರೂ ಸೇರಿಸಲೇ ಬೇಕಾಗುತ್ತೆ... ಇದಕ್ಕೂ ಅದು ಮಾಡ್ಲೇಬೇಕಾಗುತ್ತೆ...

ದಾರಿಲಿ ಎಮ್ಮೆ, ಹಸು ಎಲ್ಲಾ ಸಿಗುತ್ತಲ್ಲೋ...ಹೇಗೆ ಬಿಡ್ತಾರೋ ಗಾಡೀನ... ಅವುಗಳಿಗೂ ಕಂಬಕ್ಕೆ ಹೊಡೆದ ಹಾಗೆ ಕಪ್ಪು, ಹಳದಿ ಬಣ್ಣ ಹೊಡೆದು ನಿಲ್ಲಿಸ್ಬಿಡ್ತಾರೋ ಏನೋ! ಅವಕ್ಕೆ ಕಲಗಚ್ಚು ಹಾಕಿದ್ರೆ ದಿನವೆಲ್ಲಾ ಒಂದೇಕಡೆ ನಿಂತಿರುತ್ವೆ.... .ನಮ್ಮ ಸಿ.ಎಂ ಹೊರಟ್ರೆ ಅವರ ಹಿಂದೆ ಹಿಂಡು ಕಾರುಗಳು ಹೊರಡುತ್ತೆ.... ವಿಧಾನ ಸೌಧದಲ್ಲಿ ಡ್ರೈವರ್‌ಗಳೇ ಬಹಳ ಜನ ಇದಾರಲ್ಲೋ.. ಅವರುಗಳೆಲ್ಲಾ



ಮಿನಿಸ್ಟರ್‌ನ ಹಿಡಿದು, ಈ ಗಾಡಿ ನಮ್ಮ ದೇಶಕ್ಕೆ ಸರಿಯಿಲ್ಲಾಂತ ಹೇಳಿಸಿ ಅದು ಇಲ್ಲಿಗೆ ಬರೋದಕ್ಕೇ ಬಿಡಲ್ಲಾ ನೋಡ್ಕೊ. ಇನ್ನೊಂದು ವಿಷಯ..

ಬೇರೆ ಏನು ಡೌಟು ಅಜ್ಜಿ!

ಕಂಪ್ಯೂಟರ್‌ನವರು ಮಾಡೋದು ಕಾರು ಅಂತ ಹೇಳ್ತಿಯ.. ಈ ಕಾರು ಹೋಗ್ತಿರುವಾಗ, ವೈರಸ್ಸೋ, ಫೈರಸ್ಸೋ ಬರಲ್ವಾ? ಬೇರೆ ಯಾವನಾದ್ರೂ ಇದರ ಪಾಸ್ ಬುಕ್ಕಿನೊಳಗೆ ಹೋಗಿ ಕಾರ್‌ನ ಉರುಳಿಸಿದರೆ?

ಅಜ್ಜಿ ಅದು ಪಾಸ್ ಬುಕ್ ಅಲ್ಲಾ.. ಪಾಸ್ ವರ್ಡು! ಈ ತರಹ ಆಗಕ್ಕೆ ಸಾಧ್ಯ. ಅದಕ್ಕೆ ಎಲ್ಲಾ ತರಹದ ಹುಷಾರಿ ಮಾಡೇ ಇದನ್ನು ಬೀದಿಗೆ ತರ್ತಾರೆ.

ಹಾಗಂದ್ರೆ ಇ- ಕಾರು ಬರೋದು ಖಂಡಿತ ಅಂತ್ಯಾ?

ಅಜ್ಜಿ! ಬೇರೆ ಎಲ್ಲಾ ಬಂದಂಗೆ ಇದೂ ಬಂದೇ ಬರುತ್ತೆ. ಕಂಪ್ಯೂಟರ್, ಮೊಬೈಲ್ ನಾಯಿ ಕೊಡೆ ಹಾಗೆ ಬೆಳೀಲಿಲ್ವೆ? ಹಾಗೇ ಇವುಗಳೂ ಬಂದು ಸೇರಿ ಕೊಳ್ಳುತ್ವೆ. ಒಂದೆರೆಡು ದಿವಸ ಧರಣಿ, ಉಪವಾಸ ಸತ್ಯಾಗ್ರಹ, ಬಸ್ಸು ಸುಡೋದು ಎಲ್ಲಾ ಆಗುತ್ತೆ. ಆಮೇಲೆ ತಣ್ಣಗಾದ ಮೇಲೆ, ಎಲ್ಲಾರು ಅವರವರ ಡ್ರೈವರಿಲ್ಲದ ಗಾಡಿ ಹತ್ತಿಕೊಂಡು ಹೋಗ್ತಾ ಇರ್ತಾರೆ.

ಹೇಗಿದ್ರೂ ಲಕ್ಷಾಂತರ ಕೊಟ್ಟು ಖರೀದಿಸಿ ನಾಗಲೋಟದಲ್ಲಿ ಓಡಾಡಬೇಕಾದ ಕಾರುಗಳು ಬೆಂಗಳೂರಿನ ಟ್ರಾಫಿಕ್ನಲ್ಲಿ ಕುಂಟು ಕೊಂಡು ಹೋಗ್ತಿಲ್ವಾ ಈಗ? ನಮ್ಮ ದೇಶದ ತರಹಾನೇ ಇದೂ ಹೇಗೋ ಓಡುತ್ತೆ...

ಸರಿಯಾಗಿ ಹೇಳ್ದೆ ಅಜ್ಜಿ!

---

## ಅಗಳಿ

ಮಹಿಳಾ ದಿನದಂದೂ
ಪ್ರೀತಿಯಿಂದ
ಕರೆಯಲಿಲ್ಲ ಬಳಿ
ಇಲ್ಲ ಒಂದು ಸೀರೆ, ಜವಳಿ,
ಚಿನ್ನದ ಚಿಕ್ಕ ಸರಪಳಿ
ಎಂದೆಲ್ಲಾ ತೆಗಳಿ
ಗಂಡನ ಆಚೆ ಹಾಕಿ
ಜಡಿದುಕೊಂಡಳು
ಅಗಳಿ!

~ ತುರುವೇಕೆರೆ ಪ್ರಸಾದ್



# ಚಾಲಕರ ಬವಣೆ

**- ಅರುಂಧತಿ ಜೋಶಿ**

**ಪು**ಟ್ಟ ಮಗುವನ್ನು ನಾಲಕ್ಕು ಚಕ್ರದ ತಳ್ಳು ಗಾಡಿಯಲ್ಲಿ ಕೂರಿಸಿಕೊಂಡು ಅದರಲ್ಲಿ ವಾಯು ವಿಹಾರಕ್ಕೆ ಕರೆದೊಯ್ಯುವ ದೃಶ್ಯ ಸರ್ವ ಸಾಮಾನ್ಯವಾಗಿ ನಾವೆಲ್ಲರೂ ನೋಡಿರೋದೇ. ದಿನನಿತ್ಯದ ಈ ಕಾರ್ಯಕ್ರಮದಲ್ಲಿ ಬದಲಾವಣೆಯಾದರೆ ಅಥವಾ ಕರೆದುಕೊಂಡು ಹೋಗದಿದ್ದರೆ ರಂಪ ರಗಳೆ ಮಾಡುವ ಮಕ್ಕಳನ್ನು ನೋಡಿರಬಹುದಲ್ವೇ!

ಮಗು ಬೆಳೆದು ವರ್ಷದೊಳಗೆ ಮೊದಲ ಹೆಜ್ಜೆ ಇಟ್ಟು, ಎದ್ದು ಬಿದ್ದು ಓಡಾಡುವಷ್ಟು ಆದ ಮೇಲೆ ತ್ರಿಚಕ್ರ ಸೈಕಲಿನಲ್ಲಿ ಮನೆಯ ಸುತ್ತ ಓಡಾಡುವ ಸುಯೋಗ ಒದಗಿ ಬಂದಾಗ ಆಗುತ್ತಿದ್ದ ಆನಂದ ಒಂದೆಡೆಯಾದರೆ, ಸೈಕಲ್ಲಿನ ಹಿಂದಿನ ಸೀಟಿನಲ್ಲಿ ಪುಟ್ಟ ತಂಗಿಯನ್ನು ಕೂರಿಸಿಕೊಂಡು ಓಡಾಡುತ್ತಿರುವಾಗ ಆಗುತ್ತಿದ್ದ ಹೆಮ್ಮೆ ಅನುಭವಿಸಿದವರಿಗಷ್ಟೇ ಗೊತ್ತಿರಬಹುದು.

**ಈ ರಸ್ತೆ ಉಬ್ಬು ನನಗೇಕೆ ಕಾಣಿಸಲಿಲ್ಲ?**

ಕುದುರೆಯನ್ನು ಅದರ ಖುಶಿ ಖಯಾಲಿಗೆ ಬಿಟ್ಟು ಬಿಟ್ಟರೆ, ಅದು ಹಾರುತ್ತೋ, ಮೊಂಡುತನ ಮಾಡುತ್ತ ಮುಂದಿನ ಕಾಲುಗಳನ್ನು ಮಡಚಿ ಕುಳಿತು, ನಮ್ಮನ್ನು ಉರುಳಿಸಿ ಬಿಡುತ್ತೋ ಗೊತ್ತಿಲ್ಲ. ಎಲ್ಲವೂ ನಮ್ಮ ಶಕ್ತಿ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ಹಿಂದು ಸಂಪ್ರದಾಯಗಳಲ್ಲಿ, ಆರಾಧ್ಯದೇವತೆಗಳು ಗಣಪತಿ, ದುರ್ಗಾ ಮಾತೆ ಮತ್ತು ವಿಷ್ಣು ಎಂದಾದರೆ, ಮೂಷಿಕ, ಸಿಂಹ ಮತ್ತು ಗರುಡನನ್ನು ತಮ್ಮ ವಾಹನಗಳನ್ನಾಗಿಸಿ ಕೊಂಡಿದ್ದರೆಂದು ಪುರಾಣಗಳಿಂದ ನಮಗೆ ಸಿಕ್ಕಿರುವ ಮಾಹಿತಿ. ಇತಿಹಾಸದಲ್ಲಿನ ಮಾಹಿತಿಯ ಪ್ರಕಾರ, ರಥ, ಗಜ ಮತ್ತು ತುರಗಗಳು ಸಂಚರಿಸಲು, ಮತ್ತು ಯುದ್ಧದಲ್ಲಿ ಬಳಸುತ್ತಿದ್ದ ವಾಹನಗಳು. ಆದರೀಗ ಗಜ ತುರಗಗಳು ಸರ್ಕಸ್ಸಿನಲಷ್ಟೇ ಬಳಸುತ್ತಿರುವ ವಾಹನಗಳಾಗಿವೆ. ದೇವಸ್ಥಾನಗಳಲ್ಲಿ ರಥ, ಗಜಗಳನ್ನು ದೇವರ ಪಲ್ಲಕಿ ಹೊರಲು ಉಪಯೋಗಿಸುತ್ತಾರೆ. ಸರ್ಕಸ್ಸಿನಲ್ಲಿ ಗಜ ತುರಗಗಳ ಮೇಲೆ ನಿಂತು ಸಾಹಸ ಕೃತ್ಯಗಳನ್ನು ಮಾಡುತ್ತ ಮನರಂಜನೆ ಒದಗಿಸುವ ಸರ್ಕಸ್ ಪಟುಗಳು ಮತ್ತು ವಿದೂಷಕರು ನಮ್ಮನ್ನು ರಂಜಿಸುತ್ತಾರೆ. ಇದನ್ನು ಮಾಡಿ ಸೈ ಅನಿಸಿ ಕೊಳ್ಳೊದಿಕ್ಕೆ ಸಾಕಷ್ಟು ಸರ್ಕಸ್ ಮಾಡಬೇಕಾಗುತ್ತೆ.

ಜನಸಂದಣಿ, ವಾಹನ ದಟ್ಟಣೆಯಿರುವ ಸ್ಥಳದಲ್ಲಿ ಸೈಕಲ್ ಸ್ಕೂಟರ್, ಮೋಟರ್ ಸೈಕಲ್ ಓಡಾಡ್ತಿರ ಬೇಕಾದ್ರೆ, ಎದೆ ಗುಂಡಿಗೆ ಗಟ್ಟಿ ಮಾಡಿಕೊಂಡು ರಸ್ತೆಯ ಎಡ ಬದಿಯಲ್ಲಿ ವಾಹನ ಚಲಾಯಿಸಿದ್ರೂ, ಬುರ್ ಬುರ್ರೆಂದು ಹಾರುತ್ತಿರೋ ವಾಹನಗಳು ನಮ್ಮನ್ನು ತಕತೈಯಂತ ನಾಟ್ಯ ಮಾಡೋ ಹಾಗೆ ಮಾಡುತ್ತೆ. ಈ ವಾಹನ ದಟ್ಟಣೆ, ಜನ ಸಂದಣಿಯನ್ನು ಭೇದಿಸಿ ಮುಂದೆ ಸಾಗೋದಿಕ್ಕೆ, ಕುಸ್ತಿ ಪಟುಗಳಂತೆ ದಾಳಿ ಮಾಡಬೇಕಾಗುತ್ತೆ. ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಗಾಡಿ ಓಡಿಸಲು ಜಾಗ ಹುಡುಕುತ್ತ ಭರತನಾಟ್ಯವಾಡಬೇಕು.

ನಗರಗಳಲ್ಲಿ ಗಾಡಿ ಚಲಾಯಿಸಬೇಕಾದ್ರೆ, ಅದೊಂತರಹ ನರಕ ಅನುಭವಿಸಿದಂತೆ ಎಂದು ಹೇಳಬೇಕು. ಗಾಳಿ ಬಂದಾಗ ತೂರಿಕೋ ಎಂಬ ಗಾದೆ ಮಾತು ನೆನಪಾಗುತ್ತದೆ. ಅಕ್ಷರಶಃ ಸಿಕ್ಕಿದ



ಜಾಗದಲ್ಲಿ ತೂರಿಕೊಂಡು ಹೋಗಲು ಹರಸಾಹಸ ಮಾಡೋವರನ್ನು ರಸ್ತೆ ಮೇಲೆ ನೋಡಿ, ಅನುಭವಿಸಲು ಸಿಗೋ ಮನೋರಂಜನೆಯೆಂದು ಹೇಳಬೇಕೋ ಅಥವಾ ಚಾಲಕರಿಗೆ ಲಭಿಸಿದ ಮನೋವ್ಯಥೆಯೋ ಎಂದು ಹೇಳಬೇಕೋ ಗೊತ್ತಾಗ್ತಿಲ್ಲ.

ಈ ಸಾಹಸಗಳನ್ನೆಲ್ಲ ಮಾಡೋದಿಕ್ಕೆ ಗಾಡಿ ಚಲಾಯಿಸಬೇಕು. ಅದಕ್ಕೆ ಅರ್ಹತೆ ಪಡೆಯಲು ಮೋಟಾರ್ ವಾಹನಗಳನ್ನು ಚಲಾಯಿಸಲು ತರಬೇತಿ ನೀಡುವ ಶಾಲೆಯಲ್ಲಿ ಹೆಸರು ನೋಂದಾಯಿಸಿ ಕೊಳ್ಳಬೇಕು. ಡ್ರೈವಿಂಗ್ ಸ್ಕೂಲಿನಲ್ಲಿ ತರಬೇತಿ ಪಡೆಯುವಾಗ ನಮ್ಮ ಆರಂಭ ಶೂರತ್ವ ತೋರಿಸಲು, ಕಲಿಸುವ ಗುರುಗಳ ಜತೆ ಡ್ರೈವಿಂಗ್ ಸೀಟಿನಲ್ಲಿ ಕುಳಿತು, ಪಕ್ಕದ ಸೀಟಿನಲ್ಲಿ ಕುಳಿತಿರುವ ಗುರುಗಳ ಆದೇಶದಂತೆ ಗಾಡಿಯನ್ನು ಚಾಲನೆ ಮಾಡಿ, ಮುಂದೆ ರಸ್ತೆಯಲ್ಲಿ ಬೇರೆ ವಾಹನಗಳ ಮಧ್ಯದಲ್ಲಿ ಚಲಾಯಿಸಿದಾಗ ಹೆದರಿಕೆಯಾದರೂ, ಹೆಮ್ಮೆಯೂ ಆಗಿತ್ತು. ಅದೇ ಖುಶೀಲಿ ಆಕ್ಸಿಲರೇಟರ್ ಒತ್ತಿದಾಗ ಗಾಡಿ ಒಮ್ಮೆಲೇ ಗಕ್ಕೆಂದು ಮುಂದೆ ಹಾರಿದ ಹಾಗಾಯಿತು. ಪಾದಚಾರಿಗಳ ಕೆಂಗಣ್ಣಿಗೆ, ತರಬೇತಿ ನೀಡುತ್ತಿದ್ದ ಗುರುಗಳ ಕೆಂಗಣ್ಣಿಗೂ ಗುರಿಯಾಗ ಬೇಕಾಯಿತು. ಹೇಗೋ ಹಾಗೂ ಹೀಗೂ ನಾಲಕ್ಕು ಚಕ್ರ ವಾಹನವನ್ನು ಓಡಿಸುವ ಅರ್ಹತೆಯಿದೆಯೆಂದು ಅರ್ಹತಾ ಪತ್ರ ಪಡೆದು ಬೀಗುತ್ತ ಅದರ ಪ್ರದರ್ಶನ ಮನೆಯವರಿಗೆಲ್ಲ ಮಾಡಿದ ಮೇಲೆ ನನ್ನ ನಿಜವಾದ ಪರೀಕ್ಷೆ ಶುರುವಾಯಿತೆಂದೇ ಹೇಳಬಹುದು.

ರಸ್ತೇಲಿ ಗಾಡಿ ಚಲಾಯಿಸುವಾಗ, ಪರಿಣಿತರಾದ ಗಾಡಿ ಚಾಲಕರು, ಯಾವುದನ್ನು ಲೆಕ್ಕಿಸದೇ ಹಾಯಾಗಿ ಒಂದು ಕೈಯಲ್ಲಿ ಸ್ಟೆಯರಿಂಗ್ ಚಕ್ರವನ್ನು ಹಿಡಿದು ತಿರುಗಿಸುತ್ತೆ, ಯಾವ ಒತ್ತಡವಿಲ್ಲದೇ ಸಾಗುತ್ತಿರೋದನ್ನ ನೋಡಿದರೆ, ಇವರೆಲ್ಲರ ಮಧ್ಯದಲ್ಲಿ ನಮ್ಮ ಗತಿಯೇನಪ್ಪಾಂತ ಸ್ವಲ್ಪ ಕಸಿವಿಸಿಯಾದರೂ, ಸುಧಾರಿಸಿ ಕೊಂಡು ಚಾಲಕನ ಸೀಟಿನಲ್ಲಿ ಕುಳಿತು ಗಾಡಿಯನ್ನು ಚಲಾಯಿಸಲು ಶುರುಮಾಡಿದಾಗ ರಸ್ತೆಯಲ್ಲಿ ಪಾದಚಾರಿಗಳು ನಿರಾಳವಾಗಿ ರಸ್ತೆ ದಾಟುತ್ತಿದ್ದರು. ಸ್ಕೂಟರ್, ಮೋಟಾರ್ ವಾಹನಗಳ ಗದ್ದಲದಲ್ಲಿ ನಾ ಮುಂದೆ ನೀಮುಂದೆಂದು ಪೈಪೋಟಿ ನಡೆಸುತ್ತಿರಬೇಕಾದರೆ, ನಾನು ಯಾರಿಗೂ ಕಮ್ಮಿಯಿಲ್ಲವೆಂದು ತೋರಿಸುವ ಅಹಂ ಇರಬೇಕಲ್ವೇ! ನಿರ್ಧಾರ ತೆಗೆದುಕೊಳ್ಳುವ ಶಕ್ತಿ ನನ್ನಲ್ಲಿ ಚುರುಕಾಗುತ್ತಿದ್ದಂತೆ ವಿವೇಚನಾ ಶಕ್ತಿ ಸಹ ಸುಧಾರಿಸಿತ್ತೆಂದೇ ಹೇಳಬಹುದು ರಸ್ತೆ ಸಂಗಮ ಸ್ಥಳದಲ್ಲಿದ್ದು ಸಹಾಯ ಹಸ್ತ ಚಾಚುತ್ತಿತೆಂದು ಅನಿಸಿತು.

ಹಾಯಾಗಿ ಮೊಬೈಲಿನಲ್ಲಿ ಮಾತನಾಡುತ್ತ ವಾಹನ ಚಾಲನೆ ಮಾಡುವವರನ್ನು ನೋಡಿದರೆ ಸಹಜವಾಗಿ ನನ್ನ ಪ್ರತಿಕ್ರಿಯೆ ಏನಿರಬಹುದೆಂದು ಊಹಿಸಲು ನಿಮಗೆ ಸಾಧ್ಯವೇ! ಕಸಿವಿಸಿಯಾದರೂ ಇವರೆಲ್ಲರ ಮಧ್ಯದಲ್ಲಿ ನನ್ನ ಗತಿಯೇನೆಂದು ಆತಂಕ ಸಹ ಆದ್ರೆ ತಪ್ಪೇ ಹೇಳಿ! ಹೇಗೆಲ್ಲ ಯೋಚನಾ ಲಹರಿಯಲ್ಲಿ ಮುಳುಗಿ ತೇಲಿ ವಾಹನವನ್ನು ಚಲಾಯಿಸುವಾಗ ರಸ್ತೆ ಉಬ್ಬಿನಲ್ಲಿ ಗಾಡಿ ಒಂದು ಸೆಕೆಂಡ್ ದಿಡೀರೆಂದು ಹಾರಿದಂತಾದಾಗ ಏನಪ್ಪಾಗತಿಯೆಂದು ಸ್ವಲ್ಪ ತಬ್ಬಿಬ್ಬಾಯಿತು.



ಒಂದು ಸಡೆದ ಜ್ವತೆ ಗಾಡಿ ರಸ್ತೆ ಉಬ್ಬಿನಲ್ಲಿ ಏರಿ ಇಳಿದು, ಅದನ್ನು ದಾಟಿ ಮುಂದೆ ಸಾಗಿದಾಗ, ಎದೆ ಗುಂಡಿಗೆ ಬಾಯಿಗೆ ಬಂದ ಅನುಭವ ಆಯಿತೆಂದೇ ಹೇಳಬಹುದು.

ಈ ರಸ್ತೆ ಉಬ್ಬು ನನಗ್ಯಾಕೆ ಕಾಣಿಸಲಿಲ್ಲ?

ವಿಚಾರ ಲಹರಿಯಲ್ಲಿ ಮುಳುಗಿ ಗಾಡಿ ಓಡಿಸಿದರೆ ಆಗೋದು ಹೀಗೆಂತ ತಡವಾಗಿ ಜ್ಞಾನೋದಯ ಆಯಿತೆಂದ್ರೆ, ಆಶ್ಚರ್ಯವೇನಿಲ್ಲಂತ ಒಳಮನಸು ನನಗೆ ತಿಳಿಹೇಳಿದಂತಾಯಿತು. ನಗರದಲ್ಲಿನ ರಸ್ತೆಗಳಲ್ಲಿರುವ ಉಬ್ಬು ರಸ್ತೆ ಗುಂಡಿಗಳು, ಅಡ್ಡಾದಿಡ್ಡಿ ಓಡಾಡುವ ಜನ ಸಮೂಹ, ನಾಲಕ್ಕು ಕಾಲಿನ ನಾಯಿಗಳು, ದನಗಳು ಸಹ ಎದುರಾಗುತ್ತವೆ. ಕತ್ತಲಾದ ಮೇಲೆ ಕಣ್ಣು ಕುಕ್ಕುವಂತಹ ವಾಹನ ದೀಪಗಳು ಇವೆಲ್ಲವನ್ನು ನೋಡಿ ಸುಸ್ತಾಗಿ, ವಾಹನ ಚಾಲನೆಯ ಬಗ್ಗೆ ಸಾಕಷ್ಟು ಕಲಿತ ಮೇಲೆ, ಎಲ್ಲವನ್ನೂ ಎದುರಿಸುವ ಮನೋಧೈರ್ಯವನ್ನು ಪಡೆದು ಕೊಂಡು ನಿರಾಳವಾಗಿದ್ದೇನೆ.

''ರೆಡಿ, ಸ್ಟೆಡಿ, ಗೋ'' ಎಂದು ಹೇಳುವ ಆಂಗ್ಲ ಉಕ್ತಿಯಂತೆ ಈಗ ಕಲಿತ ಪಾಠವನ್ನು ಕಾರ್ಯ ರೂಪಕ್ಕೆ ತರಲು ತಯಾರಾಗಿರಬೇಕು. ವಾಹನಕ್ಕೆ ಮತ್ತು ವಾಹನ ಚಾಲಕನಿಗೂ ವಿರಾಮದ ಸಮಯ. ಸದ್ಯಕ್ಕೀಗ ವಿದಾಯ ಹೇಳಿ ಬಿಡೋಣ.

---

## ಸರ್ಜಿಕಲ್ ಸ್ಟ್ರೈಕ್!

ಗಂಡ ಮಾತು ಕೇಳದಿರೆ
ಹೆಂಡತಿ
ಮಾಡುತ್ತಾಳೆ ರಿಪೇರಿ
ಮಿತಿ ಮೀರಿದಾಗ
ಸರ್ಜರಿ!
ಹಾದಿ ಬಿಟ್ಟಾಗ
ಮಾಡುತ್ತಾಳೆ ಸ್ಟ್ರೈಕ್!
ಹಾಗೂ ಬಗ್ಗದಿರೆ
ಗಂಡನ ಗಡಿ
ಉಲ್ಲಂಘಿಸಿ
ಮಾಡುತ್ತಾಳೆ
ಸರ್ಜಿಕಲ್ ಸ್ಟ್ರೈಕ್!
ಅಲ್ಲಿಗೆ ಗಂಡ
ಹಲ್ ಕಿತ್ತ ಸ್ನೇಕ್!

~ತುರುವೇಕೆರೆ ಪ್ರಸಾದ್



# ಹೈಕಮಾಂಡ್‌ಗಳು

**- ವೈ.ಎಂ. ರಘುನಂದನ್**

ರಾತ್ರಿ ಸ್ಲೀಪರ್ ಬಸ್ ಸಿಗದೆ, ಆರ್ಡಿನರಿಬಸ್ಸಿನಲ್ಲಿ ನಿದ್ದೆಗೆಟ್ಟು ಪ್ರಯಾಣ ಮಾಡಿ ಬಂದಿದ್ದೆ. ಲೆಖ್ಖ ತಪಾಸಣೆಗೆಂದು ಹೋಗಿ, ಹುಬ್ಬಳ್ಳಿಯಿಂದ ಬಂದು ಮನೆ ಸೇರುವ ಹೊತ್ತಿಗೆ ನನ್ನಾಕೆ ಬಂದವರು ನಾನೇನೋ ಇಲ್ಲವೇ, ಇನ್ಯಾರಾದ್ರು ಡೂಪ್ಲಿಕೇಟ್ ವೇಶಧಾರಿಯೋ ಅಂತ, ಅನುಮಾನ ಪಟ್ಟಿರಬೇಕು. ಅಡಿಯಿಂದ ಮುಡಿಯವರೆಗೂ ನೋಡಿ ನೀವು ಯಾರು ಅನ್ನೋದೆ!

**ಅಡಿಯಿಂದ ಮುಡಿಯವರೆಗೆ ನೋಡಿ ಇವರು ಯಾರೂ ಅನ್ನೋದೇ**

ನಿದ್ದೆಗೆಟ್ಟಿಯೋ ಬುದ್ಧಿಗೆಟ್ಟಿಯೋ ಅಂತ ಅಜ್ಜಿ ಹೇಳ್ತಾ ಇದ್ದಗಾದೆ ನೆನಪಿಗೆ ಬಂತು. ತಲೆಗೆದರಿ, ಕಣ್ಣುರಾಹುಗ್ರಸ್ಥ ಗ್ರಹಣದಂತಾಗಿತ್ತು. ಸುಸ್ತಿನಿಂದ ಮೈ ತೂರಾಡುವಂತಿತ್ತು. ಕೈಯಲ್ಲಿ ಭಾರದ ಸೂಟ್‌ಕೇಸು ಬೇರೆ. ಮಣ್ಣು ರಸ್ತೆ, ಕಿಡಕಿ ಗಾಜಿಂದ ಹಾರಿ ಬರುತ್ತಿದ್ದ ಧೂಳಿಂದ, ಧರಿಸಿದ್ದ ಬಟ್ಟೆ ಬಿಳೀದಾಗಿದ್ದರೂ 'ಕೆಂಪಾದವೋ ಎಲ್ಲಾ ಕೆಂಪಾದವೋ' ಎಂದು ಹಾಡು ಹೇಳಿತ್ತು.

''ಕುದ್ದೂ.... ನಾನೇ ಕಣೆ, ನಿನ್ನ ಗಂಡ, ಪರಮೇಶಿ... ಪಾಣಿಗ್ರಹಣ ಮಾಡಿ, ತಾಳಿಕಟ್ಟಿ, ಸಪ್ತಪದಿ ತುಳಿದವನು...'' ಎಂದಿದ್ದೆ ನಿತ್ರಾಣನಾಗಿ.

''ಪಾಣಿಗ್ರಹಣ ಮಾಡಿದ ಪ್ರಾಣಿಯಂತೆ ಕಾಣುತ್ತಿಲ್ಲವಲ್ಲ... ತಾಳಿಕೋಟಿ ರಾಜುತರಹ ತೂರಾಡ್ತಾ ಬರ್ತಿದೀರಿ... ಸಪ್ತಪದಿ ಹೀರೋ, ಅಂಬರೀಶಣ್ಣನ ಕಣ್ಣಂತೆ ಇದೆ ನಿಮ್ಮ ಕಣ್ಣು...'' ಬಾಗಿಲು ತೆಗೆಯದೆಯೇ ಅನುಮಾನಿಸಿದಳು.

''ಅಯ್ಯೋ ಪದ್ದೂ... ನಿಮ್ಮವ್ವನ ಆಣೆಗೂ ನಾನು ನಾನೇ ಕಣೇ... ನಂಬೇ'' ಎಂದಿದ್ದೆ ದೀರ್ಘವಾಗಿ ಉಸಿರು ಬಿಡುತ್ತ, ''ನಮ್ಮವ್ವನ ಆಣೇನೆ ಯಾಕೆ?'' ತೀಕ್ಷ್ಣ ಪ್ರಶ್ನೆ. ''ನಿಮ್ಮಪ್ಪ ಇಲ್ಲವಲ್ಲ...'' ನರಳುತ್ತಲೇ ಹೇಳಿದ್ದೆ. ಮಠಗಳಲ್ಲಿ ಊಟಕ್ಕೆ ಹೋದಾಗ, ಒಳಗೆ ಬಿಡುವ ಧಾಂಡಿಗ ಉರಿಬಿಸಿಲಲ್ಲಿ, ಬರೀ ಕಾಲಲ್ಲಿ ಹೊರಗೆ ನಿಲ್ಲಿಸಿ 'ಪ್ರವರ ಹೇಳಿ, ಗೋತ್ರ ಹೇಳಿ' ಎಂದು ವಿಚಾರಣೆ ಮಾಡಿದಂತಿತ್ತು ನನ್ನಾಕೆಯ ಪ್ರಶ್ನೆಗಳು.

ನನ್ನ ತಾಳ್ಮೆ ಎಲ್ಲೆ ಮೀರಿತ್ತು. ಎರಡು ಸಾವಿರಕ್ಕೆ ಎರಡು ದಿನದಿಂದ ಎರಡು ಗಂಟೆ, ಏ.ಟಿ.ಎಂ. ಮುಂದೆ ನಿಂತ ಸೀನಿಯರ್ ಸಿಟಿಜನ್ ನಂತರ ಆಗಿದ್ದೆ.



''ಈಗೇನು ಬಾಗಿಲು ತೆಗೆದು ಒಳಕ್ಕೆ ಬಿಡ್ತಿಯೋ ಇಲ್ಲ... ಹೊರಗೆ ಹೋಗಿ, ಲಾಡ್ಜ ವಂದನದಲ್ಲಿ, ರೂಂ ಮಾಡಿಕೊಂಡು ಬಿದ್ದು ಕೊಳ್ಳಲೋ... ನೀ ಹೇಳಿದ್ದ ದಿಂಡಿಗಲ್ ಸೀರೆ ಕಾಟನ್ ಸೀರೆ... ಆ ಲಾಜ್ಜನ ಲೇಡಿ ರಿಸೆಪ್ಸನ್‌ಳಿಗೆ ಗಿಫ್ಟ್ ಅಂತೆ ಕೊಟ್ಟು ಬಿಡಲೋ...'' ಎಂದಿದ್ದೆ ಟ್ರಂಪ್‌ಕಾರ್ಡ ಎಸೆದು.

''ಅಯ್ಯೋ ನೀವೇ ಏನ್ರೀ... ಬನ್ನಿ ಬನ್ನಿ.. ಕೈಕಾಲು ಮುಖ ತೊಳೀರಿ... ಬಿಸಿ ಕಾಫಿ ತರ್ತೀನಿ...'' ಎನ್ನುತ್ತ ಸಡಗರ ತೋರಿದ್ದಳು. ಒಂದು ಪಾರ್ಟಿ ಬಿಟ್ಟು ಮತ್ತೊಂದು ಪಾರ್ಟಿಗೆ ಸೇರುವ, ಹೊಸ ಎಂ.ಪಿ, ಎಂ.ಎಲ್.ಎಗೆ ಸಿಗುವ ಭವ್ಯ ಸ್ವಾಗತಸಿಕ್ಕಿತ್ತು.

ಮುಖ ತೊಳೆದು, ಕಾಫಿ ಕುಡಿದು ಮಲಗಿದ್ದೇ ತಡ... ನಿದ್ರಾ ದೇವಿ ಆವರಿಸಿ ಬಿಟ್ಟಿದ್ದಳು. ಆಗಲೇ ಸೂರ್ಯ ಹುಟ್ಟಿ ಬಂದು ಮೂರು ಗಂಟೆ ಆಗಿ ಹೋಗಿತ್ತು. ಒಂದು ದಿನವಾದ್ರೂ ಸೂರ್ಯ ಸಿ.ಎಲ್. ಹಾಕಿ ಮನೇಲಿ ಇರಬಾರದೆ. ನಮ್ಮ ಬಾಸ್ ಬಸ್ರಾಜನೂ ಒಂದೇ ಆ ಸೂರ್ಯನೂ ಒಂದೇ. ಇಬ್ಬರೂ ಮನೇಲಿ ಇರೋ ಜಾಯಮಾನವೇ ಅಲ್ಲ.

ಗಾಢ ನಿದ್ರೆಯಲ್ಲಿದ್ದ ನನಗೆ ಒಂದು ಕಡೆ ನನ್ನಾಕೆ ಮತ್ತೊಂದು ಕಡೆ ನನ್ನ ಕುಮಾರ ಕಂಠೀರವ ಕೈ ಹಿಡಿದು ಎಳೆದು ಎಬ್ಬಿಸುತ್ತಿದ್ದಾರೆ.

''ಡ್ಯಾಡಿ... ಸೋಂಬೇರಿ ಅಪ್ಪಾ... ಪ್ಲೀಸ್ ಏಳಿ ನನಗೆ ಶಾಲೆಗೆ ಡ್ರಾಪ್ ಮಾಡಿ, ಬೆಳಿಗ್ಗೆ 9 ಗಂಟೆ ಆಯ್ತು'' ಎಂದು ಮಗ ಒಂದು ಕಡೆ.

''ರೀ... ನಿಮ್ಮ ಹೈಕಮಾಂಡ್ ಫೋನ್ ಮಾಡ್ತಾ ಇದ್ದಾರೆ... ನೀವು ಎದ್ದು ತಕ್ಷಣ ಅವರನ್ನ ಕಾಂಟ್ಯಾಕ್ಟ ಮಾಡಲೇಬೇಕಂತೆ... ಮಿಸಸ್ ಬಸ್ರಾಜ್ ಫೋನ್ ಮಾಡಿದ್ರು'' ಎಂದು ತಾಯಿ ಎಳೆಯುತ್ತಿದ್ದಾಳೆ ಮತ್ತೊಂದು ಕಡೆ. ತಾಯಿ ಮಗನ ಮಧ್ಯೆ ಸಿಕ್ಕ ಸಿದ್ರಾಮಣ್ಣನ ಸ್ಥಿತಿ ನನ್ನದಾಗಿತ್ತು.

ಹೈಕಮಾಂಡ್ ಅಂದ ಮೇಲೆ ಎದ್ದೇಳಲೇ ಬೇಕಾಯ್ತು. ಆ ಕಡೆಯಿಂದ ಬಾಸ್ ಬಸ್ರಾಜ್ ಕಾಲ್ ಮತ್ತೆ ಬಂದಿತ್ತು.

''ಏನ್ರೀ... ನೀವೇನು ಹೈಕಮಾಂಡ್ ಅಂತ ತಿಳಿದಿರೇನ್ರೀ... ನಾನೇ ನಾಲ್ಕು ಸಲ ಫೋನ್ ಮಾಡಬೇಕಾ...'' ರೇಗಿದ್ದರು.

''ರಾತ್ರಿ ನಿದ್ದೆಗೆಟ್ಟು ಬಂದಿದ್ದೆ ಸಾರ್... ಅದಕ್ಕೆ...'' ಎಂದೆ.

''ರಿಟೈರ್ ಆದಮೇಲೆ ನಿದ್ದೆ ಮಾಡಿ... ಈಗ ಸೇವಾ ಕಾರ್ಯದ ಸಮಯ. ಇಂದೇ ನೀವು ಧಾರವಾಡಕ್ಕೆ ಹೋಗ್ರಿ ಮತ್ತೆ ಈಗ್ಲೇ ಈಗಲೇ, ಹೊರಡಿ. ಅರ್ಜೆಂಟ್ ಫೈಲಿದೆ... ವೆರಿಫಿಕೇಶನ್ ಮಾಡಿ, ನಾಳೆ ಬೆಳಿಗ್ಗೆ ನನಗೆ ರಿಜಲ್ಟ ತಿಳಿಸಿ, ಫೈಲು ರಂಗಣ್ಣ ನಿಮ್ಮನೆಗೇ ಕೊಡಲು ಹೊರಟಿದ್ದಾನೆ...'' ಕಮಾಂಡ್ ಬಂದಿತ್ತು. ''ಸಾರ್ ನಿದ್ದೆ ಆಗಿಲ್ಲ... ನಾಳೆ ರಜಾ ಹಾಕಿದ್ದೆ.. ನಮ್ಮ ಅಜ್ಜಿ ತಿಥಿ ಇದೆ... ಪ್ರವರ ಹೇಳಿದ್ದೆ.

''ಪ್ರಧಾನ ಮಂತ್ರಿಗಳೇ ದಿನಕ್ಕೆ 18 ಗಂಟೆಕಾಲ ದುಡಿತಾಯಿದ್ದಾರೆ... ನೀವು ಅವರಿಗಿಂತ ದೊಡ್ಡವರೇ? ನಾಳೆ ನಿಮ್ಮ ಅಜ್ಜಿ ತಿಥಿ ಇದ್ದಿರಬಹುದು. ಆದರೆ ನನಗೆ ಇಂದೇ ಜೀವಂತ ತಿಥಿ ಮಾಡ್ತಾರೆ ಡೈರೆಕ್ಟರ್... ಮೊದಲು ಹೊರಡಿ... ಅಲ್ಲಿ ಗೆಸ್ಟ ಹೌಸಿನಲ್ಲಿ ಹೋಗಿ ಮಲಗಿ, ಬೆಳಿಗ್ಗೆ ಫೈಲ್ ನೋಡಿ ವಿವರ ಕೊಡಿ. ಆಮೇಲೆ ಬೇಕಾದ್ರೆ... ನಿಮ್ಮಜ್ಜಿ ತಿಥಿ, ನಿಮ್ಮ ತಿಥಿ... ಪುರಸೊತ್ತಾಗಿದ್ರೆ... ನನ್ನದೂ ಮಾಡ್ರಿ...'' ಫೋನ್ ಕುಕ್ಕಿದ್ದರು. ಕಾರ್‌ಶಬ್ದ ಆಯ್ತು. ರಂಗಣ್ಣ ಬಂದು ಫೈಲ್ ಕೊಟ್ಟು ಸಾರ್ ಇದು ಅಡ್ವಾನ್ಸ್ ಅಂತ ಕವರಿತ್ತು ಸಹಿ ಹಾಕಿಸಿ ಕೊಂಡು ಹೊರಟೇ ಹೋದ. ಮದುವೆ ನಂತರ ಗಂಡನ್ನು ಹೆಣ್ಣಿನವರ ಮನೆಗ ಒಪ್ಪಿಸಿ ಹೋದಂತೆ ಹೋಗಿದ್ದ ರಂಗಣ್ಣ, ಬಾಸ್ ಬಸ್ರಾಜನ ಕೈಗೆ ಸಿಕ್ಕಿದ್ದ ಮಂಗಣ್ಣ ನಾನಾಗಿದ್ದೆ.



ಇನ್ನೂ... ಧಾರವಾಡ ಸೇರುತ್ತಿರುವಾಗಲೇ ಬಾಸ್ ಫೋನ್... ''ಹೋಗಿ ಸೇರಿದ್ರೇನ್ರಿ... ಬೆಳಿಗ್ಗೆ 7 ಗಂಟೆಗೇ ಆಫೀಸಿಗೆ ಕುಲಕರ್ಣಿ ಬಂದಿರುತ್ತಾರೆ... ಹೋಗಿ ಕೆಲಸ ಮುಗಿಸಿ 9 ಗಂಟೆಗೆ ನನ್ಗೆ ಫೋನ್ ಮಾಡಿ ಹೇಳಿ... ಡೈರೆಕ್ಟರ್ 10 ಗಂಟೆಗೆ ಫೋನ್ ಮಾಡ್ತಾರೆ...'' ಎಂದರು ಖಡಕ್ ಆಗಿ. ಮನೆಯಿಂದ ಪದ್ದು ಫೋನ್ ''ಏನ್ರೀ... ಹೋಗುವಾಗ ಹೇಳಿ ಕಳಿಸಿದ್ದೆ... ಹಸಿರು ಬಣ್ಣ ಪಿಂಕ್ ಬಾರ್ಡರ್ ಅಂತ... ನೀವು ದುಂಬಿ ಕಲರ್... ರೆಡ್ ಬಾರ್ಡರ್ ತಂದಿದ್ದೀರ... ಅಂತ.

ಮಗರಾಯ ಫೋನ್ ಮಾಡಿದ್ದ

''ಡ್ಯಾಡಿ... ಲೆಖ್ಖದ ಮಾಸ್ತರ್ ನಿಮ್ಮಪ್ಪನನ್ನು ಕರೆದುಕೊಂಡು ಬಾ ಅಂತ ಹೇಳ್ತಿದ್ದಾರೆ...'' ಎಂದ. ''ಯಾಕಂತೆ...'' ಎಂದೆ ಅಸಹನೆಯಿಂದ. ''ನನ್ನ ಜೊತೆ ನಿಂಗೂ ಪಾಠ ಮಾಡ್ತಾರಂತೆ... ಹೇಗೆ ಹೋಂ ವರ್ಕ ಮಾಡಿಸೋದು ಅಂತ...'' ಎಂದ. ಮರ್ಡರ್ ಮಾಡಬೇಕೆನ್ನಿಸಿತು ಮ್ಯಾಥ್ಸ್ ಟೀಚರ್‌ಗೆ. ನಾನು ಕಾಮರಸ ಓದಿದ್ದು, ಲೆಖ್ಖದಲ್ಲಿ ವೀಕು. ಅಂತದರಲ್ಲಿ ಹೋಂ ವರ್ಕ ಮಾಡಿಸುತ್ತೀನಿ...'' ಆಯ್ತು ಮಗನೇ ನಾಡಿದ್ದು ಬರ್ತೀನಿ... ಗುಡ್‌ನೈಟ್'' ಎಂದು ಫೋನಿಟ್ಟೆ. ರಾತ್ರಿ 10 ಗಂಟೆ ಗೆಸ್ಟ್ ಹೌಸ್‌ಗೆ ಆಟೋದಲ್ಲಿ ಹೋಗಿ ಸೇರಿದೆ. ಯಾರೂ ಕಾಣಲಿಲ್ಲ... ಜೋರಾಗಿಯೇ ಕೂಗಿಕರೆದೆ.

''ಮೇಟಿ...ಮೇಟಿ...ಮೇಟಿ...'' ಅಂತ. ''ಸಾರ್ ಜೋರಾಗಿ ಕರೀಬೇಡಿ ಸಾರ್... ಪ್ರೆಸ್‌ನವರು ಟೀವಿ ಅವ್ರು ಬಂದು ತೊಂದ್ರೆ ಕೊಡ್ತಾರೆ...'' ಎಂದ. ''ಯಾಕೆ ಹಾಗೆ'' ಎಂದೆ ಅರ್ಥವಾಗದೆ ಕೇಳಿದ್ದೆ. ''ನಿಮಗೆ ಜನರಲ್ ನಾಲೆಡ್ಜು ವೀಕು ಸಾರ್... ನಂಗೆ ಜೋರಾಗಿ ಮೇಟಿ ಅನ್ನಬೇಡಿ...'' ಎಂದ 3 ದಿನಗಳ ಪೇಪರ್ ಮುಂದಿಟ್ಟು.

''ಮತ್ತೇನಂತ ಕರಿಯಲಿ...'' ಎಂದೆ ಅಸಹನೆಯಿಂದ. ''ಮೋದಿ ಅವರೇ ಪ್ರಧಾನ ಸೇವಕ ಅಂತ ಕರೀರಿ ಅಂದೌವ್ರೆ ನನ್ಗೆ ಅತಿಥಿ ಗೃಹ ಸೇವಕ ಅನ್ನಿ ಸಾರ್ ಎಂದ ಬಾಗಿಲು ತೆಗೆದು. ''ಎಲ್ಲರೂ ಹೈಕಮಾಂಡ್‌ಗಳೇ'' ಎಂದು ಗೊಣಗುತ್ತಲೇ ನಿದ್ದೆಗೆ ಜಾರಿದ್ದೆ.

---

## ಅಖಿಲೇಶ್ ಸರ್ಕಸ್!

ಅಪ್ಪ ಎಳೆದಾಡಿ ಬಂತು ಬೆಂಡು
ರಾಹುಲ್ ಹೇರ್ಕೊಂಡು
ಮುರಿದು ಬಿತ್ತು ಸ್ಟಾಂಡು!
ಜನರ ಓಟು ಕಳ್ಕೊಂಡು
ಹ್ಯಾಂಡ್ಲಾಯ್ತು ತುಂಡು
ಐದ್ ವರ್ಷ ಪಂಕ್ಚರ್ ಹಾಕ್ಕಂಡು
ಪಂಪ್ ಹೊಡ್ಕೊಂಡು
ನೋಡ್ಬೇಕು ಮೋದಿ ಬ್ಯಾಂಡ್!

~ ತುರುವೇಕೆರೆ ಪ್ರಸಾದ್



# ಬಿಂದಾಸ್ ನಿದ್ದೆ

**- ಜಿ.ವಿ. ನಿರ್ಮಲ**

**ಗಾ**ಢ ನಿದ್ದೆ, ಹಗುರ ನಿದ್ದೆ, ಗೊರಕೆ ನಿದ್ದೆ, ಕಳ್ಳನಿದ್ದೆ, ಗುಬ್ಬಿನಿದ್ದೆ, ಕೋಳಿ ನಿದ್ದೆ, ಸಕ್ಕರೆ ನಿದ್ದೆ ಹೀಗೆ ಹಲವಾರು ಬಗೆಯ ನಿದ್ದೆಗಳನ್ನು ಬಲ್ಲೆವು. ಆದರೆ ಇದೇನು ನಿದ್ದೆಯಲ್ಲಿ ಬಿಂದಾಸ್ ನಿದ್ದೆ ಅಂತ ಇದೆಯೇ? ಅದು ಹೇಗಿರುತ್ತದೆ, ಯಾರು ಮಾಡುತ್ತಾರೆ, ಎಲ್ಲಿ ಮಾಡುತ್ತಾರೆ, ಎಂದು ಕುತೂಹಲವಾಗುತ್ತಿದೆಯೇ? ಬಿಂದಾಸ್ ಎಂದ ಕೂಡಲೆ ಇದು ಗಂಡಸರ ಸ್ವತ್ತಲ್ಲ. ಆದರೆ ಇದನ್ನು ಹೆಚ್ಚಾಗಿ ಗಂಡಸರು ಮಾಡುತ್ತಾರೆ ಎಂದು ಧೈರ್ಯವಾಗಿ ಹೇಳಬಹುದು. ಅಷ್ಟೆ.

ನಿದ್ದೆಯ ಬಗ್ಗೆ ವೈದ್ಯ ವಿಜ್ಞಾನ ಹೇಳುವುದೇನು? ಆರೋಗ್ಯವಂತ, ವಯಸ್ಕ ಮಾನವರಿಗೆ ಎಂಟರಿಂದ ಹತ್ತು ಘಂಟೆಗಳ ನಿದ್ದೆ ಅವಶ್ಯಕ; ಮಕ್ಕಳಿಗೆ ಮತ್ತಷ್ಟು ಜಾಸ್ತಿ ಎಂದು. ರಾತ್ರಿಯ ವೇಳೆಯಲ್ಲಿಯೇ ನಿದ್ದೆ ಮಾಡಿದರೆ ಒಳ್ಳೆಯದು. ಆದರೆ ಈಗ ನಗರ ಜೀವನದಲ್ಲಿ ಹಗಲು-ರಾತ್ರಿಗಳ ವ್ಯತ್ಯಾಸವೇ ಮಾಯವಾಗಿ ಹೋಗಿದೆ. ಮಲಗಿದಾಗ ರಾತ್ರಿ; ಎದ್ದಾಗ ಬೆಳಗ್ಗೆ ಎಂದಷ್ಟೇ ಹೇಳಬಹುದು. ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುವ ಹದಿಹರೆಯದ ಯುವಕ, ಯುವತಿಯರು ರಾತ್ರಿ ಕೆಲಸ ಮಾಡುತ್ತಾ, ದುರಭ್ಯಾಸಗಳಿಗೆ ಬಲಿಯಾಗಿ ಆರೋಗ್ಯ - ವಿಶೇಷವಾಗಿ ಮಾನಸಿಕ ಆರೋಗ್ಯ- ಹಾಳು ಮಾಡಿಕೊಳ್ಳುತ್ತಿದ್ದಾರೆ. ಇವರ ಪಾಡು ನಾಯಿಪಾಡಿಗಿಂತ ಕಡೆ ಎಂದು ಬಿಡಿಸಿ ಹೇಳುವುದೇ ಬೇಡ. ದೊಡ್ಡವರ ಮನೆಗಳ ನಾಯಿಗಳಾದರೂ ರಾತ್ರಿ ತಮ್ಮ ಗೂಡಿನಲ್ಲಿ ಸುಖವಾಗಿ ಸುಪ್ಪತ್ತಿಗೆಯ ಮಲಗಿ ನಿದ್ರಿಸುತ್ತವೆ.

**ಸಂಕೋಚ, ಸಂಯಮಗಳನ್ನು ಬದಿಗಿಟ್ಟು ಎಲ್ಲೆಂದರಲ್ಲಿ ನಿದ್ದೆ ಮಾಡುವುದೇ ಬಿಂದಾಸ್ ನಿದ್ದೆ. ನೀವು ಮಾಡಬಲ್ಲಿರಾ?**

ಆದರೆ ಇದಕ್ಕೂ ಬಿಂದಾಸ್ ನಿದ್ದೆಗೂ ಯಾವ ಸಂಬಂಧವೂ ಇಲ್ಲ. ಹಾಗಾದರೆ ಬಿಂದಾಸ್ ನಿದ್ದೆ ಎಂದರೇನು? ಸರಿಯಾದ ಜಾಗ, ಸಜ್ಜಾದ ಸುಪ್ಪತ್ತಿಗೆ ಯಾವುದೂ ಇಲ್ಲದೆ, ಸುತ್ತಮುತ್ತ ಯಾರಿದ್ದಾರೆ, ಯಾರಿಲ್ಲ ಎಂಬ ಪರಿವೆ ಇಲ್ಲದೆ, ಸಂಕೋಚ, ಸಂಯಮಗಳನ್ನು ಬದಿಗಿಟ್ಟು ಎಲ್ಲೆಂದರಲ್ಲಿ ನಿದ್ದೆ ಮಾಡುವುದೇ ಬಿಂದಾಸ್ ನಿದ್ದೆ. ಅಬ್ಬಾ! ಒಳ್ಳೆ ಡೆಫಿನಿಷನ್ ಅಲ್ವಾ? ಹೀಗೆ ನಿದ್ದೆ ಮಾಡುವುದು ಸಾಧ್ಯವೇ? ಖಂಡಿತ ಸಾಧ್ಯ.

ಬೆಂಗಳೂರಿನ ಗಾಂಧಿನಗರ ಕೇವಲ ಸಿನಿಮಾ ಜಗತ್ತಿಗೆ ಮಾತ್ರ ಪ್ರಸಿದ್ಧವಲ್ಲ. ಇಲ್ಲಿ ಒಂದು ಪ್ರಸಿದ್ಧವಾದ ನಿದ್ದೆ/ಗೊರಕೆ ಪಾರ್ಕ್ ಇದೆ. ಇಲ್ಲಿ ಮಲಗಿ ನಿದ್ರಿಸಲು ಯಾವ ಬಗೆಯ ವಿಶೇಷ ಏರ್ಪಾಡೂ ಇಲ್ಲ. ಮನೆಯ ಗಲಾಟೆಯಲ್ಲಿ ನಿದ್ರೆ ಬರದಿದ್ದವರು ಇಲ್ಲಿ ಮಲಗಿ ಆಯಾಸ ಪರಿಹರಿಸಿಕೊಳ್ಳುತ್ತಾರಂತೆ. ಕೆಲವರು ಪುಸ್ತಕಗಳನ್ನು ತಂದು ತಲೆ ಕೆಳಗಿಟ್ಟುಕೊಂಡು ಸುಖವಾಗಿ ನಿದ್ರೆ ಮಾಡುತ್ತಾರಂತೆ. ಪುಸ್ತಕದ ವಿಷಯ ನೇರವಾಗಿ ತಲೆಯೊಳಗೆ ಹೊಕ್ಕುಬಿಡಲೆಂದು ಇವರ ಆಶಯ. ಎಷ್ಟೋ ಜನ ಹಾಡಹಗಲೇ ಇಲ್ಲಿ ಮಲಗಿ ಹಾಯಾಗಿ ನಿದ್ರಿಸುತ್ತಾ ಗೊರಕೆ ಹೊಡೆಯುತ್ತಾರಂತೆ! ಇಲ್ಲಿನ ಸ್ಥಳ ಮಹಾತ್ಮೆ ಇರಬಹುದು. ಹಿಂದೆ ಎಂದಾದರೂ ಇದು ಚಿರನಿದ್ರಾಸ್ಥಾನವಾಗಿತ್ತೇನೋ? ಬಯಲ ಮಂಚದ ಮೇಲೆ,



ಮುಗಿಲ ಸೂರಡಿಯಲ್ಲಿ, ಮೈಚೆಲ್ಲಿ ಮಲಗಿ ನಿದ್ರೆ ಮಾಡುವುದೇ ಬಿಂದಾಸ್ ನಿದ್ದೆ. ನಿದ್ರಾಹೀನತೆ ಇರುವವರು ಇಲ್ಲಿಗೆ ಬಂದು ಒಮ್ಮೆ ಪ್ರಯತ್ನಿಸಬಹುದು.

ಕೆಲವು ವಿದ್ಯಾವಂತರು, ಪ್ರಾಜ್ಞರು ಆಗಾಗ್ಗೆ ಕಾರ್ಯಾಗಾರ, ಸೆಮಿನಾರ್ ಮುಂತಾದವುಗಳಗೆ ಹಾಜರಿ ಹಾಕಿ ತಮ್ಮ ತಿಳಿವಳಿಕೆ ಹೆಚ್ಚಿಸಿಕೊಳ್ಳುತ್ತಾರೆ. ಬೆಳಗಿನ ಕಾರ್ಯಕ್ರಮಗಳಲ್ಲಿ ಮುಂದಿನ ಸಾಲಿನಲ್ಲಿ ಕುಳಿತು ತನ್ಮಯರಾಗಿ ಭಾಷಣಗಳನ್ನು ಕೇಳಿ, ಊಟವಾದ ನಂತರ ತಮ್ಮ ಸ್ಥಾನವನ್ನು ಹಿಂದಿನ ಸಾಲಿನ ಮೂಲೆಗೆ ಬದಲಿಸುತ್ತಾರೆ. ಊಟದಲ್ಲಿ ಬಗೆಬಗೆಯ ಖಾದ್ಯಗಳನ್ನು ಪೊಗದಸ್ತಾಗಿ ಪೋಣಿಸದ ನಂತರ ಅವರ ದೇಹ ಅವರ ಹಿಡಿತದಲ್ಲಿರುವುದಿಲ್ಲ. ತಲೆ ಅತ್ತಿಂದಿತ್ತ ಆಡುತ್ತದೆ. ದೇಹ ಹಾಗೇ ಒರಗುತ್ತದೆ. ಸಣ್ಣದಾಗಿ ಗೊರಕೆ ಕೂಡ. ಭಾಷಣಕಾರರು ಸ್ಲೈಡ್‌ಗಳನ್ನು ತೋರಿಸಲು ದೀಪಗಳನ್ನಾರಿಸಿದರಂತೂ ಮತ್ತಷ್ಟು ಹಿತಕರ ವಾತಾವರಣ ಸೃಷ್ಟಿಯಾಗುತ್ತದೆ. ಬೇಸಿಗೆಯ ದಿನಗಳಲ್ಲಿ ಹವಾ ನಿಯಂತ್ರಿತ ಸಭಾಂಗಣದಲ್ಲಿ ಸುಖಾಸೀನರಾಗಿ, ಸುಶ್ರಾವ್ಯ(ಎಲ್ಲರಿಗೂ ಕೇಳಿಸುವಂತೆ)ವಾಗಿ ಗೊರಕೆ ಹೊಡೆಯುತ್ತಾ ಬಿಂದಾಸ್ ನಿದ್ದೆಗೆ ಜಾರುತ್ತಾರೆ. ವಿದ್ಯಾರ್ಥಿಗಳಿಗಾದರೆ ನಿದ್ದೆ ಮಾಡಬಾರದೆಂದು ತಾಕೀತು ಮಾಡಬಹುದು. ಆದರೆ ಇಂತಹವರನ್ನು ನಿಯಂತ್ರಿಸುವುದು ಸಾಧ್ಯವೇ? ಗೊರಕೆ ಬಹಳ ಜೋರಾದರೆ ಮೆತ್ತಗೆ ಹೊಡಿಯಿರೆಂದು ವಿನಂತಿಸಿಕೊಳ್ಳಬಹುದು; ಅಷ್ಟೆ. ವಿಜ್ಞಾನಿಗಳ ಸಂಶೋಧನೆಯಂತೆ ನಮ್ಮ ಶರೀರದ ಅಂಗಾಂಗಗಳಲ್ಲಿ ಮೊದಲು ನಿದ್ದೆ ಮಾಡುವುದು ಕೈಕಾಲುಗಳು. ಕಿವಿಗಳು ಕೊನೆಯಲ್ಲಿ ನಿದ್ದೆ ಮಾಡುತ್ತವಂತೆ. ಇಂತಹವರು ನಮ್ಮ ಕಿವಿಗಳು ಎಚ್ಚರವಾಗಿವೆ ಎಂದು ಸಾಧಿಸಬಹುದು. ಮತ್ತೊಂದು ಪೂರಕ ವಿಷಯ. ಎಚ್ಚರಗೊಳ್ಳುವಾಗಲೂ ಕಿವಿಗಳೇ ಮೊದಲು. ಕಡೆಯಲ್ಲಿ ಎಚ್ಚರಗೊಳ್ಳುವುದು ಕಣ್ಣುಗಳು!

ಗೊರಕೆಯಂತೂ ನಿದ್ರಿಸುವವರಿಗೆ ವರದಾನ; ಪಕ್ಕದಲ್ಲಿರುವವರಿಗೆ ಶಾಪ. ಎಷ್ಟೋ ಮದುವೆಗಳು ಗೊರಕೆಯ ಕಾರಣದಿಂದ ಮುರಿದುಬಿದ್ದಿವೆ. ಮದುವೆಗೆ ಜಾತಕ ತೋರಿಸುವಾಗ ವರ/ವಧು ಗೊರಕೆ ಹೊಡೆಯುವುದು ತಿಳಿಯುವಂತಿದ್ದರೆ ಇಂತಹ ವಿಚ್ಛೇದನಗಳು ಆಗುತ್ತಿರಲಿಲ್ಲ. ಇತ್ತೀಚಿಗೆ ನಾವು ಒಂದು ಕಾರ್ಯಾಗಾರಕ್ಕೆ ಹೋದಾಗ ನಾಲ್ಕೈದು ಜನರು ಒಂದೊಂದು ಕೊಟಡಿಯಲ್ಲಿ ತಂಗಿದ್ದೆವು. ಆಗ ನಮ್ಮ ಸ್ನೇಹಿತೆಯೊಬ್ಬರ ಗೊರಕೆಯಿಂದ ಮತ್ತೊಬ್ಬರಿಗೆ ನಿದ್ದೆ ಬರಲಿಲ್ಲವೆಂದು ತಿಳಿಯಿತು. ನನ್ನ ಸ್ನೇಹಿತೆಗಂತೂ ತನ್ನ ಗೊರಕೆಯಿಂದ ಅವರ ನಿದ್ರೆಗೆ ಭಂಗ ಬಂದಿತಲ್ಲಾ ಎಂದು ಬೇಸರವಾಯಿತು. ಮತ್ತೊಂದು ಬಾರಿ ನನ್ನ ಪಕ್ಕದಲ್ಲಿ ಮಲಗಿದ್ದ ಗೆಳತಿಯನ್ನು ನನ್ನ ಗೊರಕೆಯಿಂದ ತೊಂದರೆಯಾಯಿತೇ? ಎಂದು ಕೇಳಿದಾಗ, ನಿಮ್ಮ ಗೊರಕೆ '..............' ಆಗಿತ್ತು ಎಂದರು. ಎಂತಹ ಸೌಜನ್ಯ! ಹೀಗೆ ಸಾಮಾನ್ಯವಾಗಿ ನಿದ್ದೆ ಮಾಡುವವರು ಗೊರಕೆ ಹೊಡೆದಾಗ ಒಬ್ಬಿಬ್ಬರಿಗೆ ತೊಂದರೆಯಾಗುತ್ತದೆ. ಬಿಂದಾಸ್ ನಿದ್ದೆ ಮಾಡುವವರು ಗೊರಕೆ ಹೊಡೆದರೆ ಸಾಕಷ್ಟು ಜನರಿಗೆ ಫಜೀತಿಯಾಗುತ್ತದೆ.

ದೊಡ್ಡ ಸಭೆ, ಸಂಗೀತ ಕಛೇರಿಗಳಲ್ಲಿ ಕೆಲವರು ಬಿಂದಾಸ್ ನಿದ್ದೆಗೆ ಶರಣಾಗುತ್ತಾರೆ. ಸಾಹಿತ್ಯ ಸಮ್ಮೇಳನವೊಂದರಲ್ಲಿ ನಿದ್ರಿಸುತ್ತಾ ಕುಳಿತಿದ್ದ ಶ್ರೋತೃಗಳ(?) ಚಿತ್ರ ವಾರ್ತಾಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಹಲವು ರಾಜಕಾರಣಿಗಳು ಸಾರ್ವಜನಿಕ ಸಭೆಗಳಲ್ಲಿ, ವಿಧಾನ ಸಭೆಯಲ್ಲಿ ನಿದ್ದೆ ಮಾಡುವುದು ಎಲ್ಲರಿಗೂ ತಿಳಿದ ವಿಷಯ. ಅವರನ್ನು ನಿದ್ರಾ ರಾಜಕಾರಣಿಗಳು ಎಂದೇ ಕರೆಯಬಹುದು. ಹೀಗೆ ಸಭೆಗಳಲ್ಲಿ ಬಿಂದಾಽಽಽಸ್ ನಿದ್ರೆ ಮಾಡುವವರಿಗೆ ಸಭಾಕಂಪನವಿಲ್ಲ, ಇವರ ನಿದ್ರೆಯನ್ನು ನೋಡಿ ಸಭೆಯೇ ಕಂಪಿಸಬೇಕು. ಅಷ್ಟೆ



ಮನೆಯಲ್ಲಿ ಬಿಂದಾಸ್ ನಿದ್ದೆಗೆ ಅವಕಾಶವಿಲ್ಲವೆ? ಖಂಡಿತ ಇದೆ. ದೀಪಾವಳಿ, ಯುಗಾದಿ ಇತ್ಯಾದಿ ಹಬ್ಬಗಳಲ್ಲಿ ಬೆಳಗ್ಗೆ ಬೇಗ(?) ಎದ್ದು ತೈಲಾಭ್ಯಂಜನ ಮಾಡಿಕೊಂಡು, ಪೂಜಾ ವಿಧಿಗಳನ್ನು ಮುಗಿಸಿ, ಗಡದ್ದಾಗಿ ತಿಂಡಿ ತಿಂದರೆಂದರೆ ಗಂಡಸರ ಅರ್ಧ ದಿನದ ಕಾರ್ಯಕ್ರಮ ಮುಗಿದಂತೆಯೇ. ಟಿವಿಯಲ್ಲಿ ಬರುವ ವಿಶೇಷ ಕಾರ್ಯಕ್ರಮ ನೋಡುತ್ತಾ ಅಂದಿನ ವಾರ್ತಾಪತ್ರಿಕೆಯನ್ನು ಹಿಡಿದು ಕುಳಿತರೆ ಬಿಂದಾಸ್ ನಿದ್ದೆಗೆ ಆಹ್ವಾನವಿತ್ತಂತೆ. ಸ್ವಲ್ಪ ಸಮಯದ ನಂತರ ಪೇಪರ್ ಮುಖದ ಮೇಲೆಳೆದುಕೊಂಡು ಕನಸು ಕಾಣುವ ಗಂಡುಗಲಿಗಳಿಗೆ ಎಚ್ಚರವಾಗುವುದು ಹೆಂಗಸರು ಅಡುಗೆ ಮನೆಯಿಂದ ಬೊಬ್ಬರಿಸಿದಾಗಲೇ.

ಹಲವರು ಮನೆಯಲ್ಲಿ ನಿದ್ದೆ ಮಾಡುವುದಕ್ಕಿಂತ ಆರಾಮವಾಗಿ ರೈಲು ಡಬ್ಬಿಗಳಲ್ಲಿ, ಬಸ್ಸು ಪ್ರಯಾಣದಲ್ಲಿ ನಿದ್ದೆ ಮಾಡುತ್ತಾರೆ. ಸಹಪ್ರಯಾಣಿಕರಿಗೆ ತೊಂದರೆಯಾಗಬಹುದೆಂಬ ಕಿಂಚಿತ್ ಯೋಚನೆಯೂ ಇಲ್ಲದೆ ಅವರ ಮೈಮೇಲೆ ಬಿದ್ದು ಅವರ ಸಂಯಮವನ್ನು ಪರೀಕ್ಷೆ ಮಾಡುತ್ತಾರೆ ಈ ಭೂಪರು. ಕಛೇರಿ ಬಸ್‌ಗಳಲ್ಲಿ ಸಾಯಂಕಾಲ ಮರಳಿ ಮನೆ ಬರುವಾಗ ಹೀಗೆ ನಿದ್ದೆ ಮಾಡುವುದು ಹಲವರ ಅಭ್ಯಾಸ. ಹೇಗೂ ಖಾಸಗಿ ಬಸ್. ಟಿಕೆಟ್, ಪಿಕ್‌ಪಾಕೆಟ್ ಇತ್ಯಾದಿ ಯಾವ ಯೋಚನೆಯೂ ಇರುವುದಿಲ್ಲ. ಜೊತೆಗೆ ತಮ್ಮ ನಿಲ್ದಾಣ ಬಂದಾಗ ಅಕ್ಕಪಕ್ಕದವರು ಎಬ್ಬಿಸುತ್ತಾರೆ ಎಂಬ ಭರವಸೆ ಬೇರೆ. ಬೆಳಗಿನ ಜಾವದಲ್ಲಿಯೇ ಎದ್ದು ಮನೆಗೆಲಸ ಮುಗಿಸಿ. ಕಛೇರಿಯಲ್ಲಿ ದುಡಿದು ಆಯಾಸಗೊಂಡ ಮಹಿಳೆಯರು ಬಿಂದಾಸ್ ನಿದ್ದೆಗೆ ಜಾರಿದಾಗ. ಅವರಿಗೆ ತಾವೆಲ್ಲಿರುವುರೆಂಬ ಅರಿವು ಸಂಪೂರ್ಣವಾಗಿ ಮರೆಯಾಗುತ್ತದೆ. ಅವರ ಸೆರಗು(ಈಗ ಹೆಚ್ಚು ಮಹಿಳೆಯರಿಗೆ ಈ ಸಮಸ್ಯೆ ಇಲ್ಲ) ಜಾರಿದಾಗ ಪಕ್ಕದಲ್ಲಿ ಕುಳಿತವರು ಅವರನ್ನು ಎಬ್ಬಿಸುವುದು ಅನಿವಾರ್ಯ.

ಬಿಂದಾಸ್ ನಿದ್ದೆಗೆ ಶರಣಾಗುವವರಲ್ಲಿ ಗುಂಡು ಹಾಕಿ ಫುಟ್‌ಪಾತ್ ಮೇಲೆ ಸುಖವಾಗಿ ನಿದ್ದೆ ಮಾಡುವವರನ್ನೂ ಸೇರಿಸಬಹುದು. ಇವರು ರಸ್ತೆಯ ಗಲಾಟೆಯನ್ನೂ ಲೆಕ್ಕಿಸದೆ ನಿದ್ದೆ ಮಾಡುವುದನ್ನು ನೋಡಿದಾಗ ನಿದ್ರಾಹೀನತೆಯಿಂದ ಬಳಲುವವರು ಅಳಬೇಕು. ನಿದ್ದೆಗಾಗಿ ಪ್ರತಿನಿತ್ಯ ದುಡ್ಡು ತೆತ್ತು ಮಾತ್ರೆಗಳನ್ನು ಕೊಂಡು ನುಂಗುವವರು ಸಂಕಟಪಡಬೇಕು. ಕೆಲವರು ಗುಂಡು ಹಾಕದೆಯೂ ರಸ್ತೆ ಬದಿಯ ಕಲ್ಲು ಹಾಸಿನ ಮೇಲೆ ಮಲಗಿ ನಿದ್ರಿಸುತ್ತಾರೆ. ಈ ನಿದ್ರೆಗೆ ಅವರ ಆಯಾಸ, ನಿರಾತಂಕಗಳೇ ಕಾರಣ, ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ರೆ ಎಂಬ ಗಾದೆ ಮಾತೇ ಇದೆಯಲ್ಲ.

ಹಲವಾರು ಖಾಯಿಲೆಗಳನ್ನು ಗುಣಪಡಿಸಿ ಆರೋಗ್ಯ ಸುಧಾರಿಸಲು ಇತ್ತೀಚಿಗೆ ಯೋಗ ಶಿಬಿರಗಳನ್ನು ನಡೆಸುವುದು ಸಾಮಾನ್ಯ. ಶಿಬಿರಾರ್ಥಿಗಳು ಬೆಳಗಿನ ಜಾವದ ಸಕ್ಕರೆ ನಿದ್ದೆಗೆ ಮೋಸ ಮಾಡಿ, ಕೊರೆಯುವ ಚುಮುಚುಮು ಚಳಿಯಲ್ಲಿ ನಾಲ್ಕು ಘಂಟೆಯಿಂದ ಎದ್ದು, ಯೋಗಾಸನ, ಪ್ರಾಣಾಯಾಮ, ಪ್ರಾರ್ಥನೆ ಇತ್ಯಾದಿಗಳನ್ನು ಮಾಡುತ್ತಾರೆ. ಉಪಾಹಾರದ ನಂತರದ ಉಪನ್ಯಾಸದ ಸಮಯದಲ್ಲಿ ಅವರು ಆಶ್ರಯ ಪಡೆಯುವುದು ಬಿಂದಾಸ್ ನಿದ್ದೆಯ ನೆರಳಿನಲ್ಲಿ, ಇದನ್ನು ಯೋಗನಿದ್ದೆ ಎನ್ನಬಹುದೇ?



ನಿದ್ದೆ ಮಾಡುವವರು ಕಣ್ಣು ಮುಚ್ಚಿರುತ್ತಾರೆ ಎಂದೂ ಹೇಳಲಾಗುವುದಿಲ್ಲ. ಮನುಷ್ಯರು ಸಾಮಾನ್ಯವಾಗಿ ಕಣ್ಣು ಮುಚ್ಚಿಕೊಂಡು ನಿದ್ದೆ ಮಾಡುತ್ತಾರೆ; ನಿಜ. ಆದರೆ ಪ್ರಾಣಿಗಳು, ಹಸುಗಳು, ಶಾರ್ಕ್ ಮೀನು, ಕೆಲವು ಬಗೆಯ ಹಾವುಗಳು ಹಾಗೂ ಮೊಲಗಳು ಕಣ್ಣು ಮುಚ್ಚದೆಯೇ ನಿದ್ದೆ

ಮಾಡುತ್ತವಂತೆ. ಆದರೆ ಮನುಷ್ಯರು ಕಣ್ಣು ಬಿಟ್ಟುಕೊಂಡು ನಿದ್ದೆ ಮಾಡಿದರೆ ಮಾತ್ರ ಅಪಾಯ. ಏಕೆಂದರೆ ಅದು ಅನಾರೋಗ್ಯದ ಸಂಕೇತ. ಇಂತಹ ರೋಗದವರು ಎಚ್ಚರವಿರಲಿ, ನಿದ್ದೆ ಇರಲಿ ಕಣ್ಣು ರೆಪ್ಪೆಗಳನ್ನು ಒಂದು ಮಾಡಲಾರರು. ರೆಪ್ಪೆ ಬಡಿಯದೆ, ಕಣ್ಣೊಳಗಿನ ಗ್ರಂಥಿಗಳು ದ್ರವಗಳನ್ನು ಒಸರುವುದಿಲ್ಲ, ಕಣ್ಣಿನ ತೇವಾಂಶ ಒಣಗಿ ತೊಂದರೆಯಾಗುತ್ತದೆ. ರೆಪ್ಪೆ ಮುಚ್ಚಲಾಗದಕ್ಕೆ – ನರಗಳ ದೌರ್ಬಲ್ಯ, ಥೈರಾಯ್ಡ್, ಮಾದಕ ದ್ರವ್ಯ ಸೇವನೆ – ಹೀಗೆ ಹಲವಾರು ಕಾರಣಗಳಿರುತ್ತವೆ. ಇಂತಹವರು ಕಣ್ಣಿಗೆ ಔಷಧ ಹಾಕಿಕೊಂಡೋ, ಮುಸುಕು ಹಾಕಿಕೊಂಡೋ, ಕೊನೆಗೆ ಬಲವಂತವಾಗಿ ರೆಪ್ಪೆ ಮುಚ್ಚಿ ಟೇಪ್ ಹಾಕಿಕೊಂಡೋ ಮಲಗುವ ಅನಿವಾರ್ಯತೆಯೂ ಇರುತ್ತದಂತೆ! ಕಣ್ಣುರೆಪ್ಪೆ ಬಡಿಯುವ ಒಂದು ಸಾಮಾನ್ಯ ಕ್ರಿಯೆಯಲ್ಲಿ ಸೃಷ್ಟಿಕರ್ತ ಎಷ್ಟೊಂದು ಕಾರ್ಯಗಳನ್ನು ಅಡಗಿಸಿದ್ದಾನೆ! ಇಂತಹವರು ಬಿಂದಾಸ್ ನಿದ್ದೆ ಮಾಡುವವರನ್ನು ನೋಡಿ ಅದೆಷ್ಟು ಅಸೂಯೆ ಪಡುತ್ತಾರೋ?

ಎಳೆಯ ಕಂದಮ್ಮಗಳು ಬಿಂದಾಸ್ ನಿದ್ದೆ ಮಾಡುತ್ತವೆಯೇ? ಮನೆಯ ತಾರಸಿಗೆ ಕಾಂಕ್ರೀಟ್ ಹಾಕಲು ಬರುವ ದುಡಿಮೆಯ ಹೆಂಗಸರು ತಮ್ಮ ಎಳೆಯ ಕಂದಮ್ಮಗಳನ್ನು ಮರದ ನೆರಳಿನಲ್ಲಿ ಮಲಗಿಸಿ ಕೆಲಸದಲ್ಲಿ ತೊಡಗುತ್ತಾರೆ. ಕಾಂಕ್ರೀಟ್ ಯಂತ್ರದ ಕರ್ಕಶ ಶಬ್ದದ ನಡುವೆಯೇ ಆ ಮಗು ಸುಖವಾಗಿ ನಿದ್ರಿಸುತ್ತದೆ. ನೆತ್ತಿಗೆ ಎಣ್ಣೆ ನೀರು, ಕಣ್ಣಿಗೆ ಕಾಡಿಗೆ ಯಾವುದನ್ನೂ ಕಾಣದ ಈ ಕಂದಮ್ಮಗಳು ಹುಟ್ಟಿನಿಂದಲೇ ಕಷ್ಟ ಜೀವನಕ್ಕೆ ತಯಾರಿ ನಡೆಸುತ್ತವೆ. ಇವನ್ನು ಬಿಂದಾಸ್ ಎನ್ನಬಹುದೋ ಬೇಡವೋ?

ಒಂದೂರಿನಲ್ಲಿ ಏಳು ಮಲ್ಲಿಗೆ ತೂಕದ ರಾಜಕುಮಾರಿ ಇದ್ದಳಂತೆ. ಸುಕುಮಾರಿಯ ಏಳು ಸುಪ್ಪತ್ತಿಗೆಯ ಹಾಸಿಗೆಯ ಕೆಳಗೆ ಮಲ್ಲಿಗೆ ಹೂವಿನ ಒಂದು ದಳ ಸೇರಿಕೊಂಡಿದ್ದರಿಂದ ಅವಳಿಗೆ ರಾತ್ರಿಯೆಲ್ಲಾ ನಿದ್ದೆಯೇ ಬರಲಿಲ್ಲವಂತೆ! ಇದು ಅಪ್ಪಟ ಸುಕೋಮಲ ನಿದ್ದೆ. ಮಂದಿರಗಳಲ್ಲಿ ದೇವರನ್ನು ನಿದ್ರಾ ದೇವಿಯ ವಶಕ್ಕೆ ಒಪ್ಪಿಸುವಾಗ ಚಂದನ ಅಗರುಬತ್ತಿಗಳ ಸುವಾಸನಾ ಭರಿತವಾದ ಪರಿಸರದಲ್ಲಿ, ಸುಗಂಧ ಪುಷ್ಪಗಳಿಂದ ಸಜ್ಜುಗೊಳಿಸಿದ ಹಾಸಿಗೆಯ ಮೇಲೆ ಮಲಗಿಸಿ, ಲಾಲಿ ಹಾಡಿ ಮಲಗಿಸುತ್ತೇವೆ. ಆದರೆ ಕಮಲ ಹಾಸನ್ ಪುಷ್ಪಕ್ ಚಲನಚಿತ್ರದಲ್ಲಿ ಪಂಚತಾರಾ ಹೋಟೆಲಿನ ಪ್ರಶಾಂತ ವಾತಾವರಣದಲ್ಲಿ ನಿದ್ದೆ ಮಾಡಲಾರದೆ ಪಟ್ಟ ಪಾಡನ್ನು ನೆನಪು ಮಾಡಿಕೊಳ್ಳಿ. ಸುಖವಾದ ವಾತಾವರಣಕ್ಕಿಂತ ಅಭ್ಯಾಸ ಬಲವೇ ಮುಖ್ಯ. ಆಯಾಸವಾದಾಗ, ನಿದ್ರಾದೇವಿ ಝೂಡಿಸಿ ಒದ್ದಾಗ ಹಾಸಿಗೆ, ಹೊದ್ದಿಕೆ, ದಿಂಬು, ಇಂಬು ಎಲ್ಲವೂ ಗೌಣ. ನಿಂತಲ್ಲಿ, ಕೂತಲ್ಲಿ ಕಣ್ಣುಮುಚ್ಚಿದರೆ ಆಯಿತು. ಎಲ್ಲವೂ – ಬಿಂದಾಸ್ ನಿದ್ದೆಗೆ – ಸಮರ್ಪಣ.



**ಕೆಲಸ**

ಕಛೇರಿಯ ಕೆಲಸದಲ್ಲಿ
ಹತ್ತು ಹಲವಾರು ಬಾಸ್‌ಗಳ ಜೊತೆ
ಕೆಲಸ
ಸಂಸಾರದಲ್ಲಿ
ಒಂದೇ ಬಾಸ್ ಜೊತೆ
ಹತ್ತು ಹಲವಾರು ಕೆಲಸ

– ಸುಕೇಶವ

# ನಾಡಿಗೇರ ಗೋವಿಂದರಾಯರ ಹಾಸ್ಯ ಚಟಾಕಿಗಳು

**- ಎಸ್.ಎನ್. ಸುಬ್ಬರಾವ್**

ನಾಡಿಗೇರ ಕೃಷ್ಣರಾಯರೆಂದರೆ, ಪ್ರಸಿದ್ಧ ಹಾಸ್ಯ ಸಾಹಿತಿ, ಒಳ್ಳೆಯ ಮಾತುಗಾರ, ನಗು ಉಕ್ಕಿಸುವವರು ಎಂಬುದು ಹಾಸ್ಯ ಪ್ರಿಯರೆಲ್ಲರಿಗೂ ತಿಳಿದಿರುವ ವಿಷಯವೇ ಹೌದು.

ಆದರೆ, ಅವರ ಕಿರಿಯ ತಮ್ಮ ನಾಡಿಗೇರ ಗೋವಿಂದರಾವ್‌ರವರು ಹಾಸ್ಯ ಪ್ರವೃತ್ತಿಯುಳ್ಳವರಾಗಿದ್ದರೆಂಬುದು ಎಷ್ಟೋ ಹಾಸ್ಯ ಪ್ರಿಯರಿಗೆ ಗೊತ್ತಿರಲಿಕ್ಕಿಲ್ಲ. ನಾಡಿಗೇರ ಗೋವಿಂದರಾಯರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಎಮ್.ಎ. ಪದವಿ ಮುಗಿಸಿ, ಮುಂಬೈ ಆಕಾಶವಾಣಿಯಲ್ಲಿ ಸಾಕ್ಷ್ಯಚಿತ್ರಗಳ ವಿಭಾಗದಲ್ಲಿ ಕೆಲಸಮಾಡಿ ನಿರ್ದೇಶಕರಾಗಿ ನಿವೃತ್ತರಾದರು.

ಇವರು ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಹಳೆಗನ್ನಡ ಪದ್ಯದಲ್ಲಿ ''ಯಂತೊಡೆ ಇಂತೆಂದನ್'' ಅಂತ ಅವರ ಕನ್ನಡ ಪ್ರಾಧ್ಯಾಪಕರು ಪದ್ಯದಿಂದ ಓದಿದಾಗ ಶ್ರೀ ಗೋವಿಂದರಾಯರ ವ್ಯಾಖ್ಯಾನ ಈ ರೀತಿ ಇತ್ತಂತೆ. ''ಎಂತ ಒಡೆ ಇಂತು ತಿಂದನ್, ಇಂತು ಎಂತ ಒಡೆ ತಿಂದನ್, ಇಂತ ಒಡೆ ಎಷ್ಟು ತಿಂದನ್, ಹ್ಯಾಗೆ ತಿಂದನ್.''

ಇವರು ಶಾಲೆಯಲ್ಲಿ ಓದುತ್ತಿದ್ದಾಗಲೂ ಕೂಡ ಇಂತಹ ಹಾಸ್ಯಚಟಾಕಿಗಳು ತುಂಬಿರುತ್ತಿದ್ದವಂತೆ. ಒಮ್ಮೆ ತರಗತಿಯಲ್ಲಿ ಉಪಾಧ್ಯಾಯರು ಪಾಠ ಮಾಡುತ್ತಿದ್ದಾಗ ಇವರು ಪಕ್ಕದ ವಿದ್ಯಾರ್ಥಿಯೊಂದಿಗೆ ಹರಟೆ ಹೊಡೆಯುತ್ತಿದ್ದರಂತೆ. ಆಗ ಉಪಾಧ್ಯಾಯರು ಕೋಪಗೊಂಡು ಆಂಗ್ಲ ಭಾಷೆಯಲ್ಲಿ "you Govinda Rao, Stand up on the bench" ಅಂತ ಶಿಕ್ಷೆ ಕೊಟ್ಟರಂತೆ. ತಕ್ಷಣ ಗೋವಿಂದರಾಯರು ಬೆಂಚಿನ ಮೇಲೆ ಹತ್ತಿ ನಿಂತು Thank you Sir, Higher we go, Cooler we feel" ಎಂದರಂತೆ. ಆಗ ತರಗತಿಯಲ್ಲಿದ್ದ ವಿದ್ಯಾರ್ಥಿಗಳೆಲ್ಲಾ ನಗತೊಡಗಿದರಂತೆ. ಉಪಾಧ್ಯಾಯರೂ ಕೂಡ ನಕ್ಕು ಕೂತ್ಕೋಳ್ರೀ ಗೋವಿಂದರಾವ್ ಎಂದರಂತೆ.

ನಾಡಿಗೇರ ಗೋವಿಂದರಾಯರ ಸಹೋದರರಲ್ಲಿ ಎಲ್ಲರೂ ಸಾಕಷ್ಟು ಎತ್ತರ ಇದ್ದರು. ಆದರೆ ಗೋವಿಂದರಾಯರು ಮಾತ್ರ ಕುಳ್ಳಾಗಿಯೇ ಇದ್ದರು. ಬಹುಷಃ ನಾಕುವರೆ ಅಥವಾ ನಾಕು ಮುಕ್ಕಾಲು ಅಡಿ ಇರಬಹುದು. ಆದರೆ, ಇವರ ಶ್ರೀಮತಿ ಸುಲೋಚನಾರವರು ಸಾಕಷ್ಟು ಎತ್ತರವಾಗಿಯೇ ಇದ್ದರು. ಒಮ್ಮೆ ಗಂಡ ಹೆಂಡತಿ ಮುಂಬೈನಿಂದ ಬೆಂಗಳೂರಿಗೆ ಬಂದಿದ್ದಾಗ ಒಂದು ಸೀರೆ ಅಂಗಡಿಗೆ ಹೋಗಿದ್ದರಂತೆ. ಶ್ರೀಮತಿ ಸುಲೋಚನಾರವರಿಗೆ ರೇಷ್ಮೇ ಸೀರೆ ಬೇಕಾಗಿತ್ತಂತೆ. ಸರಿ ಎಲ್ಲ ಹೆಂಗಸರೂ ಮಾಡುವಂತೆ ಸೀರೆಗಳ ಮೇಲೆ ಸೀರೆಗಳನ್ನು ತರಿಸಿ ಒಂದಕ್ಕೆ ಬಾರ್ಡರ್ ಚೆನ್ನಾಗಿಲ್ಲ, ಇನ್ನೊಂದಕ್ಕೆ ಬಣ್ಣ ಸರಿ ಇಲ್ಲ, ಮತ್ತೊಂದಕ್ಕೆ ಸೆರಗು ಸರಿ ಇಲ್ಲ ಎಂದು ತಳ್ಳಿ ಹಾಕುತ್ತಲೇ ಇದ್ದರಂತೆ. ಸೀರೆಗಳ ಗುಡ್ಡೆಯೇ ಏರುತ್ತಿತ್ತು. ಆಗ ಸೀರೆಗಳನ್ನು ತೋರಿಸುತ್ತಿದ್ದ ಅಂಗಡಿಯ ಹುಡುಗ ಒಂದು ಸೀರೆಯನ್ನು ಸುಲೋಚನಾರವರಿಗೆ ತೋರಿಸಿ ''ನೋಡಿ ಮೇಡಮ್, ಈ ಸೀರೆ ನಿಮಗೆ ತುಂಬಾ ಚೆನ್ನಾಗಿ



ಒಪ್ಪತ್ತೆ, ನೀವು ಇದನ್ನ ಮನೆಗೆ ತೊಗೊಂಡು ಹೋಗಿ ನಿಮ್ಮೆಜಮಾನ್ರಿಗೆ ತೊರ್‍ಸಿ, ಅವ್ರಿಗೂ ಇಷ್ಟಾ ಆಗ್ಲಿಲ್ಲಾಂದ್ರೆ ನಿಮ್ಮ ಜೊತೆ ಬಂದಿದಾನಲ್ಲಾ ಈ ಹುಡುಗನ ಕೈಲಿ ವಾಪಸ್ ಕಳಿಸಿ ಅಂದನಂತೆ.'' ಅಂದಿನಿಂದ ಹೆಂಡತಿ ಜೊತೆ ಸೀರೆ ಅಂಗಡಿಗೆ ಹೋಗಲಿಲ್ಲವಂತೆ. ಗೋವಿಂದರಾಯರು ''ಕುಳ್ಳನಾಗುವುದೊಳಿತು'' ಎಂಬ ಹಾಸ್ಯ ಪುಸ್ತಕವನ್ನು ಕೂಡ ಬರೆದಿದ್ದಾರೆ. ಮೈಸೂರಿನಲ್ಲಿ ಓದುವಾಗ ಅವರ ಸೋದರತ್ತೆಯ ಮನೆಯಲ್ಲಿ ಇದ್ದು ಓದುತ್ತಿದ್ದರಂತೆ. ಅವರಿದ್ದ ಮನೆ ಹಂಚಿನಮನೆ. ಮಳೆ ಬಂದಾಗಲೆಲ್ಲಾ ಸೋರುತ್ತಿತ್ತು. ಇವರು ಕುಳ್ಳರಾಗಿದ್ದರಿಂದ ಟೇಬಲ್ ಕೆಳಗಡೆ ಕೂತು ಓದುತ್ತಾ, ಏನೂ ಪರವಾಗಿಲ್ಲಾ, ಮನೆ ಸೋರ್ತಾ ಇಲ್ಲಾ'' ಎಂದು ಹಾಸ್ಯ ಮಾಡುತ್ತಿದ್ದರಂತೆ.

ಮೈಸೂರಿನ ಪರ್ಕಾಲ ಮಠದಲ್ಲಿ ಚಾತುರ್ಮಾಸ್ಯ ಕಾಲದಲ್ಲಿ ಚಿಕ್ಕ ಹುಡುಗರಿಗೆ ಮೂರು ಕಾಸು ದಕ್ಷಿಣೆ ಕೊಡುತ್ತಿದ್ದರಂತೆ. ಪರ್ಕಾಲಸ್ವಾಮಿ ಮಠ ಮಹಾರಾಜಾ ಕಾಲೇಜಿನ ಎದುರಿಗೆ ಇತ್ತಂತೆ. ಇವರು ಕಾಲೇಜಿಗೆ ಹೋಗುವಾಗ ಹುಡುಗರ ಸಾಲಿನಲ್ಲಿ ನಿಂತು ಮೂರು ಕಾಸಿನ ದಕ್ಷಿಣೆಯನ್ನ ಪಡಕೋತಿದ್ದರಂತೆ. ಇವರು ಕಾಮತ್ ಹೋಟೆಲ್‌ಗೆ ಕೊಡುತ್ತಿದ್ದ ವ್ಯಾಖ್ಯಾನ ಹೀಗಿತ್ತು. ಕಾ ಎಂದರೆ ತಿನ್ನು ಮತ್ ಎಂದರೆ ಬೇಡ ಕಾಮತ್ ಎಂದರೆ ತಿನ್ನಬೇಡ ಅಂದರೆ ಸ್ವಲ್ಪ ತಿಂದು ಜಾಸ್ತಿ ದುಡ್ಡು ಕೊಡುವುದು ದುಡ್ಡು ಹೋಯಿತೇಳು. ಕಾಲೇಜಿಗೆ ಇವರ ವ್ಯಾಖ್ಯಾನ ಕಾಲ+ಈಜು = ಕಾಲೇಜ್, ಅಂದರೆ ನಮಗೆ ಗೊತ್ತಿಲ್ಲದೆಯೇ ಕಾಲ ಹೋಗಿ ಪರೀಕ್ಷೆ ಬಂದಿದ್ದೇ ಗೊತ್ತಾಗದೆ ಏನೂ ಓದದೆ ತಯಾರಾಗದೆ ಪರೀಕ್ಷೆ ಸಮಯದಲ್ಲಿ ಕಣ್ ಕಣ್ ಬಿಡೋದು.

ಹರಿಹರದಲ್ಲಿ ಹುಟ್ಟಿ ಮೈಸೂರಿನಲ್ಲಿ ಓದಿ ಎಮ್.ಎ. ಪದವಿ ಪಡೆದು ಮುಂಬೈನಲ್ಲಿ ನೌಕರಿ ಮಾಡಿ ನಿವೃತ್ತರಾದ ಮೇಲೆ ಮತ್ತೆ ಮೈಸೂರಿಗೆ ವಾಪಸ್ ಬಂದು ದೈವಾಧೀನರಾದ ನಾಡಿಗೇರ ಗೋವಿಂದರಾಯರು ಕೆಲವರಿಗಷ್ಟೇ ಹಾಸ್ಯ ಸಾಹಿತಿಯಾಗಿ ಪರಿಚಿತರಾಗಿದ್ದರು.

---

## ಚಿಂತೆ

ಬ್ರಹ್ಮಚಾರಿಗೆ
ಒಂದೇ ಚಿಂತೆ
ಯಾಕಾದರೂ ಮದುವೆಯಾಗಲಿಲ್ಲ
ಗೃಹಸ್ಥನಿಗೆ ಒಂದೇ ಚಿಂತೆ
ಯಾಕಾದರೂ ಮದುವೆಯಿಂದ
ತಪ್ಪಿಸಿಕೊಳ್ಳಲಾಗಲಿಲ್ಲ

– ಸುಕೇಶವ



# ಬರೆದೆ ನೀನು ನಿನ್ನ ಹೆಸರ....

**- ಕೃಷ್ಣ ಸುಬ್ಬರಾವ್**

**ಎ**ಲ್ಲ ಕಡೆಯೂ ಡೈರಿಗಳ ಮಾತೇ (ಮದರ್ ಡೈರಿಯೆಂದು ಭಾವಿಸಬೇಕಾಗಿಲ್ಲ) ಕೇಳಿಸುತ್ತಿರುವಾಗ ನನಗೆ ಯುವಜನಾಂಗವನ್ನೆಲ್ಲ ಕಾಡುತ್ತಿದ್ದ ಸುಪ್ರಸಿದ್ಧ ಹಾಡು ನೆನಪಾಯಿತು. ''ಬರೆದೆ ನೀನು ನಿನ್ನ ಹೆಸರ ನನ್ನ ಬಾಳಪುಟದಲಿ'' ಎಷ್ಟು ನಿಜ. ನಮ್ಮ ಖಾಲಿಪುಟಗಳನ್ನು ತಿರುಗಿಸಿದಾಗ ಅದೆಷ್ಟು ವ್ಯಕ್ತಿಗಳು, ಘಟನೆಗಳು ನಮ್ಮ ಮುಂದೆ ಕಾಣಿಸಿಕೊಳ್ಳುವುದಿಲ್ಲ?

**ಡೈರಿ ಮೂಲಕವೂ ತನಗಾಗದವರಿಗೆ ಶಿಕ್ಷೆ ಕೊಡಬಹುದು ಎಂದು ಮಕ್ಕಳೇ ದೊಡ್ಡವರಿಗೆ ತಿಳಿಸಿಕೊಡುತ್ತಾರೆ**

ಡೈರಿಗೆ ನಾವು ಒಂದು ಉತ್ತಮವಾದ ಹಾಗೂ ಎತ್ತರದ ಸ್ಥಾನಕೊಟ್ಟು ಬೆಳೆದಿದ್ದೇವೆ. ಈಗ ರಾಜಕಾರಣಿಗಳಿಂದಾಗಿ ಅದರ ಘನತೆಗೆ ಧಕ್ಕೆ ಬಂದಿದೆ. ಬೇರೆಯವರ ಡೈರಿ ನೋಡುವುದು ತಪ್ಪು ಎಂದು ನಮ್ಮ ಹಿರಿಯರು ನಮಗೆ ತಿಳಿಸಿದ್ದಾರೆ. ಆದರೆ ಈಗ ಓದುವುದಿರಲಿ ಬೇರೆಯವರ ಡೈರಿಯಲ್ಲಿ ಬರೆಯುವುದು ಚಾಲ್ತಿಯಲ್ಲಿದೆ ಎನ್ನುವ ಮಾತು ಕೇಳಿ ಬರುತ್ತಿದೆ. ಅದೆಲ್ಲ ಬಿಡಿ ನಾವು ಹೇಳಹೊರಟಿರುವ ವಿಷಯ ಯಾವ ರಾಜಕಾರಣಿಯ ಕಥೆಯೂ ಅಲ್ಲ, ಡೈರಿ ಗೋವಿಂದನ ಆತ್ಮಚರಿತ್ರೆಯೂ ಅಲ್ಲ, ಜನಸಾಮಾನ್ಯರ ಡೈರಿ ವಿಚಾರ.

ಬೇರೆಯವರ ಡೈರಿ ಓದಬಾರದೆಂದು ಹೇಳುತ್ತಿದ್ದವರು ನಮ್ಮ ಉಪಾಧ್ಯಾಯರು, ಆದರೆ ಅವರೇ ಬಲವಂತಮಾಡಿ ನಾವೆಲ್ಲ 'ಆನಿಫ್ರಾಕ್‌ಳ ಡೈರಿ' ಓದಿಸಿದರು. ಹದಿಹರಿಯದ ಹುಡುಗಿಯೊಬ್ಬಳು ವಿಶ್ವಮಹಾಯುದ್ಧದ ಬಗ್ಗೆ ಬರೆದ ದಿನಚರಿ ಇಂದಿಗೂ ಮಕ್ಕಳಿಗೆ ನಾವು ಕೊಡಬೇಕಾದ ಉತ್ತಮ ಉಡುಗೊರೆ.

ನಮ್ಮಪ್ಪ ತಪ್ಪದೇ ಬರೆಯುತ್ತಿದ್ದ ಡೈರಿಯನ್ನು ಚಿಕ್ಕವಯಸ್ಸಿನಲ್ಲಿ ನಾನು ನೋಡುತ್ತಿದ್ದೆ. ಕದ್ದು ನೋಡುತ್ತಿರಲಿಲ್ಲ ಏಕೆಂದರೆ ಅದೊಂದು ತೆರೆದ ಪುಸ್ತಕವಾಗಿತ್ತು. ಅಡ್ವೊಕೇಟ್ ಆಗಿದ್ದ ನಮ್ಮಪ್ಪನಿಗೆ ಡೈರಿ ಒಂದು ಅನಿವಾರ್ಯ. ಯಾವ ಯಾವ ಕೇಸ್ ಯಾವ ಯಾವ ದಿನದಲ್ಲಿ ಎಂದು ಬರೆದುಕೊಳ್ಳಬೇಕಾಗಿತ್ತು. ಕೆಲಸಗಳನ್ನು ಮುಂದೂಡಬಾರದು ಎಂದು ನಮ್ಮಪ್ಪ ಬುದ್ಧಿವಾದ ಹೇಳಿದಾಗ ಒಮ್ಮೆ ನನ್ನಮ್ಮ ''ಅದರ ವಿಚಾರ ನೀವು ಹೇಳಬಾರದು, ಏಕೆಂದರೆ ನಿಮ್ಮ ಡೈರಿ ನೋಡಿದರೆ ಗೊತ್ತಗುತ್ತೆ ನೀವು ನ್ಯಾಯವಾದಿಗಳು, ಮುಂದೂಡುವುದರಲ್ಲಿ ಎಷ್ಟು ಪರಿಣಿತರು'' ಎಂದು ಹೇಳಿದ್ದು ನೆನಪಾಗುತ್ತದೆ.

ಬಟ್ಟೆಗಳನ್ನು ಉಬ್ಬೆಗೆ (ಈಗಿನವರು ಅಗಸನಿಗೆ ಎಂದು ಅರ್ಥೈಸಬಹುದು) ಕೊಟ್ಟಾಗ ಯಾವ ಯಾವ ಬಟ್ಟೆ ಯಾವ ದಿನಾಂಕ ಕೊಟ್ಟೆವು ಎಂದು ಬರೆದು ಕೊಡುತ್ತಿದ್ದರು. ಅದು ವಾಪಸ್ಸು ಬಂದಾಗ ಪಟ್ಟಿ ಪರಿಶೀಲಿಸಿ ಹಣ ಕೊಟ್ಟು ಕಳುಹಿಸುತ್ತಿದ್ದರು. ಅವರಿಲ್ಲದಿದ್ದರೆ



ನಾವ್ಯಾರಾದರೂ ಆ ಕೆಲಸ ಮಾಡಬೇಕಾಗಿತ್ತು. ಹಾಗಾಗಿ ಅಪ್ಪನ ಡೈರಿ ನೋಡುವ ಹಕ್ಕು ಮನೆಯವರಿಗೆಲ್ಲ ಇತ್ತು. ಇಂತಹ ಎಚ್ಚರಿಕೆ ಕ್ರಮವಿದ್ದಾಗಲೂ ನಾನೊಮ್ಮೆ ಎಡವಟ್ಟು ಮಾಡಿದ್ದೆ. ಡೈರಿಯಲ್ಲಿ ಬರೆದಂತೆ 2 ಜುಬ್ಬ, ನಾಲ್ಕು ಶರಟು, ಐದು ಪ್ಯಾಂಟು, ಒಂದು ಕೋಟು ಒಟ್ಟು ಹನ್ನೆರಡು ಬಟ್ಟೆ ಸರಿಯಾಗಿತ್ತು. ದುಡ್ಡು ಕೊಟ್ಟು ಕಳುಹಿಸಿದೆ ಆದರೆ ಅಪ್ಪ ಬಂದು ಬೈದರು ''ದಡ್ಡ ಮುಂಡೇದೆ, ಬರಿ ಲೆಕ್ಕಾಚಾರ ಸರಿಯಾಗಿದ್ದರೆ ಸಾಲದು, ಇದರಲ್ಲಿ ಯಾವ ಬಟ್ಟೆಯೂ ನನ್ನದಲ್ಲ. ನಿಮ್ಮಪ್ಪನ ಬಟ್ಟೆ ಗುರುತು ನಿನಗಿಲ್ವೆ? ನಂದೇನು ನಿನ್ನ ಬಟ್ಟೆನೆ ನಿನಗೆ ಗೊತ್ತಾಗೊಲ್ಲ, ಹಾಗ್ ಬೆಳೆಸಿದ್ದಾಳೆ ನಿಮ್ಮಮ್ಮ ಅಂತಾ ನಮ್ಮಮ್ಮನ್ನು ಸೇರಿಸಿ ಜಾಲಾಡಿದರು.

ಪುಟಾಣಿಗಳ ಸ್ಕೂಲಿನ ಡೈರಿ ಈಗ ಪ್ರತಿಮನೆಯಲ್ಲೂ ದೊಡ್ಡ ಸಮಸ್ಯೆ. ಆಗಾಗ್ಗೆ ಅದೆಲ್ಲೊ ಅಡಗಿ ಹೋಗಿರುತ್ತೆ. ಅದನ್ನು ಹುಡುಕಿ ತೆರೆದರೆ ಬೇರೊಂದು ಸಮಸ್ಯೆ ಮೊನ್ನೆ ನನ್ನ ಮೊಮ್ಮಗ ಜೋರಾಗಿ ಕಿರಿಚುತ್ತಿದ್ದ ''ಅಮ್ಮ ಅದು ಮ್ಯಾಮ್ ಬರೆದದ್ದಲ್ಲ. ಅಷ್ಟೊಂದು ಹೋಂವರ್ಕ್ ಅವರು ಕೊಡದೇ ಇಲ್ಲ. ಎಲ್ಲ ರಾಹುಲ್ ಬರೆದದ್ದು. ಬೇಕಾದರೆ ಚಂದನ್ ಅಮ್ಮನಿಗೆ ಫೋನ್ ಮಾಡು'' ಅಂದ.

''ಅಲ್ವೊ ಅವನ್ಯಾಕೆ ನಿನ್ನ ಡೈರಿಲಿ ಬರಿತಾನೆ'' ಅಂತ ಕೇಳಿದರೆ ''ಪಾಪ, ನಿನ್ನೆ ಸುರೇಶ ಟಾಯ್ಲೆಟ್‌ಗೆ ಹೋದಾಗ ಅವನ ಬ್ಯಾಗಿನಿಂದ ಪೆನ್ಸಿಲ್ ರಬ್ಬರ್ ಕದ್ದುಬಿಟ್ಟ. ನಾನು ಮ್ಯಾಮ್‌ಗೆ ಹೇಳಿಬಿಟ್ಟೆ ಅದಕ್ಕೆ ಹಾಗೇ ಮಾಡಿದ್ದಾನೆ'' ಎಂದ. ಓಹೊ ಇಂದಿನ ಪುಟಾಣಿಗಳೆ ಮುಂದಿನ ಪ್ರಜಾಪ್ರತಿನಿಧಿಗಳು ಅನ್ನಿಸಿತು. ಡೈರಿಯ ಮೂಲಕವೂ ತನಗಾಗದವರಿಗೆ ಶಿಕ್ಷೆ ಕೊಡಬಹುದು ಎಂದು ಈಗಿನ ಮಕ್ಕಳೇ ದೊಡ್ಡವರಿಗೆ ತಿಳಿಸಿಕೊಡ್ತಾರೆ. ಎಂಥಹ ಸೂಪರ್ ಕಿಡ್ಸ್!

ಡೈರಿ ಬರೆಯೋದು ಕೆಲವರಿಗೆ ಗೀಳು ಅನ್ನಿಸುತ್ತೆ. ನನ್ನ ಭಾವ ಬಹಳ ದೊಡ್ಡ ಆರ್ಥಿಕತಜ್ಞರು ಅಂತ ನಮ್ಮ ಮನೆಯವರೆಲ್ಲ ((ನನ್ನಕ್ಕ ಒಬ್ಬಳನ್ನು ಹೊರತುಪಡಿಸಿ) ನಂಬಿದ್ದಾರೆ, ಕೊಂಡಾಡಿದ್ದಾರೆ. ಅದಕ್ಕೆ ಕಾರಣ, ತಮಗೆ ಬರುತ್ತಿದ್ದ ಸಾಧಾರಣ ಸಂಬಳದಲ್ಲಿ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿ ಸಾಕಷ್ಟು ಉಳಿತಾಯ ಮಾಡಿದ್ದಕ್ಕಾಗಿ, ಮನೆಗೆ ಖರ್ಚು ಮಾಡಿದ ಪ್ರತಿಯೊಂದು ವಿವರಗಳು ಅವರ ಡೈರಿಯಲ್ಲಿ ಲಭ್ಯ. ಪ್ರತಿದಿನದ ಖರ್ಚುಗಳ ಪಟ್ಟಿ ಮಾಡಿ ಪ್ರತಿರಾತ್ರಿಯೂ ಸಂಸಾರದ ಬ್ಯಾಲನ್ಸ್‌ಶೀಟ ತಯಾರಿಸಿದ ಮೇಲೆ ನಿದ್ದೆ. ಜಿಪುಣತನವಿಲ್ಲದಿದ್ದರೂ ಪ್ರತಿಯೊಂದು ಖರ್ಚು ದಾಖಲಾಗಲೇಬೇಕು. ಹೀಗಾಗಿ ಸಂಸಾರ ನಡೆಸುವ ಸಂಪೂರ್ಣ ಹೊಣೆ ಅವರ ಮೇಲೆ! ನಮ್ಮಕ್ಕ ನಿರಾಳವಾಗಿದ್ದಳು. ಆದರೂ ಒಮ್ಮೆ ಡೈರಿಯಿಂದಾಗಿ ವಾದ ವಿವಾದ ನಡೆಯಿತು. ಕಪಾಟಿನ ಧೂಳು ಹೊಡೆಯುತ್ತಿದ್ದಾಗ ಹಳೇ ಡೈರಿಯೊಂದು ಕೆಳಗೆ ಬಿದ್ದು ನೋಡಲಾಗಿ ಐದು ಸಾವಿರ ರೂಪಾಯಿ ಸೀರೆ' ಎಂಬ ಬರಹ ನೋಡಿದಳು. ತನಗೆ ಅಷ್ಟು ಮೌಲ್ಯದ ಸೀರೆ ತಂದುಕೊಟ್ಟ ನೆನಪಿಲ್ಲದಿದ್ದರಿಂದ ಗಂಡ ಬಂದಮೇಲೆ ಅಲ್ಲಿದ್ದ 'ಎಂಟ್ರಿ' ಬಗ್ಗೆ ಕೇಳಿದಳು. ''ಥೂ ನಿನ್ನ ಇಷ್ಟು ವರ್ಷದ ಮೇಲೂ ನನ್ನ ಮೇಲೆ ಅನುಮಾನವೆ? ಅಲ್ವೆ ಈ ಡೈರಿ ಹತ್ತು ವರ್ಷ ಹಳೆಯದು. ನಿನ್ನ ತಂಗಿಗೆ ತಂದ ಸೀರೆಯ ಬೆಲೆಯಲ್ಲವೆ ಅವಳ ಮದ್ವೆಗೆ ಕೊಟ್ಟ ಸೀರೆ ಬೆಲೆಯಲ್ಲವೆ? ಪಕ್ಕದಲ್ಲಿ ಬ್ರಾಕೇಟ್‌ನಲ್ಲಿ ಹೆಸರು ಬರೆದಿಲ್ಲವೆ?''



''ಅದಕ್ಕೆ ಅನುಮಾನ, 'ರಾಧ' ಅಂತ ಇದೆ, ನಾವು ಅವಳನ್ನ ಕರೆಯೋದು 'ಅನು' ಅಲ್ವೆ''

''ಸರಿ ಕಣೆ ಆದರೆ ಕಣ್‌ಬಿಟ್ಟು ಸರಿಯಾಗಿ ನೋಡು ಮೊದಲೆರಡು ಅಕ್ಷರ 'ಅನು'

ಅನ್ನೋದರ ಮೇಲೆ ನೀನು ಚೆಲ್ಲಿದ ಕಾಫಿ ಕರೆ ಇನ್ನೂ ಕಾಣ್ತಾ ಇಲ್ವೆ? ಹೆಸರಿನಲ್ಲಿ 'ಅನು' ಮಾಯವಾಗಿ 'ರಾಧ' ಉಳಿದುಕೊಂಡಿದೆ ನನಗ್ಯಾವ ರಾಧ ಅನ್ನೋ ಗರ್ಲ್ ಫ್ರೆಂಡ್ ಇಲ್ಲ'' ಅಂದಾಗ ರಾದ್ಧಾಂತ ನಗೆಯಲ್ಲಿ ಮುಕ್ತಾಯವಾಯಿತಂತೆ. ಕೆಲಸವಿಲ್ಲದಿದ್ದಾಗ ಸುಮ್ಮನೆ ಕಸ ಹೊಡೆಯಬೇಡಿ ಅನ್ನೋದೆ ನೀತಿಕತೆ!

ರಾಮಾಯಣ ಕಾಲದಲ್ಲಿ ಡೈರಿ ಬರೆಯುವ ಅಭ್ಯಾಸವಿದ್ದರೆ ಭರತ ಖಂಡಿತ 14 ವರ್ಷಗಳ ಡೈರಿ ಬರೆದು ರಾಮನಿಗೆ ತೋರಿಸುತ್ತಿದ್ದ. ರಾಮಾಯಣ ಯಾವಾಗಲೂ ಪ್ರಸ್ತುತ. ಈಗಲೂ ನಮ್ಮ ತಮಿಳುನಾಡಿನಲ್ಲಿ ರಾಮರಾಜ್ಯವಿದೆ (ರಾಮರಾಜ್ ಬನಿಯನ್ ಮತ್ತು ಇತರ ಉಡುಪಿಗೆ ಮಾತ್ರ ಸೀಮಿತವಲ್ಲ) ಈಗಲೂ ಅಲ್ಲಿ ಪನ್ನೀರ್ ಸೆಲ್ವಂ, ಪಳನಿಸಾಮಿ ಅಂತಹ ಭರತರಿದ್ದಾರೆ. ಆಗ ರಾಮ ಕಾಡಿಗೆ ಹೋದ ಈಗ ರಾಜರಾಣಿಯರಿಗೆ ಕಾಡಿಗೆ ಹೋಗಲು ಕಾಡೇ ಇಲ್ಲ ಥ್ಯಾಂಕ್ಸ್ ಟು ವೀರಪ್ಪನ್! ಆದ್ದರಿಂದ ಅಮ್ಮ ಅಥವಾ ಚಿಕ್ಕಮ್ಮ (ಚಿನ್ನಮ್ಮ) ಕಾಡಿಗೆ ಬದಲು ಜೈಲಿಗೆ ಹೋಗುತ್ತಾರೆ. ಆಡಳಿತ ಚುಕ್ಕಾಣಿ ಹಿಡಿದ ಭರತರು ಆಡಳಿತವನ್ನು ನಡೆಸುವ ಬಗ್ಗೆ ಡೈರಿ ಬರೆದು ಅದರ ಪರಿಶೀಲನೆ ಹಾಗೂ ಮುಂದಿನ ಆದೇಶ ಬಗ್ಗೆ ಕೇಳಿಕೊಳ್ಳುತ್ತಾರೆ. ಒಂದು ಕೈಯಿಂದ ಇನ್ನೊಂದು ಕೈಗೆ ಹೋಗುವಾಗ ಹೇಗೊ ಏನೋ ಅವುಗಳು ಟಿ.ವಿ. ಚಾನೆಲ್‌ಗಳಿಗೆ ಸಿಗುತ್ತೆ. ಅವರು ಟಿ.ಆರ್.ಪಿ. ದೋಚುತ್ತಾರೆ.

ಸಧ್ಯ! ಸೃಷ್ಟಿಕರ್ತ ಡೈರಿ ಬರೆಯುವುದಿಲ್ಲ ಒಂದು ವೇಳೆ ಹಾಗೆ ಬರೆದು ಬಹಿರಂಗವಾಗಿದ್ದರೆ ಎಷ್ಟೊ ಭ್ರೂಣಹತ್ಯೆಗಳು ನಡೆಯುತ್ತಿತ್ತು ಎಂದು ಕಾಣಿಸುತ್ತದೆ. ಯಮಧರ್ಮರಾಯನ ಡೈರಿ ಸಿಕ್ಕರೆ ಮತ್ತಷ್ಟು ಡೈರಿ ನಡೆದು ಅನೇಕ ಕ್ರಿಮಿನಲ್‌ಗಳು ತಮ್ಮ ಕೈವಾಡವಿರಲಿಲ್ಲ, ಎಲ್ಲ ಪೂರ್ವನಿರ್ಧಾರಿತವಾಗಿತ್ತು ಎಂದು ತಪ್ಪಿಸಿಕೊಳ್ಳುತ್ತಿದ್ದರು, ಏನೇ ಆದರೂ ಬೆಯಿಲ್ ಬಹಳ ಸುಲಭವಾಗಿ ಗಿಟ್ಟಿಸಬಹುದಿತ್ತು.

ಡೈರಿಗೆ ಒಂದು ಒಳ್ಳೆ ಗುಣವಿದೆ. ಪ್ರತಿದಿನಕ್ಕೂ ಇಂತಿಷ್ಟೆ ಜಾಗದ ಮಿತಿಯಿದೆ. ಪುರವಣಿ ಸೌಲಭ್ಯವಿಲ್ಲ.

---

## ಅನುಭವಿಸುವಿಕೆ

ಹಾಡುವವರು
ಶೃತಿ, ತಾಳ, ಭಾವದೊಂದಿಗೆ
ಹಾಡಬೇಕು
ಅನುಭವಿಸಿಕೊಂಡು
ಇಲ್ಲದಿದ್ದರೆ
ಕೇಳುವವರು
ಅನುಭವಿಸಬೇಕಾದೀತು

– ಸುಕೇಶವ



# ಲಕ್ಷ್ಮಂಬಾಯಿಯವರ ಡಿಜಿಟಲ್ ಇಂಡಿಯಾ!

**- ವೈ.ಎನ್. ಗುಂಡೂರಾವ್**

ಹರೆಯಕ್ಕೆ ಬಂದ ಗಂಡಸು ಮಾಡುವ ಮೊದಲ ತಪ್ಪೆಂದರೆ ಗುರುತು ಪರಿಚಯವಿಲ್ಲದ ಹೆಣ್ಣಿಗೆ ಮನಸೋತು ತಾಳಿಕಟ್ಟಿ ಮದುವೆ ಎಂಬ ಕೂಪಕ್ಕೆ ಬೀಳುವುದು. ಎಲ್ರೂ ಮಾಡುವಾಗ ನಂದೇನು ಸ್ಪೆಷಲ್ಲು? ನಾನೂ ತಪ್ಪು ಮಾಡಿಬಿಟ್ಟಿದ್ದೆ, ನನ್ನ ಲೈಫಲ್ಲೂ! ಆದರೆ ಮುಂದಿನ ತಪ್ಪುಗಳಿಗೆ ಎಡೆಕೊಡದೆ ಬಂದವಳನ್ನು ಹೇಗೋ ಸಂಭಾಳಿಸಿಕೊಂಡು ಹೋಗುತ್ತಿದೆ. ಆದರೆ ಎಲ್ಲರ ಬದುಕಲ್ಲೂ ಪರಿಸ್ಥಿತಿಗಳು ಹೀಗೇ ಇರುತ್ತೆ ಅಂತ ಯಾವ ಫಿಲಾಸಫರ್ ಹಾಗಿರಲಿ ಜ್ಯೋತಿಷಿ ಕೂಡಾ ಹೇಳಲಾರ. ನನ್ನವಳು ಪೂಸಿ ಹೊಡೆದಾಗ ಹಳ್ಳಕ್ಕೆ ಬಿದ್ದು ಅವಳಿಗೆ ಮೊಬೈಲ್ ಕೊಡಿಸಿದ್ರಿಂದ್ಲೆ ವಕ್ಕರಿಸಿಕೊಂಡಿದ್ದು ಗ್ರಹಚಾರ. ಅವಳಿಗೆ ಕೊಡಿಸಿದೆನೆಂದು ಸುಮ್ಮನಾದಳಾ ಅದೂ ಇಲ್ಲ, ಅತ್ತೆಗೂ ಅಂದರೆ ನಮ್ಮಮ್ಮನಿಗೂ ಕಡಿಮೆ ಬೆಲೇದು ಒಂದು ಮೊಬೈಲ್ ಕೊಡಿಸಿಬಿಡಿ ಎಂದು ವರಾತ ತೆಗೆದಳು.

**ಅತ್ತೆಯ ಕೈಲೂ ಒಂದು ಮೊಬೈಲ್ ಇದ್ದರೆ ಕೆಲಸ ಎಷ್ಟು ಹಗುರ?**

ಅಲ್ವೇ ಅಮ್ಮ ಈ ವಯಸ್ಸಿನಲ್ಲಿ ಮೊಬೈಲ್ ಇಟ್ಕೊಂಡು ಎಲ್ಲಿ ಓಡಾಡಬೇಕಿದೆ. ಅವರ ವಯಸ್ಸಿನವರು ಯಾರು ಇಟ್ಕೊಂಡಿದ್ದಾರೆ? ಅವರ್ಗೇನ್ ಫೋನ್ ಮಾಡಿ ಮಾತನಾಡಿಸುವಂತಹ ಸ್ನೇಹಿತೆಯರಿದ್ದಾರಾ? ಸಾಕು ಸುಮ್ನಿರು. ನಿನ್ನ ಮೊಬೈಲ್ ಬಿಲ್ ಕಟ್ಕೊಂಡು ಹೋದ್ರೆ ಸಾಕಾಗಿದೆ.

ಅಲ್ರೀ ಅವರ ಹತ್ರಾನೂ ಮೊಬೈಲ್ ಇದ್ರೆ ಎಷ್ಟು ಅನುಕೂಲ ಅನ್ನೋದು ನಿಮ್ಗೇನ್ ಗೊತ್ತು ಎಂದು ದಬಾಯಿಸಿದಳು.

ನೀನೇನೆ ಹೇಳಿದ್ರೂ ಅಷ್ಟೆ. ಅವರಿಗೂ ವಯಸ್ಸು ಎಪ್ಪತ್ತಾಯ್ತು. ಹೆಳವನ ಕಟ್ಟೆ ಗಿರಿಯಮ್ಮನ ದೇವರ ನಾಮನೋ, ನಾಡಿಗರ ಶಾಂತಿಬಾಯಿಯವರ ಹಾಡನ್ನೋ ಇಲ್ಲ ಕಳಸದ ಸುಂದರಮ್ಮನವರ ಕೀರ್ತನೆಗಳನ್ನೋ ಹಾಡ್ಕೊಂಡು ನೆಮ್ದಿಯಾಗಿ ಕೂತಿರೋವ್ರನ್ನ ಹಾಳ್ಮಾಡೋಕ್ಕೆ ಹೊರಟಿದ್ದೀಯಾ ಹ್ಯಾಗೆ? ಎಂದೆ.

ಹಾಗಾದ್ರೆ ಪ್ರಧಾನ ಮಂತ್ರಿಯವರೇಕೆ ದಿನಬೆಳಗಾದರೆ ಡಿಜಿಟಲ್ ಇಂಡಿಯಾ, ಡಿಜಿಟಲ್ ಇಂಡಿಯಾ ಅಂತಾ ಹೇಳ್ತಾಯಿದ್ದಾರೆ ಹೇಳಿ!

ಹೌದು, ಅವರು ಹೇಳೋದರ ಹಿಂದಿನ ಉದ್ದೇಶ ಹಣದ ಚಲಾವಣೆ ನಿಲ್ಲಿಸಿ, ವ್ಯವಹಾರದಲ್ಲಿ ಡಿಜಿಟಲ್ ಮೂಲಕ ವ್ಯವಹಾರ ಮಾಡೋದ್ರಿಂದ ಲಂಚ ರುಷುವತ್ತಿಗೆ ಅವಕಾಶ ಇರೋದಿಲ್ಲ, ಭ್ರಷ್ಟಾಚಾರ ಪಡೆಯಬಹುದು ಅನ್ನೋದು ಅವರ ಪಾಯಿಂಟು ತಿಳ್ಕ.



ಅದೇನಾನೂ ಹೇಳ್ತಾಯಿರೋದು. ನಿಮ್ಮಮ್ಮನ ಕೈಲೂ ಒಂದು ಮೊಬೈಲ್ ಇದ್‌ಬಿಟ್ರೆ ನನ್ನ ಕೆಲಸ ಎಷ್ಟು ಹಗುರ ಅಂತ ನಿಮ್ಗೇನ್ರಿ ಗೊತ್ತು?

ಹೇಳಮ್ಮ, ಹಾಗಾದರೆ ಅಮ್ಮನ ಕೈಗೆ ಫೋನ್ ಬಂದ್ರೆ ನಿನಗೆ ಬರೋ ಭಾಗ್ಯವಾದ್ರೂ ಏನು?

ನೋಡಿ, ನಾನು ಮಾರ್ಕೆಟ್ಟಿಗೋ, ಮತ್ತೊಂದಕ್ಕೊ ಹೋದಾಗ ಹುಡುಗರು ಸ್ಕೂಲಿನಿಂದ ಬಂದಾಗ ಅವರಿಗೆ ತಿಂಡಿ ಎಲ್ಲಿಟ್ಟಿದ್ದೇನೆ, ಏನು ಮಾಡ್ಬೇಕು ಅನ್ನೋದನ್ನ ತಿಳಿಸಿ ನನ್ನ ಕೆಲಸ ನಾನು ನಿಧಾನವಾಗಿ ಮುಗಿಸಿಕೊಂಡು ಬರಬಹುದಲ್ಲಾ?

ಅಪ್ಪಡಿಯಾ! ನೀನು ಊರೂರು ಸುತ್ಕೊಂಡು ನಿಂತಿರೋದಕ್ಕೆ ಅಮ್ಮನ ಕೈಗೊಂದು ಮೊಬೈಲ್ ಹಾಕೋಕ್ಕೆ ಐಡಿಯಾ ಮಾಡ್ತಾಯಿದ್ದೀಯಾ ಹಾಗಾದ್ರೆ!

ಅದೊಂದೇ ಅಲ್ಲ, ನಾನು ಭಜನೆ ಕ್ಲಾಸಿಗೋ, ಮತ್ತೊಂದಕ್ಕೊ ಹೋದಾಗ ಮನೆಗೆ ಬರೋದು ಸ್ವಲ್ಪ ತಡವಾದರೆ ಅಕ್ಕಿ ಅಳೆದು ಹಾಕಿ ಹೋಗಿಬಿಟ್ಟಿದ್ರೆ, ನಾ ಬರೋದಕ್ಕೆ ಮುಂಚೆ ಅವರು ನೀರು ಹಾಕಿ ಅಕ್ಕಿ ನೆನೆಹಾಕಿದ್ರೆ, ಬಂದ್‌ತಕ್ಷಣ ಅನ್ನಕ್ಕಿಟ್ರೆ ನಿಮ್ಗೆತಾನೇ ಆಫೀಸಿನಿಂದ ಬರೋಹೊತ್ಗೆ ಬಿಸಿಬಿಸಿ ಅಡುಗೆ ರೆಡಿಯಾಗಿರೋದು! ಅಡುಗೆ ಕೊಂಚಲೇಟಾದ್ರೆ ಇನ್ನೂ ಅಡುಗೆ ಆಗಿಲ್ವಾ... ಆಗಿಲ್ವಾ ಅಂತ ನೀವು ತಾನೇ ಹಾರಾಡೋದು.

ನನ್ನವಳ ಈ ಎಲ್ಲಾ ಸಕಾರಣಗಳಿಗೂ ತಲೆಯೊಡ್ಡಿ ಅಮ್ಮನಿಗೊಂದು ಮೊಬೈಲ್ ಕೊಡಿಸುವ ತಪ್ಪು ಜರುಗಿಯೇ ಹೋಯ್ತು.

ಮೊಬೈಲ್ ಬಂತು. ಒಂದುವಾರ ಅಮ್ಮನಿಗೆ ಇವಳದ್ದೇ ಕ್ಲಾಸು. ಹೇಗೆ ಹಿಡ್ಕೋಬೇಕು, ಎಲ್ಲಿ ಸ್ಪೀಕರ್ ಇದೆ, ಫೋನ್ ರಿಸೀವ್ ಮಾಡಲು ಯಾವ ಬಟನ್ ಒತ್‌ಬೇಕು, ಮಾತಾಡಿನಂತರ ಯಾವ ಬಟನ್ ಒತ್ತಿದ್ರೆ ಮೊಬೈಲ್ ಮಲಕೊಳ್ಳುತ್ತೆ ಇವೇ ಮುಂತಾದ ವಿಷಯಗಳನ್ನು ಹೇಳಿ ಮನದಟ್ಟು ಮಾಡಿದಳು. ಮನದಟ್ಟು ಮಾಡಿದ್ದಷ್ಟೇ ಅಲ್ಲ ತಾನು ಆ ಕಾರ್ಯಕ್ರಮ, ಈ ಕಾರ್ಯಕ್ರಮ ಎಂದು ಸುತ್ತತೊಡಗಿದಳು. ಆದ್ರೆ ಹೀಗೆ ಸುತ್ತಿದರೂ ನಾನು ಸಂಜೆ ಆಫೀಸಿನಿಂದ ಬರೋದಕ್ಕೆ ಮುಂಚೆಯೇ ನನ್ನವಳು ಬಂದುಬಿಡುತ್ತಿದ್ದುದರಿಂದ ಮನೆಯಲ್ಲಿ ಯಾವ ರಾಮಾಯಣ ಮಹಾಭಾರತಕ್ಕೂ ಆಸ್ಪದವಿರುತ್ತಿರಲಿಲ್ಲ.

ದಿನಂಪ್ರತಿ ದೇವರ ನಾಮವನ್ನೋ, ಶುಕ್ರವಾರದ ಅಷ್ಟಲಕ್ಷ್ಮೀ ಸೋಬಾನವನ್ನೋ ಹಾಡ್ಕೋತಿದ್ದವರು ಈಗೀಗ ಬೆಳ್ಳಂಬೆಳಗ್ಗೆ, ನಾನು ಆಫೀಸಿಗೆ ಹೊರಡೋಕೆ ಮುಂಚೆನೇ ಅಮ್ಮ ಫೋನ್ ಹಿಡ್ದು ಕೂರ್ತಿತಿದ್ಲು. ಅಲ್ಲಾ ಹೀಗಾದ್ರೆ ಹೇಗೆ? ಇವರಿಗೆಲ್ಲ ಮೊಬೈಲ್ ಕೊಡ್ಸಿ ಎಂಥ ತಪ್ಪು ಮಾಡಿದೆ ಅನ್ನಿಸಿಬಿಟ್ಟಿತು. ಆಡಲಾರದ, ಅನುಭವಿಸಲಾರದ ಸ್ಥಿತಿ. ಕಡೆಗೆ ತಡೆಯಲಾರದೆ ಒಂದು ದಿನ ರಾತ್ರಿ, ಅಲ್ಲಾ ನೀನು ಮೊಬೈಲ್ ಕೊಡ್ಸಿ ಉಪಯೋಗ ಆಗುತ್ತೆ ಅಂದೆ, ಕೊಡಿಸ್ದೆ ಆದ್ರೆ ಈಗ ನೋಡು ಅಮ್ಮ ಬೆಳ್ಳಂಬೆಳಗ್ಗೆ ಫೋನ್ ಹಿಡ್ಕೊಂಡು ಕೂತ್‌ಬಿಟ್ರೆ ಹೇಗೆ? ಯಾರು ಕಟ್ತಾರೆ ಮೊಬೈಲ್ ಬಿಲ್ಲನ್ನಾ ಎಂದು ದಬಾಯಿಸಿದೆ.

ಅಲ್ಲಾರಿ, ಅವರ್ಗೇನು ಕಾಲ್ ಮಾಡೋಕ್ಕೆ ಬರುತ್ತಾ ಇಷ್ಟಕ್ಕೂ ಯಾರೋ ಕಾಲ್ ಮಾಡಿ ಇವರ ಆರೋಗ್ಯ ವಿಚಾರಿಸಿದ್ರೆ ನಿಮಗೇನು ಕಷ್ಟ ಎಂದು ವಾದಿಸಿದಳು.

ಅಮ್ಮಂಗೆ ಫೋನ್ ಮಾಡೋವ್ರು ಒಬ್ರಾ.... ಇಬ್ರಾ..... ಕೆಲಸದ ರಂಗಿ, ಹಿಂದಿನ ಬೀದಿಯ ಜಾನಕಮ್ಮ, ಸರ್ಕಲ್ ಹತ್ತಿರದ ಸುಂದರಮ್ಮ, ಹನುಮಂತನಗರದ ಮೀನಾಕ್ಷಮ್ಮ, ಬಸವನ ಗುಡಿಯ ಬಂಗಾರಮ್ಮ... ಹೀಗೆ ಹಲವಾರು ಮಂದಿ ಫೋನ್ ಮಾಡಿದ್ದನ್ನ ನಾನು ಆಫೀಸಿಗೆ ಹೋಗೋಕೆ ಮುಂಚೆ, ಆಫೀಸಿನಿಂದ ಬಂದ್ಮೇಲೆ ಕೇಳಿಸ್ಕೋತಾನೆ ಇದ್ದೆ.



ಆದರೆ ಇಷ್ಟು ಜನ ತಮ್ಮ ಖರ್ಚಿನಲ್ಲಿ ಗಂಟೆಗಟ್ಟಲೆ ಮಾತಾಡಿ ಅಮ್ಮನ ಬಗ್ಗೆ ವಿಶ್ವಾಸ ಇಟ್ಕೊಂಡಿದ್ದಾರಲ್ಲ ಎಂದು ಒಂದೊಂದು ಸಾರಿ ಹೆಮ್ಮೆಯೂ ಆಗ್ತಿತ್ತು.

ಲಕ್ಷುಂಬಾಯಿಯವರು ದಿನಾ ಬೆಳಿಗ್ಗೆ ಸಂಜೆ ಫೋನ್ ಮೆಲ್ ಫೋನ್ ರಿಸೀವ್ ಮಾಡೋದೇನು, ಕಾಲ್‌ಮೇಲ್ ಕಾಲ್ಹಾಕಿ ಮಾತಾಡೋದೇನು?

ಆದ್ರೂ ಒಂದು ಸಾರಿ ಚೆಕ್ ಮಾಡಿಬಿಡಬೇಕು ಅಂತ ರಾತ್ರಿ ಅಮ್ಮನ ಫೋನ್ ತಗೊಂಡು ನೋಡಿದ್ರೆ ಎಲ್ಲಾ ರಿಸೀವ್ಡ್‌ಕಾಲ್ಸೇ.... ಇವರು ಡಯಲ್ಲೆ ಮಾಡಿಲ್ಲ. ಪರಿಚಯದವರು ತಮ್ಮ ಖರ್ಚಿನಲ್ಲಿ ಕಾಲ್‌ಮಾಡೋವಾಗ ನನ್‌ಗಂಟೇನು ಹೋಗಬೇಕು ಎಂದು ತೆಪ್ಪಗಾದೆ.

ಒಂದು ಶುಕ್ರವಾರ, ಗುಡ್‌ಫ್ರೈಡೆ – ರಜವಿದ್ದುದರಿಂದ ಮನೇಲೇ ಇದ್ದೆ. ಹತ್ತು ಗಂಟೆಯ ವೇಳೆಗೆ ನಮ್ಮಮ್ಮನ ಪರಿವಾರದ ನಾಲ್ಕಾರು ಜನ ಬಂದ್ರು. ಬಂದವರನ್ನೆಲ್ಲಾ ಹಿತವಾಗಿ ಮಾತನಾಡಿಸಿ, ಶುಕ್ರವಾರದ ದಿವ್ಯ ಲಕ್ಷ್ಮೀ ತರಾ ಬಂದಿದ್ದೀರಾ... ಅಡ್ಕೆಲೆ ತಗೊಂಡ್ಹೋಗಿ ಎಂದು ಎಲ್ಲರಿಗೂ ತೆಂಗಿನಕಾಯಿ ಅಡಕೆಲೆ, ಜೊತೆಗೆ ನೂರು ರೂಪಾಯಿ ನೋಟಿನ ದಕ್ಷಿಣೆ...!!

ಇದನ್ನು ನೋಡಿದ ನನಗೆ ಕಸಿವಿಸಿಯಾಯಿತು. ಅಲ್ಲಾ ದಕ್ಷಿಣೆ ಅಂತ ಹತ್ತೋ, ಇಪ್ಪತ್ತೋ ಇಟ್ಟಿದ್ರೆ ಸಾಕಾಗ್ತಾಯಿರ್ಲಿಲ್ವಾ ಅನ್ನಿಸಿತು.

ಬಂದವರೆಲ್ಲರೂ ಹೋಗೋ ವೇಳೆ ಅಮ್ಮ ಕೂಡಾ ಅವರನ್ನು ಕಳುಹಿಸಲು ಗೇಟಿನ ಬಳಿ ಹೋದ್ರು. 'ನೋಡಿ ಇವತ್ತೇ ಕರೆನ್ಸಿ ಹಾಕಿಸ್ಕೊಂಬಿಡಿ, ಫೋನ್ ಮಾಡಲು ಮರೀಬೇಡಿ' ಎಂದದ್ದು ನನ್ನ ಕಿವಿಗೂ ಬಿತ್ತು.

ಓಹೋ ಹೀಗೋ ಸಮಾಚಾರ! ಅಡಕೆಲೆ ಜೊತೆಗೆ ದಕ್ಷಿಣೆ ಅಂತ ನೂರು ರೂಪಾಯಿ ಯಾಕೆ ಕೊಟ್ರು ಅಂತಾ ಗೊತ್ತಾಗೋಯ್ತು. ಆದಕ್ಕೆ ಇತ್ತೀಚೆಗೆ ಅಮ್ಮ ಯಾವಾಗಲೂ ಫೋನಿನಲ್ಲಿ ಬಿಜ಼ಿ.

ಮದರ್ ಇಂಡಿಯಾ ಡಿಜಿಟಲ್ ಇಂಡಿಯಾ ಆಗೋಗಿದ್ರು!

❖❖

## ವಿಚಿತ್ರ

ನಿದ್ದೆಯನ್ನೇ ಮಾಡದ
ದೇವರಿಗೆ
ನಿತ್ಯ ಮಂತ್ರ ಸುಪ್ರಭಾತ
ನಿದ್ದೆ ಮಾಡುವ
ಮನೆ ದೇವರಿಗೆ
ನಿತ್ಯ ಬೈಗುಳ ಸುಪ್ರಭಾತ

– ಸುಕೇಶವ



# ಮೇಡ್ ಫಾರ್ ಈಚ್ ಅದರ್

**- ಸುಧಾ ಸರನೋಬತ್**

ಒಂದು ಹೊತ್ತು ತಿಂದವ ಯೋಗಿ, ಎರಡು ಹೊತ್ತು ತಿಂದವ ಭೋಗಿ, ಮೂರು ಹೊತ್ತು ತಿಂದವ ರೋಗಿ, ನಾಲ್ಕು ಹೊತ್ತು ತಿಂದವನನ್ನು ಹೊತ್ಕೊಂಡ್ಹೋಗಿ - ಈ ಗಾದೆಯನ್ನು ಕೇಳಿರಬಹುದು. ನನ್ನ ಬಾಲ್ಯ ಸ್ನೇಹಿತ ಸುಬ್ಬಣ್ಣ ಈ ಗಾದೆಯನ್ನು ಮೀರಿಸುವಂತೆ, ದಿನಕ್ಕೆ 7-8 ಸಲ ತಿನ್ನುತ್ತಿದ್ದವನು. ಯಾವ ರೋಗ ರುಜಿನಗಳೂ ಇಲ್ಲದೆ ಸದೃಢಕಾಯನಾಗಿರುವುದನ್ನು ಕಂಡಾಗ ಸುಬ್ಬಣ್ಣನ ಗುಡಾಣದಂಥ ಹೊಟ್ಟೆಯಲ್ಲಿ ಡಬ್ಬಲ್ ಡೈಜೇಶನ್ ಪವರ್ ಇದೆ ಎಂದು ಅನಿಸುತ್ತಿತ್ತು. ಆದರೆ ಈ ವಿಪರೀತ ತಿನ್ನಾಟ ಉಣ್ಣಾಟದ ಫಲವನ್ನು ಅವನ ದೇಹದ ಸರ್ವ ಅಂಗಾಂಗಗಳು ಯಾವ ದಾಕ್ಷಿಣ್ಯವೂ ಇಲ್ಲದೆ ಎತ್ತಿ ತೋರಿಸುತ್ತಿವೆ. ಹೊಟ್ಟೆಯ ಸುತ್ತಳತೆ 2000 ಲೀಟರ್ ಸಿಂಟೆಕ್ಸ್ ಡ್ರಮ್ಮಿನಂತಿದ್ದರೆ, ಎದೆಯ ಹರವು ವಿಶಾಲ ವಟ ವೃಕ್ಷದಂತೆ! ಬಾಹುಗಳು ಬಲಭೀಮನನ್ನು ಜ್ಞಾಪಿಸಿದರೆ, ಮುಖ ದೊಡ್ಡ ಸೈಜಿನ ಬೂದುಗುಂಬಳಕಾಯಿ! ಬೆನ್ನಿನ ಹರವಿನ ಮೇಲೆ ಎರಡು ಚಿಕ್ಕ ಮಕ್ಕಳು ಸುಲಭವಾಗಿ ಆಡಬಹುದು. ಇಂಥ ಧಡೂತಿ ಆಸಾಮಿ ಸುಬ್ಬಣ್ಣನ ಮನಸ್ಸು ಮಾತ್ರ ಬಹಳ ಮೃದು. ಅತಿ ಬೇಗ ಮನಸ್ಸಿಗೆ ಹಚ್ಚಿಕೊಂಡು ಒದ್ದಾಡುವ ಸ್ವಭಾವ.

> **ಯೋಗಾಸನಕ್ಕಿಂತ ಭೋಗಾಸನವೇ ಹೆಚ್ಚು ಪ್ರಭಾವಶಾಲಿ**

ಒಂದು ದಿನ ಇದ್ದಕ್ಕಿದಂತೆ ಸುಬ್ಬಣ್ಣ ಏದುಸಿರು ಬಿಡುತ್ತ ನಮ್ಮ ಮನೆಗೆ ಬಂದು, ''ಅಕ್ಕಾ ನನಗೆ ಮದುವೆ ನಿಶ್ಚಯವಾಗಿದೆ'' ಎಂದ.

''ಓ ಭಾಳ ಸಂತೋಷ ಸುಬ್ಬು, ಕಂಗ್ರಾಚುಲೇಶನ್ಸ್, ಯಾವತ್ತು ನಮಗೆಲ್ಲ ಹೋಳಿಗೆ ಊಟ? ಆದರೆ ಮದುವೆ ನಿಶ್ಚಯ ಆಯಿತು ಅಂತೀಯಾ ಮುಖ ಯಾಕೆ ಸಪ್ಪಗಿದೆ? ಹೀಗೆ ಬೆವರಿದೆ? ಎಂದೆ. ಸುಬ್ಬಣ್ಣ ನನ್ನ ಪ್ರಶ್ನೆಗೆ ಉತ್ತರವನ್ನು ಕೊಡದೆ ನಿರಾಸೆಯ ನಗೆ ನಕ್ಕು ಹೊರಟು ಹೋದ. ನಾನು ಸುಬ್ಬಣ್ಣನ ಮದುವೆಗೆ ಹೋದಾಗ ಮ್ಯಾರೇಜಸ್ ಆರ್ ಮೇಡ್ ಇನ್ ಹೆವನ್ ಎಂಬ ಮಾತು ಪೂರ್ಣ ಸತ್ಯ ಎಂದು ಅನಿಸಿತು. ಅವರ ಜೋಡಿ ''ಮೇಡ್ ಫಾರ್ ಈಚ್ ಅದರ್'' ಅಂತ ತಪ್ಪು ತಿಳಿಯುವ ತಪ್ಪು ಮಾಡಬೇಡಿ. ಸುಬ್ಬಣ್ಣನ ಪತ್ನಿ ರಾಜಿ ಬಳುಕುವ ಬಳ್ಳಿಯಂತೆ, ಪುಟ್ಟ ದೇಹದ ಚಿಕ್ಕ ಮೈಮಾಟದ, ಮಡಿಕೋಲಿನ ಪರ್ಸನಾಲಿಟಿ, ಹೊಂದಿದ್ದು ಪಕ್ಕದಲ್ಲಿ ಕುಳಿತಿದ್ದ ನಮ್ಮ ಸುಬ್ಬು ರಾಜಿಯ ತಾತನಂತೆ ಕಾಣುತ್ತಿದ್ದ! ಅವರ ಜೋಡಿ ಕಣ್ತುಂಬ ನೋಡಿ ಹೊಟ್ಟೆ ತುಂಬ ನಕ್ಕರು ಬಂದ ನೆಂಟರೆಲ್ಲ, ಅಂದು ಸುಬ್ಬಣ್ಣನ ಮುಖದ ಮೇಲೆ ಸತ್ತ ಕಳೆ ಬಂದದ್ದರ ಕಾರಣ ಈಗ ನನಗೆ ಸ್ಪಷ್ಟವಾಯಿತು.

ಮದುವೆ ಮುಗಿಸಿ ಸುಬ್ಬಣ್ಣ ದಂಪತಿಗಳು ಹನಿಮೂನ್‌ಗೆಂದು, ಊಟಿ, ಕೊಡೈಕೆನಾಲ್‌ಗೆ ಹೋದವರು ಎಂಟೇ ದಿನಕ್ಕೆ ವಾಪಸ್ಸಾಗಿದ್ದು ಕೇಳಿ ಆಶ್ಚರ್ಯವಾಯಿತು. ಹದಿನೈದು ದಿನ ರಜೆ ಹಾಕಿ ಹೋದ ಸುಬ್ಬಣ್ಣ, ಎಂಟೇ ದಿನಕ್ಕೆ ವಾಪಸ್ಸಾಗಿದ್ದು, ಏನೋ



ಎಡವಟ್ಟಾಗಿದೆ ಎಂದು ನನ್ನ ಅನುಮಾನ! ನನ್ನ ಗ್ರಹಿಕೆ ತಪ್ಪಾಗಿರಲಿಲ್ಲ ಮಾರನೆಯ ದಿನವೇ ಸುಬ್ಬು ನಮ್ಮನೆಗೆ ಹಾಜರಾದ.

ಹೆಂಗಿತ್ತಪಾ ಹನಿಮೂನ್? ನಗುತ್ತ ವಿಚಾರಿಸಿದೆ.

ನಾನು ಕೇಳಿದ್ದೇ ತಡ ಸುಬ್ಬು ಗಳಗಳನೆ ಅತ್ತು ದುಃಖದ ಆವೇಗ ಕೊಂಚ ಕಡಿಮೆಯಾದ ಮೇಲೆ ತನ್ನ ಕಷ್ಟ ಹೇಳಿಕೊಂಡ.

''ಮೊದಲು ನಿಮ್ಮ ತೂಕ ಕಡಿಮೆ ಮಾಡಿಕೊಳ್ಳಬೇಕು. ಆಮೇಲೆ ಹನಿ ಮತ್ತು ಮೂನು'' – ಸುಬ್ಬುವಿಗೆ ಮೊದಲ ರಾತ್ರಿ ಅವನ ಅರ್ಧಾಂಗಿ ರಾಜಿ ಮಾಡಿದ ಸುಗ್ರೀವಾಜ್ಞೆ ಇದು!

ಆದರೂ, ಹೇಗೊ ರಜೆ ಹಾಕಿದ್ದೀರಲ್ಲ ಆರಾಮಾಗಿ ಗಂಡ ಹೆಂಡತಿ ಹೋಗಿ ಬನ್ನಿ ಎಂದು ಮಾವನವರ ಆದೇಶದ ಮೇಲೆ ಸುಬ್ಬು, ರಾಜಿಯನ್ನು ಹನುಮೂನ್‌ಗೆ ಕರೆದೊಯ್ದು, ಹನಿಮೂನ್‌ಗೆಂದು ಹದಿನೈದು ದಿನ ಹೋದಾಗ, ರಾಜಿ ಬೆಳಿಗ್ಗೆ ನಾಲ್ಕು ಗಂಟೇಗೆ ಎದ್ದು ಎಕ್ಸರ್‌ಸಾಯಿಜ್, ಮಾಡುವುದು ಊಟವೆಂದರೆ ಕೇವಲ ಎರಡು ಫುಲಕಾ, 1 ಚಿಕ್ಕ ನಿಂಬೇ ಗಾತ್ರದಷ್ಟು ಅನ್ನ ನೀರು ಮಜ್ಜಿಗೆ, ಎರಡು ಸೌತೇಕಾಯಿ ಹೋಳುಗಳು. ದಿನಕ್ಕೆ 7–8 ಸಲ ಕುರುಕಲು ತಿಂಡಿಯನ್ನು ತಿನ್ನುತ್ತಿದ್ದ ಸುಬ್ಬಣ್ಣನಿಗೆ ಇದು ಆಘಾತವಾಗಿತ್ತು. ಬ್ರೀದಿಂಗ್ ಎಕ್ಸರ್‌ಸಾಯಿಜ್, ಜಾಗಿಂಗ್ ಸೈಕ್ಲಿಂಗ್, ಪ್ರಾಣಾಯಾಮ, ಭುಜಂಗಾಸನ, ಮತ್ಸ್ಯಾಸನ ಇತ್ಯಾದಿ ಇತ್ಯಾದಿ ಎಲ್ಲವನ್ನು ಸುಬ್ಬಣನ ಧಡೂತಿ ದೇಹಕ್ಕೆ ಇವಿಷ್ಟನ್ನು ಕಡ್ಡಾಯವಾಗಿ ರಾಜಿ ಸುಬ್ಬಣ್ಣನಿಗೆ ಮಾಡಿಸಿದಳು, ಸುಬ್ಬು ಒಂದು ದಿನ ತಡೆಯಲಾರದೆ ಹೆಂಡತಿಗೆ ಹೇಳಿದನು.

ರಾಜಿ.. ನಾವು ಹೊಸ ದಂಪತಿಗಳು.. ಹನಿಮೂಗ್‌ಗೆಂದು ಬಂದಿದ್ದೇವೆ, ಇದೆಲ್ಲ ಏನು ರಾದ್ಧಾಂತ.. ಹದಿನೈದು ದಿನ ಲೈಫ್ ಎಂಜಾಯ್ ಮಾಡಿ ಹೋಗೋಣ, ನಿನಗೆ ಯಾವ ತರದ ತಿಂಡಿ, ಊಟ ತಿನ್ನುವ ಆಶೆ ಇದೆ ಹೇಳು ಅದೆಲ್ಲವನ್ನೂ ಪೂರೈಸುತ್ತೇನೆ!!.. ಆದರೆ ರಾಜಿಯದು ಒಂದೇ ಹಟ..

''ನಿಮ್ಮ ತೂಕ ಕಮ್ಮಿಯಾಗಬೇಕು..''

ಹುಟ್ಟಿದಾರಭ್ಯ ಈಟಿಂಗ್ ಒಂದೇ ಗೊತ್ತಿದ್ದ ಸುಬ್ಬುವಿಗೆ ಈಗ ಜಾಗಿಂಗ್ ಸೈಕ್ಲಿಂಗ್ ಕಡ್ಡಾಯವಾಗಿತ್ತು! ಬರೀ ಭೋಗಾಸನವನ್ನೇ ಮಾಡುತ್ತಿದ್ದ ಸುಬ್ಬುವಿಗೆ ಈಗ ಭುಜಂಗಾಸನ, ವಜ್ರಾಸನ! ಹೆಂಡತಿಯಿಂದ! ಅಂದು ಎಂದಿನಂತೆ ಯೋಗಾಸನದ ಅಭ್ಯಾಸ ಆರಂಭವಾಯಿತು. ಮಯೂರಾಸನದ ಪ್ರಾಕ್ಟೀಸ್ ಮಾಡಲು ರಾಜಿ ಆಜ್ಞಾಪಿಸಿದಳು. ಮೊದಲೇ, ಮನಸ್ಸಿಗೆ ಹಚ್ಚಿಕೊಂಡು ಅರ್ಧಪ್ರಾಣವಾಗಿದ್ದ ಸುಬ್ಬು ಧಡಾರನೆ ಕೆಳಗುರುಳಿ ಒಂದು ಕ್ಷಣದಲ್ಲಿಯೇ ಶವಾಸನದಲ್ಲಿ ಮಲಗಿದ್ದ.. ಮೈಮೇಲೆ ಪ್ರಜ್ಞೆ ಇಲ್ಲದವನಂತೆ ಮಲಗಿದ್ದ ಪತಿಯನ್ನು ಕಂಡು ರಾಜಿ ಗಾಬರಿಯಿಂದ, ಪಕ್ಕದ ಬೀದಿಯಲ್ಲಿದ್ದ ಡಾಕ್ಟರನ್ನು ಕರೆತಂದು ಪರೀಕ್ಷಿಸಿದಳು. ಡಾಕ್ಟರು ಹೇಳಿದರು.



''ಇವರ ಬಿಪಿ ತುಂಬಾ ಜಾಸ್ತಿಯಾಗಿದೆ. ತಕ್ಷಣ ಆಸ್ಪತ್ರೆಗೆ ಅಡ್ಮಿಟ್ ಮಾಡಿ'' ರಾಜಿಗೆ ತಾನು ಯೋಗಾಕೇಂದ್ರದಲ್ಲಿ ಯೋಗಾ ಟೀಚರ್ ಆಗಿದ್ದು ವ್ಯರ್ಥವೆನಿಸಿತು. ಎಷ್ಟೋ ಜನ ಶಿಷ್ಯರನ್ನು ಯೋಗಾಸನದಲ್ಲಿ ತರಬೇತಿಗೊಳಿಸಿದ್ದ ತನಗೆ, ತನ್ನ ಪತಿಯ ವಿಷಯದಲ್ಲಿ ಸೋಲು ಉಂಟಾಯಿತಲ್ಲ!.. ಇದನ್ನು ರಾಜಿ ಹೇಗೆ ಸಹಿಸಿಯಾಳು.. ಆಸ್ಪತ್ರೆಯಿಂದ ಮನೆಗೆ ಬಂದ

ಸುಬ್ಬುವಿಗೆ ಮತ್ತೆ ಯೋಗಾಸನಗಳು ಆರಂಭವಾದವು. ತನ್ನ ಪತಿ ಪರಮೇಶ್ವರನನ್ನು ತನ್ನಂತೆ ಸಪೂರ ದೇಹಿಯನ್ನಾಗಿ ಮಾಡಿಯೇ ತೀರುತ್ತೇನೆಂದು ರಾಜಿ ಹಟ ತೊಟ್ಟಿದ್ದಾಳೆ. ಹಟವೇನು ಬಂತು.. ಭೀಷ್ಮ ಪ್ರತಿಜ್ಞೆ ಮಾಡಿದ್ದಾಳೆ! ರಾಜಿ, ಚಾಪೆಯಡಿ ತೂರಿಕೊಂಡರೆ, ಸುಬ್ಬಣ್ಣನದು ರಂಗೋಲೆಯಡಿ ತೂರಿಕೊಳ್ಳುವ ಜಾಯಮಾನ! ರಾಜಿ, ಸುಬ್ಬಣ್ಣನಿಗೆ ಕಡ್ಡಾಯವಾಗಿ, ಯೋಗಾಸನ ಅಭ್ಯಾಸ ಆರಂಭಿಸಿದೊಡನೆ, ಸುಬ್ಬಣ್ಣ ದೊಪ್ಪನೆ ಕೆಳಗೆ ಬೀಳುವ ನಾಟಕವಾಡಿ ರಾಜಿಯನ್ನು ಹೆದರಿಸುತ್ತಾನೆ. ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ, ಸುಬ್ಬಣ್ಣನ ತೂಕ ಕರಗದು, ರಾಜಿಗೆ ಹಟ ಬಿಡದು, ಈ ಗಲಾಟೆಯಲ್ಲಿ ಎರಡು ವರ್ಷ ಕಳೆಯಿತು.

ರಾಜಿ, ಸುಬ್ಬಣ್ಣನನ್ನು ಸಣ್ಣಗಾಗಿಸಲು ಶತಪ್ರಯತ್ನ ಮಾಡಿ, ಸೋತು, ತಾನು ಅವನಂತೆಯೇ, ದಿನಕ್ಕೆ 5-6ಸಲ ಉಣ್ಣುವ ಪದ್ಧತಿಯನ್ನು ರೂಢಿಸಿಕೊಂಡು, ಈಗ ಅವನಂತೆಯೇ ಸ್ಥೂಲ ದೇಹಿಯಾಗಿದ್ದಾಳೆ! ಸುಬ್ಬಣ್ಣ-ರಾಜಿಯ ಜೋಡಿ ನೋಡಿ ಆಗ ನಕ್ಕವರೆಲ್ಲ ಈಗ ಏನು ಹೇಳುತ್ತಿದ್ದಾರೆ ಗೊತ್ತೆ.. ಇವರಿಬ್ಬರ ಜೋಡಿ ''ಏಕ್ ದೂಜೆ ಕೇಲಿಯೆ ಬನೀ ಹೈ'' ಎಂದೂ ಇದನ್ನೇ ಕೆಲವರು ಅಂಗ್ರೇಜಿಯಲ್ಲಿ ''ಮೇಡ್ ಫಾರ್ ಈಚ್ ಅದರ್'' ಎಂದು ಹೊಗಳುತ್ತಿದ್ದಾರೆ. ಸುಬ್ಬಣ್ಣ ಮಾತ್ರ ಈ ಪಂದ್ಯದಲ್ಲಿ ಗೆದ್ದವನಂತೆ ರಾಜಿಯನ್ನು ಕೆಣಕುತ್ತ ''ನಿನ್ನ ಯೋಗಾಸನಕ್ಕಿಂತ ನನ್ನ ಭೋಗಾಸನವೇ ಹೆಚ್ಚು ಪ್ರಭಾವಶಾಲಿ ತಿಳಿಯಿತೇ..? ಎಂದು ಕೆಣಕುತ್ತಾನೆ!!!

---

## ವಾನರ!

ಉದಯ್‌ಪುರದಲ್ಲಿ
ಪಡೆಯಲು ಪಡಿತರ
ಹತ್ತಬೇಕು ಮರ!
ಎಲ್ಲೆಡೆ ಬರ!
ಏರುತ್ತಿರುವ ದರ
ಹಿಡಿಯಲು
ಹತ್ತಬೇಕಾದೀತು
ಸಿಗ್ನಲ್ ಟವರ!
ಸುರಿಸಿ ಬೆವರ
ಪಡೆಯಲು ಹಿಡಿ ಆಹಾರ
ಮತ್ತೆ ಮಾನವ
ಆಗಬೇಕಿದೆ ವಾನರ!

~ *ತುರುವೇಕೆರೆ ಪ್ರಸಾದ್*



# ತರ್ಲೆಕ್ಯಾತನಹಳ್ಳಿ ಪ್ರೀಮಿಯರ್ ಲೀಗ್!

**- ತುರುವೇಕೆರೆ ಪ್ರಸಾದ್**

**ಸೋಂ**ಬೇರಿ ಆಟ ಅಂತಲೇ ಫೇಮಸ್ ಆಗಿರೋ ಕಿರಿ ಕಿರಿ ಕೆಟ್ಟ ಆಟ ಕ್ರಿಕೆಟ್ ದೇಶಿ ಶೈಲೀಲಿ ಮೈದಾಳಿದ್ದು, ತರ್ಲೆಕ್ಯಾತನಹಳ್ಳೀಲೇ ಇರಬೇಕು ಅನ್ನೋ ಅನುಮಾನ ಬಹಳಷ್ಟು ಜನಕ್ಕಿದೆ. 70ರ ದಶಕಕ್ಕೆ ಮುಂಚೆಯೇ ಹೆಡೆಮೊಟ್ಟೇನೇ ಬ್ಯಾಟ್ ಮಾಡಿಕೊಂಡು ಕಾರ್ಕ್ ಬಾಲನ್ನು ಎರ್ರಾಬಿರ್ರಿ ಮಿಡ್ ವಿಕೆಟ್‌ನಲ್ಲಿ ಬಾರಿಸಿ ಕಂಡ ಕಂಡ ಮನೆಗಳ ವಿಂಡೋ ಗ್ಲಾಸ್ ಒಡೆದ ಶೂರರು ನಮ್ಮೂರಲ್ಲಿ ಆಗಿ ಹೋಗಿದ್ದಾರೆ. ಗಲ್ಲಿ ಗಲ್ಲಿಗಳಲ್ಲಿ ಕ್ರಿಕೆಟ್ ಆಡಿದ ಕೀರ್ತಿ ನಮಗೇ ಸಲ್ಲಬೇಕು. ಈಗ ಓವರ್‌ಗಳು ಕಡಿಮೆ ಆಗುತ್ತಾ ಟೆಸ್ಟ್‌ನಿಂದ ಒಂಡೇಗೆ, ಒಂಡೇಯಿಂದ 20-20ಗೆ ಬಂದು ನಿಂತಿದೆ. ಮುಂದೆ ಈ ಮಿನಿ ಕ್ರಿಕೆಟ್ 5 ಓವರ್‌ನಿಂದ 1 ಓವರ್‌ಗೆ ಇಳಿದು ಹನಿ ಕ್ರಿಕೆಟ್ ಆದರೂ ಆಶ್ಚರ್ಯವಿಲ್ಲ. ಆದರೆ ಕ್ರಿಕೆಟ್ ಇತಿಹಾಸದಲ್ಲಿ ಒಂದು ಚರಿತ್ರಾರ್ಹ ದಾಖಲೆ ಮಾಡಿದವರು ನಮ್ಮೂರ ಹೈಕ್ಳು. ಫೀಲ್ಡು, ಬೌಂಡರಿ, ಬ್ಯಾಟು, ಬಾಲು, ವಿಕೇಟ್ ಹೀಗೆ ಎಲ್ಲದನ್ನೂ ಚಿಕ್ಕದು ಮಾಡಿ ಮಿನಿ ಕ್ರಿಕೆಟ್‌ನ ಪರಿಕಲ್ಪನೇನ ನಾವು ಆವತ್ತೇ ನಿಜ ಮಾಡಿದ್ವಿ. ಲಗಾನ್ಗಿಂತ ಮುಂಚೆ ದೇಶೀ ಕ್ರಿಕೆಟ್‌ಗೆ ಒಂದು ಗೌರವ, ಹೆಸರು ತಂದು ಕೊಟ್ಟೋರು ನಾವು. ನಮಗೆ ಪಾರ್ಚುಮೆಂಟ್ ಬ್ಯಾಟ್ ತಗೊಳ್ಳೊ ಶಕ್ತಿ ಇತ್ತಿಲ್ಲ. ಮನೇಲಿ ಕೇಳಿದ್ರೆ ಪೂಜೆ ಆಗ್ತಿತ್ತು. ಕಾರ್ಕ್ ಕಾಯಿಗಳನ್ನ ಆರಿಸಿ ತಂದು ಕುಟ್ಟಿ ಪುಡಿ ಮಾಡಿ ಹರಳೆಣ್ಣೆ ಹಾಕಿ ಪಿಂಡಕ್ಕಿಂತ ಹೆಚ್ಚು ನುಣುಪಾಗಿ ಉಂಡೇ ಕಟ್ಟೋದ್ರಲ್ಲಿ ಶಾಸ್ತ್ರಿಗಳ ಮಗ ಸುಬ್ಬ ಎಕ್ಸ್‌ಪರ್ಟ್ ಅನಿಸಿದ್ದ. ಇನ್ನು ವಿಕೆಟ್ಟೋ, ರೋಜಾನ್ ಕಡ್ಡಿ, ಕಳ್ಳಿ ಕಡ್ಡೀನೇ ಸವರಿ ರಸ್ತೇಲಿ ಸಿಕ್ಕುಸುದ್ರೆ ಆಯ್ತು. ತೀರಾ ಅದಕ್ಕೂ ಗತಿ ಇಲ್ಲ ಅಂದ್ರೆ ಗೋಡೆ ಮೇಲೆ ಇದ್ದಲಲ್ಲಿ ಗೆರೆ ಹಾಕುದ್ರೆ ವಿಕೆಟ್ ಆಗಿ ಹೋಗ್ತಿತ್ತು. ಹೀಗೇ ಅಪ್ಪಟ ದೇಶೀ ಕ್ರಿಕೆಟ್ ಶುರು ಮಾಡಿದ್ದು ನಾವೇ ಅನ್ನೋಕೆ ಇದಕ್ಕಿಂತ ಸಾಕ್ಷಿ ಬೇಕೆ? ಫುಟ್‌ರಗ್ಗ ಕಾಲಿಗೆ ಸುತ್ಕೊಂಡ್ರೆ ಪ್ಯಾಡು ಆಗ್ತಿತ್ತು. ಹೋಳು ಮಾಡಿದ ಎಳನೀರು ಬುರುಡೇನ ಪ್ಯಾಂಟಲ್ಲಿ ಇಟ್ಕಂಡ್ರೆ ಗಾರ್ಡ್ ಆಗ್ತಿತ್ತು.

> **ಕೂದಲು ಕೆದರಿಕೊಂಡೇ ಊರಿಗೆ ಬಂದ ವನಜ ಗೆದ್ದಳೇ?**

ಸ್ವಲ್ಪ ದೊಡ್ಡವರಾದ ಮೇಲೆ ನಮ್ಮಲ್ಲೂ ಕ್ರಿಕೆಟ್ ಹೆಸರಿನಲ್ಲಿ ಗುಂಪುಗಾರಿಕೆ ಶುರುವಾಯ್ತು. ಎಕ್ಸ್‌ಟೆನ್‌ಶನ್‌ನವರು, ಬಡಾವಣೆಯೋರು, ಕೋಟೆಯೋರು, ಊರೊಳಗಿನೋರು ಅಂತ ನಾಲ್ಕಾರು ತಂಡಗಳು ಹುಟ್ಕೊಂಡ್ವು. ಕ್ರಿಕೆಟ್ ಕಾನೂನನ್ನೇ ಬದಲಿಸೋ ವಿತಂಡ ವಾದವು ಶುರುವಾಯ್ತು. ಪರಸ್ಪರರ ವಿರುದ್ಧ ಮ್ಯಾಚ್ಗಳು ಶುರುವಾದವು. ಆದರಲ್ಲೂ ಗುಂಪುವಾರೀ ಸ್ಪೆಶಲೈಸೇಶನ್ ಬೇರೆ. ಊರೊಳಗಿನ ಬಾಂಬ್ರ ಟೀಂ ಬಾಲನ್ನು ಪಿಚ್ ಮಾಡದೆ, ಪುಟಿಯದಂತೆ ಬೌನ್ಸ್ ಮಾಡದೆ ಪಿಂಡ ಉರುಳಿಸಿ ವಿಕೆಟ್ ಹಾರಿಸುವುದರಲ್ಲಿ ನಿಸ್ಸೀಮರೆನಿಸಿದ್ದರು. ಬ್ಯಾಂಟಿಂಗ್‌ನಲ್ಲಿ ಮಾತ್ರ ಎಲ್ಲಾ ತೊಡೆ ನಡುಗಿಸಿಕೊಂಡು ಪುತ ಪುತ ವಿಕೆಟ್ ಒಪ್ಪಿಸಿ ಪೆರೇಡ್ ಮಾಡ್ತಿದ್ರು. ಎಕ್ಸ್‌ಟೆನ್‌ಶನ್‌ನವರದ್ದು ಯಾವಾಗಲೂ ಟೆನ್‌ಶನ್ ಆಟ. ಒಂದು ರನ್ ಬೇಕು, ಒಂದು ವಿಕೆಟ್ ಇದೆ, ಒಂದು ಬಾಲ್ ಇದೆ ಅನ್ನೋ ಟೆನ್‌ಶನ್ ಸ್ಥಿತಿಗೆ ಬಂದು ಸೋತು



ಸುಣ್ಣವಾಗಿದ್ರು. ಬಡಾವಣೆಯವರದ್ದು ಬರೀ ಬಂಡವಾಳವಿಲ್ಲದ ಬಡಾಯಿ. ಹಾಗೆ ಮಾಡ್ತೀವಿ, ಹೀಗೆ ಮಾಡ್ತೀವಿ ಅಂತ ಕೊಚ್ಕೊಂಡು ಬಂದು ಠುಸ್ ಅಂತಿದ್ರು. ಇನ್ನು ಕೋಟೆಯೋರು ಅವತ್ತೇ ಉದ್ದೀಪನ ಮದ್ದು(ಬೀರು, ಬ್ರಾಂದಿ, ವಿಸ್ಕಿ, ಕಾಫ್ ಸಿರಪ್) ತಗಳೊಕ್ಕೆ ಶುರು ಮಾಡಿದ್ರು. ಬೌಲ್ ಮಾಡಬೇಕಾದ್ರೆ ಅವರಿಗೆ ಆರು ವಿಕೆಟ್ ಕಾಣ್ತಿತ್ತು. ಬ್ಯಾಟ್ ಮಾಡಬೇಕಾದ್ರೆ 2 ಬಾಲು ಕಾಣಿಸ್ತಿತ್ತು. ಹಿಟ್‌ಔಟ್ ಆರ್ ಗೆಟ್ ಔಟ್ ಅಂತ ಎರ್‍ರಾ ಬಿರ್‍ರಿ ಬ್ಯಾಟ್ ಬೀಸ್ತಿದ್ರು. ಯದ್ವಾ ತದ್ವಾ ಬೌನ್ಸರ್ ಹಾಕಿ ಮುಖ ಮೂತಿ ತೆಗೀತಿದ್ರು.

ಕಾಲೇಜ್ ಮೈದಾನದಲ್ಲಿ ನೀಲಗಿರಿ ಪ್ಲಾಂಟೇಶನ್ ನೆಟ್ಟ ಮೇಲೆ ಮಿಡ್ಲ್‌ಸ್ಕೂಲ್ ಮೈದಾನದಲ್ಲಿ ಪೋಲೀಸ್ ಕ್ವಾರ್ಟಸ್‌ನವರು ಬೇಲಿ ಹಾಕ್ಕೊಂಡ ಮೇಲೆ ಕ್ರಿಕೆಟ್ ಆಡೋರಿಗೆ ಜಾಗದ ಸಮಸ್ಯೆ ಶುರುವಾಯ್ತು. ಮೊದಲು ಬಂದವರಿಗೆ ಮೊದಲು ಛಾನ್ಸ್ ಅನ್ನೋ ಸಂಕಟ ಶುರುವಾಯ್ತು. ನಮ್ಮಂತಹ ಕ್ರಿಕೆಟ್ ಕಲಿಗಳ ಅದೃಷ್ಟ ಹೇಗಿತ್ತು ಅಂದ್ರೆ ನಾವು ಕ್ರಿಕೆಟ್ ಆಡಿ ಹಾಳಾಗಿ ಹೋಗಲಿ ಅಂತ ಭೀಕರ ಬರಗಾಲ ಬಂದು ನಮ್ಮೂರ ಕೆರೆ ಹನಿ ನೀರೂ ಕಾಣದೆ ಸಪಾಟೆದ್ದು ಹೋಯ್ತು. ಆ ಕೆರೆ ಅಂಗಳದಲ್ಲಿ ನಾಲ್ಕು ಟೀಂ ಪ್ರಾಕ್ಟೀಸ್ ಮಾಡಕ್ಕೆ ಅವಕಾಶ ಸಿಕ್ಕಿದ್ರಿಂದ ತರ್ಲೆಕ್ಯಾತನಹಳ್ಳಿ ದೇಶಿ ಕ್ರಿಕೆಟ್ ಅಷ್ಟೋ ಇಷ್ಟೋ ಉಳ್ಕಂತು ಅಂತಾನೇ ಹೇಳಬೇಕು.

ಒಂದ್ಸಾರಿ ಕೆರೆ ಅಂಗಳದಲ್ಲಿ ಊರೊಳಗಿನವರಿಗೂ, ಬಡಾವಣೆಯವರಿಗೂ ಮಸಾಲೆ ದೋಸೆ ಮ್ಯಾಚ್ (ಸೋತವರು ಗೆದ್ದ ಟೀಂಗೆ ಮಸಾಲೆ ದೋಸೆ ಕೊಡಿಸಬೇಕು) ನಡೀತು. ಮ್ಯಾಚ್ ನಡೀತಿರಬೇಕಾದರೆ ಬಡಾವಣೆಯ ಪಾಂಡಿ ಬಾರಿಸಿದ ಚೆಂಡು ಕೆರೆ ತುದಿ ಕಲ್ಯಾಣಿಯ ಕೊಚ್ಚೆ ನೀರಿನಲ್ಲಿ ಬಟ್ಟೆ ಕುಸುಕುತ್ತಿದ್ದ ವನಜಳ ಬಳಿ ಹಾರಿತು. ಬಟ್ಟೇನ ಕೈ ಬಿಟ್ಟು ಚಕ್ ಅಂತ ಹಿಂದಕ್ಕೆ ನೆಗೆದು ಬಾಲನ್ನು ಕ್ಯಾಚ್ ಮಾಡಿಬಿಟ್ಟು ವನಜ. ವನಜಳ ಈ ಸಾಹಸ ಮತ್ತು ಆಕರ್ಷಕ ಭಂಗಿ ಪಡ್ಡೆ ಹುಡುಗರನ್ನು ಹುಚ್ಚೆಬ್ಬಿಸಿಬಿಟ್ಟಿತು. ಅದಕ್ಕಿಂತ ಹೆಚ್ಚಾಗಿ ವನಜ ಹಾಗೆ ಹಿಡಿದ ಬಾಲನ್ನು ಏರಿ ಎಂಡಿನ ವಿಕೆಟ್ಗೆ ಡೈರೆಕ್ಟ್ ಹಿಟ್ ಮಾಡಿದ್ದಂತೂ ಈ ಕ್ರಿಕೆಟ್ ಕಲಿಗಳ ನಾಡಿ ಬಡಿತ ನಿಂತು ಹೋಗುವಂತೆ ಮಾಡಿತ್ತು. ವನಜ ಔಟರ್ ಅಂತ ದೂರ ಇಡೋಕೆ ಯಾರಿಗೂ ಮನಸ್ಸಿರ್ಲಿಲ್ಲ. ಆದರೂ ಬ್ರಹ್ಮಚಾರಿ ಅಂಪೈರ್ ಬೂಸಾ ಮಂಜ ವನಜ ಕ್ಯಾಚ್ ಹಿಡಿದದ್ದು ಔಟಲ್ಲ ಅಂತ ತೀರ್ಪು ಕೊಟ್ಟುಬಿಟ್ಟ. ಆದರೂ ಸ್ವಯಂ ಪಾಂಡಿ ವನಜಳಿಗೆ ಔಟಾಗಿದ್ದ ಎಂದು ಎಲ್ಲರಿಗೂ ತಿಂಗಳೊಪ್ಪತ್ತಿನಲ್ಲಿ ಗೊತ್ತಾಗಿ ಹೋಯ್ತು.

ಹೀಗೆ ಪಾಂಡಿಯು ಚೆಲ್ಲಾಟ (ವನಜಳನ್ನ ನೋಡ್ತಾ ಕ್ಯಾಚ್ ಕೈ ಚೆಲ್ಲುವ ಆಟ) ನೋಡಲು ಆವಾಗಾವಾಗ ಬರುತ್ತಿದ್ದ ವನಜ ಎಕ್ಸ್‌ಟ್ರಾ ಪ್ಲೇಯರ್ ಆಗಿ ಸಬ್‌ಸ್ಟಿಟ್ಯೂಟ್ ಆಗಿ ಮೆಲ್ಲಗೆ ಗ್ರೌಂಡಿಗೆ ಇಳಿಯಲು ಶುರು ಮಾಡಿದ್ಲು. ಬೌಲರ್, ಬ್ಯಾಟ್ಸ್‌ಮನ್ ಸಹಿತ. ಎಲ್ಲರೂ ವನಜಳನ್ನು ಬಿಟ್ಟ ಕಣ್ಣು ಬಿಟ್ಟ ಬಾಯಿನಿಂದ ನೋಡಕ್ಕೆ ಶುರುಮಾಡಿದ ಮೇಲೆ ಕ್ರಿಕೆಟ್ ಆಟದ ಗಮ್ಮತ್ತು, ಮರ್ಯಾದೇನೇ ಎಕ್ಕುಟ್ಟಿ ಹೋಯ್ತು. ಹೀಗಾಗಿ ಒಂದಷ್ಟು ಜನ ಮದುವೆಯಾದ ಗಂಡಸರು ವನಜ ಗ್ರೌಂಡಿಗೆ ಇಳಿಯೋದು ಬೇಡ. ಈ ಹುಡುಗರನ್ನ ಗುಂಡಿಗೆ ಹಾಕೋದೂ ಬೇಡ ಅಂತ ತರಲೆ ತೆಗೆದ್ರು. ಇದು ಹೇಗೋ ವನಜಳ ಕಿವಿಗೆ ಬಿತ್ತು. ಅವಳು ಕಾಳಿಯ ಅಪರಾವತಾರ ಆದ್ಲು. ನಿಮ್ಮದೇನು, ಸೀಮೆಗಿಲ್ಲದ ಕ್ರಿಕೆಟ್ಟಾ? ನಾನೂ ಮಾಡಿ ತೋರಿಸ್ತೀನಿ ನೋಡ್ತಿರಿ ಎಂದು ತಾನೇ ಒಂದು ಮಹಿಳಾ ಟೀಂ ಕಟ್ಟಿಬಿಟ್ಳು. ಹೀಗಾಗಿ ವನಜಳನ್ನು ತರ್ಲೆಕ್ಯಾತನಹಳ್ಳಿಯ ಮಹಿಳಾ ಕ್ರಿಕೆಟ್‌ನ ಮಾತಾಮಹಿ(ಷಿ) (ಪಿತಾಮಹ ಶಬ್ದದ ಸ್ತ್ರೀಲಿಂಗ ರೂಪ) ಎಂದೇ ಕರೆಯಲಾಗುತ್ತದೆ.



ಈ ಮಹಿಳಾ ತಂಡ ಅಸ್ತಿತ್ವಕ್ಕೆ ಬಂದ ಮೇಲೆ ಗಂಡು ಹುಡುಗರ ಕ್ರಿಕೆಟ್‌ನ ನೋಡುವವರೇ ಗತಿ ಇಲ್ಲವಾಗಿ ಹೋದ್ರು. ಬೌಂಡರಿ ಗೆರೆ ಹಾಕೋದೇನು, ವಿಕೆಟ್ ನೆಟ್ಟು ಕೊಡೋದೇನು, ಕ್ರೀಸ್ ತಿದ್ದಿಕೊಡೋದೇನು, ಪಿಚ್ ಸಾಪ್ ಮಾಡೋದೇನು ಹೀಗೆ ಎಲ್ಲಕ್ಕೂ ನಾಮುಂದು, ತಾ ಮುಂದು ಅಂತ ಹುಡುಗರು ಮುಗಿ ಬಿದ್ರು. ಈ ಮಹಿಳಾ ಆಟಗಾರ್ತಿಯರು ಕಣಕ್ಕಿಳಿದ ಮೇಲೇ ಫೈನ್ ಲೆಗ್ಗು, ಡಿಫೈನ್ ಲೆಗ್ಗು, ಕವರ್ರು, ಎಕ್ಸ್ಟ್ರಾ ಕವರ್ರು, ಸ್ಲಿಪ್ಪು ಈ ಪದಗಳೆಲ್ಲಾ ಆಕರ್ಷಕ ಅನಿಸೋಕೆ ಶುರುವಾದದ್ದು, ಹಾಗೇ ಅವಕ್ಕೆ ವಿಶೇಷ ಅರ್ಥಗಳಿಗೂ ಹೊಳೆದದ್ದು!

ಹಾಗೆ ಈ ಪಡ್ಡೆ ಹುಡುಗೀರ ಜೊತೆಗೆ ಆಂಟಿಗಳೂ ಜಾಯಿನ್ ಆಗಿ ಮಹಿಳಾ ಕ್ರಿಕೆಟ್‌ಗೆ ವಿಶೇಷ ಮೆರುಗೇ ಬಂದು ಬಿಡ್ತು. ಗಂಡಸರ ವಿಕೆಟ್‌ನ ಹೇಗೆ ಹಾರಿಸೋದು ಎಂಬ ಬಗ್ಗೆ ಆಂಟಿಗಳು ಹುಡುಗಿಯರಿಗೆ ಚೆನ್ನಾಗಿ ಟ್ರೈನ್ ಮಾಡಿದ್ರು, ಇದು ಎಲ್ಲಿತನಕ ಹೋಯ್ತು ಅಂದ್ರೆ ಮಹಿಳಾ ಟೀಂ ಊರೊಳಗಿನ ಟೀಂ ಮೇಲೆ ಮ್ಯಾಚ್ ಆಡಿ ಅವರನ್ನ ಹಣ್ಣುಗಾಯಿ, ನೀರುಗಾಯಿ ಮಾಡಿ ಹಾಕ್ತು. ಮದುವೆಯಾದ ಹೆಂಗಸರೆಲ್ಲಾ ಪ್ಯಾಂಟ್ ಏರಿಸಿಕೊಂಡು ಬಾಲು ಉಜ್ಜೋದು ಯಾಕೋ ಅತ್ತೆಯರಿಗೆ ಸರಿ ಕಾಣಲಿಲ್ಲ. ಸಾಲದ್ದಕ್ಕೆ ಮನೇಲಿದ್ದ ಪಾತ್ರೆ ಪಡಗ ಎಲ್ಲಾ ಫೋರು, ಸಿಕ್ಸ್‌ರ್ ಅಂತ ಹಾರಾಡಕ್ಕೆ ಶುರುವಾದಾಗ ಮನೇಲಿ ಸಾಮರಸ್ಯ ಹಾಳಾಗುತ್ತೆ ಅಂತ ಇವರ ಆಟಕ್ಕೆ ಇತಿಶ್ರೀ ಹಾಡೋ ತೀರ್ಮಾನ ಮಾಡಿದ್ರು. ಪರಸ್ಪರ ಒಬ್ಬರ ಮೇಲೊಬ್ಬರನ್ನು ಎತ್ತಿ ಕಟ್ಟಿ ಟೀಂನ ಒಡೆದು ಹಾಕಿದ್ರು. ಹೀಗಾಗಿ ಮಹಿಳಾ ಕ್ರಿಕೆಟ್ ತೀವ್ರ ಹಿನ್ನಡೆ ಅನುಭವಿಸಬೇಕಾಯ್ತು.

ಅದರಲ್ಲೂ ವನಜಾ, ರಾಗಿಣಿ, ಪದ್ಮ ಎಲ್ಲಾ ಮದುವೆಯಾಗಿ ಹೋದ ಮೇಲೆ ಮಹಿಳಾ ಕ್ರಿಕೆಟ್ ಇರಲಿ ಮಾಮೂಲಿ ಕ್ರಿಕೆಟ್‌ನಲ್ಲೂ ಯಾರಿಗೂ ಆಸಕ್ತಿ ಉಳಿದಿರಲಿಲ್ಲ 20-20 ಮ್ಯಾಚ್ಗಳು ಶುರುವಾದ ಮೇಲೇ ಕ್ರಿಕೆಟ್ ಕಲಿಗಳ ಕೆಚ್ಚು ಹುಚ್ಚು ಮತ್ತೆ ಕೆರಳಿದ್ದು. ಇಷ್ಟೊತ್ತಿಗಾಗಲೇ ನಮ್ಮ ಜಮಾನದ ಆಟಗಾರರು ಎ-1 ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿಯಾಗಿತ್ತು. ಮನೆ ಮಕ್ಕಳು, ಮೊಮ್ಮಕ್ಕಳ ಜೊತೆ ಟೈಂಪಾಸ್‌ಗೆ ಪ್ಲಾಸ್ಟಿಕ್ ಚೆಂಡು ಉರುಳಿಸುವ, ಮೊಬೈಲ್‌ನಲ್ಲಿ ಕಂಪ್ಯೂಟರ್‌ನಲ್ಲಿ ಕ್ರಿಕೆಟ್ ಆಡುವ ಹಂತ ತಲುಪಿದ್ದೆವು. 20-20 ಮ್ಯಾಚ್‌ಗಳು ಶುರುವಾದ ಮೇಲೆ ಪರ್ಮೇಶಿ ಮಗ ಕಲ್ಲೇಶಿ ಒಂದು ಹೊಸ ಟೀಂ ಕಟ್ಟಿದ. ಬರೀ ಬಿಟ್ಟಿ ಚರಟ ಕತ್ತರಿಸುವುದರಲ್ಲೇ ನಿಸ್ಸೀಮನೆನಿಸಿದ್ದ ಸೀನ ತಾನೇನು ಕಮ್ಮಿ ಎಂದು ಗರುಡಗಂಬದ ಪಠಾಲಂನೆಲ್ಲಾ ಕಟ್ಟಿಕೊಂಡು ಯುವರಾಜ್ ಸಿಂಗನಂತೆ ಬ್ಯಾಟ್ ಬೀಸಲಾರಂಭಿಸಿದ. ಹೀಗೆ ಸಂದಿಗೊಂದಿಗಳಲ್ಲಿ ಬ್ಯಾಟ್ ಬೀಸಿಕೊಂಡಿದ್ದ ಕ್ರಿಕೆಟ್ ಕಲಿಗಳಿಗೆ ಶುಕ್ರ ದೆಸೆ, ಸ್ಪಿನ್ ಆಗಿ ತಿರುಗುತ್ತದೆಂದು ಯಾರಿಗೆ ಗೊತ್ತಿತ್ತು.



ವನಜಳ ಗಂಡನ ಬಳಗದಲ್ಲಿ ಪ್ರೇಮಾ ಜಿಂಗಟಾ (ಪ್ರೀತಿ ಜಿಂಟಾ ತರ ಅಂದ್ಕೊಳಿ, ಈಕೆಗೆ ಮೊದಲಿನಿಂದಲೂ ಎಲ್ಲರನ್ನೂ ಜಿಗುಟಿಯೇ ರೂಢಿ ಅಂತೆ) ಎಂಬ ಹೆಂಗಸೊಬ್ಬರಿದ್ದರು. ಈಕೆಗೂ ವನಜಳಿಗೂ ಈ ಕ್ರಿಕೆಟ್ ವಿಷಯಕ್ಕೆ ಮಾತಿಗೆ ಮಾತು ಬೆಳೀತಂತೆ, ಪ್ರೇಮಾ ಜಿಂಗಟಾ ನಿಮ್ಮೂರಿನ ಕ್ರಿಕೆಟ್ ಕಲಿಗಳು ಎಳೇ ನಿಂಬೆಕಾಯಿ ಅಂದಾಗ ವನಜ ಉರಿದು ಬಿದ್ಲಂತೆ, ತವರಿನ ಕ್ರಿಕೆಟ್ ಕಲಿಗಳನ್ನು ಬಿಟ್ಟುಕೊಡುವುದಾದರೂ ಹೇಗೆ? ತರ್ಲೆಕ್ಯಾತನಹಳ್ಳಿ ಟೀಂ ಅಂದ್ರೆ

ಏನಂದುಕೊಂಡಿದೀಯ? ಅವರು ಸಿಕ್ಸರ್ ಹೀರೋಗಳು ಅಂತ ಬಡಾಯಿ ಕೊಚ್ಚುದ್ದಂತೆ ವನಜ. ಸರಿ! ಪ್ರೇಮಾ ಜಿಂಗಟಾ ಹಾಗಿದ್ರೆ ಆ ತರ್ಲೆಗಳನ್ನು ಕರ್ಕಂಡು ಬಂದು ನಮ್ಮ ಹುಡುಗರ ಮೇಲೆ 20-20 ಆಡಿಸು ಅಂತ ಮೀಸೆ (ಆಕೆಗೆ ಸಣ್ಣಗೆ ಮೀಸೆನೂ ಇದೆ) ತಿರುವಿದಳಂತೆ, ವನಜಾ ಪ್ರೇಮಾಳ ಸವಾಲನ್ನ ಒಪ್ಪಿಕೊಂಡು ದೀಪಾವಳಿಗೆ ಮ್ಯಾಚ್ ಗೆದ್ದೇ ಎಣ್ಣೆ ಹಾಕಿ ತುರುಬು ಕಟ್ಟೋದು ಅಂತ ಶಪಥ ಮಾಡಿ ಕೂದಲು ಕೆದರಿಕೊಂಡೇ ಊರಿಗೆ ಬಂದ್ಲಂತೆ, ಊರಲ್ಲಿ ನೋಡುದ್ರೆ ಎರಡು ಟೀಂ ಆಗಿ ಕೂತಿದೆ. ಅವರಿವರ ಹತ್ರ ಅವಲತ್ತುಕೊಂಡು ಎರಡೂ ಟೀಂನ ಮರ್ಜ್ ಮಾಡ್ಲಕ್ಕೆ ನೋಡುದ್ಲು, ಉಹುಂ, ಏನೂ ಪ್ರಯೋಜನವಾಗಲಿಲ್ಲ. ಇಬ್ಬರೂ ಸ್ವಪ್ರತಿಷ್ಠೆ ಬಿಡಲಿಲ್ಲ. ಸರಿ ವನಜ ಒಂದು ತೀರ್ಮಾನಕ್ಕೆ ಬಂದ್ಲು. ಎರಡೂ ಟೀಂನಿಂದ ತನಗೆ ಬೇಕಾದವರನ್ನು ಗುಟ್ಟಾಗಿ ಆರಿಸಿ ಅವರಿಗೆ ಟಿ.ಎ. ಡಿ.ಎ. ಕೊಟ್ಟು ಅವರವರ ಯೋಗ್ಯತೆಗೆ ತಕ್ಕ ಹಾಗೆ ದೀಪಾವಳಿ ಉಡುಗೊರೆ ನೀಡೋ ಪ್ರಲೋಭನೆ ಒಡ್ಡುದ್ಲು ವನಜ. ಇದು ಚೆನ್ನಾಗೇ ವರ್ಕ್‌ಔಟ್ ಆಯ್ತು. ಗಟ್ಟಿ ಆಟಗಾರರೆಲ್ಲಾ ಗುಟ್ಟಾಗಿ ಹರಾಜಾಗಿ ಹೋದ್ರು. ಆದರೆ ಪರ್ಮೇಶಿ ಮಗ ಕಲ್ಲೇಶಿ ಮಾತ್ರ ಬಂಡೆ ತರ ಹಾಗೆ ಉಳ್ಕಂಡ. ಅವನಂತಹ ಆಲ್‌ರೌಂಡ್‌ರ್‌ನ ತಿರಸ್ಕರಿಸಿ ಹೋದರೆ ತರಲೆಕ್ಯಾತನಹಳ್ಳಿ ಲೀಗ್ ಲಾಗ ಆಗುತ್ತೆ ಅಂತ ವನಜಂಗೆ ಗೊತ್ತಿತ್ತು. ಅವಳು ಅವನಿಗೋಸ್ಕರ ಸ್ಪೆಶಲ್ ಪ್ಯಾಕೇಜ್ ಆಸೆ ತೋರಿಸುದ್ಲು. ಕಲ್ಲೇಶಿ ಅದಕ್ಕೂ ಜಗ್ಗಲಿಲ್ಲ. ಕಡೆಗೆ ವನಜ ತನ್ನ ಮಗಳು ಊರ್ವಶಿಯನ್ನ ಛೂ ಬಿಟ್ಳು. ಸೌಂದರ್ಯದ ಖನಿ ಊರ್ವಶಿ ಮೂರೇ ದಿನದಲ್ಲಿ ಕಲ್ಲೇಶಿನ ಬುಟ್ಟೀಗೆ ಹಾಕಿಕೊಂಡ್ಳು. ಕಲ್ಲೇಶಿ ಹಿಟ್ ವಿಕೆಟ್ ಆದ. ಮ್ಯಾಚೂ ನಡೆದೇ ಹೋಯ್ತು. ವನಜಳ ಊಹೆ ಸುಳ್ಳಾಗಲಿಲ್ಲ. ಪ್ರೇಮ ಜಿಂಗಟಾ ಟೀಂ ತರ್ಲೆಕ್ಯಾತನಹಳ್ಳಿ ಟೀಂ ಮುಂದೆ ಹೈರಾಣಾಗಿ ಹೋಯ್ತು. ಕಲ್ಲೇಶಿ, ಊರ್ವಶಿ ಸ್ಫೂರ್ತಿಯಿಂದ ಭರ್ಜರಿ ಸೆಂಚುರೀನೂ ಬಾರಿಸಿ ಬಿಟ್ಟ. ತರ್ಲೆಕ್ಯಾತನಹಳ್ಳಿ ಟೀಂಗೆ ದೀಪಾವಳಿ ಉಡುಗೊರೆ ಸಿಕ್ಕೇಬಿಡ್ತು. ವನಜ ಒಂದು ಹಂಡೆ ನೀರು ಹುಯಿದುಕೊಂಡು ಜಟೆ ಆಗಿದ್ದ ಜಡೇನ ಮತ್ತೆ ಬಾಚಿ ತನ್ನ ಶಪಥ ಈಡೇರಿಸಿಕೊಂಡ್ಳು. ಇದಕ್ಕೇ ಕಾರಣೀಭೂತನಾದ ವಿಜಯ ಶಿಲ್ಪಿ ಕಲ್ಲೇಶಿನ ಹೀಗೇ ಬಿಟ್ಟರೆ ಬೇರೆ ಯಾರದ್ದಾದರೂ ಪಾಲಾಗಿ ಹೋಗ್ತಾನೆ ಅಂತ ಅವರಪ್ಪ ಪರ್ಮೇಶಿ ಜೊತೆ ವ್ಯವಹಾರ ಕುದುರಿಸಿ ವರದಕ್ಷಿಣೆ ತೆತ್ತು ಕಲ್ಲೇಶಿನ ಅಳಿಯನ್ನ ಮಾಡಿಕೊಂಡ್ಳು.

ಸ್ವಲ್ಪ ದಿನ ಎಲ್ಲಾ ಚೆನ್ನಾಗೇ ಇತ್ತು. ಹೆಂಡ್ತಿ ಮನೇಲಿದ್ದ ಪಾತ್ರೆ ಪಗಡಿನೆಲ್ಲಾ ಎತ್ತಿ ಕಲ್ಲೇಶಿ ಮೇಲೆ ಎಸೆಯಕ್ಕೆ ಶುರು ಮಾಡಿದ ಮೇಲೆ ಅತ್ತೆಮ್ಮ ವನಜ ಮಗಳು ಊರ್ವಶಿಗೂ ಕ್ರಿಕೆಟ್ ಚೆನ್ನಾಗೇ ಕಲಿಸಿದ್ದಾಳೆ ಅಂತ ಕಲ್ಲೇಶಿಗೆ ನಿಧಾನಕ್ಕೆ ಗೊತ್ತಾಯ್ತು. ಅವನೂ ಬೇರೆ ದಾರಿ ಹಿಡಿದ. ಯಾವುದೋ ರಂಭೆ ಅನ್ನೋ ಹುಡುಗಿ ಹಿಂದೆ ಬಿದ್ದಿದ್ದಾನೆ ಅಂತ ಸುಳಿವು ಸಿಕ್ತು. ಅಳಿಯನ್ನ ಎದುರಿಗೆ ನಿಲ್ಲಿಸಿಕೊಂಡು ಏನಿದು ಅನ್ಯಾಯ? ಅಂತ ವಿಚಾರಿಸಿದ್ಲಂತೆ ವನಜ. ಅದಕ್ಕೆ ಕಲ್ಲೇಶಿ ಅದ್ಯಾಕೆ ತಪ್ ತಿಳ್ಕೊತೀರ ಅತ್ತೆ? ರಂಭಾ ಚಿಯರ್‌ಗರ್ಲ್! 20-20 ಮ್ಯಾಚಲ್ಲಿ ಚಿಯರ್ ಗರ್ಲ್ ಇಲ್ಲದೆ ಪ್ರಾಕ್ಟೀಸೇ ಮಾಡಕ್ಕಾಗಲ್ಲ ಅಂತ ನಕ್ಕನಂತೆ. ಪ್ರೇಮಾ ಜಿಂಗಟಾ ವನಜಳ ಅವಸ್ಥೆ ಕಂಡು ಕಂಡ ಕಂಡ ಕಡೆ ಕಿಸಕ್ ಅಂತಿದಾಳಂತೆ!



# ಮೂವತ್ತಾರರ ಆರ್ಭಟ

**- ಹ.ಶಿ. ಭೈರನಟ್ಟಿ**

ಇತ್ತ ಮೂವತ್ತೈದೂ ಅಲ್ಲ, ಅತ್ತ ಮೂವತ್ತೇಳೂ ಅಲ್ಲ, ಮೂವತ್ತಾರು ಅಂದರೆ ಸರಿಯಾಗಿ ಮೂವತ್ತಾರು, ಬರೋಬ್ಬರಿ ಛತ್ತೀಸ್ ಅಕಡಾ. ಮೂರರ ಮುಖ ಇತ್ತ, ಆರರ ಮುಖ ಅತ್ತ. ಅವರಿಬ್ಬರ ಹೆಸರುಗಳು ಕೂಡ ಮೂವತ್ತಾರಕ್ಕೆ ತಕ್ಕಂತೆಯೇ. ಇವನು ಮೂರ್ತಿ ಅವಳು ಆರತಿ. ಎತ್ತು ಏರಿಗೆ, ಎಮ್ಮೆ ಕೆರೆಗೆ!

**ಮುವತ್ತಾರು ಇದ್ದದು ಅರವತ್ಮೂರು ಆದದ್ದಾದರೂ ಹೇಗೆ? ಪವಾಡ**

ಮೊದಲು ಹೀಗಿರಲಿಲ್ಲ. ಮನೆಯಲ್ಲಿ ಮಗಳಿದ್ದಳು. ಇಬ್ಬರನ್ನೂ ಹೇಗೆಹೇಗೋ ಸಂಭಾಳಿಸಿಕೊಂಡು ಹೋಗುತ್ತಿದ್ದಳು, ಮೂವತ್ತಾರು ಆಗದ ಹಾಗೆ ನೋಡಿಕೊಳ್ಳುತ್ತಿದ್ದಳು. ಆದರೆ ಯಾವಾಗ ಅವಳು ಮದುವೆ ಮಾಡಿಕೊಂಡು ಹೋದಳೋ ಭುಗಿಲೆದ್ದಿತು ನೋಡಿ ಇವರಲ್ಲಿ ಮೂವತ್ತಾರು!

ಮನೆಯಲ್ಲಿ ಇರೋರೇ ಇಬ್ಬರು ಅಂದಮೇಲೆ ಯಾವಾಗ ಬೇಕಾದಾಗ ಶುರುವಾಗಿಬಿಡುತ್ತಿತ್ತು ಅದರ ಆರ್ಭಟ. ಅಕ್ಕ ಪಕ್ಕದವರಿಗೆ ಎದುರಿಗಿನ ಮನೆಯವರಿಗೆ ಮೊದಮೊದಲು ಮೋಜು ಅನ್ನಿಸುತ್ತಿತ್ತು. ಆದರೆ ಬರಬರುತ್ತ ಅದೇ ತಲೆನೋವಾಗಿಬಿಟ್ಟಿತು. ತಲೆನೋವನ್ನೇ ಅನುಭವಿಸುತ್ತ ದಿನಕಳೆಯತೊಡಗಿದರೇ ವಿನ: ಇವರಿಗೆ ಏನೂ ಹೇಳಲಿಲ್ಲ. ಗಂಡ ಹೆಂಡತಿ ಜಗಳ ಬಿಡಿಸೋ ಗಂಡಸರಾದರೂ ಯಾರಿದ್ದಾರೆ ಈ ಕಾಲದಲ್ಲಿ?

ಇಂಥದರಲ್ಲಿ ಮೂರ್ತಿಗೆ ಆಯ್ತು ನಿವೃತ್ತಿ. ಹಗಲು ಹೊತ್ತಲ್ಲೂ ಜಗಳಾಡಬಹುದು. ಮೂವತ್ತಾರಕ್ಕೆ ಶುಕ್ರದೆಸೆ! ದೀಪಕ್ಕೆ ತುಪ್ಪ ಸುರುವಿದಂತಾಯಿತು. ಮೂವತ್ತಾರರ ದೀಪ ಬೃಹದಾಕಾರದ ಭೂತ ಆಗಿ ಖಾಯಂ ತಳ ಊರಿತು. ಅರವತ್ಮೂರು ಆಗೋದು ಕನಸಿನಿಂದ ಕೂಡ ದೂರ ಹೋಗಿಬಿಟ್ಟಿತು.

ಅದೇನು ಮಾಡ್ತಿದ್ದೀ, ಇದೇನು ಮಾಡಿ ಇಟ್ಟಿರುವಿ, ಏನದು ಸಪ್ಪಳ, ಯಾರ ಫೋನು, ಏನಂತೆ ಇತ್ಯಾದಿ ಪ್ರಶ್ನೆಗಳೇ ಪ್ರಶ್ನೆಗಳು ಮೂರ್ತಿಯವು. ಬೇಸತ್ತ ಆರತಿ ನಿವೃತ್ತಿ ಅಂದರೆ ಮನೆಯಲ್ಲೇ ಕೂಡ್ರೋದು ಅಂತಲ್ಲ, ಹೊರಗೆ ಹೋಗಿ ಅಡ್ಡಾಡಿಕೊಂಡು ಬನ್ನಿ ಎಂದು ಸಾಗಹಾಕುತ್ತಿದ್ದಳು. ಈ ಮೂರುತಿ ಹೋದವರ ಹಾಗೆ ಮಾಡಿ ಮತ್ತೆ ಸ್ವಲ್ಪ ಹೊತ್ತಲ್ಲೇ ವಾಪಸ್ಸಾಗುತ್ತಿದ್ದ. ಮತ್ತೆ ಅವೇ ಪ್ರಶ್ನೆ, ಸವಾಲು, ಪಾಟೀಸವಾಲು ಇತ್ಯಾದಿ. ಹಗ್ಗ ಹರಿಯೋ ಹಾಗಿಲ್ಲ, ಕೋಲು ಮುರಿಯೋ ಹಾಗಿಲ್ಲ, ನಾಯಿಬಾಲ ನೆಟ್ಟಗಾಗೋಹಾಗಿಲ್ಲ.



ಮಗಳಿಗೆ ಮಗ ಹುಟ್ಟಿದ. ಬಾಣಂತನ ಮುಗಿದ ಮೇಲೆ ತನ್ನ ಊರಿಗೆ ಹೊರಟುಹೋದಳು. ಮಗುವನ್ನು ನೋಡಿಕೊಳ್ಳಲು ಅಲ್ಲಿ ಯಾರಾದರು ಬೇಕಲ್ಲ? ಇವಳದು ನೌಕರಿ. ಇಲ್ಲಿಯೇ ಬಂದು ಇದ್ದುಬಿಡಿ, ಮೊಮ್ಮಗನ ಕೂಡ ಇದ್ದ ಹಾಗಾಗುತ್ತದೆ, ನಮಗೂ ಅನುಕೂಲ ಅಂದಳು ಮಗಳು. ಮೂರ್ತಿ ಒಪ್ಪಿಯಾನೇ? ಅಳಿಯನ ಮನೆಯಲ್ಲಿ ಮಾವ ಹೋಗಿ ಇರೋದೇ? ಜನ ಏನು

ಅಂದಾರು? ಸುತಾರಾಂ ಒಪ್ಪಲಿಲ್ಲ. ಮಗಳು ಮತ್ತಷ್ಟು ದಿನ ರಜ ಬೆಳೆಸಿದಳು. ಆ ರಜೆಯೂ ಮುಗಿದ ಮೇಲೆ ಬೇಬಿಸಿಟ್ಟಿಂಗ್‌ನಲ್ಲಿ ಮಗುವನ್ನು ಬಿಟ್ಟು ಕೆಲಸಕ್ಕೆ ಹೋಗತೊಡಗಿದಳು. ತನ್ನ ಸಮಸ್ಯೆ ಬಗೆಹರಿಸಿಕೊಂಡುಬಿಟ್ಟಳು. ಇವರ ಮೂವತ್ತಾರರ ಸಮಸ್ಯೆ ಮಾತ್ರ ಹಾಗೇ ಉಳಿಯಿತು. ಅತಿರೇಕಕ್ಕೆ ಹೋದಾಗೊಮ್ಮೆ ನನಗೆ ಫೋನು ಬರಲು ಶುರುವಾಯ್ತು. ಎಂದೋ ಒಮ್ಮೆ ಬರುತ್ತಿದ್ದ ಫೋನುಗಳು ಮೇಲಿಂದ ಮೇಲೆ ಬರತೊಡಗಿದಾಗ ನಮ್ಮ ಮನೆಯಲ್ಲೂ ಮೂವತ್ತಾರು ಹಣಿಕಿಹಾಕತೊಡಗಿತು.

ನನ್ನವಳು ಸಹನಾಮೂರ್ತಿ ಸರಿ, ಆದರೆ ಮಿತಿಮೀರಿದರೆ ಅವಳಾದರೂ ಹೇಗೆ ಸಹಿಸಿಯಾಳು? ಟೀವಿಯೊಳಗಿನ ಮೆಗಾ ಧಾರಾವಾಹಿ ಮುಗಿದರೂ ಅವರ ಜಗಳ ಮುಗಿಯೋದಿಲ್ಲ. ದಿನಾ ಅಳೋರಿಗೆ ಸಾಯೋರ್‍ಯಾರು? ಇನ್ಮೇಲೆ ಫೋನ್ ಎತ್ತಬೇಡಿ ಅಂದಳು.

ಎಲ್ಲಿ ಏನಾಯಿತೋ ಏನೋ, ಫೋನು ಬರೋದು ನಿಂತೇಹೋಯ್ತು. ನನ್ನ ಸಹನಾಮೂರ್ತಿಯ ಮೇಲೆ ನನಗೆ ಸಂಶಯ. ನಿಮ್ಮ ಮೂವತ್ತಾರರ ಬೂತ ನಿಮ್ಮ ಮನೆಯಲ್ಲೇ ಇರಲಿ, ನಮ್ಮ ಮನೆಗೆ ಬರುವುದು ಬೇಡ ಅಂತೇನಾದರೂ ವಾರ್ನಿಂಗ್ ಕೊಟ್ಟಿದ್ದರೆ? ಏನಾದರೂ ಆಗಿದೆ ಕೇಳಿ ತಿಳಿಯೋಣ ಅಂತ ಇವಳಿಲ್ಲದಾಗ ಅವರ ಲ್ಯಾಂಡ್‌ಲೈನಿಗೆ ಫೋನ್ ಮಾಡಿದೆ. ವಿಷಯ ತಿಳಿದು ಕಂಗಾಲಾದೆ. ಆರತಿಯವರೇ ಫೋನ್ ಎತ್ತಿದ್ದರು.

ನನ್ನ ಮೇಲೆ ಸೇಡು ತೀರಿಸಿಕೊಳ್ಳೋ ದುರ್ಬುದ್ಧಿ ಬೆಳೆದುಬಿಟ್ಟಿದೆ ಇವರಿಗೆ. ನಾಯಿ ಬೆಕ್ಕು ಕಂಡರೆ ನನಗೆ ಆಗೋದಿಲ್ಲ ಅಂತ ಗೊತ್ತಿದ್ದರೂ ತಂದಿಟ್ಟಿದ್ದಾರೆ ನೋಡಿ ನಾಯಿಮರಿ. ನಾನಾ ನಮನಿ ಬಿಸ್ಕೀಟ್ ತಂದಾರ ಅದಕ್ಕ ತಿನಸಾಕ. ತಿನಸಗೋತ ಕುಂತರಂದ್ರ ಇವರ ಹೊಟ್ಟಿ ತುಂಬಿದಾಂಗ ಮಾಡ್ತಾರ, ಢರಿಕಿ ಹೊಡೀತಾರ. ಊಟಕ್ಕ ಕರದ್ರೂ ಬರೂದಿಲ್ಲ.

ಏನಾದ್ರೂ ಸಾಂತ್ವನ ಹೇಳಲೇಬೇಕಲ್ಲ? ನೀವು ಪ್ರತಿಭಟನಾ ಮಾಡಬೇಕಿತ್ತು ವೈನಿ ಅಂದೆ.

ನಾ ಬಿಡುವಾಕಿನ? ಕುದ್ದ ಹೋಗಬೇಕ ಅವ್ರ. ಹಾಂಗ ಒದರಾಡಿನಿ. ಆದ್ರೂ ಪಟ್ಟು ಬಿಡ್ಲಿಲ್ಲ ಆಸಾಮಿ. ನಾ ನಾಯಿ ತಂದ್ರ ನೀ ಯಾಕ ತೆಲಿ ಕೆಡಿಸಿಕೋತಿ? ಅದರ ವ್ಯವಸ್ಥಾ ಮಾಡಾಂವ ನಾ. ಅದರ ಒಂದು ಎರಡು ಮಾಡಸಾಂವ ನಾ. ನನ್ಜೋಡಿ ಇರತೈತಿ, ನನ್ನ ಜೋಡೀನ ತಿರಗಾಡತೈತಿ. ನಾ ಹಾಕಿದ ಬಿಸ್ಕೀಟ್ ತಿಂತೈತಿ. ನೀ ಇದರ ಸಮೀಪ ಬರದಿದ್ದರ ಮುಗೀತ. ನಿಂದೇನಿದ್ರೂ ಅಡಿಗೀ ಮನ್ಯಾಗ. ಅಲ್ಲೇನರೆ ಡಬ್ಬಿ ಗಿಬ್ಬಿ ಮುಟ್ತಾಕ ನಾ ಇದನ್ನ ಬಿಡೂದಿಲ್ಲ. ಕಟ್ಟಿ ಹಾಕಿರತನ. ಬಾಯಿ ಮುಚ್ಕೊಂಡ್ ಸುಮ್ಮನ ನಡೀ ಒಳಗ ಅಂತ ಕಳಿಸಿಬಿಟ್ಟತ ಆಸಾಮಿ. ಶನೀ ಬಂದ ಹೊಕ್ಕಾಂಗಾಗೇತಿ ಮನಿ ಒಳಗ, ಸುಡ್ಲಿ ಒಯ್ದು. ಈಗಿನ್ನ ಮರಿ ಐತಿ, ನಾಳೆ ದೊಡ್ಡದಾದ ಮ್ಯಾಲ ಏನ ಕೇಡಗಾಲ ಕಾದೈತ್ಯೋ ಏನೋ. ನನ್ನ ಹಣೇಬರಾ... ಅಂತ ಗೋಳ್ ತೋಡಿಕೊಂಡರು.

ದೇವ್ರದಾನ ವೈನಿ. ನೀವ್ ಚಿಂತಿ ಮಾಡಬ್ಯಾಡ್ರಿ. ನಾನೂ ಸ್ವಲ್ಪ ವಿಚಾರ ಮಾಡ್ತನ. ಏನರೆ ಒಂದ ಹಾದೀ ಹುಡಕುನು ಅಂತ ಹೇಳಿ ಫೋನ್ ಇಟ್ಟೆ.

ಎರಡು ದಿನಗಳ ಮೇಲೆ ಮೂರ್ತಿಯವರ ಫೋನು. ಹೇಳಿರಬೌದಲ್ಲಾ ನಿನಗ ಇವಳು ಬೌ ಬೌ ಮಾಡಿ, ನಾ ನಾಯೀ ತಂದ ಸುದ್ದೀನ? ಎಂದರು. ಹೇಳಿದಾರೆ ಅಂದೆ.



ಅಲ್ಲಯ್ಯಾ, ಅನಿಷ್ಟಕ್ಕೆಲ್ಲಾ ಶನೀಶ್ವರನೇ ಕಾರಣ ಅನ್ನೋವ್ರಂಗ ಪ್ರತಿಯೊಂದನ್ನೂ ಈ ಪಾಪ ನಾಯೀ ಮ್ಯಾಲನ ಹಾಕ್ತಿದಾಳಲ್ಲಾ, ಹಾಲ ಉಕ್ಕಿದರ ಇದೆಂಗ್ ಕಾರಣ ಆಗತೈತಿ? ಒಲೀ ಮ್ಯಾಲ್

ಇಟ್ಟದ್ದ ಹೊತ್ತಿದರ ಇದೆಂಗ್ ಕಾರಣ ಆಗತ್ತೈತಿ? ಸಮಾಜದಾಗ ನಾಲ್ಕ ಕಡೆ ಓಡ್ಯಾಡಿದಾಂವ್ ನೀ. ಬುದ್ಧೀ ಹೇಳ್ ಇಕೀಗೆ ಅಂದರು.

ಆರತಿ ವೈನಿಗೆ ನಾನು ಬುದ್ಧೀ ಹೇಳೋದೇ? ಆದ್ರೂ ಮೂರ್ತಿಯವರ ಸಮಾಧಾನಕ್ಕೆ ಹೇಳ್ತೇನೆ ಅಂತ್ಹೇಳಿ ಫೋನಿಟ್ಟೆ.

ಮರುದಿವಸವೇ ವೈನಿ ಫೋನ್. ಪಪ್ಪಿ ಅಂತ ಹೆಸರ ಇಟ್ಟಾರ ಈ ಶನಿಗೆ. ಕೊಂಯ್ ಕೊಂಯ್ ಅಂತ ಯಾವೊತ್ತೂ ಇವರ ಸುತ್ತನ ತಿರಗತಿರತ್ತೈತಿ. ಪಪ್ಪೀ ಅಂತ ಕರ್ಕೊಳ್ಳಿ, ಯಾರ ಬ್ಯಾಡ ಅಂತಾರ, ಆದ್ರ ಅದಕ್ಕ ಪಪ್ಪೀ ಕೊಡೂದ? ನೋಡದರ ನನಗ ಹೆಂಗ್ ಅನ್ನಿಸಬೇಕು. ಕೊಡ್ರಿ ಪಪ್ಪೀ ಕೊಡ್ರಿ, ಮುಂದ ಮಸಡಿಗು ಕೊಡ್ರಿ, ಹಿಂದನೂ ಕೊಡ್ರಿ ಅಂತ ಬೈದ್ನಿ. ಇಂಥಾವೆಲ್ಲಾ ಎಲ್ಲಿ ಹತ್ತತಾವ್ ಇವ್ರಿಗಿ. ಏನರೆ ಒಂದ್ ಉಪಾಯ್ ಮಾಡ್ರಿ ಅಂದರು.

ಆದಕೊಂದ್ ಗತೀ ಕಾಣಸೂನು ವೈನಿ. ಈ ನಾಯಿ ಬೆಕ್ಕಾ ಎಲ್ಲಿ ಇಡಬೇಕೋ ಅಲ್ಲೇ ಇಡಬೇಕ. ಸಲಿಗಿ ನಾಯಿ ತಲೀಗೆ ಏರತ್ತೈತಿ ಅನ್ನೂದು ಸುಳ್ಳಲ್ಲ. ಅವ್ರನ್ನ ಸಮಕ್ಷಮ ಭೆಟ್ಟಿ ಆಗಿ ಹೇಳಿನೋಡ್ತನ. ಕೇಳಲಿಲ್ಲ ಅಂದ್ರ ಬ್ಯಾರೆ ಪ್ಲ್ಯಾನ್ ಮಾಡಾಕಬೇಕ ಅಂತ ಧೈರ್ಯ ಹೇಳಿದಾಗ ಅಷ್ಟ ಮಾಡಿ ಪುಣ್ಯ ಕಟ್ಕೋರಿ, ಥ್ಯಾಂಕ್ಸ್ ಅಂತಂದು ಫೋನ್ ಇಟ್ಟರು.

ಇದೂ ಸಲ ಬಚಾವಾದೆ ಅನ್ನಿಸಿತು. ಮೂರ್ತಿಯವರಿಗೆ ಹೇಳೋದಾದರೂ ಹೇಗೆ? ಹೇಳೋದಾದರೂ ಏನಿದೆ? ಆದರೂ ಹುಂಬ ಧೈರ್ಯದಿಂದ ಮೂರ್ತಿಯವರ ಮನೆಗೇ ಹೋಗಿ ಪರಿಸ್ಥಿತಿಯನ್ನು ಸಮಕ್ಷಮ ಕಂಡು ಮುಂದಿನ ಕಾರ್ಯಯೋಜನೆ ಸಿದ್ಧ ಪಡಿಸಿಕೊಳ್ಳಬೇಕೆಂದು ನಿರ್ಧರಿಸಿದೆ. ಸದ್ಯಕ್ಕೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತಾಡಿ ಬಂದುಬಿಡಬೇಕೆಂದು ಎರಡು ದಿವಸಬಿಟ್ಟು ಫೋನ್ ಮಾಡದೆಯೇ ಅವರ ಮನೆಗೆ ಹೋದೆ.

ಅಲ್ಲಿ ಹೋಗಿ ನೋಡಿದರೆ ಎಲ್ಲಾ ಯದ್ವಾತದ್ವಾ! ಆರತಿ ವೈನಿ ನಾಯಿಮರಿಯನ್ನು ಎತ್ತಿಕೊಂಡು ಕುಳಿತಿದ್ದಾರೆ! ಮೂರ್ತಿಯವರು ಅದಕ್ಕೆ ಬಿಸ್ಕೀಟು ತಿನಿಸುತ್ತಿದ್ದಾರೆ! ಪ್ರಪಂಚದ ಎಂಟನೆಯ ಅದ್ಭುತ! ಇದೇನು ಪವಾಡ? ಮೂವತ್ತಾರು ಇದ್ದುದು ಅರವತ್ಮೂರು ಆದುದಾದರೂ ಹೇಗೆ? ಗರಬಡಿದವರಂತೆ ನಿಂತ ನನಗೆ ಇಬ್ಬರೂ ಕೂಡಿಯೇ ಸ್ವಾಗತಿಸಿ ಒಳಗೆ ಬರಲು ಹೇಳಿದರು.

ಹೋಗಿ ಕುಳಿತೆ. ಇದೇನು ಎನ್ನುವಂತೆ ಹುಬ್ಬೇರಿಸಿ ನೋಡಿದೆ.

ಮೂರ್ತಿಯವರು ಹೇಳಿದರು. ನಿನ್ನೆ ರಾತ್ರಿ ಕಳ್ಳ ಬಂದಿದ್ದ, ನಮ್ಮ ಓಣಿಗೆ, ನಮ್ಮ ಮನೆಗೆ. ಇದಕ್ಕೆ ಗೊತ್ತಾಗಿ ಬೊಗಳಲು ಶುರುಮಾಡಿದೆ. ನಿದ್ದೆಯಿಂದ ಎಚ್ಚತ್ತ ಇವಳು ಇದನ್ನು ಮನಸಿನಲ್ಲಿಯೇ ಬೈಯುತ್ತ ಎದ್ದು ನೋಡಿದ್ದಾಳೆ. ಹೆಜ್ಜೆ ಸಪ್ಪಳ ಕೇಳಿಸಿದೆ. ನನ್ನನ್ನು ಎಬ್ಬಿಸಿದಳು. ನನಗೂ ಹೆಜ್ಜೆ ಸಪ್ಪಳ ಕೇಳಿಸಿತು. ಯಾರು, ಯಾರು ಎಂದೆ. ಯಾರೋ ಓಡಿ ಹೋದರು. ಕಿಡಕಿಯಿಂದ ನೆರಳು ಕೂಡ ಕಾಣಿಸಿತು. ಈವತ್ತು ಮುಂಜಾನೆ ಸುದ್ದಿ ತಿಳಿಯಿತು– ನಮ್ಮ ಮುಂದಿನ ಕ್ರಾಸಿನ ಕೊನೆಯ ಮನೆಯಲ್ಲಿ ಕಳ್ಳತನ ಆಗಿದೆ. ನಗದು, ಆಭರಣ ಎತ್ತಿಕೊಂಡು ಹೋಗಿದ್ದಾರೆ. ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ತನಿಖೆ ಶುರುವಾಗಿದೆ. ದೇವರು ಕಾಪಾಡಿದ ಎಂದರು.



ದೇವರು ನಮ್ಮ ಪಪ್ಪಿ ಒದರುವಂಗ ಮಾಡಿದ. ನನಗ ಎಚ್ಚರಾತು. ಇಲ್ದಿದ್ದರ ನಮ್ಮನೆ ಗೋವಿಂದ... ಎನ್ನುತ್ತ ವೈನಿ ಪಪ್ಪಿಗೆ ಪಪ್ಪಿ ಕೊಟ್ಟಳು.

ಆ ದೇವರು ನನ್ನನ್ನೂ ಕಾಪಾಡಿದ್ದ!

# ಕೊಡೆ ಒಂದು ಕೈ ಎರಡು

- ಈಶ್ವರ ಚಂದ್ರ

ನಾನು : ರೀ ಮಿಸ್ಟರ್ ಯಾಕ್ರೀ ಆವಾಗಿಂದ ನನ್ನೇ ಹಿಂಬಾಲಿಸಿಕೊಂಡು ಬರ್ತಿದೀರಿ?

ಅವನು : ..

ನಾನು : ನಿಮ್ಮನ್ನೇ ಕಣ್ರೀ ನಾನು ಕೇಳ್ತಿರೋದು.

ಅವನು : ಓಹೋ ನನ್ನ ಕೇಳ್ತಿದೀರಾ? ನಾನೆಲ್ಲಿ ನಿಮ್ಮನ್ನು ಹಿಂಬಾಲಿಸ್ತಿದೀನಿ. ನೀವೇ ನನ್ನ ಮುಂಬಾಲಿಸ್ತಿದೀರ.

ನಾನು : ಏನದು ಮುಂಬಾಲಿಸೋದು?

ಅವನು : ರಸ್ತೆಯಲ್ಲಿ ಮುಂದೇನೇ ಇದ್ದುಕೊಂಡು ಹಿಂದೆ ಬರೋರ ಚಲನವನ ಗಮನಿಸ್ತಿರೋದು.

ನಾನು : ಓಹೋ ಹೀಗೆ! ಅದಿರ್ಲಿ ನೀವು ಯಾಕೆ ನನ್ನ ಹಿಂದೆ ಹಿಂದೇ ಬರ್ತಿದೀರಿ?

**ಕೊಡೆಯ ರಹಸ್ಯ ಬಯಲಾಗಿದ್ದು ಮನೆ ತಲುಪಿದ ಮೇಲೆ..**

ಅವನು : ಆಕಾಶ ನೋಡಿ.

ನಾನು : ಅಲ್ಲೇನು ಅದಕ್ಕೆ ಕಾರಣ ಸಿಗುತ್ತೆ?

ಅವನು : ಹಾಗಲ್ಲ... ಆಕಾಶದಲ್ಲಿ ಮೋಡ ತುಂಬಿದೆ. ಕಾರ್ಮೋಡ ಅಂತಾರಲ್ಲ.. ಜೊತೆಗೆ ಫಳ್ ಫಳ್ ಅಂತ ಮಿಂಚು. ಹಿಂದೇನೇ ಗುಡು ಗುಡು ಗುಡುಗು. ತಣ್ಣಗೆ ಗಾಳೀನೂ ಬೀಸ್ತಿದೆ...

ನಾನು : ನೀವು ಹಿಂಬಾಲಿಸ್ತಿರೋದಕ್ಕೂ ಇದಕ್ಕೂ ಏನು ಸಂಬಂಧ?

ಅವನು : ಸಂಬಂಧ ಇದೆ.. ಯಾವ್ದೇ ಕ್ಷಣದಲ್ಲಾದರೂ ಮಳೆ ಬರಬಹುದು.

ನಾನು : ಬಂದರೆ?

ಅವನು : ನಿಮ್ಮ ಕೈಯಲ್ಲಿ ಒಂದು ಕೊಡೆ ಇದೆ..

ನಾನು : ಇದ್ದರೆ?

ಅವನು : ಮಳೆ ಬಂದರೆ ಪುಸಕ್ಕಂತ ನಿಮ್ಮ ಕೊಡೆಯೊಳಗೆ ತೂರಿಕೋಬಹುದು!

ನಾನು : ಅಗೋ ಮಳೆ ಶುರುವಾಗೇ ಬಿಡ್ತುರೀ.. ನಿಮ್ಮ ನಾಲಿಗೆ ಮೇಲೆ ಮಚ್ಚೆ ಇರಬೇಕು.

ಅವನು : ಬಿಚ್ಚಿ ಬಿಚ್ಚಿ.. ಮೊದಲು ಕೊಡೆ ಬಿಚ್ಚಿ

ನಾನು : ಅಯ್ಯೋ ಆಗ್ತಿಲ್ಲ

ಅವನು : ಇಲ್ಲಿ ಕೊಡಿ ನಾನು ಬಿಚ್ತೇನಿ.. ಇಗೊ ನೋಡಿ.



ನಾನು : ನನ್ನ ಕೊಡೆ ನನಗಿಂತ ನಿಮಗೇ ಚೆನ್ನಾಗಿ ಪರಿಚಯವಾದ ಹಾಗೆ ಇದೆ.

ಅವನು : ಈ ಕಡೆ ಸ್ವಲ್ಪ ಎಡಕ್ಕೆ ವಾಲಿಸಿ.. ನನ್ನ ಎಡ ಭುಜ ನೆನೀತಾ ಇದೆ.

ನಾನು : ಹಾಗೆ ಕೊಡೆ ಎಳೀಬೇಡಿ. ನನ್ನ ಬಲ ಭುಜ ಒದ್ದೆ ಆಗ್ತಾ ಇದೆ.

ಅವನು : ಎಡವೂ ಬಲವೂ ಬೇಡ. ನೆಟ್ಟಗೆ ಮಧ್ಯಕ್ಕೆ ಹಿಡಿಯೋಣ.

ನಾನು : ಹಾಂ.. ಈಗ ಸರಿ. ಮದುವೆಗೆ ಹೋಗಿದ್ರೇನೋ?

ಅವನು : ಹೌದು ನಿಮಗೆ ಹೇಗೆ ಗೊತ್ತಾಯ್ತು?

ನಾನು : ಫಲ ತಾಂಬೂಲದ ಕವರ್ ಕೈಯಲ್ಲಿದೆಯಲ್ಲಾ?

ಅವನು : ನಿಮ್ಮ ಕೈಯಲ್ಲೂ ಇದೆ. ಅರೆ! ಎರಡೂ ಕವರ್ ಒಂದೇ ತರಹ ಇದೆಯಲ್ಲ?

ನಾನು : ಅದರಲ್ಲೇನು ಆಶ್ಚರ್ಯ? ಒಂದೇ ಅಂಗಡೀಲಿ ಕೊಂಡಿರಬೇಕು.

ಅವನು : ಆದ್ರೆ ವಧು ವರರ ಹೆಸರು ಕೂಡ ಒಂದೇ ಆಗಿದೆ!

ನಾನು : ಓಹೋ ಹಾಗಾದ್ರೆ ನೀವು ಆರ್ ಆರ್ ಕಲ್ಯಾಣ ಮಂದಿರಕ್ಕೆ ಹೋಗಿದ್ರ?

ಅವನು : ಹೌದು. ನೀವು ಗಂಡಿನ ಕಡೇನಾ?

ನಾನು : ಹೌದು. ನೀವು ಹೆಣ್ಣಿನ ಕಡೇನಾ?

ಅವನು : ಹೌದು ಹಾಗಾದ್ರೆ ನಾವು ಈಗ ಸಂಬಂಧಿಕರೇ ಆದ್ವಿ.

ನಾನು : ಅಗೋ ಕೊಡೇನ ಮತ್ತೆ ನಿಮ್ಮ ಕಡೆಗೇ ಎಳೀತಿದೀರಿ.

ಅವನು : ಇರಚಲು ಈ ಕಡೆಯಿಂದ ಬೀಳ್ತಿದೆ. ಆದರೆ ನನಗೊಂದು ಅನುಮಾನ.

ನಾನು : ಅದರಲ್ಲೇನು ಅನುಮಾನ?

ಅವನು : ಅನುಮಾನ ಮಳೇದಲ್ಲ, ಕೊಡೇದು.

ನಾನು : ಕೊಡೇದೇನು ಅನುಮಾನ?

ಅವನು : ಈ ಕೊಡೆ ನನ್ನ ಕೊಡೆ ಥರಾನೇ ಇದೆ.

ನಾನು : ಸಾವಿರಾರು ಕೊಡೆ ತಯಾರು ಮಾಡ್ತಾರೆ. ಎಲ್ಲ ಒಂದೇ ಥರ ಇರುತ್ವೆ. ಅದಕ್ಕೆ ನನ್ನ ಮಗಳು ಕಸೂತಿಯಲ್ಲಿ ಕೆ.ಎಂ.ಆರ್. ಅಂತ ನನ್ನ ಇನಿಷಿಯಲ್ಸ್ ಹಾಕಿಬಿಟ್ಟಿದ್ದಾಳೆ.

ಅವನು : ಅರೇ! ನಾನು ಕೆ.ಎಂ.ಆರ್.!

ನಾನು : ಕೆ. ಎಂ. ಆರ್. ಅಂದರೆ ಕೆಂಪಾಪುರ ಮಂಜುನಾಥಯ್ಯ ರಾಮಚಂದ್ರಯ್ಯ ಅಂತ.

ಅವನು : ನನ್ನ ಕೆ ಎಂ ಆರ್ ಅಂದ್ರೆ ಕೆಂಪಾಪುರ ಮೈಲಾರಯ್ಯ ರಘುನಾಥ್ ಅಂತ.



ನಾನು : ಓಹೋ ನೀವೂ ಕೆಂಪಾಪುರದವರೋ?

ಅವನು : ನಾನಂತೂ ಆ ಊರು ನೋಡಿಲ್ಲ, ಯಾವ್ದೋ ಕಾಲದಲ್ಲಿ ನಮ್ಮ ಪೂರ್ವಿಕರು ಇಲ್ಲಿಗೆ ಬಂದರು. ಆದರೆ ಊರು ಮಾತ್ರ ನನ್ನ ಹೆಸರಿಗೆ ಅಂಟಿಕೊಂಡಿದೆ.

ನಾನು : ನನ್ನ ಮಗಳು ಕೇಸರಿ ಬಣ್ಣದ ದಾರದಲ್ಲಿ ಕೆ.ಎಂ.ಆರ್. ಅಂತ ಹಾಕಿಬಿಟ್ಟಿದ್ದಾಳೆ.

ಅವನು : ಬಣ್ಣ ಹೋಗಿ ಕೇಸರಿ ಇದ್ದದ್ದು ಹಳದಿ ಆಗ್ಬಿಟ್ಟಿದೆಯಾ? ನನ್ನ ಮಗಳೂ ಹಳದಿ ಬಣ್ಣದಲ್ಲಿ ಇನಿಷಿಯಲ್ಸ್ ಹಾಕಿದ್ಲು.

ನಾನು : ಹಾಗಾದ್ರೆ ನಿಮ್ಮ ಕೊಡೆ ಎಲ್ಲಿ?

ಅವನು : ನನ್ನ ಕೊಡೇನೂ ಹೀಗೇ ಇತ್ತು.

ನಾನು : ಇತ್ತು? ಏನು ಭೂತ ಕಾಲದಲ್ಲಿ ಮಾತಾಡ್ತಿದೀರಿ?

ಅವನು : ಈಗ ಇಲ್ಲ.

ನಾನು : ಎಲ್ಲಿ ಹೋಯ್ತು?

ಅವನು : ಮದುವೆ ಮನೇಲಿ ಕಳೆದು ಹೋಯ್ತು.

ನಾನು : ಅಯ್ಯೋ ಪಾಪ!

ಅವನು : ಯಾರೋ ಕಳ್ಳ ಕದ್ದ.

ನಾನು : ಯಾಕೆ ಕೈಯಲ್ಲಿ ಹಿಡಿದಿರಲಿಲ್ಲವೆ?

ಅವನು : ಒದ್ದೆ ಆಗಿತ್ತು ಅಂತ ಮೂಲೇಲಿ ಇಟ್ಟಿದ್ದೆ.

ನಾನು : ಯಾರೂ ಕದ್ಕೊಂಡು ಹೋಗಿಲ್ಲ ಇವ್ರೇ.. ಯಾರೋ ಪಾಪ ಬೈ ಮಿಸ್ಟೇಕ್ ತಮ್ಮದು ಅಂತ ತಗೊಂಡು ಹೋಗಿರಬಹುದು.

ಅವನು : ಬೈ ಮಿಸ್ಟೇಕ್ ಅಂತ ಹೆಂಡ್ತೀನೇ ಹೊಡ್ಕೊಂಡು ಹೋಗ್ತಾರೆ ಈಗಿನ ಕಾಲದಲ್ಲಿ.

ನಾನು : ತಮಾಷೆಯಾಗಿ ಮಾತಾಡ್ತೀರಿ!

ಅವನು : ನಿಮಗೆ ತಮಾಷೆ. ನನಗೆ ಕೊಡೆ ಕಳಕೊಂಡ ಸಂಕಟ. ಯಾರೋ ಪಾಪಿ ನೋಡೀ ನೋಡಿ ನನ್ನ ಕೊಡೇನೇ ಹೊಡ್ಕೊಂಡು ಹೋಗ್ಬೇಕಾ?

ನಾನು : ಬಹಳ ನೊಂದಿದೀರಿ. ಬನ್ನಿ ನಮ್ಮ ಮನೇಗೆ. ಒಂದು ಲೋಟ ಬಿಸಿ ಬಿಸಿ ಕಾಫಿ ಕುಡಿದ್ರೆ ಕೊಂಚ ಸಮಾಧಾನ ಆಗಬಹುದು... ಇದೇ ನಮ್ಮ ಮನೆ.

ಅವನು : ಈ ಮಳೇಲಿ ಒಂದು ಲೋಟ ಬಿಸಿ ಕಾಫಿ..!

ಮಗಳು : ಏನಣ್ಣಾ.. ಯಾವ್ದೋ ಕೊಡೆ ಹಿಡ್ಕೊಂಡು ಬಂದಿದೀರಾ?

ನಾನು : ನಂದೇ ಕೊಡೇನಮ್ಮಾ..

ಮಗಳು : ನೀವು ಇವತ್ತು ಕೊಡೇನೇ ತಗೊಂಡು ಹೋಗಿರಲಿಲ್ಲ. ನಿಮ್ಮ ಕೊಡೆ ಇಲ್ಲೇ ಇದೆ ನೋಡಿ.

ಅವನು : ಹಾಗಾದ್ರೆ ಈ ಕೊಡೆ..?

ಮಗಳು : ಅಪ್ಪಾ, ಈ ತಿಂಗಳಿನಲ್ಲಿ ಇದು ಮೂರನೇ ಕೊಡೆ ನೀವು ತರ್ತಾ ಇರೋದು.

ಅವನು : ಅಯ್ಯೋ ನನ್ನ ಮೂರು ಕೊಡೆ ಕಳೆದು ಹೋಗಿದೆ..!!



# ದಿ ಬೆಸ್ಟ್ ಪಾರ್ಟ್ ಆಫ್ ಮೈ ಕೆರೀರ್..

**ಎಚ್. ಗೋಪಾಲಕೃಷ್ಣ**

ಬೆಳಿಗ್ಗೆ ಸಂಜೆ ವಾಕಿಂಗು ಅಂತ ಹೋದರೆ ಸಿಗೋ ಜನ ಅವರೇ..ಅದೇ ಮುದುಕರು ಮತ್ತು ಅದೇ ಸಿನಿಕರು. ಅವರವರ ಕಾಲದ್ದೇ ಮಾತು ಹಾಗೂ ತಾವು ಹೇಗೆ ಅತ್ಯಂತ ಕಠಿಣ ಸವಾಲುಗಳನ್ನು ಎದುರಿಸಿದೆವು ಅನ್ನುವ ಕೊಚ್ಚುವಿಕೆ! ಈ ಪರಿಸರ ಮನಸ್ಸಿನ ಮೇಲೆ ಹೇಗೆ ಅಚ್ಚು ಒತ್ತಿಬಿಟ್ಟಿತ್ತು ಅಂದರೆ ಈ ಗುಂಪಿನವರ ಮುಖವನ್ನು ಯಾವ ಸಮಯದಲ್ಲಿಯೇ ನೋಡಲಿ ಅವರು ಹೊರಡಿಸುವ ಮೊದಲನೇ ಶಬ್ದದಿಂದಲೇ ಇನ್ನು ಒಂದೂವರೆ ಘಂಟೆ ಅವರು ಯಾವ ಯಾವ ಪದ ಉಪಯೋಗಿಸಿ ಅವರ ನೈಂಟೀನ್ ಸಿಕ್ಸಟಿ ಕಾಲದ ಕಥೆಯನ್ನು ಹೇಳಬಹುದು ಎನ್ನುವುದು ಮೂಡಿರುತ್ತಿತ್ತು. ಅವರ ಪಾಡಿಗೆ ಅವರು ನೈಂಟೀನ್ ಸಿಕ್ಸಟಿ ಕಾಲದ ಕಥೆ ಬಿಡುತ್ತಾ ಇದ್ದರೆ ನಾನು ಅದಕ್ಕಿಂತಲೂ ಈಚಿನ ಅಂದರೆ ಸೆವೆಂಟೀಸ್ ಎಐಟೀಸಿನ ನೆನಪುಗಳನ್ನ ಮನಸಿನಲ್ಲಿ ಹರಿಯಬಿಡುತ್ತಿದ್ದೆ ಮತ್ತು ನಿರಾಳವಾಗಿ ಅವರಿಗೆ ಕಿವಿ ಕೊಟ್ಟ ಭಾವ ಮೂಡಿಸುತ್ತಿದ್ದೆ! ಸಹಜವಾಗಿ ಇದು ಅವರಿಗೆ ಖುಷಿ ಕೊಡುತ್ತಿತ್ತು ಮತ್ತು ನನ್ನ ಬಗ್ಗೆ ಪ್ರೀತಿ ವಿಶ್ವಾಸ ನಂಬಿಕೆ.... ಹೀಗೆ ಅದೇನೇನೋ ಅಮೂರ್ತಗಳನ್ನು ಹುಟ್ಟಿಸುತ್ತಿತ್ತು. ಮತ್ತು ಈ ಜನ ಎಲ್ಲಾ ಸಮಯದಲ್ಲೂ ನನ್ನ ಬಳಿಗೆ ಬರೋರು, ಅವರ ಕಷ್ಟ ಹೇಳಿಕೊಂಡು ಹೊರೆ ರವಾನಿಸಿ ಹೋಗೋರು! ಇದು ಸುಮಾರು ಕಾಲ ನಡೆದ ನಂತರ ಅವರ ತಲೆ ಭಾರ ನನಗೆ ವರ್ಗಾಯಿಸಲು ಈ ಜನ ಬರುತ್ತಿರೋದು ಅಂತ ನನಗೆ ತಿಳೀತು.

ಇದರಿಂದ ತಪ್ಪಿಸಿಕೊಳ್ಳೋದು ಹೇಗೆ ಅಂತ ಸುಮಾರು ರೀಸರ್ಚ್ ಮಾಡಿ ಹೊಸಾ ದಾರಿ ಹುಡುಕಿಕೊಂಡೆ.

ತಮ್ಮ ತಲೆ ಭಾರ ಇಳಿಸಿಕೊಳ್ಳಲು ಜನ ನನ್ನ ಬಳಿಗೆ ಹೊತ್ತು ಗೊತ್ತು ಇಟ್ಟುಕೊಂಡಿರಲಿಲ್ಲ. ರಾತ್ರಿ ಹನ್ನೆರೆಡೂವರೆಗೆ ನಿದ್ದೆ ಬಂದಿಲ್ಲ ನಿಮ್ಮ ಹತ್ತಿರ ಬಂದೆ ಅಂತ ಬರೋರಿಂದ ಹಿಡಿದುಬೆಳಗಿನ ಜಾವ ನಾಲ್ಕಕ್ಕೆ ಬೇಗ ನಿದ್ದೆಮುಗೀತು, ನಿಮ್ಮ ನೆಪ್ಪಾತು ಹಂಗೇ ಮಾತಾಡಿ ಹೋಗೋಣ ಅಂತ ಬಂದೆ ಅಂತ ಸಬೂಬು ಹೇಳಿಕೊಂಡು ಬರೋ ಗೆಳೆಯರು ನನಗಿದಾರೆ. ಮೊದ ಮೊದಲು ಹೆಂಡತಿ ರೇಗುತ್ತಿದ್ದಳು, ಈಗ ಇದು ಅಂದರೆ ನಾನು ಒನಕೆ ಅದು ಏನು ಮಾಡಿದರೂ ಚಿಗುರದು ಎನ್ನುವ ಸತ್ಯ ಕಂಡುಕೊಂಡಿದ್ದಾಳೆ ಮತ್ತು ತಲೆ ಬಾಗಿಲ ಪಕ್ಕ ನನ್ನ ಹಾಸಿಗೆ ಹಾಕಿ ಅಲ್ಲಿಂದ ಎರಡು ಮಾಡಿ ಮೇಲೆ ಆಕೆ ಮಲಗ್ತಾಳೆ–ಅವಳಿಗೂ ನೆಮ್ಮದಿ, ನನಗೂ ಅಷ್ಟೇ! ಅವಳಿಗೆ ದೆವ್ವದಕಾಟ ಅರಸನ ಅಂಕೆ ಇಲ್ಲವಂತೆ, ನನಗೆ ಹೆಣ್ಣು ದೆವ್ವದಕಾಟ ಇಲ್ಲ ಮತ್ತು ಅರಸಿ ರಾಣಿ ಅಂಕೆ ಇಲ್ಲ!



ನನ್ನ ಹೊಸಾ ಉಪಾಯ ಅದೇನು ಅಂತ ನೀವು ತಲೇಗೆ ಕೆಲಸ ಕೊಡ್ತಾ ಇದೀರಿ ಅಂತ ನನಗೆ ಗೊತ್ತು. ಈಗ ಅದಕ್ಕೇ ಬಂದೆ. ಮಸಲಾ ರಾತ್ರಿ ಹನ್ನೆರೆಡೂವರೇಗೆ ಒಂದು ಅಸಾಮಿ ಬಂತು ಬಂದು ಬಾಗಿಲು ತಟ್ಟಿತು ಅಂತ ಇಟ್ಕೊಳ್ಳಿ. ಬಾಗಿಲ ಹತ್ತಿರ ನಾನೇ ತಾನೇ ಮಲಗಿರೋದು? ಎದ್ದು ಬಾಗಿಲು ತೆಗೀರಿ, ಬಂದಿರೋರು ಮಾತಾಡುವ ಮೊದಲೇ ಒಂದ್ನಿಮಿಷ ಇರಿ ಅಂತ ಬಚ್ಚಲಿಗೆ ಸರೀರಿ, ಹಲ್ಲು ಸೆಟ್ಟು ಇಟ್ಟುಕೊಂಡು ಹಾಲಿಗೆ ಬನ್ನಿ.

A ಹಾಲಿಗೆ ಬರ್ತಿದ್ದ ಹಾಗೇ ರಾಯರೇ ನಮಸ್ಕಾರ ಅನ್ನುವುದು. ನಿಮ್ಮನ್ನೇ ನೆನೆಸ್ಕೋತಾ ಇದ್ದೆ.. ಒಂದು ವಿಷಯ ನಿಮ್ಮನ್ನ ಕೇಳೋದು ಈವರೆಗೆ ಮರೆತಿದ್ದೆ ಇವರೇ.. ಅನ್ನೋದು. ಬಂದಿರೋರು ಕಕ್ಕಾಬಿಕ್ಕಿ ಆಗಿರ್ತಾರೆ. ಈಗ ನಿಮ್ಮ ಪ್ರಶ್ನೆ ಎಸೀರಿ..

ದಿ ಬೆಸ್ಟ್ ಪಾರ್ಟ್ ಆಫ್ ಯುವರ್ ಕೆರೀರ್ ಏನು ಅಂತ ಕೇಳಿ. ಪ್ರತಿಯೊಬ್ಬರಿಗೂ ಅವರ ಲೈಫಿನಲ್ಲಿ ಒಂದು ಬೆಸ್ಟ್ ಪಾರ್ಟು ಇದ್ದೇ ಇರುತ್ತೆ. ಇದಕ್ಕೇ ಪ್ರಿಪರೇಷನ್ನು, ನೋಟ್ಸು ಅದೇನೂ ಬೇಡ !ಇಂಪ್ರಾಪ್ಟು ಅಂದರೆ ಆಶು ಭಾಷಣದ ಹಾಗೆ ಅವರ ಮಾತುಗಳು ಮುಖ್ಯಮಂತ್ರಿಗಳ ಬಾಯಿಗೆ ಮೈಕು ಸಿಕ್ಕ ಹಾಗೆ ಓಡಲು ಶುರು ಹಚ್ಚುತ್ತೆ–ಬ್ರೇಕೇ ಇರುಲ್ಲ . . .

ಮೊನ್ನೆ ಹಾಗೇ ರಾತ್ರಿ ಎರಡು ಗಂಟೆಗೆ ಒಬ್ಬರು ಬಂದರು ಅವರ ಕಷ್ಟ ಹೇಳಿಕೊಳ್ಳಲು. ನನ್ನ ಪ್ರಶ್ನೆ ಅವರಿಗೆ ಎಸೆದೆ. ದಿ ಬೆಸ್ಟ್ ಪಾರ್ಟ್ ಆಫ್ ಮೈ ಕೆರೀರ್ ಹೇಳಿ ಅಂದೆ. ಕತ್ತಲಲ್ಲೂ ಅವರ ಮುಖ ಹೊಳೀತಿರೋದು ನನಗೆ ಕಾಣಿಸಿತು, ಕಣ್ಣಿನಲ್ಲಿ ಒಂದು ವಿಚಿತ್ರ ರೀತಿಯ ಹೊಳಪು ಬಂತು. ಅವರು ಅರವತ್ತು ವರ್ಷ ಹಿಂದೆ ಓಡಿದರು. ಆಗತಾನೇ ಕೆಲಸಕ್ಕೆ ಸೇರಿದ್ದೆ ಸಾರ್. ನಾನು ಸೆಕ್ಷನ್ ಹೆಡ್ಡು. ನನ್ನ ಕೆಳಗೆ ಹದಿನಾರು ಜನ, ಅವರ ಕೆಳಗೆ ತಲಾ ಇಪ್ಪತ್ತು ಜನ. ಇವರಿಗೆಲ್ಲಾ ನಾನೇ ಬಾಸು. ನನಗೆ ಮೂರು ಪಿ.ಏಗಳು. ಮೂರೂ ಹುಡುಗೀರು, ಆಗತಾನೇ ಕಾಲೇಜು ಮುಗಿಸಿ ಬಂದೋವು. ದಪ್ಪ ಇದ್ದೋವು, ಚೂಟಿ ಮತ್ತು ಸಕತ್ ಬುದ್ಧಿ ಅವುಕ್ಕೆ. ಫಾಕ್ಟರಿ ಕಾನೂನಿನ ಪ್ರಕಾರ ರಾತ್ರಿ ಏಳು ಗಂಟೆ ಮೇಲೆ ಅವರು ಇರೋ ಹಾಗಿಲ್ಲ, ನಾನೂ ಏಳು ಗಂಟೆ ವರೆಗೂ ಅವರ ಹತ್ತಿರ ಅದೂ ಇದೂ ಕೆಲಸ ಮಾಡಿಸ್ತಿದ್ದೆ. ಬೇರೆ ಯಾವ ಡಿಪಾರ್ಟ್ಮೆಂಟಲ್ಲೂ ಇರದೇ ಇರೋ ಕೆಲಸ ಇವನದ್ದು ಹುಡುಗೀರ ಜತೆ ಸರಸ ಆಡೋಕ್ಕೆ ಕೂತಿರ್ತಾನೆ ಅಂತ ಟ್ರೇಡ್‌ಯೂನಿಯನ್‌ಗಳು ಬುಲೆಟಿನ್ ಹಂಚಿಬಿಟ್ವು.. ಮೇನೇಜುಮೆಂಟು ನನ್ನನ್ನೇ ಟ್ರಾನ್ಸ್‌ಫರ್ ಮಾಡಿಬಿಡೋದೇ. . . ಐದು ಗಂಟೇವರೆಗೂ ಅವರು ದಿ ಬೆಸ್ಟ್ ಪಾರ್ಟ್ ಆಫ್ ಮೈ ಕೆರೀರ್. ಹೇಳಿಕೊಂಡು ಕೂತಿದ್ದರು. ಗಡಿಯಾರ ನೋಡಿಕೊಂಡು ಹೋ ಐದಾಯ್ತು, ಮಂಚದ ಮೇಲೆ ನಾನಿಲ್ಲ ಅಂದರೆ ಹೆಂಡ್ತಿ ಈ ವಯಸ್ಸಲ್ಲಿ ಈ ಸಮಯದಲ್ಲಿ ಎಲ್ಲಿ ಹೋದ ಇವನು ಅಂತ ಭೂಮಿ ಆಕಾಶ ಒಂದು ಮಾಡಿಬಿಡ್ತಾಳೆ, ಅವಳಿಗೆ ಮೊದಲಿಂದಲೂ ನನ್ನ ಮೇಲೆ ಒಂದು ಥರಹಾ ಓವರ್ ಪೊಸೆಷನ್ನು... ಬರ್ತೀನಿ, ಇನ್ನೊಂದು ಸಲ ಮಿಕ್ಕಿದ್ದು ಹೇಳ್ತೀನಿ ಅಂತಪಂಚೆ ಸರಿಮಾಡಿಕೊಂಡು ಸರಸರ ಹೆಜ್ಜೆ ಹಾಕುತ್ತಾ ಓಡಿದರು.

ರಾತ್ರಿ ಒಂಬತ್ತಕ್ಕೆ ಬಂದೋರು ಒಬ್ಬರಿಗೆ ನನ್ನ ಈ ಪ್ರಶ್ನೆ ಎಸೆದೆ ಒಂದು ಸಲ. ದಿ ಬೆಸ್ಟ್ ಪಾರ್ಟ್ ಆಫ್ ಮೈ ಕೆರೀರ್ ಹೇಳಿ ಸಾರ್.... ಅಂತ ಉಬ್ಬಿಸಿದೆ.

ಬೀಎಸ್ಸಿ ಆಯ್ತಾ ಬೆಂಗಳೂರಲ್ಲೇ ಖಾಯಂ ಕೆಲಸ ಸಿಕ್ತಾ? ಇನ್ನೂ ಮದುವೆ ಇಲ್ಲ, ಮನೇಲಿ ನಾನೇ ಕೊನೇವ್ನು, ಏನೂ ಜವಾಬ್ದಾರಿ ಇಲ್ಲ, ಕಂಟೋನ್ಮೆಂಟಿನಲ್ಲಿ ಬಂದಿದ್ದ ಸಿನಿಮಾ ಎಲ್ಲಾ ನೋಡ್ತಾ ಇದ್ದೆ ಎಲ್ಲಾ ಇಂಗ್ಲಿಷಿ ನೋವು. ಸಿನಿಮಾ ನೋಡಿಕೊಂಡು ಹಾಗೇ ವಿಕ್ಟೋರಿಯಾದಲ್ಲಿ ಒಂದು ಬಾಟಲು ಬೀರು ಹೀರಿ, ಕೆಲವು ಸಲ ಇದು ಮೂರೂ ಆಗ್ತಿತ್ತು. ಒಂದು ಸಲ ಬೆಟ್ಟಿಂಗ್ ಕಟ್ಟಿ ಆರು ಬಾಟಲು ಹೀರಿದ್ದೆ–ಪಾನ ಘೋಷ್ಠಿ ಮುಗಿಸಿ ಮನೆ ಸೇರೋ ಹೊತ್ತಿಗೆ ಬೆಳಗಿನ ಜಾವ ಆಗಿರೋದು. ಒಂದು ಒಂದೂವರೆ ವರ್ಷಮನೇಲಿ ಸುಮ್ನಿದ್ದರು. ಆಮೇಲೆ ಮದುವೆ ಮಾಡ್ಕೋ ಅಂತ ಒಂದೇ ಸಮ ಬಲವಂತ ಶುರು ಮಾಡಿಬಿಟ್ಟರು. ನನಗೆ ಆಗ ಇಪ್ಪತ್ತನಾಕು. ಈಗಲೇ ಬೇಡ ಮೂವತ್ತಕ್ಕೆ ಆಗ್ತೀನಿ ಅಂತ ನಾನು. ಮೂವತ್ತಕ್ಕೆ ಆದರೆ ನೀನು ರಿಟೈರು ಆಗಬೇಕಾದರೆ ಮಕ್ಕಳು ಕೈಗೆ ಬಂದಿರೋಲ್ಲ ಅಂತ ಅವರು. ಪರವಾಗಿಲ್ಲ ಸಂಪಾದನೆ ಮಾಡಿಗುಡ್ಡೆ ಹಾಕಿರ್ತೀನಿ ಅಂತ ನಾನು.... ಕೊನೇಗೆ ಅವರೇಗೆದ್ದೂ



ಬಿಟ್ಟರು. ಈ ಶನಿ ಮನೇಗೆ ಬಂತು. ಕೆಲಸ ಮುಗಿದ ಕೂಡಲೇ ಮನೇಗೆ ಬರಬೇಕು ಸಂಬಳ ಪೂರ್ತಿ ನನ್ನ ಕೈಗೇ ಕೊಡಬೇಕು, ನನಗೆ ಗೊತ್ತಿಲ್ಲದ ಹಾಗೆ ಸಿನಿಮಾ ನೋಡಬಾರದು, ಸ್ನೇಹಿತರ ಜತೆ ಸುತ್ತಬಾರದು. . . . .ಅಂತ ನನ್ನ ಪೂರ್ತಿಕಂಟ್ರೋಲಿಗೆ ತಗೊಳ್ತು. ಇನ್ನ ಬೀರು ಕುಡಿಯೋದು ಎಲ್ಲಿ? ಅದೆಲ್ಲಾ ಕನಸಾಗಿ ಹೋಯ್ತೂ ಇವರೇ.... ಅಂತ ಅವರು ಗಳಗಳ ಅತ್ತು ಬಿಡೋದೇ? ಅವರನ್ನ ಸಮಾಧಾನ ಪಡಿಸಿ ನನ್ನ ಬೆಡ್‌ರೂಮಿನಲ್ಲಿ ಅವಿತಿಟ್ಟಿದ್ದ ಬಾಟಲು ಓಪನ್ ಮಾಡಿ ಮೂರು ಸಿಪ್ಪು ಅವರ ಬಾಯಿಗೆ ಹಾಕಿ ನಾಲ್ಕು ಲವಂಗ ತಿನ್ನಿಸಿ ವಾಸನೆ ಹೊಡೀತಿಲ್ಲ ಬಾಯಿ ಅಂತಾದ ಮೇಲೆ ರಾತ್ರಿ ಮೂರಕ್ಕೆ ಅವರನ್ನ ಮನೆ ಸೇರಿಸಿದೆ!

ರಾತ್ರಿ ಹನ್ನೆರೆಡಕ್ಕೆ ಬರೋರು ಇಡೀ ರಾತ್ರಿ ಇಲ್ಲೇ ಕಳೀತಿದ್ದರು ನೋಡಿ. ಅಂಥಹವರ ಮೊಮ್ಮಕ್ಕಳು ತಾತನ್ನ ಹುಡುಕಿ ಬೆಳಗ್ಗೆ ಒಂಬತ್ತಕ್ಕೋ ಹತ್ತಕ್ಕೋ ನಮ್ಮ ಮನೇಗೆ ಬರ್ತಾ ಇದ್ದವು – ತಾತನ ಜವಾಬ್ದಾರಿ ಒಪ್ಪಿಕೊಂಡು ಅಲ್ಲಿ ಫಾರಿನ್‌ನಲ್ಲಿ ಇರೋ ಅಪ್ಪನಿಂದ ಕಪ್ಪ ವಸೂಲಿ ಮಾಡೋವು ಇವು. ತಾತ ಮಿಸ್ ಆಗಿದಾನೆ ಅಂದರೆ ಅವರ ವರಮಾನಕ್ಕೆ ಕುತ್ತು – ಅದರಿಂದ ತಾತನ ಮೇಲೆ ಪ್ರೀತಿ. ಇವು ಬರೋ ಹೊತ್ತಿಗೆ ತಾತ ಜಾಗ ಖಾಲಿ ಮಾಡಿ ಎರಡು ಮೂರು ಘಂಟೆ ಆಗಿರೋದು. ಬೆಳಿಗ್ಗೆ ಬೇಗ ತೆಗೆಯೋ ಹೋಟಲ್ಲು ಹುಡುಕಿ ತಾತ ಅಲ್ಲಿ ಕೇಸರೀ ಭಾತೋ ಉದ್ದಿನ ವಡೆ ಮೇಯ್ತಾ ಇರಬೇಕಾದರೆ ಈ ಮೊಮ್ಮಕ್ಕಳು ಅಲ್ಲಿ ಹೋಗಿ ಅಭಾಸ ಮಾಡಬಾರದು ಅಂತ ನನ್ನ ಇರಾದೆ. ಅದಕ್ಕೆ ತಾತನ್ನ ಹುಡುಕಿ ಬರೋ ಮೊಮ್ಮಕ್ಕಳಿಗೂ ನನ್ನ ಪ್ರಶ್ನೆ ಎಸೀತಿದ್ದೆ. – ದಿ ಬೆಸ್ಟ್ ಪಾರ್ಟ್‌ಆಫ್ ಮೈ ಕೆರೀರ್...... ಹೋ ಎಂತೆಂಥಹಾ ಉತ್ತರ ಬರೋದೂ ಅಂತೀರೀ? ಅವರ ಮೊದಲ ಪ್ರೇಮದ ಕಥೆಯಿಂದ ಹಿಡಿದು ಮೊದಲ ಡ್ರಗ್ಸು, ಮೊದಲ ಫಾರೀನ್ ಡ್ಯಾನ್ಸು, ಮೊದಲ ಮುಷ್ಕರ. ಪೋಲೀಸನ ಕೈಲಿ ಲಾತ ತಿಂದಿದ್ದು..... ಹೀಗೆ ವೈವಿಧ್ಯಮಯ ಕೆರೀರುಗಳನ್ನು ಹಂಚಿಕೊಳ್ಳುತ್ತಿದ್ದವು.

ಒಮ್ಮೆ ಎಪ್ಪತ್ತು ವರ್ಷದ ಗೆಳೆಯರು ರಾತ್ರಿ ಮೂರಕ್ಕೆ ಬಂದರು. ಅವರನ್ನ ನೋಡಿ ತುಂಬಾ ದಿವಸ ಆಗಿತ್ತು. ಅವರ ಗೋಳು ಕೇಳುವ ಮೊದಲು ದಿ ಬೆಸ್ಟ್ ಪಾರ್ಟ್‌ಆಫ್ ಮೈ ಕೆರೀರ್ ಹೇಳಿ ಅಂದೆ.

ನನ್ನ ಸರ್ವೀಸಿನಲ್ಲಿ ಕೊನೇ ಹತ್ತು ವರ್ಷಗೋಲಡನ್ ಯಿಯರ್ರು ಅಂದರು. ಅತಿ ಹೆಚ್ಚು ಸಂಪಾದನೆ ಮಾಡಿದ್ದು ಆಗ, ಹೆಚ್ಚು ಜನ ಸಂಪರ್ಕ ಬಂದಿದ್ದು ಆಗ, ಹೆಚ್ಚು ಸುತ್ತಿದ್ದು ಆಗ ಅದೆಲ್ಲಕಿಂತಲೂ ಹೆಚ್ಚು ಜವಾಬ್ದಾರಿ ಕೆಲಸ ಮಾಡಿದ್ದೂ ಆಗ. ಕೊನೇ ಹತ್ತು ವರ್ಷ ತೆಗೆದುಬಿಟ್ಟರೆ ಜೀವನದಲ್ಲಿ ಬಿಗ್‌ಜೀರೋರೀ.... ಅಂದರು. ಸುಮ್ಮನೆ ನಮ್ಮನ್ನ ನಾವೇ ಸಿಂಹಾವಲೋಕನ ಮಾಡಿಕೊಂಡರೆ ಸರ್ವೀಸಿನಲ್ಲಿನ ಕೊನೇ ಹತ್ತು ವರ್ಷ ಅದೆಷ್ಟು ಪ್ರಮುಖ ಅನಿಸುತ್ತೆ ನೋಡಿ. ಮತ್ತೊಬ್ಬರು ನಿವೃತ್ತರಾದ ಮೇಲೆ ಬಲವಂತಕ್ಕೆ ಒಂದು ಜವಾಬ್ದಾರಿ ಹೊತ್ತುಕೋಬೇಕಾಯಿತು. ಒಂದು ಶಾಲೆಯ ಮೇಲ್ವಿಚಾರಕರಾಗಿ. ಆರು ವರ್ಷ ಆ ಕೆಲಸ ಮಾಡಿದ ನಂತರ ಅವರಿಗೆ ಕೆಲಸ ಬಿಡೋದು ಭಾರೀ ಕಷ್ಟ ಆಗಿಬಿಟ್ಟಿತು. ಸುಮ್ಮನೆ ಹೋಗಿ ಅಲ್ಲಿ ಅಡ್ಡಾಡಿಕೊಂಡು ಬರೋರಂತೆ!



ಮೊನ್ನೆ ಒಬ್ಬರು ಹಳೆಯ ಗೆಳೆಯರು ಯಥಾಪ್ರಕಾರ ಅವರ ತಲೆ ಹಗುರ ಮಾಡಿಕೊಳ್ಳಲು ಬಂದರು. ಅವರ ಪ್ರಕಾರ ನಿವೃತ್ತರಾದ ಮೇಲೆ ಮೂರು ಕೆಲಸ ಯಾರಿಗೇ ಆಗಲಿ ತುಂಬಾ ಇಷ್ಟ ಆಗುತ್ತಂತ್ತೆ– ಹೋಟಲ್ ಮ್ಯಾನೇಜರು, ಮಠದ ಪಾರುಪತ್ತೇಗಾರರು ಮತ್ತು ಹಾಸ್ಟಲ್ ವಾರ್ಡನ್! ಕೊನೇ ಕೆಲಸ ನನ್ನ ಸ್ವಂತ ಅನುಭವ ಆಗಿರೋದರಿಂದ ಅವರು ಹೇಳಿದ್ದನ್ನು ಹಾಗೇ ದೂಸರಾ ಮಾತಿಲ್ಲದೇ ಒಪ್ಪಕೊಂಡೆ! ಹಾಸ್ಟಲಿನ ಇನ್ ಮೇಟ್ಸುಗಳ ಬೇಕು ಬೇಡಗಳ ಜತೆಗೆ ಅಲ್ಲಿ ಗಳಿಸುವ ಪ್ರೀತಿ

ಮತ್ತು ಒಂದುರೀತಿಯ ಗಾರ್ಡಿಯನ್ ಜವಾಬ್ದಾರಿ ಒಂದು ರೀತಿಯಲ್ಲಿ ನಮ್ಮನ್ನು ಅಜ್ಜ ಅಜ್ಜಿ ಹಾಗೂ ತಂದೆ ತಾಯಿಗಳ ಮಟ್ಟಕ್ಕೆ ಏರಿಸಿಬಿಡುತ್ತೆ.

ಕಳೆದ ತಿಂಗಳು ಒಬ್ಬರು ಎಂಬತ್ತು ವರ್ಷದ ಹಿರಿಯರು ಸಿಕ್ಕಿದರು. ಅವರ ಸಂಗಡ ಲೋಕಾಭಿರಾಮವಾಗಿ ಮಾತು ಆರಂಭಿಸಿದೆ. ಕೊಂಕಣ ಸುತ್ತಿ ಸಾರ ಒಂದು ಕೇಳತೀನಿ ತಪ್ಪು ತಿಳೀಬ್ಯಾಡ್ರೀ ಮತ್ತ.... ಅಂದೆ.

ಅದಕ್ಕೇನು ಕೇಳ್ರೀ ನೀವೇನ್ ನಮಗ ಹೊಸಬ್ರಾ? ಆಗಾಗ ನಿಮಗೂ ಅಗದಿ ಸಂದೇಹ ಸಂಶಯಗೋಳು ಬರ್ತಾಲೇ ಇರ್ತವಲ್ಲಾ.... ಅಂತ  ಮಾರುತ್ತರ ನೀಡಿದರು.

ಸಾರಬೆಸ್ಟ್ ಪಾರ್ಟ್‌ಆಫ್ ಮೈ ಕೆರೀರ್ ಹೇಳಿ ಅಂದೆ. ಒಂದು ನಿಮಿಷ ಸ್ತಬ್ಧವಾದರು. ನೋಡ್ರೀ ನನ್ನ ಮದುವೆ ಆದಾಗ ನನ್ನಾಕೇಗೆ ಎಂಟು ವರ್ಷ ನನಗೆ ಹದಿನೈದು. ಅಂದಿನಿಂದ ನಮ್ಮದು ಸಂಸಾರ ನಡೆಕೋತ ಬಂತು. ದಿನಾ ಕನಿಷ್ಠ ಅಂದ್ರಾ ಇಪ್ಪತ್ತು ಬಾರಿ ಕಾದಾಡ್ತಾ ಇದ್ದೆವು. ಕೆಲವು ಸಾರಿ ಜಗಳ ಎಲ್ಲೀವರೆಗೂ ಹೋಗ್ತಿತ್ತು ಅಂದರೆ ಅವಳು ಕೆರೆ ಭಾವೀ ನೋಡ್ಕೋತೀನಿ ಅನ್ನೋದೂ ನಾನು ಹಾಳಾದವಳೇ ಮೊದಲು ಸಾಯಿ ಅನ್ನೋದು.... ಹೀಗೆ. ಈ ಜಗಳದಾಗೇ ಮಕ್ಕಳೂ ಆದವು, ಮೊಮ್ಮಕ್ಕಳೂ ಆದವು. ಅರವತ್ತು ವರ್ಷ ಸಂಸಾರ ನಡೆಸಿದ್ದೋ. ಅವಳಿಗೆ ಹುಷಾರು ತಪ್ತು. ಮೂರುವರ್ಷ ಹಾಸಿಗೇ ಮೇಲೇ ಕಳೆದಳು. ಅವಳು ನರಳೋದು ನೋಡ್ತಾ ಯಾಕಾರ ಈಕಿ ಸಾಯವಲ್ಲಳು ಅಂತಲೂ ಅಂದು ಕೊಂಡಿದ್ದನ್ರೀ. ಆಕೀ ನರಳೀ ನರಳೀ ಪರಮಾತ್ಮನ ಪಾದ ಸೇರಿದಳ್ರೀ. ಅವಳು ಸತ್ತಿದ್ದು ನನಗೆ ದೊಡ್ಡ ಹೊಡೆತ ಬಿದ್ ಹಾಗ ಆಯ್ತ್ರೀ... ಮೊದಲು ಮೊದಲು ಜಗಳ ಆಡ್ಲಿಕ್ಕೆ ಯಾರೂ ಇಲ್ಲವೇ ಅಂತ ಅನಿಸೋದು. ಆದರೆ ಈಗ ಪ್ರತಿಕ್ಷಣ ಅವಳ ನೆನಪೇ ನೆನಪ್ರೀ..... ಬದುಕಿರಬೇಕಾದ್ರೆ ಅವಳನ್ನ ಸರಿಯಾಗಿ ನೋಡಿಕೊಳ್ಳಲಿಲ್ಲ ಅನ್ನೋ ಪಾಪಪ್ರಜ್ಞೆ ಪ್ರತಿನಿಮಿಷ ಕಾಡ್ತಾವ್ರೀ.... ಅವರ ಕಣ್ಣಿನಲ್ಲಿ ಧಾರಾಕಾರವಾಗಿ ಕಣ್ಣೀರು ಹರಿಯುತ್ತಿತ್ತು.

ಛೇ ಇವರಿಗೆ ಈ ಪ್ರಶ್ನೆ ಕೇಳಬಾರದಿತ್ತು ಅನಿಸಿತು.

---

## ಸ್ಟೀಲ್‌ಬ್ರಿಡ್ಜ್ ಯೋಜನೆ!

ಸರ್‌ಎಂವಿ ಕಟ್ಟಿದ್ದರು
ಉಕ್ಕಿನ ಕಾರ್ಖಾನೆ
ಈಗ ಎಲ್ಲೆಲ್ಲೂ
ಕಿಕ್‌ಬ್ಯಾಕ್ ಮಜಾನೇ!
ತೋರುತ್ತಾರೆ ಕಾಲಿ ಖಜಾನೆ
ಎಂಬ ಆರೋಪಕ್ಕೆ
ಬಿದ್ದೇ ಹೋಗಿದೆ
ಸರ್ಕಾರ ಕಟ್ಟಬೇಕಿದ್ದ
ಸ್ಟೀಲ್ ಬಿಡ್ಜ್ ಯೋಜನೆ!

~ ತುರುವೇಕೆರೆ ಪ್ರಸಾದ್

